ವಿಶ್ವವಾಣಿ
ವಿಶ್ವಾಸವೇ ವಿಶ್ವ



ಸಾಮಾಜಿಕ ಜಾಲತಾಣ ನಮ್ಮ ದೈನಂದಿನ ಜೀವನದ ಅವಿಭಾಜ್ಯ ಅಂಗವೇ ಆಗಿಬಿಟ್ಟಿದೆ. ಕೆಲವರಿಗೆ ಇದು ವಿಹಾರಧಾಮವಾಗಿದೆ. ದಿನದಲ್ಲಿ ಆರೇಳು ಗಂಟೆ ಸಾಮಾಜಿಕ ಜಾಲತಾಣಗಳಲ್ಲಿ ವಿಹರಿಸುವವರಿದ್ದಾರೆ. ಇದು ಸರಿಯೋ, ತಪ್ಪೋ, ಅದು ಬೇರೆ ಮಾತು. ಸಾಮಾಜಿಕ ಜಾಲತಾಣ ಎನ್ನುವುದು ನಮ್ಮ ಸಮಾಜ ಜೀವನದ ಎಲ್ಲ ಸ್ತರಗಳನ್ನು ಆವರಿಸಿದೆ. ಆದರೆ ಜಾಲ ತಾಣಗಳನ್ನು ಬಳಸುವ ಶಿಷ್ಟಾಚಾರದ ಬಗ್ಗೆ ನಮ್ಮಲ್ಲಿ ಇನ್ನೂ ಜಾಗೃತಿ ಮೂಡಿಲ್ಲ. ಜಾಲತಾಣಗಳ ಅತಿಯಾದ ಬಳಕೆಗೆ ಕಡಿವಾಣ ಹಾಕಿ, ಅವುಗಳನ್ನು ಸಮುಚಿತವಾಗಿ ಬಳಸಲು ಪ್ರೇರೇಪಿಸುವ 52 ವಾರಗಳ ಗಂಭೀರ ಸಂಕಲ್ಪಗಳ ಪಟ್ಟಿಯನ್ನು ನಮ್ಮ ಓದುಗರಿಗಾಗಿ ವಿಶ್ವವಾಣಿಯ ಪ್ರಧಾನ ಸಂಪಾದಕರಾದ ವಿಶ್ವೇಶ್ವರ ಭಟ್ ನೀಡಿದ್ದಾರೆ. ಹೊಸ ವರ್ಷಕ್ಕೆ ಇದು ನಿಮ್ಮ ಸಂಕಲ್ಪವೂ ಆಗಬಹುದು.

12 ತಿಂಗಳು, 52 ವಾರ, 52 ಸುಸೂತ್ರ

ನೋಟಿಫಿಕೇಶನ್ ನಿಯಂತ್ರಣ

1 ಮೊಬೈಲ್‌ನಲ್ಲಿರುವ ಅತಿ ಅಗತ್ಯವಲ್ಲದ ಎಲ್ಲ ನೋಟಿಫಿಕೇಶನ್‌ಗಳನ್ನು ಈ ವಾರ ಆಫ್ ಮಾಡಿ. ಇದರಿಂದ ಫೋನ್ ಪದೇಪದೆ ಶಬ್ದ, ಕಿರಿಕಿರಿ ಮಾಡುವುದು ನಿಂತು ನಿಮ್ಮ ಏಕಾಗ್ರತೆ ಹೆಚ್ಚಾಗುತ್ತದೆ. ಅನಗತ್ಯ ಅಡಚಣೆಗಳಿಲ್ಲದೇ ಕೆಲಸ ಮಾಡುವ ಅಭ್ಯಾಸ ಬೆಳೆಸಿಕೊಳ್ಳಿ. ನಿಮ್ಮ ಕೆಲಸದ ಮೇಲೆ ಫೋಕಸ್ ಇರಲಿ. ನೋಟಿಫಿಕೇಶನ್ ಮೇಲೆ ನಿಮ್ಮ ಗಮನ ಕಡಿಮೆ ಆಗಲಿ. ಮೊಬೈಲ್ ನೋಟಿಫಿಕೇಶನ್ ಆಫ್ ಮಾಡಿದ ಮೇಲೆ ಬರುವ ಶಾಂತಿ ಹೇಗಿರುತ್ತದೆ ಎಂದರೆ... ಮನೆಯಲ್ಲಿ ಯಾರಿಗೂ ಗೊತ್ತಿಲ್ಲದೆ ಒಂದು ಇಡೀ ಪ್ಯಾಕೆಟ್ ಐಸ್‌ಕ್ರೀಮ್ ತಿಂದಾಗ ಸಿಗುವ ಸಮಾಧಾನದಂತಿರುತ್ತದೆ!

ಸಮಯದ ಮಿತಿ ನಿಗದಿ

2 ಪ್ರತಿದಿನ ಸಾಮಾಜಿಕ ಜಾಲತಾಣ ಬಳಸಲು ಒಂದು ನಿರ್ದಿಷ್ಟ ಸಮಯವನ್ನು ಮಾತ್ರ ಮೀಸಲಿಡಿ. ಅಪ್ಲಿಕೇಶನ್ ಟೈಮರ್ ಬಳಸಿ ದಿನಕ್ಕೆ ಒಂದು ಗಂಟೆಗಿಂತ ಹೆಚ್ಚು ಸಮಯ ಕಳೆಯದಂತೆ ಜಾಗ್ರತೆ ವಹಿಸಿ. ಈ ಉಳಿದ ಸಮಯವನ್ನು ಉತ್ಪಾದಕ ಕೆಲಸಗಳಿಗೆ ಬಳಸಿ. ಒಂದು ಗಂಟೆ ಸೋಶಿಯಲ್ ಮೀಡಿಯಾ ಕಡೆ ಗಮನ ಹರಿಸದಿದ್ದರೆ ಜಗತ್ತು ಮುಳುಗುವುದಿಲ್ಲ.

ಬೆಳಗಿನ ಸಮಯದ ಬಳಕೆ

3 ಬೆಳಗ್ಗೆ ಎದ್ದ ತಕ್ಷಣ ಮೊದಲ ಒಂದು ಗಂಟೆ ಫೋನ್ ಮುಟ್ಟದಿರುವ ಸಂಕಲ್ಪ ಮಾಡಿ. ಈ ಸಮಯವನ್ನು ಧ್ಯಾನ, ವ್ಯಾಯಾಮ ಅಥವಾ ಕುಟುಂಬದೊಂದಿಗೆ ಕಳೆಯಲು ಮೀಸಲಿಡಿ. ದಿನದ ಆರಂಭವು ಡಿಜಿಟಲ್ ಪ್ರಪಂಚದ ಗದ್ದಲವಿಲ್ಲದೇ ಶಾಂತವಾಗಿರಲಿ. ನಿಮ್ಮ ಬೆಳಗಿನ ಆರಂಭ ಯಾವತ್ತೂ ಆಹ್ಲಾದಕರವಾಗಿರಲಿ. ಡಿಜಿಟಲ್ ಡರ್ಟಿನೆಸ್‌ನಿಂದಲೇ ದಿನವನ್ನು ಆರಂಭಿಸಬೇಡಿ.

ರಾತ್ರಿಯ ವಿಶ್ರಾಂತಿ

4 ಮಲಗುವ ಕನಿಷ್ಠ ಒಂದು ಗಂಟೆ ಮೊದಲು ಎಲ್ಲ ಡಿಜಿಟಲ್ ಪರದೆಗಳಿಂದ ದೂರವಿರಿ. ಮೊಬೈಲ್‌ನಿಂದ ಬರುವ ನೀಲಿ ಬೆಳಕು ನಿಮ್ಮ ನಿದ್ದೆಯ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಉತ್ತಮ ನಿದ್ದೆಗಾಗಿ ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಳ್ಳಿ. ತೀರಾ ತುರ್ತು ಸಂದೇಶವಿದ್ದರೆ ಸಂಬಂಧಪಟ್ಟವರು ಫೋನ್ ಮಾಡಿ ತಿಳಿಸುತ್ತಾರೆ ಬಿಡಿ. ಮಲಗುವ ಮುನ್ನ ಪುಸ್ತಕ ಓದುವ ಹವ್ಯಾಸ ಎಷ್ಟು ಒಳ್ಳೆಯದು ಎಂದರೆ... ಫೋನ್ ನೋಡುತ್ತಾ ಕುಳಿತರೆ ರಾತ್ರಿ 2 ಗಂಟೆಯಾದರೂ ನಿದ್ರೆ ಬರಲ್ಲ, ಅದೇ ಒಂದು

ಗಂಭೀರವಾದ ಪುಸ್ತಕ ಹಿಡಿದು ಎರಡೇ ಪ್ಯಾರಾ ಓದಿದರೆ ಸಾಕು, ಮಿದುಳು ತಾನಾಗಿಯೇ 'ಸಾಕಪ್ಪಾ ಸಾಕು' ಅಂತ ನಮ್ಮನ್ನು ಕನಸಿನ ಲೋಕಕ್ಕೆ ತಳ್ಳಿಬಿಡುತ್ತೆ. ಪುಸ್ತಕಕ್ಕಿಂತ ದೊಡ್ಡ ನಿದ್ರೆ ಮಾತ್ರೆ ಈ ಪ್ರಪಂಚದಲ್ಲಿ ಬೇರೊಂದಿಲ್ಲ.

ಅನ್-ಫಾಲೋ ಅಭಿಯಾನ

5 ನಿಮ್ಮ ಮನಸ್ಸಿಗೆ ನಕಾರಾತ್ಮಕ ಭಾವನೆ ತರುವ ಅಥವಾ ಹೊಟ್ಟೆಕಿಚ್ಚು ಉಂಟುಮಾಡುವ ಅಕೌಂಟ್‌ಗಳನ್ನು ಅನ್-ಫಾಲೋ ಮಾಡಿ. ಕೇವಲ ನಿಮಗೆ ಸ್ಫೂರ್ತಿ ನೀಡುವ ಮತ್ತು ಜ್ಞಾನ ಹೆಚ್ಚಿಸುವ ವ್ಯಕ್ತಿಗಳನ್ನು ಮಾತ್ರ ಫಾಲೋ ಮಾಡಿ. ನಿಮ್ಮ ಡಿಜಿಟಲ್ ಪರಿಸರವು ಆರೋಗ್ಯಕರವಾಗಿರಲಿ. ನಿಮ್ಮ ವ್ಯಕ್ತಿತ್ವವನ್ನು ಬೆಳಗಿಸುವವರನ್ನು, ಪ್ರೇರೇಪಿಸುವವರನ್ನು ಫಾಲೋ ಮಾಡಿ.

ಗ್ರೂಪ್‌ಗಳ ವಿಮರ್ಶೆ

6 ನಿಮಗೆ ಯಾವುದೇ ಪ್ರಯೋಜನವಿಲ್ಲದ ಮತ್ತು ಕೇವಲ ಮೆಸೇಜ್‌ಗಳಿಂದ ತುಂಬಿರುವ ವಾಟ್ಸಾಪ್ ಗ್ರೂಪ್‌ಗಳಿಂದ ಹೊರಬನ್ನಿ. ಅನಗತ್ಯ ಮಾಹಿತಿಯ ಹೊರೆಯಿಂದ ನಿಮ್ಮ ಮಿದುಳನ್ನು ಮುಕ್ತಗೊಳಿಸಿ. ಅಗತ್ಯವಿರುವ ಗ್ರೂಪ್‌ಗಳನ್ನು ಮಾತ್ರ ಸಕ್ರಿಯವಾಗಿಡಿ. ವಾಟ್ಸಾಪ್ ಅಂದ್ರೆ ಕಸದ ತೊಟ್ಟಿ ಅಲ್ಲ. ಅದನ್ನೂ ಒಂದು ಸುಂದರ ಉದ್ಯಾನ ಮಾಡಿಕೊಳ್ಳಿ.

ನೈಜ ಸಂಭಾಷಣೆ

7 ಸಾಮಾಜಿಕ ಜಾಲತಾಣದಲ್ಲಿ ಕಮೆಂಟ್ ಮಾಡುವ ಬದಲು ಗೆಳೆಯರಿಗೆ ನೇರವಾಗಿ ಫೋನ್ ಮಾಡಿ ಮಾತನಾಡಿ. ಡಿಜಿಟಲ್ ಲೈಕ್‌ಗಳಿಗಿಂತ ನೇರ ಸಂಭಾಷಣೆಯು ಸಂಬಂಧಗಳನ್ನು ಗಟ್ಟಿಗೊಳಿಸುತ್ತದೆ.
ವಾರಕ್ಕೆ ಕನಿಷ್ಠ ಇಬ್ಬರು ಹಳೆಯ ಗೆಳೆಯರೊಂದಿಗೆ ಮಾತನಾಡುವ ಗುರಿ ಇರಲಿ. ಪೋಸ್ಟ್‌ಗಳನ್ನು ಲೈಕ್ ಮಾಡುವ ಬದಲು ವ್ಯಕ್ತಿಗಳನ್ನು ಲೈಕ್ ಮಾಡಿ. ಅದು ಸಂಭಾಷಣೆಯಿಂದ ಸಾಧ್ಯ.

ಅಪರಿಚಿತರ ಸ್ನೇಹ ಬೇಡ

8 ಫ್ರೆಂಡ್ ಲಿಸ್ಟ್‌ನಲ್ಲಿರುವ ಅಪರಿಚಿತರನ್ನು ಗುರುತಿಸಿ ಅವರನ್ನು ತೆಗೆದುಹಾಕಿ. ನಿಮ್ಮ ವೈಯಕ್ತಿಕ ಮಾಹಿತಿ ಕೇವಲ ನಿಮ್ಮವರಿಗೆ ಮಾತ್ರ ಲಭ್ಯವಿರುವಂತೆ ನೋಡಿಕೊಳ್ಳಿ. ಆನ್‌ಲೈನ್ ಸುರಕ್ಷತೆಗೆ ಮೊದಲ ಆದ್ಯತೆ ನೀಡಿ. ನಿಮ್ಮ ಅಭಿಪ್ರಾಯ ಅಪಾತ್ರರಿಗೂ ತಿಳಿಯ ಬೇಕೆಂದು ಏಕೆ ಬಯಸುತ್ತೀರಿ? ನಿಮ್ಮ ವೈಯಕ್ತಿಕ ಫೋಟೋ ಗಳು, ಮನೆ ಅಥವಾ ಮಕ್ಕಳ ವಿವರಗಳು ಅಪರಿಚಿತರಿಗೆ ಲಭ್ಯವಾಗುವುದು ಅಪಾಯಕಾರಿ. ನಿಮ್ಮ ಪೋಸ್ಟ್‌ಗಳು ಕೇವಲ ನಿಮ್ಮ ಆಪ್ತರಿಗೆ ಮಾತ್ರ ಸೀಮಿತವಾಗಿರಲಿ. ಫ್ರೆಂಡ್ ಲಿಸ್ಟ್‌ನಲ್ಲಿ ನೂರಾರು ಜನ ಅಪರಿಚಿತರನ್ನು ಇಟ್ಟುಕೊಳ್ಳುವುದು ಹೇಗೆ ಅಂದ್ರೆ... ಅಡ್ರೆಸ್ ಗೊತ್ತಿಲ್ಲದ ಹತ್ತು ಜನರನ್ನು ಮನೆಗೆ ಊಟಕ್ಕೆ ಕರೆದು, ಅವರು ತಟ್ಟೆ ಚಮಚ ಕದ್ದುಕೊಂಡು ಹೋಗ್ತಾರೋ ಇಲ್ಲವೋ ಅಂತ ರಾತ್ರಿಯೆಲ್ಲ ಎಚ್ಚರವಾಗಿದ್ದು ಕಾಯುವ ಹಾಗೆ!

ಫೇಕ್ ನ್ಯೂಸ್ ಜಾಗೃತಿ

9 ಯಾವುದೇ ಮಾಹಿತಿ ಯನ್ನು ಶೇರ್ ಮಾಡುವ ಮೊದಲು ಅದರ ಸತ್ಯಾಸತ್ಯತೆಯನ್ನು ಪರಿಶೀಲಿಸಿ. ಸುಳ್ಳು ಸುದ್ದಿಗಳನ್ನು ಹರಡುವುದು ಸಮಾಜಕ್ಕೆ ಮಾಡುವ ದೊಡ್ಡ ದ್ರೋಹ. ಕಾನೂನು ಸಹ ಅದನ್ನೇ ಹೇಳುತ್ತದೆ. ಅಧಿಕೃತ ಮೂಲಗಳಿಂದ ಬಂದ ಮಾಹಿತಿಯನ್ನು ಮಾತ್ರ ನಂಬಿ. ಬಂದಿದ್ದನ್ನೆಲ್ಲ ಎತ್ತಿ ಹಾಕಲು ನೀವು ಪುಗಸಟ್ಟೆ ಕೂಲಿ ಅಲ್ಲ. ಫಾರ್ವರ್ಡ್ ಮಾಡುವ ಮುನ್ನ ನಾನು ಕಸ-ಕಡ್ಡಿಗಳನ್ನು ಸಾಗಿಸು ತ್ತಿಲ್ಲ ಎಂಬು ದನ್ನು ದೃಢಪಡಿಸಿಕೊಳ್ಳಿ.

ಜ್ಞಾನದ ಹಂಚಿಕೆ

10 ಕೇವಲ ಫೋಟೋಗಳನ್ನು ಹಾಕುವ ಬದಲು ಉಪಯುಕ್ತ ಮಾಹಿತಿ ಅಥವಾ ಜ್ಞಾನವನ್ನು ಹಂಚಿಕೊಳ್ಳಿ. ನೀವು ಓದಿದ ಒಳ್ಳೆಯ ಲೇಖನ ಅಥವಾ ಪುಸ್ತಕದ ಬಗ್ಗೆ ಬರೆ ಯಿರಿ. ನಿಮ್ಮ ಪ್ರೊಫೈಲ್ ಇತರರಿಗೆ ಕಲಿಯಲು ಒಂದು ವೇದಿಕೆಯಾಗಲಿ. ಜನ ನಿಮ್ಮ ಪೋಸ್ಟು ಗಳಿಂದ ನಿಮ್ಮ ಬಗ್ಗೆ ಅಭಿಮಾನ ಮೂಡಿಸಿಕೊಳ್ಳು ವಂತಾಗಲಿ. ಬೇರೆಯವರ ಜ್ಞಾನವನ್ನೂ ವಿಸ್ತರಿಸುವ ಮಾಹಿತಿ ಹಂಚಿಕೊಳ್ಳಿ.

ವಿಮರ್ಶಾತ್ಮಕ ಚಿಂತನೆ

11 ಪ್ರತಿಯೊಂದು ಪೋಸ್ಟ್ ಅನ್ನು ಕುರುಡಾಗಿ ನಂಬಬೇಡಿ. ಆ ಮಾಹಿತಿಯ ಹಿಂದೆ ಇರುವ ಉದ್ದೇಶವೇನು ಎಂದು ಯೋಚಿಸುವ ಅಭ್ಯಾಸ ಬೆಳೆಸಿಕೊಳ್ಳಿ. ಡಿಜಿಟಲ್ ಲೋಕದಲ್ಲಿ ವಿವೇಚನೆಯಿಂದ ವರ್ತಿಸುವುದು ಬಹಳ ಮುಖ್ಯ. ಶಂಖದಿಂದ ಬಂದಿದ್ದೆಲ್ಲ ತೀರ್ಥ ಆಗಿರಬಹುದು. ಆದರೆ ಒಮ್ಮೆ ಖಾತ್ರಿ ಪಡಿಸಿಕೊಳ್ಳುವುದು ಲೇಸು. ಯಾವುದೇ ಒಂದು ಪೋಸ್ಟ್ ಅಥವಾ ಸುದ್ದಿ ವೈರಲ್ ಆಗುತ್ತಿದ್ದರೆ, ಅದನ್ನು ಹರಡುತ್ತಿರುವವರ ನಿಜವಾದ ಉದ್ದೇಶವೇನು? ಅದು ಕೇವಲ ಜನರ ಭಾವನೆಗಳನ್ನು ಕೆರಳಿಸಲಿಕ್ಕೋ ಅಥವಾ ಯಾವುದೋ ಅಜೆಂಡಾವನ್ನು ಪ್ರಚಾರ ಮಾಡಲಿಕ್ಕೋ ಎಂದು ಯೋಚಿಸಿ.

ಗೌಪ್ಯತೆ ಸಂರಕ್ಷಣೆ

ನಿಮ್ಮ ಮನೆಯ ವಿಳಾಸ, ಲೊಕೇಶನ್ ಅಥವಾ ಹಣ ಕಾಸಿನ ಮಾಹಿತಿಯನ್ನು ಪೋಸ್ಟ್ ಮಾಡಬೇಡಿ. ಸೈಬರ್ ಅಪರಾಧಗಳಿಂದ ದೂರ

12 ವಿರಲು ನಿಮ್ಮ ವೈಯಕ್ತಿಕ ಜೀವನದ ಗೌಪ್ಯತೆಯನ್ನು ಕಾಪಾಡಿ. ಸುರಕ್ಷಿತ ಬ್ರೌಸಿಂಗ್ ಅಭ್ಯಾಸಗಳನ್ನು ಅನುಸರಿಸಿ. ಅಪರಿಚಿತ ಲಿಂಕ್‌ಗಳ ಮೇಲೆ ಕ್ಲಿಕ್ ಮಾಡಬೇಡಿ. ಸೈಬರ್ ಅಪರಾಧಗಳಿಂದ ದೂರವಿರಲು ಸುರಕ್ಷಿತ ಬ್ರೌಸಿಂಗ್ ಅಭ್ಯಾಸಗಳನ್ನು ರೂಢಿಸಿಕೊಳ್ಳಿ. ನಿಮ್ಮ ವೈಯಕ್ತಿಕ ಮಾಹಿತಿ ಮತ್ತು ಪಾಸ್ವರ್ಡ್‌ಗಳನ್ನು ಎಷ್ಟು ರಹಸ್ಯವಾಗಿಡಬೇಕು ಅಂದ್ರೆ, ನಿಮ್ಮ ಮನೆ ಯಲ್ಲಿ ಮಾಡಿದ 'ವಿಶೇಷ ಅಡುಗೆ'ಯನ್ನು ಪಕ್ಕದ ಮನೆಯವರಿಗೆ ವಾಸನೆ ಬರದಂತೆ ಹೇಗೆ ಅಡಗಿಸಿಡುತ್ತೀರೋ ಹಾಗೆ!

ಡಿಜಿಟಲ್ ಉಪವಾಸ

13 ವಾರದಲ್ಲಿ ಒಂದು ದಿನ (ಉದಾಹರಣೆಗೆ ಭಾನುವಾರ) ಸಂಪೂರ್ಣ ವಾಗಿ ಸಾಮಾಜಿಕ ಜಾಲತಾಣ ದಿಂದ ದೂರವಿರಿ. ಈ ದಿನವನ್ನು ಪ್ರಕೃತಿಯ ಜತೆ ಅಥವಾ ಹವ್ಯಾಸಗಳಿಗಾಗಿ ಕಳೆಯಿರಿ. ಇದು ನಿಮ್ಮ ಮಾನಸಿಕ ಆರೋಗ್ಯಕ್ಕೆ ಹೊಸ ಚೈತನ್ಯ ನೀಡುತ್ತದೆ. ಭಾನುವಾರ ಫೋನ್ ಪಕ್ಕಕ್ಕಿಟ್ಟು ಪ್ರಕೃತಿ ಯನ್ನು ನೋಡಿದಾಗಷ್ಟೇ ನಮಗೆ ತಿಳಿಯುವುದು...ನಮ್ಮ ಮನೆಯ ಪಕ್ಕದ ಮರದಲ್ಲಿ ಅಷ್ಟು ಹಕ್ಕಿಗಳಿವೆ ಅಂತಲ್ಲ, ಬದಲಾಗಿ ನಮ್ಮ ಫೋನಿನ ಚಾರ್ಜರ್ ವೈರ್ ಎಷ್ಟು ಚಿಕ್ಕದಿದೆ ಅಂತ!

ಹೊಸ ಕಲಿಕೆ

14 ಸ್ಕ್ರಾಲ್ ಮಾಡುವುದನ್ನು ನಿಲ್ಲಿಸಿ ಆ ಸಮಯದಲ್ಲಿ ಆನ್‌ಲೈನ್‌ನಲ್ಲಿ ಹೊಸ ಕೌಶಲ ಕಲಿಯಿರಿ. ಯೂಟ್ಯೂಬ್ ಅಥವಾ ಟೆಡ್-ಟೆಕ್ ಪ್ಲಾಟ್‌ಫಾರ್ಮ್‌ಗಳನ್ನು ಜ್ಞಾನಾರ್ಜನೆಗೆ ಬಳಸಿ. ನಿಮ್ಮ ಸಮಯವು

ವ್ಯರ್ಥವಾಗುವ ಬದಲು ಬಂಡವಾಳವಾಗಲಿ. ನಾವು ಆನ್‌ಲೈನ್‌ನಲ್ಲಿ 'ಹೊಸ ಕೌಶಲ' ಕಲಿಯಲು ಹೋಗಿ, ಕೊನೆಗೆ ಯಾವುದೋ ಹಳೆಯ ಅಡುಗೆ ವಿಡಿಯೋ ಅಥವಾ 'ನಾಯಿ-ಬೆಕ್ಕುಗಳ ಜಗಳ' ನೋಡಿ ಹೊರಬರುತ್ತೇವಲ್ಲ... ಅದಕ್ಕೆ ನಿಜವಾದ ಆತ್ಮಸಂಯಮ ಬೇಕು!

ಸೃಜನಶೀಲತೆ ಹೆಚ್ಚಿಸಿ

15 ಬೇರೆಯವರ ಕಂಟೆಂಟ್ ನೋಡುವುದಕ್ಕಿಂತ ನಿಮ್ಮದೇ ಆದ ಕಂಟೆಂಟ್ ಸೃಷ್ಟಿಸಿ. ಬರವಣಿಗೆ, ಫೋಟೋಗ್ರಫಿ ಅಥವಾ ವಿಡಿಯೋ ಮೇಕಿಂಗ್ ನಲ್ಲಿ ನಿಮ್ಮ ಪ್ರತಿಭೆ ತೋರಿ. ಸಕ್ರಿಯ ಸೃಷ್ಟಿಕರ್ತರಾಗಿ ಹೊರಹೊಮ್ಮಿ. ನಿಮ್ಮ ಪ್ರತಿಭೆ ತೋರಿಸಲು ವಿಡಿಯೋ ಮಾಡಲಿಕ್ಕೆ ಶುರು ಮಾಡಿ... ಯಾಕೆಂದರೆ, ನೀವು ಅಡುಗೆ ಮನೆಯಲ್ಲಿ ಮಾಡಿದ ಪ್ರಯೋಗಗಳನ್ನು ತಿನ್ನಲು ಮನೆಯವರು ಒಪ್ಪದಿದ್ದರೂ, ಅದನ್ನು ನೋಡಲು ಇಂಟರ್ನೆಟ್ ನಲ್ಲಿ ಸಾವಿರಾರು ಜನ ಕಾಯುತ್ತಿರುತ್ತಾರೆ.

ಕೆಲಸದ ಅವಧಿಯಲ್ಲಿ ಮೌನ

16 ಕೆಲಸ ಮಾಡುವಾಗ ಅಥವಾ ಓದುವಾಗ ಮೊಬೈಲ್ ಅನ್ನು ಬೇರೆ ರೂಮಿನಲ್ಲಿ ಇಡಿ. ಗಮನ ಬೇರೆಡೆಗೆ ಹರಿಯ ದಂತೆ ನೋಡಿಕೊಳ್ಳು ವುದು ನಿಮ್ಮ ಉತ್ಪಾದಕತೆಯನ್ನು ಹೆಚ್ಚಿಸುತ್ತದೆ. ಕೆಲಸದ ಮೇಲೆ ಸಂಪೂರ್ಣ ಏಕಾಗ್ರತೆ ಇರಲಿ. ರಾತ್ರಿ ಎರಡು ಗಂಟೆಗೆ ಯಾರೋ ಅಪರಿಚಿತರು ನಿಮ್ಮ ಫೋಟೋಗೆ 'ಲೈಕ್' ಮಾಡಿದ ನೋಟಿಫಿಕೇಶನ್ ನೋಡಿ ಖುಷಿ ಪಡಬೇಡಿ... ಅದು ನಿಮ್ಮ ನಿದ್ದೆ ಕೆಡಿಸಲು ಸೈತಾನ ಕಳುಹಿಸಿದ ಸಂಕೇತ ಇರಬಹುದು.

ದೈಹಿಕ ಚಟುವಟಿಕೆ

17 ಫೋನ್ ನೋಡ್ತಾ ಕುಳಿತಾಗ ನಮಗೆ ಸಮಯ ಹೋಗಿದ್ದೇ ತಿಳಿಯಲ್ಲ, ಆದ್ರೆ ಅದೇ 10 ನಿಮಿಷ ವ್ಯಾಯಾಮ ಮಾಡಿ ಅಂದ್ರೆ, ಸಾಕು... ಗಡಿಯಾ ರದ ಮುಳ್ಳು ಫೆವಿಕಾಲ್ ಹಾಕಿ ಅಂಟಿ ಸಿದ ಹಾಗೆ ಒಂದೇ ಕಡೆ ನಿಂತುಬಿಡು ತ್ತದೆ. ಫೋನ್ ನೋಡು

ವುದಕ್ಕಿಂತ ಹೆಚ್ಚಾಗಿ ದೈಹಿಕ ವ್ಯಾಯಾಮಕ್ಕೆ ಪ್ರಾಮುಖ್ಯ ನೀಡಿ. ಪ್ರತಿ ಒಂದು ಗಂಟೆಯ ಫೋನ್ ಬಳಕೆಯ ನಂತರ 10 ನಿಮಿಷ ನಡೆಯುವ ಅಭ್ಯಾಸ ಮಾಡಿ. ಕಣ್ಣು ಮತ್ತು ಬೆನ್ನಿನ ಆರೋಗ್ಯದ ಕಡೆ ಗಮನವಿರಲಿ.

ತೂಕದ ಹೋಲಿಕೆ ಬೇಡ

18 ಫೋಟೋದಲ್ಲಿ ಪ್ಯಾರಿಸ್ ಹೋಟೆಲ್‌ನಲ್ಲಿ ಕುಳಿತು ಕಾಫಿ ಕುಡಿಯುತ್ತಿರು ವಂತೆ ಪೋಸ್ ಕೊಡುವ ಅರ್ಧದಷ್ಟು ಜನ... ವಾಸ್ತವದಲ್ಲಿ ಮನೆಯಲ್ಲಿ ಹರಿದ ಟೀಶರ್ಟ್ ಹಾಕಿ ಕೊಂಡು ಅಮ್ಮ ಮಾಡಿಕೊಟ್ಟ ಕಾಫಿ ಕುಡಿಯುತ್ತಾ, ಯಾರಾದರೂ ಫೋಟೋಗೆ ಲೈಕ್ ಮಾಡಿದ್ದಾರಾ ಅಂತ ಚೆಕ್ ಮಾಡ್ತಾ ಇರುತ್ತಾರೆ. ಬೇರೆಯವರ ಎಡಿಟ್ ಮಾಡಿದ ಫೋಟೋಗಳನ್ನು ನೋಡಿ ನಿಮ್ಮ ಜೀವನವನ್ನು ಕೀಳಾಗಿ ಕಾಣಬೇಡಿ. ಪ್ರತಿಯೊಬ್ಬರ ಜೀವನವೂ ವಿಭಿನ್ನ ಮತ್ತು ಸಾಮಾಜಿಕ ಜಾಲತಾಣ ಕೇವಲ 'ಹೈಲೈಟ್ ರೀಲ್' ಮಾತ್ರ. ನಿಮ್ಮ ನೈಜ ಜೀವನವನ್ನು ಪ್ರೀತಿಸಿ.

ಸಕಾರಾತ್ಮಕ ಪ್ರತಿಕ್ರಿಯೆ

19 ಬೇರೆಯವರ ಪೋಸ್ಟ್‌ಗಳಿಗೆ ನಕಾರಾತ್ಮಕ ಅಥವಾ ನೋಯಿಸುವ ಕಮೆಂಟ್ ಮಾಡುವ ಬದಲು, ಸಾಧ್ಯವಾದರೆ ಪ್ರೋತ್ಸಾಹದಾಯಕ ಮಾತುಗಳನ್ನು ಬರೆಯಿರಿ. ಇಲ್ಲವಾದರೆ ಸುಮ್ಮನಿರುವುದು ಉತ್ತಮ. ಆನ್‌ಲೈನ್‌ನಲ್ಲಿ ನೀವು ಮಾಡುವ ಕಮೆಂಟ್‌ಗಳು ಮತ್ತು ನಿಮ್ಮ ಭಾಷೆ ನಿಮ್ಮ ಸಂಸ್ಕಾರ ಹಾಗೂ ವ್ಯಕ್ತಿತ್ವವನ್ನು ಜಗತ್ತಿಗೆ ತೋರಿಸುತ್ತದೆ. ಪರದೆಯ ಹಿಂದೆ ಕುಳಿತಿರುವ ವ್ಯಕ್ತಿಗೂ ಭಾವನೆಗಳಿರುತ್ತವೆ ಎಂಬುದು ನೆನಪಿರಲಿ. ಗೌರವ ಕೊಟ್ಟು ಗೌರವ ಪಡೆಯಿರಿ. ಬೇರೆಯವರ ಪೋಸ್ಟ್‌ಗೆ ಕೆಟ್ಟದಾಗಿ ಕಮೆಂಟ್ ಮಾಡುವ ಮುನ್ನ ಯೋಚಿಸಿ. ಯಾಕೆಂದರೆ, ನೀವು ಕಮೆಂಟ್ ಬಾಕ್ಸ್‌ನಲ್ಲಿ ಹರಿಸುವ 'ವಿಷ'ಕ್ಕಿಂತ, ನಿಮ್ಮ ಫೋನ್‌ನ 'ಆಟೋ ಕರೆಕ್ಟ್' ಮಾಡುವ ಅವಾಂತರಗಳೇ ನಿಮಗೆ ಹೆಚ್ಚು ಅವಮಾನ ಉಂಟು ಮಾಡಬಹುದು.

ಜಂಕ್ ಕಂಟೆಂಟ್ ತ್ಯಜಿಸಿ

20 ಕೇವಲ ಮನರಂಜನೆ ನೀಡುವ ಆದರೆ ಯಾವುದೇ ಮೌಲ್ಯವಿಲ್ಲದ ವಿಡಿಯೋಗಳನ್ನು ನೋಡುವುದನ್ನು ಕಡಿಮೆ ಮಾಡಿ. ನಿಮ್ಮ ಮಿದುಳಿಗೆ ಉತ್ತಮ ಮಾಹಿತಿಯ ಆಹಾರ ನೀಡಿ. ಗುಣಮಟ್ಟದ ವಿಷಯಗಳಿಗೆ ಮಾತ್ರ ಪ್ರಾಶಸ್ತ್ಯ ನೀಡಿ. ಕೇವಲ ನಗುವಿಗಾಗಿ ಅಥವಾ ಸಮಯ ಕಳೆಯಲು ವಿಡಿಯೋ ನೋಡುವುದಕ್ಕಿಂತ, ಜೀವನಕ್ಕೆ ಮೌಲ್ಯ ಸೇರಿಸುವ ಅಥವಾ ಹೊಸ ವಿಚಾರ ತಿಳಿಸುವ ಕಂಟೆಂಟ್‌ಗಳಿಗೆ ಪ್ರಾಮುಖ್ಯ ನೀಡಿ. ಇಂಟರ್ನೆಟ್ ಎಂಬುದು ಜ್ಞಾನದ ಸಾಗರ. ಅಲ್ಲಿ ಕಸವನ್ನು ಆಯುವ ಬದಲು ಮುತ್ತುಗಳನ್ನು ಹುಡುಕುವ ಜಾಣ್ಮೆ ನಿಮ್ಮದಾಗಿರಲಿ.

ಪರಿಸರ ಜಾಗೃತಿ

21 ಸಾಮಾಜಿಕ ಜಾಲತಾಣವನ್ನು ಪರಿಸರ ಸಂರಕ್ಷಣೆಯ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಬಳಸಿ. ಗಿಡ ನೆಡುವುದು ಅಥವಾ ಪ್ಲಾಸ್ಟಿಕ್ ಮುಕ್ತ ಜೀವನದ ಬಗ್ಗೆ ಪೋಸ್ಟ್ ಮಾಡಿ. ಬದಲಾವಣೆಗೆ ನೀವೂ ಕಾರಣರಾಗಿ. ನಿಮ್ಮ ಒಂದು ಪೋಸ್ಟ್ ಹತ್ತು ಜನರಲ್ಲಿ ಬದಲಾವಣೆ ತರಬಹುದು. ಪರಿಸರ ಉಳಿಸಿ ಅಂತ ಸ್ಟೇಟಸ್ ಹಾಕಿದ ಮೇಲೆ, ಆ ಫೋನ್

ಚಾರ್ಜ್ ಮಾಡೋಕೆ ಪಕ್ಕದ ರೂಮಿನ ಲೈಟ್ ಆಫ್ ಮಾಡದೇ ಬರಬೇಡಿ. 'ಡಿಜಿಟಲ್ ಪರಿಸರ ಪ್ರೇಮಿ' ಆಗೋದು ಬೇಡ.

ಸಹಾಯದ ಹಸ್ತ

22 ಕಷ್ಟದಲ್ಲಿರುವವರಿಗೆ ಸಹಾಯ ಮಾಡಲು ಸಾಮಾಜಿಕ ಜಾಲತಾಣವನ್ನು ವೇದಿಕೆ ಯನ್ನಾಗಿ ಬಳಸಿ. ರಕ್ತದಾನ ಅಥವಾ ಧನ ಸಹಾಯದ ಅಗತ್ಯವಿರುವ ಅಧಿಕೃತ ಪೋಸ್ಟ್ ಗಳನ್ನು ಹಂಚಿಕೊಳ್ಳಿ. ತಂತ್ರಜ್ಞಾನವು ಮಾನ ವೀಯತೆಗೆ ಬಳಕೆಯಾಗಲಿ. ಗಂಭೀರ ಕಾಯಿಲೆ ಯಿಂದ ಬಳಲುತ್ತಿರುವವರಿಗೆ ಧನಸಹಾಯ ಬೇಕಾದಾಗ, ಅಧಿಕೃತ ಮಾಹಿತಿಯನ್ನು ಮಾತ್ರ ಹಂಚಿಕೊಳ್ಳಿ. ನಿಮ್ಮ ಒಂದು 'ಶೇರ್' ಒಬ್ಬರ ಜೀವ ಉಳಿಸಬಹುದು. ಯಾವುದೇ ಸಹಾಯದ ಪೋಸ್ಟ್ ಹಂಚಿಕೊಳ್ಳುವ ಮೊದಲು ಅದರ ಸತ್ಯಾಸತ್ಯತೆಯನ್ನು ಪರಿಶೀಲಿಸಿ. ಇಲ್ಲದಿದ್ದರೆ ನಿಮ್ಮ ಒಳ್ಳೆಯ ಉದ್ದೇಶ ತಪ್ಪು ಸಂದೇಶ ರವಾನಿಸಬಹುದು. ನೀವು ಮಾಡಿದ ಸಣ್ಣ ಸಹಾಯದ ಬಗ್ಗೆ ತಿಳಿಸುವುದು ಕೂಡ ಇತರರಲ್ಲಿ ದಾನ ಮಾಡುವ ಗುಣವನ್ನು ಪ್ರೇರೇಪಿಸುತ್ತದೆ. ರಕ್ತದಾನದ ಪೋಸ್ಟ್ ಕಂಡಾಗ ಶೇರ್ ಮಾಡಲು ಹಿಂದೆ-ಮುಂದೆ ನೋಡುವ ಜನ, ಅದೇ ಯಾವುದೋ ಹೋಟೆಲ್‌ನಲ್ಲಿ ಆರ್ಡರ್ ಮಾಡಿದ ಬಿರಿಯಾನಿ ಫೋಟೋವನ್ನು ಮಾತ್ರ ಇಡೀ ಊರಿಗೆ ತಿಳಿಯುವಂತೆ 'ಶೇರ್' ಮಾಡ್ತಾರೆ!

ಸೈಬರ್ ಬುಲ್ಲಿಂಗ್ ವಿರೋಧಿಸಿ

23 ಯಾರಾದರೂ ಆನ್‌ಲೈನ್‌ನಲ್ಲಿ ಅವಮಾನಕ್ಕೊಳಗಾಗುತ್ತಿದ್ದರೆ ಅವರ ಪರವಾಗಿ ಧ್ವನಿ ಎತ್ತಿ. ಕೆಟ್ಟ ಕಮೆಂಟ್‌ಗಳನ್ನು ರಿಪೋರ್ಟ್ ಮಾಡಿ ಮತ್ತು ಸೈಬರ್ ಸುರಕ್ಷತೆಯ ಬಗ್ಗೆ ತಿಳಿವಳಿಕೆ ಮೂಡಿಸಿ. ಇಂಟರ್ನೆಟ್ ಅನ್ನು ಸುರಕ್ಷಿತ ತಾಣವಾಗಿಸಿ.

ಯಾರಾದರೂ ಆನ್‌ಲೈನ್‌ನಲ್ಲಿ ವಿನಾಕಾರಣ ಟ್ರೋಲ್ ಆಗುತ್ತಿದ್ದರೆ ಅಥವಾ ಅವಮಾನಕ್ಕೊಳಗಾಗುತ್ತಿದ್ದರೆ, ಅವರಿಗೆ ಧೈರ್ಯ ತುಂಬಿ. ಒಬ್ಬಂಟಿಯಲ್ಲ ಎಂಬ ಭಾವನೆ ಮೂಡಿಸಿ. ಕೆಟ್ಟ ಕಮೆಂಟ್ ಮಾಡುವವರಿಗೆ ಉತ್ತರ ಕೊಡುತ್ತಾ ಕೂರಬೇಡಿ, ಬದಲಾಗಿ ಅವರ ಪ್ರೊಫೈಲ್ ಅನ್ನು 'ರಿಪೋರ್ಟ್' ಮಾಡಿ... ಯಾಕೆಂದರೆ, ನೀವು ಅವರ ಜತೆ ವಾದ ಮಾಡುವುದು ಎಂದರೆ 'ಗೋಡೆಗೆ ಸುಣ್ಣ ಹಚ್ಚುವ ಬದಲು ತಲೆ ಚಚ್ಚಿಕೊಂಡಂತೆ'.

ಸ್ಥಳೀಯ ಕಲೆಗೆ ಬೆಂಬಲ

24 ನಿಮ್ಮ ಸುತ್ತಮುತ್ತಲಿನ ಕಲಾವಿದರು ಅಥವಾ ಸಣ್ಣ ಉದ್ಯಮಿಗಳ ಬಗ್ಗೆ ಪೋಸ್ಟ್ ಮಾಡಿ ಅವರನ್ನು ಪ್ರೋತ್ಸಾಹಿಸಿ. ಸ್ಥಳೀಯ ಪ್ರತಿಭೆ ಗಳಿಗೆ ಜಾಗತಿಕ ವೇದಿಕೆ ಸಿಗು ವಂತೆ ಮಾಡಿ. ಸಮುದಾಯದ ಬೆಳವಣಿಗೆಗೆ ಸಹಕರಿಸಿ. ದೊಡ್ಡ ಬ್ರ್ಯಾಂಡ್‌ಗಳಿಗೆ ಈಗಾಗಲೇ ಕೋಟಿ ಗಟ್ಟಲೆ ಜಾಹೀರಾತು ಇರುತ್ತದೆ. ಆದರೆ ನೀವು ಮಾಡುವ ಒಂದು ಸಣ್ಣ ಪೋಸ್ಟ್ ಒಬ್ಬ ಬಡ ಕಲಾವಿದನ ಬದುಕನ್ನೇ ಬದಲಿಸಬಹುದು. ಅವರು ನೀಡುವ ಸೇವೆ ಅಥವಾ ಉತ್ಪನ್ನಗಳ ಬಗ್ಗೆ ಒಂದು ಸಣ್ಣ ವಿಡಿಯೋ ಅಥವಾ ಫೋಟೋ ಹಂಚಿಕೊಳ್ಳಿ. ಇದು ಅವರಿಗೆ ಹೊಸ ಗ್ರಾಹಕರನ್ನು ತಂದುಕೊಡಬಹುದು.

ಲೈಕ್‌ಗಳ ವ್ಯಸನದಿಂದ ಮುಕ್ತಿ

25 ನಿಮ್ಮ ಪೋಸ್ಟ್‌ಗೆ ಬರುವ ಲೈಕ್‌ಗಳು ಅಥವಾ ವ್ಯೂಸ್‌ಗಳ ಸಂಖ್ಯೆಯನ್ನು ಪದೇಪದೇ ಎಣಿಸುವುದನ್ನು ನಿಲ್ಲಿಸಿ. ನಿಮ್ಮ ಆತ್ಮಗೌರವವು ಅಂಕಿ-ಅಂಶಗಳ ಮೇಲೆ ಅವಲಂಬಿತವಾಗಿರಬಾರದು ಎಂಬ ಸತ್ಯವನ್ನು ಅರಿಯಿರಿ. ಅಭಿವ್ಯಕ್ತಿಯೇ ಮುಖ್ಯ ಗುರಿಯಾಗಿರಲಿ, ಅಂಕಿ-ಅಂಶಗಳಲ್ಲ. ನಿಮ್ಮ ಪ್ರತಿಭೆ ಅಥವಾ ವ್ಯಕ್ತಿತ್ವವನ್ನು ಕೇವಲ ಲೈಕ್‌ಗಳ ಸಂಖ್ಯೆಯಿಂದ ಅಳೆಯಬೇಡಿ. ಆನ್‌ಲೈನ್ ಮೆಚ್ಚುಗೆಗಿಂತ ನಿಮ್ಮ ಆಂತರಿಕ ತೃಪ್ತಿ ಮುಖ್ಯ. ನೆನಪಿಡಿ, ಲೈಕ್ ಮಾಡದಿದ್ದರೂ ನಿಮ್ಮ ಪೋಸ್ಟ್ ಅನ್ನು 'ಜೂಮ್' ಮಾಡಿ ನೋಡುವವರ ಸಂಖ್ಯೆಯೇ ಅತಿ ಹೆಚ್ಚು ಇರುತ್ತದೆ!

ಅಸೂಯೆಯ ನಿಯಂತ್ರಣ

26 ಬೇರೆಯವರ ಯಶಸ್ಸು ಅಥವಾ ಪ್ರವಾಸದ ಫೋಟೋಗಳನ್ನು ನೋಡಿ ನಿಮ್ಮನ್ನು ಅವರೊಂದಿಗೆ ಹೋಲಿಸಿಕೊಳ್ಳಬೇಡಿ. ಬೇರೆಯವರ ಐಷಾರಾಮಿ ಪ್ರವಾಸ ಅಥವಾ ಯಶಸ್ಸಿನ ಪೋಸ್ಟ್‌ಗಳನ್ನು ನೋಡಿ ನಿಮ್ಮ ಜೀವನ ಬೋರಿಂಗ್ ಎಂದು ಅಂದುಕೊಳ್ಳಬೇಡಿ. ಪ್ರತಿಯೊಬ್ಬರ ಜೀವನದ ಹಾದಿ ಭಿನ್ನವಾಗಿ ರುತ್ತದೆ ಮತ್ತು ಸಾಮಾಜಿಕ ಜಾಲತಾಣ ಕೇವಲ ಮುಖ ವಾಡವಾಗಿರಬಹುದು ಎಂದು ತಿಳಿಯಿರಿ. ನಿಮ್ಮ ನೈಜ ಸಾಧನೆಗಳ ಮೇಲೆ ಗಮನ ಹರಿಸಿ. ಅವರ ಯಶಸ್ಸು ಅವರಿಗಿರಲಿ, ನಿಮ್ಮ ಪುಟ್ಟ ಸಾಧನೆಗಳನ್ನು ಕೂಡ ದೊಡ್ಡದಾಗಿ ಸಂಭ್ರಮಿಸಿ. ಫೋಟೋದಲ್ಲಿ ಹಿಮಾಲಯದ ಹಿಮದ ಮುಂದೆ ನಿಂತು 'ಫೀಲಿಂಗ್ ಪೀಸ್‌ಫುಲ್' ಅಂತ ಪೋಸ್ಟ್ ಹಾಕುವ ಅರ್ಧದಷ್ಟು ಜನ... ಫೋಟೋ ತೆಗೆದ ತಕ್ಷಣ 'ಯಪ್ಪಾ ಅಪ್ಪಿತಪ್ಪಿ ಇಲ್ಲಿಗೆ ಬಂದೆವಲ್ಲೋ, ಕೈಕಾಲೆಲ್ಲಾ ಗಡ್ಡೆ ಆಗ್ತಾ ಇದೆ' ಅಂತ ನಡುಗುತ್ತಿರುತ್ತಾರೆ.

ಡಿಜಿಟಲ್ ಗಡಿಗಳ ನಿರ್ಧಾರ

27 ವೈಯಕ್ತಿಕ ಭಾವನೆಗಳನ್ನು ಅಥವಾ ಕೌಟುಂಬಿಕ ಕಲಹಗಳನ್ನು ಸಾರ್ವಜನಿಕವಾಗಿ ಪೋಸ್ಟ್ ಮಾಡ ಬೇಡಿ. ಮನೆಯೊಳಗಿನ ಜಗಳಗಳು ಅಥವಾ ವೈಯಕ್ತಿಕ ಭಾವನೆಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುವುದು ತಾತ್ಕಾಲಿಕ ಸಮಾಧಾನ ನೀಡಬಹುದು, ಆದರೆ ಅದು

ನಂತರದ ದಿನ ಗಳಲ್ಲಿ ಮುಜುಗರ ಉಂಟು ಮಾಡಬಹುದು. ಖಾಸಗಿ ವಿಷಯಗಳನ್ನು ಖಾಸಗಿಯಾಗಿಯೇ ಇರಿಸುವುದು ಮಾನಸಿಕ ನೆಮ್ಮದಿಗೆ ಅಡಿಪಾಯವಾಗಿದೆ. ನಿಮ್ಮ ಘನತೆಯನ್ನು ಡಿಜಿಟಲ್ ಲೋಕದಲ್ಲಿ ಕಾಪಾಡಿಕೊಳ್ಳಿ. ಮನೆಯಲ್ಲಿ ಗಂಡ-ಹೆಂಡತಿ ಅಥವಾ ಅಣ್ಣ-ತಮ್ಮ ಜಗಳವಾಡಿದಾಗ ಅದನ್ನು ಫೇಸ್ಬುಕ್‌ನಲ್ಲಿ ಪೋಸ್ಟ್ ಮಾಡಬೇಡಿ... ಯಾಕೆಂದರೆ, ನೀವು ಸಂಜೆ ಹೊತ್ತಿಗೆ ಒಂದಾಗಿ ಬಿಡುತ್ತೀರಿ, ಆದರೆ ಆ ಪೋಸ್ಟ್ ನೋಡಿ ಎಂಜಾಯ್ ಮಾಡಿದ ಇಡೀ ಊರು ಮಾತ್ರ ಇನ್ನು ಹತ್ತು ವರ್ಷ ಅದೇ ವಿಷಯ ಹಿಡಿದುಕೊಂಡು ನಿಮ್ಮನ್ನು ಚುಡಾಯಿಸುತ್ತಿರುತ್ತದೆ.

ಭಾವನಾತ್ಮಕ ಸ್ಥಿರತೆ

28 ಬೇಸರವಾದಾಗ ಅಥವಾ ಒಂಟಿತನ ಕಾಡಿದಾಗ ಫೋನ್ ಹಿಡಿಯುವ ಬದಲು ಧ್ಯಾನ ಮಾಡಿ. ಸಾಮಾಜಿಕ ಜಾಲ ತಾಣದ ತಾತ್ಕಾಲಿಕ ಅಬ್ಬರವು ನಿಮ್ಮ ಶಾಶ್ವತ ಅಸಮಾಧಾನಕ್ಕೆ

ಪರಿಹಾರ ವಲ್ಲ. ಒಂಟಿತನವನ್ನು ಸೃಜನಶೀಲವಾಗಿ ಬಳಸಲು ಕಲಿಯಿರಿ. ಒಂಟಿತನ ವನ್ನು ಶಾಪವೆಂದು ಭಾವಿಸ ಬೇಡಿ. ಆ ಸಮಯ ದಲ್ಲಿ ಚಿತ್ರಕಲೆ, ಬರವಣಿಗೆ ಅಥವಾ ಯೋಚನೆಗಳ ಮೂಲಕ ನಿಮ್ಮಲ್ಲಿರುವ ಸೃಜನಶೀಲತೆಯನ್ನು ಹೊರಹಾಕಲು ಬಳಸಿಕೊಳ್ಳಿ. ರಾತ್ರಿ ಮಲಗುವ ಮುನ್ನ 'ಒಂದೇ ಒಂದು ನಿಮಿಷ ಇನ್‌ಸ್ಟಾಗ್ರಾಮ್ ನೋಡಿ ಮಲಗುತ್ತೇನ್' ಅಂತ ಫೋನ್ ಕೈಗೆತ್ತಿ ಕೊಂಡರೆ ಸಾಕು... ಆ ಒಂದು ನಿಮಿಷ ಹೇಗೆ ಬೆಳಗಿನ ಜಾವದ ಮೂರು ಗಂಟೆ ಆಗುತ್ತದೋ ಆ ದೇವರಿಗೇ ಗೊತ್ತು.

→ 2

2026 ಹೊಸ ಪಯಣಕ್ಕೆ ಶುಭೋದಯ

← ಮೊದಲ ಪುಟದಿಂದ

ಪ್ರಾಮಾಣಿಕ ಬರವಣಿಗೆ

29 ಕೇವಲ ಫಾರ್ವರ್ಡ್ ಮೆಸೇಜ್‌ಗಳನ್ನು ಹಂಚುವ ಬದಲು ಸ್ವಂತ ವಿಚಾರಗಳನ್ನು ಬರೆಯಲು ಪ್ರಯತ್ನಿಸಿ. ನಿಮ್ಮ ಭಾಷೆ ಮತ್ತು ಶೈಲಿಯಲ್ಲಿ ವಿಚಾರಗಳನ್ನು ಮಂಡಿಸುವುದು ನಿಮ್ಮ ಬೌದ್ಧಿಕ ಬೆಳವಣಿಗೆಗೆ ಸಹಕಾರಿ. ಕೃತಕ ಬುದ್ಧಿಮತ್ತೆಯ ಬದಲು ನಿಮ್ಮ ನೈಜ ಚಿಂತನೆಗೆ ಒತ್ತು ನೀಡಿ. ಫಾರ್ವರ್ಡ್ ಮೆಸೇಜ್‌ಗಳ ಹಾವಳಿ ಎಷ್ಟಿದೆ ಎಂದರೆ... ಕೆಲವೊಮ್ಮೆ ಒಬ್ಬರು ಕಳುಹಿಸಿದ ಮೆಸೇಜ್ ತಿರುಗಿ ಅವರಿಗೇ ಬರುವಷ್ಟರಲ್ಲಿ ಅದು 'ವಿಶ್ವ ಆರೋಗ್ಯ ಸಂಸ್ಥೆ'ಯ ಅಧಿಕೃತ ಪ್ರಕಟಣೆಯಾಗಿ ಬದಲಾಗಿರುತ್ತದೆ.

ಭಾಷಾ ಗೌರವ

30 ಸಾಮಾಜಿಕ ಜಾಲತಾಣದಲ್ಲಿ ಸಂವಹನ ನಡೆಸುವಾಗ ಭಾಷೆಯ ಶುದ್ಧತೆ ಮತ್ತು ಗೌರವವನ್ನು ಕಾಪಾಡಿ. ಅಶ್ಲೀಲ ಪದಗಳ ಬಳಕೆಯನ್ನು ಸಂಪೂರ್ಣವಾಗಿ ತ್ಯಜಿಸಿ ಮತ್ತು ಇತರರೊಂದಿಗೆ



ಸಭ್ಯವಾಗಿ ವರ್ತಿಸಿ. ನಿಮ್ಮ ಭಾಷೆಯೇ ನಿಮ್ಮ ಸಂಸ್ಕಾರದ ಕನ್ನಡಿ ಎಂದು ನೆನಪಿರಲಿ. ಕೋಪ ಬಂದಾಗ ಅಥವಾ ವಾದ ಮಾಡುವಾಗ ಅಶ್ಲೀಲ ಪದಗಳನ್ನು ಬಳಸುವುದು ನಿಮ್ಮ ದೌರ್ಬಲ್ಯವನ್ನು ತೋರಿಸುತ್ತದೆಯೇ ಹೊರತು ಶಕ್ತಿಯನ್ನಲ್ಲ. ನೀವು ಬಳಸುವ ಪ್ರತಿಯೊಂದು ಪದವೂ ನಿಮ್ಮ ಮನೆಯ ಸಂಸ್ಕಾರ ಮತ್ತು ನೀವು ಬೆಳೆದು ಬಂದ ಸಂಸ್ಕೃತಿಯನ್ನು ಜಗತ್ತಿಗೆ ಪರಿಚಯಿಸುತ್ತದೆ. ಕಟುವಾದ ಸತ್ಯವನ್ನೂ ಸಭ್ಯವಾಗಿ ಹೇಳಲು ಕಲಿಯಿರಿ.

ಅಧಿಕೃತ ಮಾಹಿತಿ ಹಂಚಿಕೆ

31 ಆರೋಗ್ಯ ಅಥವಾ ಹಣಕಾಸಿಗೆ ಸಂಬಂಧಿಸಿದ ಸಲಹೆಗಳನ್ನು ಹಂಚುವ ಮೊದಲು ತಜ್ಞರ ಅಭಿಪ್ರಾಯವನ್ನು ಪರಿಶೀಲಿಸಿ. ತಪ್ಪು ಮಾಹಿತಿಯು ಇತರರ ಜೀವನದ ಮೇಲೆ ಗಂಭೀರ ಪರಿಣಾಮ ಬೀರಬಹುದು. ಒಬ್ಬರಿಗೆ ಸರಿಹೋದದ್ದು ಎಲ್ಲರಿಗೂ ಸರಿಹೋಗದಿರಬಹುದು. ಇಂಟರ್ನೆಟ್‌ನಲ್ಲಿ ಸಿಗುವ ಪ್ರತಿಯೊಂದು ಮಾಹಿತಿಯೂ ಸತ್ಯವಾಗಿರುವುದಿಲ್ಲ. ತಪ್ಪು ಮಾಹಿತಿಯನ್ನು ಹಂಚುವುದರಿಂದ ಬೇರೆಯವರಿಗೆ ದೈಹಿಕ ಅಥವಾ ಆರ್ಥಿಕ ನಷ್ಟವಾಗಬಹುದು. ಜವಾಬ್ದಾರಿಯುತ ನೆಟ್ಟಿಗರಾಗಿ ಕಾರ್ಯನಿರ್ವಹಿಸಿ. ಯೂಟ್ಯೂಬ್ ನೋಡಿ ಹಣ ಹೂಡಿಕೆ ಮಾಡಬೇಡಿ. ಗೂಗಲ್ ನೋಡಿ ಔಷಧ ತೆಗೆದುಕೊಳ್ಳಬೇಡಿ.

ಓದುವ ಅಭ್ಯಾಸದ ಸುಧಾರಣೆ

32 ಕೇವಲ ಶೀರ್ಷಿಕೆಯನ್ನು ನೋಡಿ ಪೋಸ್ಟ್‌ಗಳನ್ನು ಶೇರ್ ಮಾಡಬೇಡಿ. ಒಳಗಿರುವ ವಿಷಯವೇ ಬೇರೆ ಇರಬಹುದು, ಹಾಗಾಗಿ ಪೂರ್ತಿ ಓದದೆ ಶೇರ್ ಮಾಡಬೇಡಿ. ಯಾವುದೇ ಲೇಖನವನ್ನು ಪೂರ್ಣವಾಗಿ ಓದಿದ ನಂತರವೇ ನಿಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ. ಅರ್ಧ

ಸತ್ಯವು ಸುಳ್ಳಿಗಿಂತ ಹೆಚ್ಚು ಅಪಾಯಕಾರಿ ಎಂಬುದು ನೆನಪಿರಲಿ. ಕೇವಲ ಶೀರ್ಷಿಕೆ ನೋಡಿ ಪೋಸ್ಟ್ ಶೇರ್ ಮಾಡುವುದು ಅಂದ್ರೆ, ಮದುವೆಯ ಮಂಟಪದ ಹೊರಗಿನ 'ಬೋರ್ಡ್' ನೋಡಿ ಅಡುಗೆ ಚೆನ್ನಾಗಿದೆ ಅಂತ ಇಡೀ ಊರಿಗೆ ಹೇಳಿದ ಹಾಗೆ!

ಪಾಸ್‌ವರ್ಡ್ ಸುರಕ್ಷತೆ

33 ನಿಮ್ಮ ಎಲ್ಲಾ ಸಾಮಾಜಿಕ ಜಾಲತಾಣದ ಖಾತೆಗಳಿಗೆ ಪ್ರಬಲವಾದ ಮತ್ತು ವಿಭಿನ್ನವಾದ ಪಾಸ್‌ವರ್ಡ್‌ಗಳನ್ನು ನಿಗದಿಪಡಿಸಿ. ನಿಮ್ಮ ಹೆಸರೋ ಅಥವಾ '123456' ನಂಥ ಸುಲಭದ ಪಾಸ್‌ವರ್ಡ್‌ಗಳನ್ನು ಬಳಸಬೇಡಿ. ಕನಿಷ್ಠ ಮೂರು ತಿಂಗಳಿಗೊಮ್ಮೆ ನಿಮ್ಮ ಪ್ರಮುಖ ಖಾತೆಗಳ ಪಾಸ್‌ವರ್ಡ್ ಬದಲಾಯಿಸುವ ಅಭ್ಯಾಸ ಮಾಡಿಕೊಳ್ಳಿ. ಟೂ-ಫ್ಯಾಕ್ಟರ್ ಅಥೆಂಟಿಕೇಶನ್ (2FA) ಸಕ್ರಿಯಗೊಳಿಸುವ ಮೂಲಕ ಸೈಬರ್ ದಾಳಿಗಳಿಂದ ರಕ್ಷಿಸಿಕೊಳ್ಳಿ. ಭದ್ರತೆಯ

ವಿಷಯದಲ್ಲಿ ಯಾವುದೇ ರಾಜಿ ಮಾಡಿಕೊಳ್ಳಬೇಡಿ. ಕೆಲವರ ಪಾಸ್‌ವರ್ಡ್ ಎಷ್ಟು ಸುಲಭ ಇರುತ್ತದೆ ಅಂದ್ರೆ, ಹ್ಯಾಕರ್ಸ್‌ಗಳು ಬಂದು ಹ್ಯಾಕ್ ಮಾಡುವ ಬದಲು, ಇವರೇ ಅವರಿಗೆ ಫೋನ್ ಮಾಡಿ 'ಅಣ್ಣಾ ಪಾಸ್‌ವರ್ಡ್ ಮರೆತುಹೋಗಿದೆ, ಸ್ವಲ್ಪ ನೆನಪು ಮಾಡ್ತೀರಾ?' ಅಂತ ಕೇಳುವ ಹಾಗಿರುತ್ತದೆ

ಅಪ್ಲಿಕೇಶನ್ ಅನುಮತಿಗಳ ವಿಮರ್ಶೆ

34 ನಿಮ್ಮ ಫೋನಿನಲ್ಲಿರುವ ಅಪ್ಲಿಕೇಶನ್‌ಗಳು ಕೇಳುವ ಕೆಮರಾ, ಲೊಕೇಶನ್ ಮತ್ತು ಮೈಕ್ರೋಫೋನ್ ಅನುಮತಿಗಳನ್ನು ಪರಿಶೀಲಿಸಿ. ಉದಾಹರಣೆಗೆ, ಒಂದು 'ಕ್ಯಾಲ್ಕುಲೇಟರ್' ಆ್ಯಪ್‌ಗೆ ನಿಮ್ಮ ಲೊಕೇಶನ್ ಯಾಕೆ ಬೇಕು? ಯೋಚಿಸಿ ಮತ್ತು ಅಂಥ ಅನುಮತಿಗಳನ್ನು ರದ್ದುಗೊಳಿಸಿ. 'Always Allow' ಬದಲಾಗಿ 'While using the app' ಎಂಬ ಆಯ್ಕೆಯನ್ನು ಬಳಸಿ. ಇದರಿಂದ ಆ್ಯಪ್ ಆಫ್ ಆಗಿದ್ದಾಗ ಅದು ನಿಮ್ಮನ್ನು ಟ್ರ್ಯಾಕ್ ಮಾಡುವುದು ತಪ್ಪುತ್ತದೆ. ನಾವು ಆ್ಯಪ್‌ಗಳಿಗೆ ನೀಡುವ ಪರ್ಮಿಷನ್‌ಗಳಿಂದ ಆ್ಯಪ್‌ಗಳಿಗೆ ನಮ್ಮ ಬಗ್ಗೆ ನಮಗಿಂತ ಹೆಚ್ಚಾಗಿ ತಿಳಿದಿರುತ್ತದೆ. ಬಹುಶಃ ಮುಂದಿನ ದಿನಗಳಲ್ಲಿ ನಾವು ಅಡುಗೆ ಮನೆಗೆ ಹೋದಾಗ ಫೋನ್, 'ಏನಮ್ಮಾ, ಇವತ್ತು ಮತ್ತೆ ಉಪ್ಪಿಟ್ಟೇನಾ?' ನೋಟಿಫಿಕೇಶನ್ ಕಳುಹಿಸಿದರೂ ಆಶ್ಚರ್ಯವಿಲ್ಲ. ಅಗತ್ಯವಿಲ್ಲದ ಅನುಮತಿಗಳನ್ನು ರದ್ದುಗೊಳಿಸುವ ಮೂಲಕ ನಿಮ್ಮ ಗೌಪ್ಯತೆಯನ್ನು ಕಾಪಾಡಿ. ನಿಮ್ಮ ಡೇಟಾ ನಿಮ್ಮ ಹಕ್ಕಾಗಿದೆ.

ಪರಿಚಯವಿಲ್ಲದ ಲಿಂಕ್‌ಗಳ ಬಗ್ಗೆ ಎಚ್ಚರ

35 ಬಹುಮಾನ ಅಥವಾ ಲಾಟರಿಯ ಆಮಿಷ ತೋರಿಸುವ ಯಾವುದೇ ಶಂಕಾಸ್ಪದ ಲಿಂಕ್‌ಗಳನ್ನು ಕ್ಲಿಕ್ ಮಾಡಬೇಡಿ. ನಿಮಗೆ ಒಂದು ಕೋಟಿ ಲಾಟರಿ ಹೊಡೆದಿದೆ ಅಥವಾ ಉಚಿತ ಐಫೋನ್ ಗೆದ್ದಿದ್ದೀರಿ ಎಂಬ ಸಂದೇಶದೊಂದಿಗೆ ಬರುವ ಲಿಂಕ್‌ಗಳ ಮೇಲೆ ಕ್ಲಿಕ್ ಮಾಡಬೇಡಿ. ಇವು ನಿಮ್ಮ ವೈಯಕ್ತಿಕ ಮಾಹಿತಿ ಕದಿಯಲು ಹ್ಯಾಕರ್‌ಗಳು ಹಾಕುವ ಗಾಳ (Phishing). ಯಾರೋ ಅಪರಿಚಿತರು ಕಳುಹಿಸಿದ ಲಿಂಕ್ ಕ್ಲಿಕ್ ಮಾಡಿದ ತಕ್ಷಣ ಕೋಟಿಗಟ್ಟಲೆ ಲಾಟರಿ ಹಣ ನಮ್ಮ ಅಕೌಂಟಿಗೆ ಬರುವುದಾಗಿದ್ದರೆ, ಇಷ್ಟೊತ್ತಿಗೆ ಹ್ಯಾಕರ್‌ಗಳೇ ಕೆಲಸ ಬಿಟ್ಟು ಆರಾಮವಾಗಿ ಸ್ವಿಜರ್ಲೆಂಡಿನಲ್ಲಿ ಸೆಟ್ಲ್ ಆಗಿರುತ್ತಿದ್ದರು. ಹ್ಯಾಕಿಂಗ್ ತಂತ್ರಗಳ ಬಗ್ಗೆ

ಅರಿವು ಮೂಡಿಸಿಕೊಳ್ಳಿ ಮತ್ತು ಇತರರಿಗೂ ಎಚ್ಚರಿಕೆ ನೀಡಿ. ಜಾಗರೂಕತೆಯೇ ಸೈಬರ್ ಸುರಕ್ಷತೆಯ ಮಂತ್ರ.

ಚಿತ್ರಗಳ ದುರುಪಯೋಗ ತಡೆ

36 ನಿಮ್ಮ ಕುಟುಂಬದ ಸದಸ್ಯರ, ವಿಶೇಷವಾಗಿ ಮಕ್ಕಳ ಫೋಟೋಗಳನ್ನು ಹಂಚುವಾಗ ಜಾಗ್ರತೆ ವಹಿಸಿ. ಅಪರಿಚಿತರಿಗೆ ಈ ಫೋಟೋಗಳು ಲಭ್ಯವಾಗದಂತೆ ಪ್ರೈವೆಸಿ ಸೆಟ್ಟಿಂಗ್‌ಗಳನ್ನು ಅಪ್ಡೇಟ್ ಮಾಡಿ. ಸೈಬರ್ ಪ್ರಪಂಚದ ಕರಾಳ ಮುಖದ ಬಗ್ಗೆ ಅರಿವಿರಲಿ. ಸೈಬರ್ ಅಪರಾಧಿಗಳು ಇಂಥ ಸಣ್ಣ ಮಾಹಿತಿಗಳನ್ನು ದುರ್ಬಳಕೆ ಮಾಡಿಕೊಳ್ಳುವ ಸಾಧ್ಯತೆ ಇರುತ್ತದೆ. ನೀವು ಹಂಚಿಕೊಳ್ಳುವ ಮಕ್ಕಳ ಫೋಟೋಗಳು ಜಗತ್ತಿನ ಯಾವುದೇ ಮೂಲೆಯಲ್ಲಿರುವ ವ್ಯಕ್ತಿಗೆ ಲಭ್ಯವಿರುತ್ತವೆ. ಕುಟುಂಬದ ಸದಸ್ಯರ ಫೋಟೋಗಳನ್ನು ಹಂಚಿಕೊಳ್ಳುವ ಮೊದಲು ಅವರ ಒಪ್ಪಿಗೆ ಕೇಳುವುದು ಒಂದು ಉತ್ತಮ ಅಭ್ಯಾಸ.

ಸಭೆಗಳಲ್ಲಿ ಫೋನ್ ಬಳಕೆ ನಿಷೇಧ

37 ಕೌಟುಂಬಿಕ ಸಭೆಗಳಲ್ಲಿ ಅಥವಾ ಸ್ನೇಹಿತರ ಜತೆಗಿರುವಾಗ ಫೋನ್ ಅನ್ನು ಕಿಸೆಯಲ್ಲೇ ಇರಿಸಿ. ಎದುರಿಗಿರುವ ವ್ಯಕ್ತಿಗೆ ಗೌರವ ನೀಡಿ ಮತ್ತು ಅವರ ಕಣ್ಣಲ್ಲಿ ಕಣ್ಣಿಟ್ಟು ಮಾತನಾಡಿ, ಅವರ ಮಾತುಗಳನ್ನು ಆಲಿಸಿ. ವರ್ಚುವಲ್ ಪ್ರಪಂಚಕ್ಕಿಂತ ವಾಸ್ತವ ಪ್ರಪಂಚದ ವ್ಯಕ್ತಿಗಳು ಮುಖ್ಯ. ಫೋನ್ ಸ್ಕ್ರೀನ್ ಮೇಲೆ ಸ್ಕ್ರಾಲ್ ಮಾಡುವುದರಿಂದ ನೆನಪುಗಳು ಸೃಷ್ಟಿಯಾಗುವುದಿಲ್ಲ. ಬದಲಾಗಿ ಪ್ರೀತಿಪಾತ್ರರ ಜತೆ ಕಳೆಯುವ ಗುಣಮಟ್ಟದ ಸಮಯದಿಂದ ಮಾತ್ರ ಸಾಧ್ಯ. ವಾಟ್ಸಾಪ್ ಗ್ರೂಪ್‌ಗಳಲ್ಲಿ ಹಾಯ್ ಎನ್ನುವುದಕ್ಕಿಂತ, ಎದುರಿಗಿರುವವರ ಜೊತೆ ಮನಸಾರೆ ನಗುವುದು ವಾಸಿ.

ಕಾರ್ಯಕ್ಷಮತೆಯ ಹೆಚ್ಚಳ

38 ಕೆಲಸದ ಸಮಯದಲ್ಲಿ ಮೊಬೈಲ್ ಅನ್ನು 'ಡು ನಾಟ್ ಡಿಸ್ಟರ್ಬ್' ಮೋಡ್‌ನಲ್ಲಿಡಿ. ಪದೇಪದೆ ಫೋನ್ ನೋಡುವುದರಿಂದ ಕೆಲಸದ ಗುಣಮಟ್ಟ ಕುಸಿಯುತ್ತದೆ ಎಂಬುದು ನೆನಪಿರಲಿ. ಸ್ಕ್ರೀನ್ ಕಡೆಗೆ ಹರಿಯುವ ನಿಮ್ಮ ಗಮನವನ್ನು ನಿಯಂತ್ರಿಸುವುದು ಕೂಡ ಒಂದು ದೊಡ್ಡ ಕೌಶಲ್ಯ. ಈ ಅಭ್ಯಾಸವು ನಿಮ್ಮ ಉತ್ಪಾದಕತೆಯನ್ನು ಹೆಚ್ಚಿಸಿ, ದಿನದ ಕೊನೆಯಲ್ಲಿ ನೆಮ್ಮದಿ ನೀಡುತ್ತದೆ. ಕೆಲಸದ ನಡುವೆ ಫೋನ್ ನೋಡುವುದಿಲ್ಲ ಎಂದು ನಾವು ಡಿಎನ್‌ಡಿ (DND) ಮೋಡ್ ಆನ್ ಮಾಡುತ್ತೇವೆ. ಅಸಲಿ ವಿಷಯ ಏನಂದ್ರೆ, ಯಾರಾದ್ರೂ ಮೆಸೇಜ್ ಮಾಡಿದರೆ ನೋಟಿಫಿಕೇಶನ್ ಯಾಕೆ ಬರುತ್ತಿಲ್ಲ ಇಲ್ಲ ಅಂತ ಚೆಕ್ ಮಾಡಲು ಐದು ನಿಮಿಷಕ್ಕೊಮ್ಮೆ ಫೋನ್ ಅನ್ಲಾಕ್ ಮಾಡಿ ನೋಡುತ್ತೇವೆ. ಏಕಾಗ್ರತೆಯಿಂದ ಕೆಲಸ ಮಾಡುವ ಕೌಶಲವನ್ನು ಮರಳಿ ಪಡೆಯಿರಿ.

ನೈಜ ಹವ್ಯಾಸಗಳಿಗೆ ಆದ್ಯತೆ

39 ಸಾಮಾಜಿಕ ಜಾಲತಾಣದಲ್ಲಿ ಸಮಯ ವ್ಯರ್ಥ ಮಾಡುವ ಬದಲು ಕ್ರೀಡೆ, ಸಂಗೀತ ಅಥವಾ ಚಿತ್ರಕಲೆಯಂಥ ಹವ್ಯಾಸಗಳಲ್ಲಿ ತೊಡಗಿ. ಇವುಗಳು ನಿಮ್ಮ ವ್ಯಕ್ತಿತ್ವವನ್ನು ರೂಪಿಸುತ್ತವೆಯೇ ಹೊರತು ಸ್ಕ್ರೋಲಿಂಗ್ ಅಲ್ಲ. ನೈಜ ಜಗತ್ತಿನ ಸಾಧನೆಗಳು ತೃಪ್ತಿ ನೀಡುತ್ತವೆ. ರೀಲ್ಸ್ ನೋಡಿ ಸಮಯ ಕಳೆಯುವ ಬದಲು, ಒಂದು ವಾದ್ಯ ನುಡಿಸುವುದನ್ನು ಕಲಿಯುವುದು ಅಥವಾ ಮೈದಾನಕ್ಕಿಳಿದು ಕ್ರೀಡೆಗಳಲ್ಲಿ ತೊಡಗುವುದು ನಿಮ್ಮ ಶಿಸ್ತು ಮತ್ತು ಏಕಾಗ್ರತೆಯನ್ನು ಹೆಚ್ಚಿಸುತ್ತದೆ. ಯೂಟ್ಯೂಬ್

ನಲ್ಲಿ ಅಡುಗೆ ವಿಡಿಯೋಗಳನ್ನು ನೋಡಿ ಅಡುಗೆ ಕಲಿತೆ ಎಂದು ಭಾವಿಸುವ ಬದಲು, ನೀವೇ ಒಂದು ಆಮ್ಲೆಟ್ ಮಾಡಿ ಖಾತ್ರಿಪಡಿಸಿಕೊಳ್ಳುವುದು ಲೇಸು.

ಊಟದ ಸಮಯದಲ್ಲಿ ಮೌನ

40 ಊಟ ಮಾಡುವಾಗ ಯಾವುದೇ ಸ್ಕ್ರೀನ್ ನೋಡದಿರುವ ಕಠಿಣ ಸಂಕಲ್ಪ ಮಾಡಿ. ಆಹಾರವನ್ನು ಆನಂದಿಸಿ ತಿನ್ನುವುದರಿಂದ ಜೀರ್ಣಕ್ರಿಯೆ ಮತ್ತು ಮಾನಸಿಕ ಶಾಂತಿ ಲಭಿಸುತ್ತದೆ. ಡಿಜಿಟಲ್ ಗದ್ದಲವಿಲ್ಲದ ಊಟವು ಆರೋಗ್ಯಕ್ಕೆ ಪೂರಕ. ಊಟದ ಮೇಜು ಇಡೀ ಕುಟುಂಬ ಒಂದಾಗಿ ಕುಳಿತು ಹರಟುವ ತಾಣವಾಗಲಿ. ದಿನವಿಡೀ ನಡೆದ ವಿಷಯಗಳನ್ನು ಹಂಚಿಕೊಳ್ಳಲು ಇದು ಅತ್ಯುತ್ತಮ ಸಮಯ. ಮೊಬೈಲ್ ನೋಡುತ್ತಾ ಊಟ ಮಾಡುವವರಿಗೆ ಯಾವತ್ತೂ ತೃಪ್ತಿ ಸಿಗಲ್ಲ, ಕಾರಣ ಅವರ ಕಣ್ಣು ಫೋನ್‌ನಲ್ಲಿದ್ದ ಫೈವ್ ಸ್ಟಾರ್ ಹೋಟೆಲ್ ಊಟದ ಮೇಲೆ ಇರುತ್ತದೆ, ಆದರೆ ಹೊಟ್ಟೆಗೆ ಹೋಗುತ್ತಿರುವುದು ಮಾತ್ರ ಮನೆಯಲ್ಲಿ ಮಾಡಿದ ತಿಳಿ ಸಾರು ಮತ್ತು ಮುದ್ದೆ. ಫೋನ್ ಬದಿಗಿಟ್ಟು ಪ್ರೀತಿಪಾತ್ರರ ಜತೆ ಸಂವಹನ ನಡೆಸಿ.

ಕೃತಜ್ಞತಾ ಪೋಸ್ಟ್

41 ನಿಮಗೆ ಸಹಾಯ ಮಾಡಿದ ವ್ಯಕ್ತಿಗಳಿಗೆ ಅಥವಾ ನಿಮ್ಮನ್ನು ಪ್ರೇರೇಪಿಸಿದವರಿಗೆ ಸಾರ್ವಜನಿಕವಾಗಿ ಧನ್ಯವಾದ ಅರ್ಪಿಸಿ. ಸಕಾರಾತ್ಮಕತೆಯನ್ನು ಹರಡುವುದು ಡಿಜಿಟಲ್ ಲೋಕದ ಪ್ರಮುಖ ಅಗತ್ಯವಾಗಿದೆ. ಮೆಚ್ಚುಗೆಯ ಮಾತುಗಳು ಇತರರಲ್ಲಿ ಉತ್ಸಾಹ ತುಂಬುತ್ತವೆ. ನೆಗೆಟಿವ್ ಸುದ್ದಿಗಳ ನಡುವೆ ಇಂಥ ಪ್ರೀತಿ ಮತ್ತು ಕೃತಜ್ಞತೆಯ ಪೋಸ್ಟ್‌ಗಳು ಇತರರಿಗೂ ಒಳ್ಳೆಯದನ್ನು ಮಾಡಲು ಪ್ರೇರೇಪಿಸುತ್ತವೆ. ಒಂದು ಸಣ್ಣ 'ಥ್ಯಾಂಕ್ ಯೂ' ದೊಡ್ಡ ಮಟ್ಟದ ಬದಲಾವಣೆ ತರಬಲ್ಲದು. ಯಾರನ್ನಾದರೂ ಹೊಗಳಿ ಪೋಸ್ಟ್ ಹಾಕುವಾಗ ಸ್ವಲ್ಪ ಜಾಗರೂಕರಾಗಿರಿ... ನೀವು ಅಪ್ಪಿತಪ್ಪಿ ಯಾರನ್ನಾದರೂ 'ನನ್ನ ಜೀವನದ ಸ್ಫೂರ್ತಿ' ಎಂದು ಹೊಗಳಿದರೆ, ನಿಮ್ಮ ಬೆಸ್ಟ್ ಫ್ರೆಂಡ್ ತಕ್ಷಣ ಕಮೆಂಟ್ ಬಾಕ್ಸ್‌ಗೆ ಬಂದು-'ಅಲ್ಲಿ ಪೋಸ್ಟ್ ಹಾಕೋದು ಇರಲಿ, ಮೊದಲು ನಾನು ಕೊಟ್ಟ ಸಾಲ ವಾಪಸ್ ಕೊಡು' ಅಂತ ಅಸಲಿ ವಿಷಯ ಬಯಲು ಮಾಡಿಬಿಡಬಹುದು.

ಸೈಬರ್ ಬುಲ್ಲಿಂಗ್ ವಿರುದ್ಧ ಧ್ವನಿ

42 ಕೆಲವರು ಆನ್‌ಲೈನ್‌ನಲ್ಲಿ ಬೇರೆಯವರನ್ನು ಟ್ರೋಲ್ ಮಾಡುವುದರಲ್ಲಿ ಎಷ್ಟು ಬಿಜಿಯಾಗಿರುತ್ತಾರೆ ಅಂದ್ರೆ ಪಕ್ಕದ ಮನೆಯವರು ಬಂದು 'ನಿಮ್ಮ ಮನೆಯಲ್ಲಿ ಗ್ಯಾಸ್ ಲೀಕ್ ಆಗ್ತಿದೆ' ಅಂತ ಹೇಳಿದರೂ, 'ನಿಲ್ಲಣ್ಣಾ, ಮೊದಲು ಇವನಿಗೆ ಒಂದು ಕಮೆಂಟ್ ಹಾಕಿ ಬರ್ತೀನಿ' ಎನ್ನುವಷ್ಟು ಸೈಬರ್ ಶೂರರಾಗಿರುತ್ತಾರೆ. ಆನ್‌ಲೈನ್‌ನಲ್ಲಿ ಯಾರನ್ನಾದರೂ ಗುರಿಯಾಗಿಸಿ ಅವಮಾನಿಸುವುದನ್ನು ವಿರೋಧಿಸಿ. ದ್ವೇಷಪೂರಿತ ಭಾಷಣ ಅಥವಾ ಟ್ರೋಲಿಂಗ್‌ಗೆ ಬೆಂಬಲ ನೀಡಬೇಡಿ. ಇಂಟರ್ನೆಟ್ ಅನ್ನು ಗೌರವಯುತ ತಾಣವನ್ನಾಗಿ ಮಾಡಲು ಕೈಜೋಡಿಸಿ. ದ್ವೇಷ ಹರಡುವ ಮೀಮ್‌ಗಳು ಅಥವಾ ವಿಡಿಯೋಗಳನ್ನು ಲೈಕ್ ಮಾಡಬೇಡಿ ಮತ್ತು ಶೇರ್ ಮಾಡಬೇಡಿ. ನೀವು ನೀಡುವ ಒಂದು ಲೈಕ್ ಅಂಥ ಕೆಟ್ಟ ಪ್ರವೃತ್ತಿಗೆ ನೀರೆರೆದಂತೆ ಎಂಬುದು ನೆನಪಿರಲಿ.

ಶಿಕ್ಷಣಕ್ಕೆ ಒತ್ತು

43 ಸಾಮಾಜಿಕ ಜಾಲತಾಣವನ್ನು ಕೇವಲ ಮನರಂಜನೆಗೆ ಬಳಸದೇ ಶಿಕ್ಷಣಕ್ಕೆ ಬಳಸಿ. ವಾರಕ್ಕೆ ಕನಿಷ್ಠ ಒಂದು ಹೊಸ ವಿಷಯವನ್ನು (ವಿಜ್ಞಾನ, ಇತಿಹಾಸ ಅಥವಾ ಕಲೆ) ಈ ವೇದಿಕೆಗಳ ಮೂಲಕ ಕಲಿಯಿರಿ. ನಿಮ್ಮ ಜ್ಞಾನದ ಹರಿವು ನಿರಂತರವಾಗಿರಲಿ. ತಂತ್ರಜ್ಞಾನ ನಮ್ಮನ್ನು ಸೋಮಾರಿಗಳನ್ನಾಗಿ ಮಾಡಬಾರದು, ಬದಲಾಗಿ ನಮ್ಮ ಬುದ್ಧಿಶಕ್ತಿಯನ್ನು ಹೆಚ್ಚಿಸುವ ಸಾಧನವಾಗಬೇಕು. ಜ್ಞಾನದ ಹಸಿವು ನಿರಂತರವಾಗಿರಲಿ. ನಾವು ಇನ್ಸ್ಟಾಗ್ರಾಮ್



ತೆರೆಯುವುದು ಯಾವುದೋ ದೊಡ್ಡ 'ವಿಜ್ಞಾನ' ಕಲಿಯೋಣ ಅಂತಾನಾ? ಕೊನೆಗೆ ನಮಗೆ ಸಿಗುವ ಏಕೈಕ ಜ್ಞಾನವೆಂದರೆ – 'ಇವತ್ತು ಕೂಡ ನಾನು ಸಮಯ ವ್ಯರ್ಥ ಮಾಡಿದೆ' ಅನ್ನೋ ಸತ್ಯ ಅಷ್ಟೇ.

ಸ್ಥಳೀಯ ಸಮುದಾಯದ ಬೆಳವಣಿಗೆ

44 ನಿಮ್ಮ ಸುತ್ತಮುತ್ತಲಿನ ಸಣ್ಣ ವ್ಯಾಪಾರಿಗಳು ಅಥವಾ ಕಲಾವಿದರನ್ನು ಪ್ರೋತ್ಸಾಹಿಸಲು ನಿಮ್ಮ ಪ್ರೊಫೈಲ್ ಬಳಸಿ. ಸ್ಥಳೀಯ ಉತ್ಪನ್ನಗಳ ಬಗ್ಗೆ ಮಾಹಿತಿ ಹಂಚಿಕೊಳ್ಳುವ ಮೂಲಕ ಸಮುದಾಯಕ್ಕೆ ಸಹಾಯ ಮಾಡಿ. ನಿಮ್ಮ ಏರಿಯಾದಲ್ಲಿರುವ ಹಪ್ಪಳ-ಸಂಡಿಗೆ ಮಾಡುವವರು, ಮಣ್ಣಿನ ಪಾತ್ರೆ ತಯಾರಿಸುವವರು ಅಥವಾ ಬೀದಿ ಬದಿಯಲ್ಲಿ ಸುಂದರವಾದ ಕಲಾಕೃತಿ ಮಾರುವವರ ಬಗ್ಗೆ ನಿಮ್ಮ ಸಾಮಾಜಿಕ ಜಾಲತಾಣಗಳಲ್ಲಿ ಬರೆಯಿರಿ. ಅವರು ನೀಡುವ ಉತ್ಪನ್ನಗಳ ಗುಣಮಟ್ಟದ ಬಗ್ಗೆ ತಿಳಿಸಿ. ನಿಮ್ಮ ಪ್ರಭಾವವು ಒಳ್ಳೆಯ ಕೆಲಸಕ್ಕೆ ಬಳಕೆಯಾಗಲಿ. ದೊಡ್ಡ ಕಂಪನಿಗಳು ಜಾಹೀರಾತಿಗಾಗಿ ಕೋಟಿ ಸುರಿಯುತ್ತವೆ. ಆದರೆ ಈ ಸಣ್ಣ ಕಲಾವಿದರಿಗೆ ನಿಮ್ಮ ಒಂದು ಸ್ಟೇಟಸ್ ಅವರ ಜೀವನದ ಅತಿದೊಡ್ಡ ಜಾಹೀರಾತು ಆಗಬಲ್ಲದು.

ಡಿಜಿಟಲ್ ಕಸದ ವಿಲೇವಾರಿ

45 ನಿಮ್ಮ ಫೋನಿನಲ್ಲಿರುವ ಸಾವಿರಾರು ಅನಗತ್ಯ ಫೋಟೋಗಳು, ವಿಡಿಯೋಗಳು ಮತ್ತು ಸ್ಕ್ರೀನ್‌ಶಾಟ್‌ಗಳನ್ನು ಡಿಲೀಟ್ ಮಾಡಿ. ಕ್ಲೌಡ್ ಸ್ಟೋರೇಜ್ ಮತ್ತು ಫೋನ್ ಮೆಮೊರಿಯನ್ನು ಮುಕ್ತಗೊಳಿಸಿ.

ಅನಗತ್ಯ ಫೈಲ್‌ಗಳನ್ನು ತೆಗೆದುಹಾಕುವುದರಿಂದ ಹಣ ಕೊಟ್ಟು ಹೆಚ್ಚಿನ ಸ್ಟೋರೇಜ್ ಖರೀದಿಸುವುದು ತಪ್ಪುತ್ತದೆ. ವ್ಯವಸ್ಥಿತ ಡಿಜಿಟಲ್ ಜೀವನವು ನೆಮ್ಮದಿ ನೀಡುತ್ತದೆ. ಅಗತ್ಯವಿರುವ ಫೋಟೋಗಳನ್ನು ಪ್ರತ್ಯೇಕ ಫೋಲ್ಡರ್‌ಗಳಲ್ಲಿ ಜೋಡಿಸಿಡಿ. ಇದರಿಂದ ಬೇಕಾದ ಸಮಯದಲ್ಲಿ ಹುಡುಕಾಡುವ ಕಿರಿಕಿರಿ ತಪ್ಪುತ್ತದೆ ಮತ್ತು ಫೋನ್ ವೇಗವಾಗಿಯೂ ಕೆಲಸ ಮಾಡುತ್ತದೆ. ನಮ್ಮ ಫೋನ್‌ನಲ್ಲಿರೋ ಸಾವಿರಾರು ಫೋಟೋಗಳಲ್ಲಿ ಕೆಲಸಕ್ಕೆ ಬರೋದು ಹತ್ತೇ ಹತ್ತು ಫೋಟೋಗಳು.

ವರ್ಷದ ಸಮಯದ ಲೆಕ್ಕಾಚಾರ

46 ನಿಮ್ಮ ಫೋನಿನ 'ಸ್ಕ್ರೀನ್ ಟೈಮ್' ಸೆಟ್ಟಿಂಗ್ಸ್ ನೋಡಿ ಈ ವರ್ಷ ಎಷ್ಟು ಸಾವಿರ ಗಂಟೆಗಳನ್ನು ಕೇವಲ ಸ್ಕ್ರಾಲಿಂಗ್ ಮಾಡಲು ಕಳೆದಿದ್ದೀರಿ ಎಂದು ಒಮ್ಮೆ ಪರಿಶೀಲಿಸಿ. ಆ ಅಂಕಿಅಂಶ ನಿಮ್ಮನ್ನು ಬೆಚ್ಚಿಬೀಳಿಸಬಹುದು. ಈ ವರ್ಷ ನೀವು ಸಾಮಾಜಿಕ ಜಾಲತಾಣದಲ್ಲಿ ಎಷ್ಟು ಗಂಟೆಗಳನ್ನು ಕಳೆದಿದ್ದೀರಿ ಎಂದು ವಿಮರ್ಶಿಸಿ. ಆ ಸಮಯವನ್ನು ಬೇರೆ ಯಾವುದಕ್ಕೆ ಬಳಸಬಹುದಿತ್ತು ಎಂದು ಯೋಚಿಸಿ. ಮುಂದಿನ ವರ್ಷಕ್ಕೆ ಉತ್ತಮ ಗುರಿಗಳನ್ನು ಹಾಕಿಕೊಳ್ಳಿ. ಮುಂದಿನ ವರ್ಷಕ್ಕೆ ಡಿಜಿಟಲ್ ಡಿಟಾಕ್ಸ್ (Digital Detox) ಗುರಿಯನ್ನು ಹಾಕಿಕೊಳ್ಳಿ. ವಾರಕ್ಕೆ ಒಂದು ದಿನ ಫೋನ್‌ನಿಂದ ಸಂಪೂರ್ಣ ದೂರವಿರುವುದು ಅಥವಾ ದಿನಕ್ಕೆ ಇಂತಿಷ್ಟೇ ಸಮಯ ಎಂಬ ಮಿತಿಯನ್ನು ಹಾಕಿಕೊಳ್ಳಿ.

ಸ್ಕ್ರೀನ್ ಟೈಮ್ ಕಡಿತದ ಸಾಧನೆ

47 ವರ್ಷದ ಆರಂಭಕ್ಕಿಂತ ಈಗ ನಿಮ್ಮ ಸ್ಕ್ರೀನ್ ಟೈಮ್ ಕನಿಷ್ಠ ಶೇ.30 ರಷ್ಟು ಕಡಿಮೆಯಾಗಿದೆಯೇ ಎಂದು ಪರಿಶೀಲಿಸಿ. ಒಂದು ವೇಳೆ ಕಮ್ಮಿಯಾಗಿದ್ದರೆ, ಅದು ಸಣ್ಣ ಸಾಧನೆಯಲ್ಲ. ಇದು ನಿಮ್ಮ ಆತ್ಮವಿಶ್ವಾಸ ಮತ್ತು ಸ್ವಯಂ ನಿಯಂತ್ರಣಕ್ಕೆ ಸಾಕ್ಷಿ. ಈ ಬದಲಾವಣೆಯು ನಿಮ್ಮ ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ



ಬೀರಿದ ಧನಾತ್ಮಕ ಪರಿಣಾಮವನ್ನು ಗಮನಿಸಿ. ಸ್ಕ್ರೀನ್ ನೋಡುವುದು ಕಡಿಮೆಯಾದಂತೆ ಕಣ್ಣಿನ ಆಯಾಸ ತಪ್ಪುತ್ತದೆ, ನಿದ್ರೆಯ ಗುಣಮಟ್ಟ ಹೆಚ್ಚುತ್ತದೆ ಮತ್ತು ಮಾನಸಿಕ ಒತ್ತಡ ಕಡಿಮೆಯಾಗುತ್ತದೆ. ವಾಸ್ತವ ಜಗತ್ತಿನಲ್ಲಿ ನೀವು ಹೆಚ್ಚು ಕ್ರಿಯಾಶೀಲರಾಗಿರುತ್ತೀರಿ. ನಿಮ್ಮ ಯಶಸ್ಸನ್ನು ಸಂಭ್ರಮಿಸಿ.

ವಿಷಕಾರಿ ಸಂಬಂಧಗಳಿಂದ ಮುಕ್ತಿ

48 ಕೇವಲ ನಕಾರಾತ್ಮಕತೆ ಹರಡುವ ಅಥವಾ ನಿಮ್ಮನ್ನು ಮಾನಸಿಕವಾಗಿ ಕುಗ್ಗಿಸುವ ವ್ಯಕ್ತಿಗಳನ್ನು ಶಾಶ್ವತವಾಗಿ ಬ್ಲಾಕ್ ಮಾಡಿ. ಮಗೆ ಸ್ಫೂರ್ತಿ ನೀಡುವ, ನಿಮ್ಮ ಬೆನ್ನು ತಟ್ಟುವ ಮತ್ತು ಹೊಸ ವಿಷಯಗಳನ್ನು ಕಲಿಯಲು ಪ್ರೇರೇಪಿಸುವ ವ್ಯಕ್ತಿಗಳ ಜೊತೆ ಹೆಚ್ಚು ಸಂವಹನ ನಡೆಸಿ. ಉತ್ತಮ ಗೆಳೆಯರು ನಿಮ್ಮ ಡಿಜಿಟಲ್ ಲೋಕವನ್ನು ಸುಂದರವಾಗಿಸುತ್ತಾರೆ. ನಿಮ್ಮ ಡಿಜಿಟಲ್ ಲೋಕದಲ್ಲಿ ಶಾಂತಿ ಮತ್ತು ಪ್ರೀತಿ ಮಾತ್ರ ಇರಲಿ. ಆರೋಗ್ಯಕರ ಗೆಳೆತನಕ್ಕೆ ಆದ್ಯತೆ ನೀಡಿ. ನಿಮ್ಮ ಫೀಡ್‌ನಲ್ಲಿ ಕೇವಲ ಪ್ರೀತಿ, ಶಾಂತಿ ಮತ್ತು ಜ್ಞಾನದ ವಿಷಯಗಳು ಮಾತ್ರ ಬರುವಂತೆ ನಿಮ್ಮ ಲಿಸ್ಟ್

ಅನ್ನು ನಿಯಮಿತವಾಗಿ ಶುದ್ಧೀಕರಿಸಿ.

ಡಿಜಿಟಲ್ ಇತಿಹಾಸದ ವಿಮರ್ಶೆ

49 ನಿಮ್ಮ ಹಳೆಯ ಪೋಸ್ಟ್‌ಗಳನ್ನು ಒಮ್ಮೆ ನೋಡಿ. ಅದರಲ್ಲಿರುವ ತಪ್ಪುಗಳು ಅಥವಾ ಅಪಕ್ವವಾದ ವಿಚಾರಗಳಿಂದ ಪಾಠ ಕಲಿಯಿರಿ. ವ್ಯಕ್ತಿಯಾಗಿ ನೀವು ಎಷ್ಟು ಬೆಳೆದಿದ್ದೀರಿ ಎಂದು ಅರಿತುಕೊಳ್ಳಿ. ಅಂದು ನೀವು

ಯಾವುದೋ ಸಣ್ಣ ವಿಷಯಕ್ಕೆ ತಲೆಕೆಡಿಸಿಕೊಂಡ ರೀತಿ ಮತ್ತು ಇಂದು ನೀವು ಅದೇ ವಿಷಯವನ್ನು ನಿಭಾಯಿಸುವ ರೀತಿ-ಇವೆರಡರ ನಡುವಿನ ವ್ಯತ್ಯಾಸವೇ ನಿಮ್ಮ ಯಶಸ್ಸು. ನೀವು ವ್ಯಕ್ತಿಯಾಗಿ ಎಷ್ಟು ಬೆಳೆದಿದ್ದೀರಿ ಎಂದು ಅರಿತುಕೊಳ್ಳಲು ಇದು ಸಹಕಾರಿ. ಫೇಸ್ಬುಕ್‌ನಲ್ಲಿ 'ಮೆಮೊರೀಸ್' ನೋಡುವುದು ಅಂದ್ರೆ, ಹಳೆಯ ಆಲ್ಬಮ್ ನೋಡಿದ ಹಾಗಲ್ಲ, ಅದು ನಮ್ಮದೇ ಹಳೆಯ 'ಅವತಾರ'ಗಳನ್ನು ನೋಡಿ ನಾವೇ ಮುಖ ಮುಚ್ಚಿಕೊಳ್ಳುವ ಹಾಗಿರುತ್ತದೆ

ರಾತ್ರಿ ನಿದ್ದೆಯ ಶಿಸ್ತು

50 ರಾತ್ರಿ ಹತ್ತು ಗಂಟೆಯ ನಂತರ ಇಂಟರ್ನೆಟ್ ಆಫ್ ಮಾಡುವ ಅಭ್ಯಾಸವನ್ನು ಗಟ್ಟಿಗೊಳಿಸಿ. ಈ ಶಿಸ್ತು ನಿಮ್ಮ ಇಡೀ ದಿನದ ಚಟುವಟಿಕೆಗಳನ್ನು ಉತ್ತಮಗೊಳಿಸುತ್ತದೆ. ಗಾಢ ನಿದ್ದೆಯು ನಿಮ್ಮ ಮಿದುಳಿಗೆ ಅತ್ಯಗತ್ಯ. ಈ ಒಂದು ಸಣ್ಣ ಅಭ್ಯಾಸವು ನಿಮ್ಮ ಇಡೀ ದಿನದ ಚಟುವಟಿಕೆಗಳನ್ನು ಉತ್ತಮಗೊಳಿಸುತ್ತದೆ. ರಾತ್ರಿ ಬೇಗ ಮಲಗುವುದರಿಂದ ಬೆಳಗ್ಗೆ ಬೇಗ ಏಳಲು ಮತ್ತು ದಿನವಿಡೀ ಏಕಾಗ್ರತೆಯಿಂದ ಇರಲು ಸಾಧ್ಯವಾಗುತ್ತದೆ. ಸದಾ ಮಾಹಿತಿಯ ಸುರಿಮಳೆಯಲ್ಲಿರುವ ನಮ್ಮ ಮಿದುಳಿಗೆ ರಾತ್ರಿಯ ಶಾಂತತೆ ಅತ್ಯಗತ್ಯ. ಸ್ಕ್ರೀನ್‌ನಿಂದ ದೂರವಿರುವುದು ನಿಮ್ಮ ಕಣ್ಣು ಮತ್ತು ಮಿದುಳಿನ ದೀರ್ಘಕಾಲದ ಆರೋಗ್ಯಕ್ಕೆ ತುಂಬಾ ಒಳ್ಳೆಯದು.

ವರ್ಷಾಂತ್ಯದ ಡಿಜಿಟಲ್ ವಿರಾಮ

51 ಡಿಸೆಂಬರ್ ಕೊನೆಯ ವಾರ ಕನಿಷ್ಠ ಮೂರು ದಿನ ಸೋಶಿಯಲ್ ಮೀಡಿಯಾದಿಂದ ಸಂಪೂರ್ಣ ದೂರವಿರಿ. ಕುಟುಂಬದೊಂದಿಗೆ ಸಮಯ ಕಳೆಯಿರಿ ಮತ್ತು ಮುಖಾಮುಖಿ ಭೇಟಿಗಳಿಗೆ ಒತ್ತು ನೀಡಿ. ಹೊಸ ವರ್ಷಕ್ಕೆ ಹೊಸ ಚೈತನ್ಯದೊಂದಿಗೆ ಸಿದ್ಧರಾಗಿ. ಫೋನ್‌ನಲ್ಲಿ ಮೆಸೇಜ್ ಕಳುಹಿಸುವ ಬದಲು,

ನಿಮ್ಮ ಆತ್ಮೀಯರ ಮನೆಗೆ ಹೋಗಿ ಅವರನ್ನು ಭೇಟಿಯಾಗಿ. ನೇರವಾದ ಸಂಭಾಷಣೆ ಮತ್ತು ನಗು ನಿಮ್ಮ ಬಾಂಧವ್ಯವನ್ನು ಗಟ್ಟಿಗೊಳಿಸುತ್ತದೆ. ಸ್ಕ್ರೀನ್‌ನಿಂದ ದೂರವಿದ್ದಾಗ ಸಿಗುವ ಶಾಂತಿ ನಿಮ್ಮನ್ನು ಹೊಸ ವರ್ಷದ ಗುರಿಗಳತ್ತ ಗಮನಹರಿಸಲು ಸಿದ್ಧಗೊಳಿಸುತ್ತದೆ. ಹೊಸ ವರ್ಷವು ಕೇವಲ ಕ್ಯಾಲೆಂಡರ್ ಬದಲಾವಣೆಯಾಗದೆ, ನಿಮ್ಮ ಮನಸ್ಥಿತಿಯ ಬದಲಾವಣೆಯೂ ಆಗಲಿ. ಸೋಶಿಯಲ್ ಮೀಡಿಯಾದಿಂದ ಮೂರು ದಿನ ದೂರವಿದ್ದರೆ ನಮಗೆ ಗೊತ್ತಾಗುವ ಅತಿ ದೊಡ್ಡ ಸತ್ಯ, ಅಂದ್ರೆ ಫೋನ್ ಇಲ್ಲದೆಯೂ ಈ ಜಗತ್ತು ಸುಂದರವಾಗಿ ಚಲಿಸುತ್ತಿದೆ ಮತ್ತು ನಮ್ಮ ಮನೆಯವರ ಮುಖಗಳು ಫೋನ್‌ನ ವಾಲ್‌ಪೇಪರ್‌ಗಿಂತ ಇನ್ನೂ ಚೆನ್ನಾಗಿವೆ ಅಂತ.

ಹೊಸ ವರ್ಷದ ಪ್ರತಿಜ್ಞೆ

52 ಸಾಮಾಜಿಕ ಜಾಲತಾಣವು ನಿಮ್ಮ ಜೀವನದ ಒಂದು ಭಾಗವಾಗಿರಲಿ, ಆದರೆ ಅದೇ ನಿಮ್ಮ ಜೀವನವಾಗದಿರಲಿ ಎಂಬ ಸಂಕಲ್ಪ ಮಾಡಿ. ತಂತ್ರಜ್ಞಾನವನ್ನು ಗುಲಾಮನಂತೆ ಬಳಸಿ, ಅದರ ಗುಲಾಮರಾಗಬೇಡಿ.

ಸಾರ್ಥಕ ಜೀವನವೇ ಶ್ರೇಷ್ಠವಾದುದು. ದಿನದ ಕೆಲವು ಗಂಟೆಗಳ ಕಾಲ ಫೋನ್ ಅನ್ನು ಸಂಪೂರ್ಣವಾಗಿ ಬದಿಗಿಟ್ಟು ನಿಮ್ಮ ನೆಚ್ಚಿನ ಕೆಲಸಗಳಲ್ಲಿ ತೊಡಗಿಸಿಕೊಳ್ಳಿ. ಜೀವನವು ಸ್ಕ್ರೀನ್ ಮೇಲೆ ಕಾಣುವ ಲೈಕ್‌ಗಳು ಮತ್ತು ಕಮೆಂಟ್‌ಗಳಿಗಿಂತ ಮಿಗಿಲಾದುದು. ದಿನದ ಕೆಲವು ಗಂಟೆಗಳ ಕಾಲ ಫೋನ್ ಅನ್ನು ಸಂಪೂರ್ಣವಾಗಿ ಬದಿಗಿಟ್ಟು ನಿಮ್ಮ ನೆಚ್ಚಿನ ಕೆಲಸಗಳಲ್ಲಿ ತೊಡಗಿಸಿಕೊಳ್ಳಿ. ಪ್ರಕೃತಿ, ಕಲೆ ಮತ್ತು ಮಾನವೀಯ ಸಂಬಂಧಗಳಲ್ಲಿ ಸಾರ್ಥಕತೆಯನ್ನು ಹುಡುಕಿ.

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಚಿತ್ರ: ಸುಧಾಕರ್ ದೇವರಾಜ್

ಹ್ಯಾಪಿ ನ್ಯೂ ಇಯರ್: ಬೆಂಗಳೂರಿನ ಬ್ರಿಗೇಡ್ ರಸ್ತೆಯಲ್ಲಿ ಬುಧವಾರ ರಾತ್ರಿ 12 ಗಂಟೆಗೆ ಹೊಸ ವರ್ಷವನ್ನು ಸ್ವಾಗತಿಸಿ ಸಂಭ್ರಮಿಸಿದ ಯುವ ಸಮೂಹ

ಕೋಗಿಲು ಸಂತ್ರಸ್ತರ ಪುನರ್ವಸತಿಗೆ ಸಮರೋಪಾದಿ ಕ್ರಮ
ದಾಖಲೆಗಳ ಪರಿಶೀಲಿಸಿ ಫಲಾನುಭವಿಗಳ ಆಯ್ಕೆಗೆ ಕ್ರಮ

ನಾಳೆಯೇ ಮನೆ ಹಂಚಿಕೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಷ್ಟ್ರ ಮಟ್ಟದಲ್ಲಿ ಸದ್ದಾಗಿರುವ ಕೋಗಿಲು ಅಕ್ರಮ ಶೆಡ್ ತೆರವು ಪ್ರಕರಣದಲ್ಲಿ 'ಅರ್ಹ'ರ ಪತ್ತೆಯೇ ಅಧಿಕಾರಿಗಳಿಗೆ ಬಹುದೊಡ್ಡ ಸವಾಲಾಗಿರುವ ಕಾರಣ ಮನೆ ವಿತರಣೆಯನ್ನು ಒಂದು ದಿನ ಮುಂದೂಡಲು ತೀರ್ಮಾನಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಹೊಸ ವರ್ಷಕ್ಕೆ ಹೊಸ ಮನೆ ಎನ್ನುವ ತೀರ್ಮಾನವನ್ನು ಕೈಗೊಳ್ಳಲಾಗಿತ್ತು. ಆದರೆ ಅಧಿಕಾರಿಗಳು ದಾಖಲೆಗಳನ್ನು ಪರಿಶೀಲಿಸುವ ಸಮಯದಲ್ಲಿ ಹಲವು ಗೊಂದಲಗಳಿವೆ. ಇಲ್ಲಿ ವಾಸವಿರುವ ಹೊರ ರಾಜ್ಯದ ವಲಸಿಗರ ಬಳಿಯೂ ಆಧಾರ್, ಪಡಿತರ ಚೀಟಿ, ಮತದಾರರ ಚೀಟಿ ಇರುವುದರಿಂದ ಕರ್ನಾಟಕದವರನ್ನು ಗುರುತಿಸುವುದು ಹೇಗೆ? ಎನ್ನುವ ಸಮಸ್ಯೆ ಎದುರಾಗಿದೆ. ಆದ್ದರಿಂದ ಜ.1ರ ಬದಲಿಗೆ 2ರಂದು ಮನೆ ನೀಡಲು ಸರಕಾರ ತೀರ್ಮಾನಿಸಿದೆ.

ಈ ಬಗ್ಗೆ ಮಾತನಾಡಿರುವ ವಸತಿ ಸಚಿವ ಜಮೀರ್ ಅಹ್ಮದ್, ಯಲಹಂಕ ಕೋಗಿಲು ಬಡಾವಣೆಯಲ್ಲಿ ಅಕ್ರಮ ಮನೆಗಳ ತೆರವು ಹಿನ್ನೆಲೆಯಲ್ಲಿ ಅರ್ಹ ಸಂತ್ರಸ್ತರಿಗೆ ಬಿಬಿಎಂಪಿ ಹಾಗೂ ರಾಜೀವ್ ಗಾಂಧಿ ವಸತಿ ನಿಗಮ ವತಿಯಿಂದ ಪರ್ಯಾಯವಾಗಿ ಶಾಶ್ವತ ವಸತಿ ವ್ಯವಸ್ಥೆ ಮಾಡಿಕೊಡುವ ಬಗ್ಗೆ ದಾಖಲೆ ಪರಿಶೀಲನೆ ಮುಂದುವರಿದಿದೆ. ಈ ವಿಚಾರದಲ್ಲಿ ಅರ್ಹರಿಗೆ ಮಾತ್ರ ವಸತಿ ವ್ಯವಸ್ಥೆ ಮಾಡಿಕೊಡುವುದು ಸರಕಾರದ ಉದ್ದೇಶ. ಆದ್ದರಿಂದ ತರಾತುರಿ ಮಾಡದೆ ಸಮಗ್ರವಾಗಿ ದಾಖಲೆ ಪರಿಶೀಲನೆ ಮಾಡಲು ಮುಖ್ಯಮಂತ್ರಿಯವರು ಸೂಚನೆ ನೀಡಿದ್ದು, ಕಂದಾಯ ಇಲಾಖೆ ಹಾಗೂ ಬಿಬಿಎಂಪಿ ಅಧಿಕಾರಿಗಳು ಆ ಕಾರ್ಯದಲ್ಲಿ ನಿರತರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಜ.1ರ ಬದಲಿಗೆ 2ಕ್ಕೆ ನೀಡಲು ತೀರ್ಮಾನಿಸಲಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ರಾಜ್ಯದವರಿಗಿಂತ ಹೊರಗಿನವರೇ ಹೆಚ್ಚಳ

ದಾಖಲೆ ಪರಿಶೀಲಿಸುವ ಸಲುವಾಗ ರಾಜೀವ್ ಗಾಂಧಿ ವಸತಿ ನಿಗಮ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳ ಐದು ತಂಡಗಳು ಸಮೀಕ್ಷೆ ನಡೆಸುತ್ತಿವೆ. ಪ್ರಮುಖವಾಗಿ ಎಷ್ಟು ವರ್ಷಗಳಿಂದ ಇಲ್ಲಿ ವಾಸವಿದ್ದಾರೆ, ಆಧಾರ್, ಮತದಾರರ ಗುರುತಿನ ಚೀಟಿ, ಪಡಿತರ ಚೀಟಿ, ತಾತ್ಕಾಲಿಕ ಹಕ್ಕುಪತ್ರಗಳು, ಕುಟುಂಬ ಸದಸ್ಯರ ವಿವರ, ಮನೆ ಅಥವಾ ಶೆಡ್ ಇರುವ ಸ್ಥಳದ ಜಿಪಿಎಸ್ ಮಾಹಿತಿಯನ್ನು ಕಲೆ ಹಾಕುತ್ತಿದ್ದಾರೆ. ಹಲವರ ಬಳಿಕ ಸೂಕ್ತ ದಾಖಲೆಗಳ ಕೊರತೆಯಿದೆ ಎನ್ನುವ ಮಾತುಗಳು ಕೇಳಿಬರುತ್ತಿವೆ.

ಆದರೆ ರಾಜ್ಯ ಸರಕಾರ ಈಗಾಗಲೇ ಕರ್ನಾಟಕದವರಿಗೆ ಮಾತ್ರ ಬದಲಿಗೆ ಮನೆಗಳನ್ನು ನೀಡುವುದಾಗಿ ರಾಜ್ಯ ಸರಕಾರ ಘೋಷಿಸಿದೆ. ಅಧಿಕಾರಿಗಳು ಮಾಹಿತಿ ಕಲೆಹಾಕುವ ಸಮಯದಲ್ಲಿ, ಕನ್ನಡಿಗರಿಗಿಂತ ಹೆಚ್ಚಾಗಿ ಉತ್ತರ ಪ್ರದೇಶ, ಪಶ್ಚಿಮ ಬಂಗಾಳ ಸೇರಿದಂತೆ ವಿವಿಧ ರಾಜ್ಯದವರಿದ್ದಾರೆ. ಕೆಲವು ಬಾಂಗ್ಲಾ ವಲಸಿಗರೂ ಇರುವ ಸಾಧ್ಯತೆಯಿದೆ ಎನ್ನಲಾಗುತ್ತಿದೆ. ಕೇವಲ ಮುಸ್ಲಿಮರು ಮಾತ್ರವಲ್ಲದೇ, ಇತರೆ ಸಮುದಾಯದ ಬಡವರು ವಾಸವಾಗಿರುವುದು ಬೆಳಕಿಗೆ ಬಂದಿದೆ.

ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಬಳಿಕ ರಾಜ್ಯ ಮಿನಿ ಬಾಂಗ್ಲಾವಾಗಿದೆ. ವರ್ಷದ ಹಿಂದಷ್ಟೆ ಇಲ್ಲದ ಮನೆಗಳು ಈಗ ಕಾಣಿಸುತ್ತಿವೆ. ಅಕ್ರಮವಾಗಿ ಶೆಡ್ ಹಾಕಿಕೊಂಡವರಿಗೆ ವಿದ್ಯುತ್ ಸಂಪರ್ಕ ನೀಡಿದ್ದು ಹೇಗೆ? ರಾಜ್ಯದಲ್ಲಿ ಸುಮಾರು 4.5 ಲಕ್ಷ ಜನರು ಅನಧಿಕೃತ ಮನೆಗಳ ನೆಪದಲ್ಲಿ ವಿದ್ಯುತ್ ಸಂಪರ್ಕವಿಲ್ಲದೆ ಬದುಕುತ್ತಿದ್ದಾರೆ. ಆದರೆ ಇಲ್ಲಿ ದುಬಾರಿ ಕೇಬಲ್ ಸಂಪರ್ಕದೊಂದಿಗೆ ವಿದ್ಯುತ್ ಬಳಕೆ ನಡೆಯುತ್ತಿದೆ. ಇವರೇನು ಸಿದ್ದರಾಮಯ್ಯನವರ ನೆಂಟರೇ?

-ಆರ್.ಅಶೋಕ್, ಪ್ರತಿಪಕ್ಷ ನಾಯಕ

ಸತ್ಯಶೋಧನಾ ಸಮಿತಿ ರಚಿಸಿದ ಬಿಜೆಪಿ

ಈ ನಡುವೆ ಅಕ್ರಮ ವಲಸಿಗರಿಗೂ ಮನೆ ನೀಡಲಾಗುತ್ತಿದೆ ಎನ್ನುವ ಆರೋಪವನ್ನು ಮಾಡಿರುವ ಬಿಜೆಪಿ, ಈ ಬಗ್ಗೆ ಪರಿಶೀಲಿಸಿ ಸಮಗ್ರ ವರದಿ ಸಲ್ಲಿಸಲು ಸತ್ಯಶೋಧನಾ ಸಮಿತಿಯನ್ನು ರಚಿಸಿದೆ. ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್, ದಾಸರಹಳ್ಳಿ ಶಾಸಕ ಎಸ್. ಮುನಿರಾಜು, ವಿಧಾನಪರಿಷತ್ ಸದಸ್ಯ ಕೆ.ಎಸ್. ನವೀನ್, ರಾಜ್ಯ ಉಪಾಧ್ಯಕ್ಷೆ ಮಾಳವಿಕಾ ಅವಿನಾಶ್, ತಮ್ಮೇಶ್‌ಗೌಡ, ಹರೀಶ್ ಹಾಗೂ ಭಾಸ್ಕರ್ ರಾವ್ ಅವರನ್ನು ಒಳಗೊಂಡ ಸಮಿತಿಯನ್ನು ರಚಿಸಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಆದೇಶ ಹೊರಡಿಸಿದ್ದಾರೆ.

ಸ್ಥಳಕ್ಕೆ ಅಶೋಕ್, ಛಲವಾದಿ ಭೇಟಿ

ಕೋಗಿಲು ಲೇಔಟ್‌ನಲ್ಲಿ ಅಕ್ರಮವಾಗಿ ನೆಲೆಸಿರುವ ಜಾಗಕ್ಕೆ ಬುಧವಾರ ಪ್ರತಿಪಕ್ಷ ನಾಯಕ ಆರ್. ಅಶೋಕ್ ಹಾಗೂ ಛಲವಾದಿ ನಾರಾಯಣ ಸ್ವಾಮಿ ಭೇಟಿ ನೀಡಿದರು. ಈ ವೇಳೆ ಗೂಗಲ್ ಮ್ಯಾಪ್ ಫೋಟೋ ಹಾಗೂ ಈಗಿರುವ ಪರಿಸ್ಥಿತಿಯ ಬಗ್ಗೆ ಸ್ಥಳೀಯ ಬಿಜೆಪಿಗರು ವಿವರಿಸಿದರು. ಕೆಲ ನಿರಾಶ್ರಿತರು 28 ವರ್ಷದವರಾಗಿದ್ದರೂ, ಇಲ್ಲಿಗೆ ಬಂದು 25 ವರ್ಷವಾಗಿದೆ ಎಂದು ಹೇಳಿಕೊಂಡಿದ್ದಾರೆ. ಇದು ಹಲವು ಅನುಮಾನಗಳಿಗೆ ಕಾರಣವಾಗಿದೆ. ಭೇಟಿಯ ವೇಳೆ ಮಾತನಾಡಿದ ಅಶೋಕ್, ಇಲ್ಲಿ ಮನೆಗಳ ತೆರವು ಮಾಡಿದ ಕೂಡಲೇ ಪಾಕಿಸ್ತಾನದ ಸಚಿವ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಅಷ್ಟು ಬೇಗ ಅಲ್ಲಿಗೆ ಹೇಗೆ ಮಾಹಿತಿ ಹೋಯಿತು? ಇಲ್ಲಿದ್ದ ಸ್ಲೀಪರ್ ಸೆಲ್ ನಿಂದ ಹೋಗಿರಬಹುದಲ್ಲವೇ? ಈ ಅನುಮಾನದ ಬಗ್ಗೆ ಎನ್‌ಐಎ ತನಿಖೆಯಾಗಬೇಕು ಎಂದು ಆಗ್ರಹಿಸಿದ್ದಾರೆ.

ವರದಿಯನ್ನು ಸಾರ್ವಜನಿಕವಾಗಿ ಬಿಡುಗಡೆ ಮಾಡಲು ನ್ಯಾಯಮೂರ್ತಿ ಸಲಹೆ

ಕೋವಿಡ್ ಅಕ್ರಮ: ಡಿ'ಕುನ್ಹಾ ಸಮಿತಿ ಅಂತಿಮ ವರದಿ ಸಲ್ಲಿಕೆ

ಬೆಂಗಳೂರು: ಬಿಜೆಪಿ ಸರಕಾರ ಅವಧಿಯಲ್ಲಿನ ಕೋವಿಡ್ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಕೇಳಿಬಂದ ಆರೋಪಗಳ ಸಮಗ್ರ ತನಿಖೆ ಅಂತಿಮ ಹಂತ ತಲುಪಿದ್ದು, ಮೈಕಲ್ ಡಿ. ಕುನ್ಹಾ ನೇತೃತ್ವದ ಸಮಿತಿ ರಾಜ್ಯ ಸರಕಾರಕ್ಕೆ ಅಂತಿಮ ವರದಿಯನ್ನು ಸಲ್ಲಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬುಧವಾರ ಭೇಟಿಯಾದ ವಿಚಾರಣಾ ಆಯೋಗದ ಮುಖ್ಯಸ್ಥ ಮಾಜಿ ನ್ಯಾಯಮೂರ್ತಿ ಜಾನ್ ಮೈಕೆಲ್ ಕುನ್ಹಾ ಅವರು ತಮ್ಮ ಅಂತಿಮ ವರದಿಯನ್ನು ಸಲ್ಲಿಸಿದರು. ಈ ವರದಿಯಲ್ಲಿ ಯಾವೆಲ್ಲ ಅಂಶಗಳಿವೆ ಎನ್ನುವ ಸ್ಪಷ್ಟನೆ ಸಿಕ್ಕಿಲ್ಲ. ಆದರೆ ಈ ವರದಿಯು ಬೆಂಗಳೂರು ನಗರ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ವರದಿಯಾದ ಖರೀದಿಗಳಲ್ಲಿನ ಅಕ್ರಮಗಳಿಗೆ ಸಂಬಂಧಿಸಿದೆ ಎಂದು ಮುಖ್ಯಮಂತ್ರಿಗಳ ಕಚೇರಿ ಅಧಿಕೃತವಾಗಿ ತಿಳಿಸಿದೆ. ಬೆಂಗಳೂರು ನಗರದಲ್ಲಿ 63.79 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದರೆ, ಬೆಳಗಾವಿ ಜಿಲ್ಲೆಯಲ್ಲಿ 42.19 ಕೋಟಿ ರು.ಗಳನ್ನು ಖರ್ಚು ಮಾಡಲಾಗಿದೆ ಎಂದು ಸಿಎಂ ಕಚೇರಿ ಮೂಲಗಳು ತಿಳಿಸಿವೆ.

ಕುನ್ಹಾ ಅವರು ವರದಿಯಲ್ಲಿನ ತಮ್ಮ ಅಂತಿಮ ಹೇಳಿಕೆಯಲ್ಲಿ, ಸರಕಾರವು ವರದಿಯ ಸಂಶೋಧನೆಗಳನ್ನು ಸಾರ್ವಜನಿಕವಾಗಿ ಬಿಡುಗಡೆ ಮಾಡುವಂತೆ ತಿಳಿಸಿದ್ದಾರೆ. ಈ ವಿಷಯದಲ್ಲಿ, ಸಾರ್ವಜನಿಕ ಹಿತಾಸಕ್ತಿ ಮತ್ತು ಸಾರ್ವಜನಿಕ ಖರೀದಿಗಳಲ್ಲಿನ ಸುಧಾರಣೆಗಳು ಹಾಗೂ ಪಾರದರ್ಶಕತೆಯ ಬಗ್ಗೆ ತಕ್ಷಣದ ಅಗತ್ಯತೆ ಗಮನದಲ್ಲಿಟ್ಟುಕೊಂಡು, ಸರಕಾರವು ವರದಿಯನ್ನು ಆದಷ್ಟು ಬೇಗ ವರದಿ ಬಿಡುಗಡೆ ಮಾಡಬೇಕು ಎಂದು ಉಲ್ಲೇಖಿಸಿದ್ದಾರೆ.

ಔಷಧ, ಉಪಕರಣಗಳು ಮತ್ತು ಒಟ್ಟಾರೆ ಸಾಂಕ್ರಾಮಿಕ ನಿರ್ವಹಣೆಯ ಖರೀದಿಯಲ್ಲಿ ದೊಡ್ಡ ಪ್ರಮಾಣದ ಭ್ರಷ್ಟಾಚಾರ ನಡೆದಿದೆ ಎಂದು ಕರ್ನಾಟಕ ವಿಧಾನಸಭೆಯ ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಶಂಕಿಸಿದ ಹಿನ್ನೆಲೆಯಲ್ಲಿ, ಆಗಸ್ಟ್ 2023ರಲ್ಲಿ ವಿಚಾರಣಾ ಆಯೋಗವನ್ನು ರಚಿಸಿ ಸರಕಾರ ಆದೇಶ ಹೊರಡಿಸಿತ್ತು. ಆಯೋಗವು ಮೂರು ತಿಂಗಳೊಳಗೆ ತನ್ನ ವರದಿ ಸಲ್ಲಿಸಲು ಸೂಚನೆ ನೀಡಲಾಗಿತ್ತು. ಆದರೆ ನವೆಂಬರ್ 2024ರಲ್ಲಿ ತನ್ನ ಮಧ್ಯಂತರ ವರದಿಯನ್ನು ಸಲ್ಲಿಸಿತ್ತು.

ಕೋವಿಡ್-19 ಸಂಬಂಧಿತ ವೈದ್ಯಕೀಯ ಉಪಕರಣಗಳನ್ನು ಖರೀದಿಸುವಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿಯೇ 918 ಕೋಟಿ ರು. ದುರುಪಯೋಗ ನಡೆದಿರುವ ಬಗ್ಗೆ ಮಧ್ಯಂತರ ವರದಿಯಲ್ಲಿ ಪ್ರಸ್ತಾಪವಾಗಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ್ ಪಾಟೀಲ್ ಹೇಳಿದ್ದರು. ಜತೆಗೆ, ಸಂಬಂಧಪಟ್ಟ ಅಧಿಕಾರಿಗಳಿಂದ 92 ಕೋಟಿ ರು.ಗಳನ್ನು ವಸೂಲಿ ಮಾಡುವಂತೆಯೂ ಆಯೋಗವು ಸರಕಾರಕ್ಕೆ ಶಿಫಾರಸು ಮಾಡಿದೆ. ಇದಲ್ಲದೆ, ಕಿದ್ವಾಯಿ ಸ್ಮಾರಕ ಸಂಸ್ಥೆಯಲ್ಲಿ ಆರ್‌ಟಿ-ಪಿಸಿಆರ್ ಉಪಕರಣಗಳ ಖರೀದಿಯಲ್ಲಿ 200 ಕೋಟಿ ರು.ಗಳಿಗೂ ಹೆಚ್ಚು ದುರುಪಯೋಗವಾಗಿದೆ ಎಂದು ಆಯೋಗವು ಬಹಿರಂಗಪಡಿಸಿದೆ ಎಂದು ಪಾಟೀಲ್ ತಿಳಿಸಿದ್ದರು.

ಸೊಂಪಾದ ಪುಟಗಳು

ಸ್ಕಾಚ್ ಸವಿಯುತ್ತಾ, ಹೊಸವರ್ಷಕ್ಕೆ ಕಾಲಿಡೋಣ !

ನೂರೆಂಟು ವಿಶ್ವ
ವಿಶ್ವೇಶ್ವರ ಭಟ್ 6



ಅಂಗಾಲಿನಡಿಗೆ ಕಾಲದ ಕಚಗುಳಿ

ಕಾಡುದಾರಿ
ಹರೀಶ್ ಕೇರ 7

ದಾರಿದೀಪೋಕ್ತಿ

ಹೊಸ ವರ್ಷವು ಕೇವಲ ಕ್ಯಾಲೆಂಡರ್ ಬದಲಾವಣೆಯಲ್ಲ, ಅದು ನಮ್ಮ ಜೀವನದ ಕಥೆಯನ್ನು ಹೊಸದಾಗಿ ಬರೆಯಲು ಸಿಕ್ಕಿರುವ 365 ಖಾಲಿ ಪುಟಗಳ ಪುಸ್ತಕ. ಹಳೆಯ ತಪ್ಪುಗಳಿಂದ ಪಾಠ ಕಲಿತು, ಹೊಸ ಭರವಸೆಯೊಂದಿಗೆ ನಿಮ್ಮ ಕನಸುಗಳತ್ತ ಹೆಜ್ಜೆ ಇಡಿ. ನೆನಪಿಡಿ, ಸಣ್ಣ ಬದಲಾವಣೆಯೂ ಮಹತ್ತರವಾದ ಸಾಧನೆಗೆ ಮುನ್ನುಡಿಯಾಗಬಲ್ಲದು.

ವಕ್ರತುಂಡೋಕ್ತಿ

ಹೊಸ ವರ್ಷದ ಸಂಕಲ್ಪಗಳು (ರೆಸಲೂಷನ್ಸ್) ಅಂದ್ರೆ, ಹಳೆಯ ವರ್ಷದ ಸಾಲದ ಹಾಗೆ. ಮಾಡುವಾಗ ಇರುವ ಸಂಭ್ರಮ, ತೀರಿಸುವಾಗ (ಪಾಲಿಸುವಾಗ) ಇರುವುದಿಲ್ಲ.

ಫನ್‌ತರಂಗ

- ರಘುಪತಿ ಶೃಂಗೇರಿ -

ಹೊಸ ವರ್ಷಾಚರಣೆ ದಿನವೇ ಗ್ರಾಹಕರಿಗೆ ಶಾಕ್ ಕೊಟ್ಟ ಡೆಲಿವರಿ ಬಾಯ್ಸ್
ಸ್ವಿಗ್ಗಿ, ಜೊಮಾಟೊ, ಜೆಪ್ಟೊ, ಬ್ಲಿಂಕಿಟ್ ನೌಕರರ ಪ್ರತಿಭಟನೆ

ಕೇರಳ ಸಿಎಂ ಜತೆ 93ನೇ ಶಿವಗಿರಿ ತೀರ್ಥಯಾತ್ರಾ ಮಹೋತ್ಸವದಲ್ಲಿ ಭಾಗಿ

ನಾರಾಯಣ ಗುರು ಸಾಮಾಜಿಕ ದಾರ್ಶನಿಕ: ಸಿಎಂ ವ್ಯಾಖ್ಯಾನ

ತಿರುವನಂತಪುರ: ವೈವಿಧ್ಯತೆಯ ನಡುವೆ ಮನುಷ್ಯರು ಒಗ್ಗಟ್ಟಾಗಿ ಬಾಳುವ ಸಹೃದಯಿ ಭಾರತ ನಿರ್ಮಾಣ ನಾರಾಯಣ ಗುರುಗಳ ಗುರಿಯಾಗಿತ್ತು. ನೈತಿಕತೆ ಇಲ್ಲದ ಅಹಂಕಾರದ ಭಾಷೆಯಲ್ಲಿ ಕೋಮುವಾದಿಗಳು ಮಾತಾಡುವ ಬಗ್ಗೆ ನಾರಾಯಣ ಗುರುಗಳು ಎಚ್ಚರಿಸಿದ್ದರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಭಿಪ್ರಾಯಪಟ್ಟರು.

ಕೇರಳ ತಿರುವನಂತಪುರದ 93ನೇ ಶಿವಗಿರಿ ತೀರ್ಥಯಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡು ಮಾತನಾಡಿದ ಅವರು ನಾರಾಯಣ ಗುರುಗಳು ಕೇವಲ ಒಬ್ಬ ಸಂತ ಮಾತ್ರ ಆಗಿರಲಿಲ್ಲ. ಸಮಾನತೆ ಮತ್ತು ನೈತಿಕತೆಯ ಚಳವಳಿಯಾಗಿದ್ದರು. ಹೀಗಾಗಿ ಶಿವಗಿರಿ ತೀರ್ಥಯಾತ್ರೆ ಕೂಡ ಚಳವಳಿಯ ಸ್ವರೂಪ ಪಡೆದು ಜಾತಿ ದೌರ್ಜನ್ಯ ಅಳಿಸಿ ಸಮಾಜವನ್ನು ಸಾಮಾಜಿಕ ನ್ಯಾಯದ ಕಡೆ ಮುನ್ನಡೆಸಬೇಕು. ಇದೇ ನಾರಾಯಣ ಗುರುಗಳು ಕಂಡ ಭಾರತ. ಇದೇ ಶಿವಗಿರಿ ಪ್ರತಿಪಾದಿಸುವ ಭಾರತ. ಇಂಥಾ ಭಾರತವನ್ನು ನಾವು ಒಟ್ಟಾಗಿ ಗಟ್ಟಿಗೊಳಿಸಬೇಕಿದೆ ಎಂದರು.

ಕೇರಳ ಸಿಎಂ ಪಿಣರಾಯಿ ವಿಜಯನ್, ಎಐಸಿಸಿ ಪ್ರಧಾನ ಕಾರ್ಯದರ್ಶಿ ವೇಣು ಗೋಪಾಲ್, ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಮತ್ತಿತರರು ಭಾಗವಹಿಸಿದ್ದ ಸಭೆಯಲ್ಲಿ ಪಾಲ್ಗೊಂಡ ಸಿಎಂ ನಾರಾಯಣ ಗುರುಗಳ ಬಗ್ಗೆ ವಿಶದವಾಗಿ ಮಾತನಾಡಿದರು.

ನಾರಾಯಣ ಗುರುಗಳ ತತ್ವಜ್ಞಾನವು ಕನ್ನಡದ ರಾಷ್ಟ್ರಕವಿ ಕುವೆಂಪು ಅವರು ನಂತರ ಪ್ರತಿಪಾದಿಸಿದ 'ವಿಶ್ವಮಾನವ' ಪರಿಕಲ್ಪನೆಯನ್ನು ಒಳಗೊಂಡಿತ್ತು. ಇದು ಜಾತಿರಹಿತ, ಭಯರಹಿತ ಮತ್ತು ಮಾನವೀಯ ಸಮಾಜ ನಿರ್ಮಾಣದ ದೂರದೃಷ್ಟಿಯಾಗಿತ್ತು. ಅವರು ಹಿಂದುಳಿದ ಸಮುದಾಯಗಳು ತಮ್ಮದೇ ಆದ ದೇವಾಲಯಗಳನ್ನು ಸ್ಥಾಪಿಸಬೇಕೆಂದು ಕರೆ ನೀಡಿದರು. ದೇವಾಲಯಗಳಲ್ಲಿ ವಿಗ್ರಹದ ಬದಲು ಕನ್ನಡಿಯನ್ನು ಪ್ರತಿಷ್ಠಾಪಿಸಿದರು. ದೈವತ್ವವು ಪ್ರತಿ ಮನುಷ್ಯನೊಳಗೆ ನೆಲೆಸಿದ್ದು, ಆತ್ಮಸಾಕ್ಷಾತ್ಕಾರ, ಸಮಾನತೆ ಹಾಗೂ ಯಾರಿಗೂ ಕೇಡು ಬಯಸದಿರುವುದೇ ನಿಜವಾದ ಆರಾಧನೆ ಎಂದು ತಿಳಿಸುವುದು ಇದರ ಉದ್ದೇಶವಾಗಿತ್ತು. ಎಂದು ಹೇಳಿದರು

ಶಾಲೆಗಳು, ದೇವಾಲಯಗಳು ಮತ್ತು ಸಾಮಾಜಿಕ ಸಂಘಟನೆಗಳನ್ನು ಸ್ಥಾಪಿಸುವ ಮೂಲಕ, ನಾರಾಯಣ ಗುರುಗಳು ಶೋಷಿತರಿಗೆ ಸ್ವಾಭಿಮಾನ, ಜ್ಞಾನ ಮತ್ತು ನಾಯಕತ್ವದ ಗುಣವನ್ನು ಮರುಸ್ಥಾಪಿಸುವ ವೇದಿಕೆಯನ್ನು ಸೃಷ್ಟಿಸಿದರು.

→13

ಬುರುಡೆ ಕೇಸ್:ಧರ್ಮಸ್ಥಳ ಪರ ಕೋರ್ಟಿಗೆ ವಕಾಲತ್ತು

ಮಂಗಳೂರು: ಬುರುಡೆ ಷಡ್ಯಂತ್ರ ಪ್ರಕರಣಕ್ಕೆ ಸಂಬಂಧಿಸಿದಂತೆ ಶ್ರೀ ಕ್ಷೇತ್ರ ಧರ್ಮಸ್ಥಳದ ಪರವಾಗಿ ಬೆಳ್ತಂಗಡಿ ನ್ಯಾಯಾಲಯಕ್ಕೆ ವಕಾಲತ್ತು ಸಲ್ಲಿಕೆಯಾಗಿದೆ. ಬೆಂಗಳೂರಿನ ಹಿರಿಯ ನ್ಯಾಯವಾದಿ ಸಿ.ವಿ ನಾಗೇಶ್ ಪುತ್ತೂರಿನ ವಕೀಲ ಮಹೇಶ್ ಕಜೆ ಬುಧವಾರ ಬೆಳ್ತಂಗಡಿ ಕೋರ್ಟ್‌ಗೆ ಆಗಮಿಸಿ ವಕಾಲತ್ತು ಸಲ್ಲಿಸಿದ್ದಾರೆ. ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣವನ್ನು ವಿಶೇಷ ತನಿಖಾ ತಂಡ ತನಿಖೆ ನಡೆಸುತ್ತಿದ್ದು ಈಗಾಗಲೇ ಬೆಳ್ತಂಗಡಿ ಕೋರ್ಟ್‌ಗೆ ವರದಿ ಸಲ್ಲಿಸಿದೆ. ವರದಿಯಲ್ಲಿ ಧರ್ಮಸ್ಥಳ ವಿರುದ್ಧ ಷಡ್ಯಂತ್ರ ನಡೆಸಿರುವುದು ಬಹಿರಂಗಗೊಂಡಿದ್ದರೂ ಆರೋಪಿಗಳ ವಿರುದ್ಧ ಎಸ್‌ಐಟಿ ಕ್ರಮ ಕೈಗೊಳ್ಳದ ಹಿನ್ನೆಲೆಯಲ್ಲಿ ಧರ್ಮಸ್ಥಳದ ಕ್ಷೇತ್ರದ ಪರ ವಕೀಲರು ವಕಾಲತ್ತು ಸಲ್ಲಿಸಿದ್ದಾರೆ.

ಖಾಲೀದಾ ಅಂತ್ಯಕ್ರಿಯೆ ಸಚಿವ ಜೈಶಂಕರ್ ಭಾಗಿ

ಢಾಕಾ: ಬಾಂಗ್ಲಾದೇಶದ ಮಾಜಿ ಪ್ರಧಾನಿ ಖಾಲೀದಾ ಜಿಯಾ (80) ಅಂತ್ಯಕ್ರಿಯೆ ಢಾಕಾದಲ್ಲಿ ಬುಧವಾರ ನಡೆದಿದ್ದು, ಲಕ್ಷಾಂತರ ಜನರು ಸೇರಿ ಅಂತಿಮ ನಮನ ಸಲ್ಲಿಸಿದರು. ಪತಿ, ಬಾಂಗ್ಲಾ ಮಾಜಿ ಅಧ್ಯಕ್ಷ ಜಿಯಾವುರ್ ರೆಹಮಾನ್ ಸಮಾಧಿ ಪಕ್ಕದಲ್ಲೇ ಖಾಲೀದಾರ ಸಮಾಧಿ ಮಾಡಲಾಗಿದೆ. ಮಾಣಿಕ್ ಮಿಯಾ ಅವೆನ್ಯೂ ಸ್ಥಳದಲ್ಲಿ ಅಂತಿಮ ವಿಧಿವಿಧಾನಗಳು ಜರುಗಿವೆ. ಕೇಂದ್ರ ಸರಕಾರದ ಪ್ರತಿನಿಧಿಯಾಗಿ ವಿದೇಶಾಂಗ ಸಚಿವ ಎಸ್.ಜೈಶಂಕರ್ ಹಾಜರಿದ್ದರು. ಇದೇ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು ಬರೆದಿದ್ದ ವೈಯಕ್ತಿಕ ಪತ್ರವನ್ನು ಖಾಲೀದಾ ಜಿಯಾ ಅವರ ಪುತ್ರ ತಾರಿಕ್ ರೆಹಮಾನ್ ಅವರಿಗೆ ಜೈಶಂಕರ್ ಹಸ್ತಾಂತರಿಸಿದರು.

ದುಬಾರಿ ಮದ್ಯ, ಇಸ್ಪೀಟ್ ಆಟ: ಕಲಬುರ್ಗಿ ಕಾರಾಗೃಹದ ವಿಡಿಯೋ ವೈರಲ್

ಜೈಲಿನಲ್ಲಿ ಕೈದಿಗಳ ರಾಜ ವೈಭೋಗ

ಕಲಬುರಗಿ: ಇಲ್ಲಿನ ಕೇಂದ್ರ ಕಾರಾಗೃಹವು ಅಪರಾಧಿಗಳ ಪಶ್ಚಾತ್ತಾಪದ ಕೇಂದ್ರವಾಗುವ ಬದಲು ಕೈದಿಗಳಿಗೆ ರಾಜಾತಿಥ್ಯ ನೀಡುವ ಕ್ಲಬ್ ಆಗಿ ಮಾರ್ಪಟ್ಟಿದೆಯೇ ಎಂಬ ಸಂಶಯ ಮೂಡಿಸು ವಂತಹ ಸ್ಫೋಟಕ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಬಿಗಿ ಭದ್ರತೆಯ ನಡುವೆಯೂ ಕೈದಿಗಳು ಜೈಲಿನೊಳಗೆ ರಾಜಾತಿಥ್ಯ ಪಡೆಯುತ್ತಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಬ್ರ್ಯಾಂಡೆಡ್ ಮದ್ಯ, ಜೂಜಾಟದ ಮೋಜು: ವೈರಲ್ ಆಗಿರುವ ವಿಡಿಯೊದಲ್ಲಿ ಕೈದಿಗಳು ಸಾಲಾಗಿ ಕುಳಿತು ದುಬಾರಿ ಬೆಲೆಯ ಮದ್ಯ ಸೇವಿಸುತ್ತಾ, ಸಿಗರೇಟ್ ಸೇದುತ್ತಾ ಸಂಭ್ರಮಿಸು ತ್ತಿರುವುದು ಕಂಡುಬಂದಿದೆ. ಅಷ್ಟೇ ಅಲ್ಲದೆ, ಗುಂಪು ಗುಂಪಾಗಿ ಕುಳಿತು ಹಣದ ಬಾಜಿ ಕಟ್ಟಿ ಜೂಜಾಟದಲ್ಲಿ ತೊಡಗಿರುವ ದೃಶ್ಯಗಳು ಜೈಲಿನ ನಿಯಮಾವಳಿಗಳನ್ನು ಅಣಕಿಸುವಂತಿವೆ.

ಮೊಬೈಲ್ ಫೋನ್ ಬಳಕೆ ಸೇರಿದಂತೆ ನಿಷೇಧಿತ ವಸ್ತುಗಳು ಜೈಲಿನ ಬ್ಯಾರಕ್‌ಗಳೊಳಗೆ ಹೇಗೆ ಸರಬರಾಜಾಗುತ್ತಿವೆ ಎಂಬುದು ಈಗ ದೊಡ್ಡ ಪ್ರಶ್ನೆಯಾಗಿ ಕಾಡುತ್ತಿದೆ.

ಅಧಿಕಾರಿಗಳ ವಿರುದ್ಧ ಗಂಭೀರ ಆರೋಪ: ಪಿಎಸ್‌ಐ ಹಗರಣದ ಕಿಂಗ್‌ಪಿನ್ ಆರ್.ಡಿ. ಪಾಟೀಲ್ ಮಂಗಳವಾರವಷ್ಟೇ ಜೈಲು ಅಧೀಕ್ಷಕಿ ಡಾ.ಅನಿತಾ ವಿರುದ್ಧ 10 ಲಕ್ಷ ರು. ಲಂಚದ ಆರೋಪ ಹೊರಿಸಿದ ವಿಡಿಯೊ ಬಿಡುಗಡೆ ಮಾಡಿ ದ್ದರು. ಅದರ ಬೆನ್ನಲ್ಲೇ ಬುಧವಾರ ಕೈದಿಗಳ ಈ ಐಷಾರಾಮಿ ಜೀವನದ ವಿಡಿಯೊ ಹೊರಬಂದಿರು ವುದು ಜೈಲು ಆಡಳಿತ ಮಂಡಳಿಯನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

→13

ಬಜೆಟ್‌ಗೆ ಮುನ್ನವೇ ವರದಿ ಬಿಡುಗಡೆಗೆ ಚಿಂತನೆ

ಜಾತಿಗಣತಿಗೆ ಅಂತಿಮ ಸ್ಪರ್ಶ

ಬೆಂಗಳೂರು: ರಾಜ್ಯದಲ್ಲಿ ಬಹುದೊಡ್ಡ ವಿವಾದಕ್ಕೆ ಕಾರಣವಾಗಿದ್ದ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸಮೀಕ್ಷೆ ಪೂರ್ಣಗೊಂಡಿದ್ದು, ವರದಿ ಸಿದ್ಧಪಡಿಸುವ ಕಾರ್ಯದಲ್ಲಿ ಹಿಂದುಳಿದ ವರ್ಗಗಳ ಆಯೋಗ ಮಗ್ನವಾಗಿದೆ. ಈ ನಡುವೆಯೇ, 2026-27ನೇ ಸಾಲಿನ ಬಜೆಟ್ ಅನ್ನು ಮಂಡಿಸುವ ಮೊದಲೇ, ಜಾತಿ ಗಣತಿಗೆ ಒಂದು ರೂಪು ನೀಡಬೇಕು ಎನ್ನುವ ಲೆಕ್ಕಾಚಾರಗಳು ಶುರುವಾಗಿದೆ.

→13

ಹೈಕಮಾಂಡ್ ಜತೆ ಚರ್ಚಿಸಲು ತೀರ್ಮಾನ

ಜಾತಿ ಗಣತಿಯ ವಿಷಯದಲ್ಲಿ ಯಾವುದೇ ರೀತಿಯ ತೀರ್ಮಾನ ಕೈಗೊಂಡರೂ ಪಕ್ಷದೊಳಗೆ ಇನ್ನೊಂದು ಬಣದಿಂದ ಅಸಮಾಧಾನ ಶುರುವಾಗುವುದು ನಿಶ್ಚಿತ. ಆದ್ದರಿಂದ ಈ ಬಾರಿ ಜಾತಿ ಗಣತಿ ಮಂಡನೆ, ಅನುಮೋದನೆ ಹಾಗೂ ಜಾರಿಯನ್ನು ಯಾವ ರೀತಿಯಲ್ಲಿ ಮಾಡಬೇಕು ಎನ್ನುವ ಬಗ್ಗೆ ಪಕ್ಷದ ಹೈಕಮಾಂಡ್ ಜತೆ ಚರ್ಚಿಸಿಯೇ ಮುಂದಿನ ತೀರ್ಮಾನ ಕೈಗೊಳ್ಳುವ ನಿರ್ಧಾರವನ್ನು ಸಿದ್ದರಾಮಯ್ಯ ಅವರು ಮಾಡಿದ್ದಾರೆ ಎನ್ನಲಾಗಿದೆ. ಸ್ಥಳೀಯ ಸಂಸ್ಥೆ ಚುನಾವಣೆ ವೇಳೆಗೆ ಈ ವರದಿಯನ್ನು ಜಾರಿಗೊಳಿಸಿದರೆ ಅಲ್ಪಸಂಖ್ಯಾತ ಹಾಗೂ ದಲಿತ ಮತಗಳು ಒಂದಾಗಿ ಕಾಂಗ್ರೆಸ್‌ನೊಂದಿಗೆ ನಿಲ್ಲಲಿದೆ. ಹಿಂದುಳಿದ ವರ್ಗದ ಕೆಲ ಜಾತಿ ಹಾಗೂ ಮೇಲ್ವರ್ಗದ ಸಮುದಾಯಗಳು 'ಮುನಿಸಿಕೊಂಡರೂ' ಇನ್ನುಳಿದ ಸಮುದಾಯಗಳ ಬಲದೊಂದಿಗೆ ಇದನ್ನು ನಿಭಾಯಿಸಬಹುದು ಎನ್ನುವ ಲೆಕ್ಕಾಚಾರದಲ್ಲಿ ಕಾಂಗ್ರೆಸ್‌ನ ಕೆಲ ಸಚಿವರಿದ್ದಾರೆ. ಆದರೆ ಈ ವಿಷಯದಲ್ಲಿ ರಾಹುಲ್ ಗಾಂಧಿ ಜತೆ ಚರ್ಚಿಸಿಯೇ ತೀರ್ಮಾನಿಸುವುದು ಸೂಕ್ತ ಎನ್ನುವ ಲೆಕ್ಕಾಚಾರದಲ್ಲಿ ಸಿದ್ದರಾಮಯ್ಯ ಅವರಿದ್ದಾರೆ.

ಗ್ರಾಪಂ, ಜಿಪಂ, ಪಾಲಿಕೆ, ಪೌರಾಡಳಿತ ಸಂಸ್ಥೆಗಳಿಗೆ ಚುನಾವಣೆ ನಿರೀಕ್ಷೆ

ಹೊಸ ವರ್ಷಕ್ಕೆ ಸಾಲು, ಸಾಲು ಚುನಾವಣೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

2025ರಲ್ಲಿ ಗೊಂದಲದ ಗೂಡಾಗಿದ್ದ ರಾಜ್ಯ ರಾಜಕೀಯ, 2026ರಲ್ಲಿ ಇಡೀ ವರ್ಷ ಚುನಾವಣೆಯ ಜಪದಲ್ಲಿ ಕಳೆದು ಹೋಗುವ ಸಾಧ್ಯತೆಯಿದೆ.

ಹೊಸ ವರ್ಷವನ್ನು ಹೊಸ ಹುರುಪಿನಲ್ಲಿ ಸ್ವಾಗತಿಸಿರುವ ರಾಜ್ಯ ನಾಯಕರಿಗೆ, 2026ರಲ್ಲಿ ಎದುರಾಗಲಿರುವ ಸರಣಿ ಚುನಾವಣೆಗಳು ಸವಾಲು ಒಡ್ಡುವ ಸಾಧ್ಯತೆಯಿದೆ. ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್. ಈ ಮೂರು ಪಕ್ಷಗಳಲ್ಲಿ ತಮ್ಮದೆಯಾದ ಸಮಸ್ಯೆಯಿರುವುದರಿಂದ, ಈ ಸಮಸ್ಯೆಗಳ ಹೊರತಾಗಿಯೂ ಚುನಾವಣೆಯಲ್ಲಿ ಚಮತ್ಕಾರ ಮಾಡಬೇಕಾದ ಒತ್ತಡ ನಾಯಕರಲ್ಲಿದೆ. ಅದರಲ್ಲಿಯೂ ಈ ವರ್ಷ ಮಾರ್ಚ್ ಬಳಿಕ ಸರಣಿ ಚುನಾವಣೆಗಳಿರು ವುದರಿಂದ ಇಡೀ ವರ್ಷ ಚುನಾವಣಾ ಜಪದಲ್ಲಿ ಹೋಗುವ ಸಾಧ್ಯತೆ ದಟ್ಟವಾಗಿದೆ.

→13

ಬರಲಿರುವ ಚುನಾವಣೆಗಳು

- ರಾಜ್ಯಸಭಾ ಚುನಾವಣೆ
- ವಿಧಾನಸಭೆ ಉಪಚುನಾವಣೆ
- ವಿಧಾನಪರಿಷತ್ ಚುನಾವಣೆ
- ಪೌರಾಡಳಿತ ಸಂಸ್ಥೆಗಳ ಚುನಾವಣೆ
- ಗ್ರಾಪಂ, ತಾಪಂ, ಜಿಪಂ ಚುನಾವಣೆ
- ಜಿಬಿಎ ವ್ಯಾಪ್ತಿಯ ಚುನಾವಣೆ

ಪ್ರತಿಷ್ಠೆಯ ಕಣ

ಮಾರ್ಚ್ ಬಳಿಕ ರಾಜ್ಯದಲ್ಲಿ ಆರಂಭವಾಗಲಿರುವ ಚುನಾವಣಾ ಸುಗ್ಗಿಯಲ್ಲಿ 'ಗೆಲುವು' ಪಡೆಯುವುದು ಮೂರು ಪಕ್ಷಗಳಿಗೂ ಅನಿವಾರ್ಯವಾಗಿದೆ. ಅದರಲ್ಲಿಯೂ ವಿಧಾನಪರಿಷತ್‌ನಲ್ಲಿ ಸ್ಪಷ್ಟ ಬಹುಮತ ಪಡೆಯಲು ಕಾಂಗ್ರೆಸ್‌ಗೆ ನವೆಂಬರ್‌ನಲ್ಲಿ ಎದುರಾಗಲಿರುವ ಚುನಾವಣೆ ಹೆಚ್ಚು ಮಹತ್ವದಾಗಿದೆ. ಇದೇ ರೀತಿ ಜಿಬಿಎ ಮಾಡಿದ ಬಳಿಕ ಎದುರಾಗುವ ಮೊದಲ ಚುನಾವಣೆಯಾಗಿರುವುದರಿಂದ ಐದು ನಗರಪಾಲಿಕೆಯಲ್ಲಿ ಕನಿಷ್ಠ ಮೂರರಲ್ಲಿ ಗೆಲ್ಲಬೇಕಾದ ಒತ್ತಡ ಕಾಂಗ್ರೆಸ್ ಮೇಲಿದೆ. ಇನ್ನು ನವೆಂಬರ್‌ನಲ್ಲಿ ನಡೆಯಲಿರುವ ನಾಲ್ಕು ವಿಧಾನಪರಿಷತ್ ಕ್ಷೇತ್ರದ ಹಾಲಿ ಮೂರು ಕ್ಷೇತ್ರದಲ್ಲಿ ಬಿಜೆಪಿಗರಿದ್ದಾರೆ. ಈ ಬಾರಿ ಜೆಡಿಎಸ್ ಮೈತ್ರಿಯೊಂದಿಗೆ ಚುನಾವಣೆಗೆ ಹೋಗುವುದರಿಂದ ನಾಲ್ಕರಲ್ಲಿ ಮೂರನ್ನು ಉಳಿಸಿಕೊಳ್ಳುವ ಒತ್ತಡಕ್ಕೆ ಮೈತ್ರಿ ನಾಯಕರಿದ್ದಾರೆ. ಇನ್ನು ಬೆಂಗಳೂರು ಭಾಗದಲ್ಲಿ ಬಿಜೆಪಿ ಪ್ರಭಾವ ಇರುವುದರಿಂದ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಚುನಾವಣೆಯಲ್ಲಿ ಕನಿಷ್ಠ ಮೂರರಲ್ಲಿ ಗೆಲ್ಲುವ ಮೂಲಕ ಹಾಗೂ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಹೆಚ್ಚು ಸ್ಥಾನಗಳನ್ನು ಪಡೆಯುವ ಮೂಲಕ ಕರ್ನಾಟಕದಲ್ಲಿ ಆಡಳಿತ ವಿರೋಧಿ ಅಲೆಯಿದೆ ಎನ್ನುವ ಸಂದೇಶ ರವಾನಿಸುವ ಒತ್ತಡ ಬಿಜೆಪಿಗಿದೆ.

2026 ಸತ್ಯದ ಲೇಖನಿಗೆ ವರ್ಷದ ಸಂಭ್ರಮ
ನಾಡು ಕರುನಾಡು

ಎಕ್ಸಿಸ್ ಬ್ಯಾಂಕ್ ಪ್ಲಾಟ್ ಸಂಖ್ಯೆ 41, ಶೇಷಾದ್ರಿ ರಸ್ತೆ, ಆನಂದ್ ರಾವ್ ಸರ್ಕಲ್, ಬೆಂಗಳೂರು–560009.

ತಗಾದೆ ಸೂಚನೆ

ಈ ಕೆಳಗಿನ ಸಾಲಗಾರರು ಬ್ಯಾಂಕಿನಿಂದ ಪಡೆದ ಸಾಲ ಸೌಲಭ್ಯಗಳ ಮೇಲಿನ ಅಸಲು ಮತ್ತು ಬಡ್ಡಿಯನ್ನು ಹಿಂಪಾವತಿಸುವಲ್ಲಿ ವಿಫಲರಾಗಿರುವುದರಿಂದ ಆ ಸೌಲಭ್ಯಗಳು ನಿರ್ವಹಣಾರಹಿತ ಸ್ವತ್ತುಗಳಾಗಿ ಪರಿವರ್ತಿತವಾಗಿವೆ ಎಂದು ಈ ಸೂಚನೆಯ ಮೂಲಕ ತಿಳಿಸಲಾಗಿದೆ. 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ ವಿಭಾಗ 13(2)ರ ಅಡಿಯಲ್ಲಿ, ಅವರು ಕೊನೆಯದಾಗಿ ತಿಳಿಸಲಾಗಿರುವಂತಹ ತಮ್ಮ ವಿಳಾಸಗಳಿಗೆ ಸೂಚನೆಗಳನ್ನು ಕಳುಹಿಸಲಾಯಿತಾದರೂ, ಅವು ಸ್ವೀಕೃತಗೊಳ್ಳದೇ ಹಿಂದಿರುಗಿರುವುದರಿಂದ ಸಾರ್ವಜನಿಕ ಪ್ರಕಟಣೆಯ ಮೂಲಕ ಅವರಿಗೆ ಈ ಕುರಿತು ತಿಳಿಸಲಾಗುತ್ತಿದೆ.

ಕ್ರ. ಸಂ	ಸಾಲಗಾರರ ಹೆಸರು ಮತ್ತು ವಿಳಾಸ	ಸಾಲಗಾರರು ಅಡಮಾನ ಮಾಡಿರುವ ಆಸ್ತಿಯ ವಿವರ	ನೋಟೀಸ್ ದಿನಾಂಕ	ಬರಬೇಕಾದ ಬಾಕಿ (ರೂ.ಗಳಲ್ಲಿ)
1	(1) ಎಂ.ಆರ್. ರಾಘವೇಂದ್ರ ಪರಗೋಡು (ಸಾಲಗಾರರು/ಅರ್ಜಿದಾರರು), (2) ಶ್ರೀಮತಿ ಪರಗೋಡು ಶ್ರೀನಿವಾಸ ರಾವ್ (ಸಹ–ಅರ್ಜಿದಾರರು/ಜಾಮೀನುದಾರರು), ಇವರಿಬ್ಬರ ವಿಳಾಸ: ನಂ.146, ಬೃಂದಾವನ, 1" ಮುಖ್ಯ ರಸ್ತೆ, ಕಲ್ಯಾಣ್ ನಗರ, ವಿಜಯ ಬ್ಯಾಂಕ್ ಹತ್ತಿರ, ಬೆಂಗಳೂರು–560072. ಮತ್ತೊಂದು ವಿಳಾಸ: ಶ್ರೀ ರಾಘವೇಂದ್ರ ಪರಗೋಡು, ಮಾನ್ಯತಾ ಎಂಬಸ್ಸಿ ಬಿಸಿನೆಸ್ ಪಾರ್ಕ್, ಲೆವೆಲ್ 8, ಬ್ಲಾಕ್ ಸಿ2 ಸೀಡರ್ ಔಟರ್ ರಿಂಗ್‌ರೋಡ್, ನಾಗವಾರ, ಬೆಂಗಳೂರು–560045.	ಷೆಡ್ಯೂಲ್ ಆಸ್ತಿ : MLR056111349788 ಶ್ರೀ ರಾಘವೇಂದ್ರ ಪರಗೋಡು ಬಿನ್ ಶ್ರೀ ಪರಗೋಡು ಶ್ರೀನಿವಾಸ ಅವರಿಗೆ ಸೇರಿದ ಆಸ್ತಿಯ ವಿವರ ಷೆಡ್ಯೂಲ್ "ಎ" ಆಸ್ತಿ : ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ಪೂರ್ವ ಭಾಗದ ನಿವೇಶನ ನಂ.47, ಪಿಐಡಿ ನಂ.38–13–47, Assigning ಹೊಸ ನಂ.47/1, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 30 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 40 ಅಡಿ, ಒಟ್ಟು ವಿಸ್ತೀರ್ಣ 1200 ಚದರ ಅಡಿ, ಈ ಆಸ್ತಿಯು 1" ಮುಖ್ಯರಸ್ತೆ, ಕಲ್ಯಾಣ ನಗರ, ಬೆಂಗಳೂರಿನಲ್ಲಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಶ್ರೀ ಲಕ್ಷ್ಮಣರವರ ಮನೆ, ಪಶ್ಚಿಮಕ್ಕೆ: ಹಳೆ ನಂ.146ರ ಆಸ್ತಿಯ ಉಳಿಕೆ ಭಾಗ, ಪಶ್ಚಿಮ ಭಾಗದ ಹೊಸ ನಂ.47, ಉತ್ತರಕ್ಕೆ: ಶ್ರೀ ರಾಮಣ್ಣರವರ ಆಸ್ತಿ, ದಕ್ಷಿಣಕ್ಕೆ: ರಸ್ತೆ. ಹೆಚ್ಚಿನ ಮಾಹಿತಿಗಾಗಿ ಶ್ರೀ ರಘುನಾಥ್, ಮೊಬೈಲ್ ನಂ.9886960484ನ್ನು ಸಂಪರ್ಕಿಸಿ.	08.12.2025 ಎನ್‌ಪಿಎ ದಿನಾಂಕ : 30.11.2022	Power Home Vanilla BRE Loan A/c No. MLR056111349788 Amount : Rs. 30,56,915/- ಒಟ್ಟು ಬಾಕಿ ಮೊತ್ತ ರೂ. 16,23,671/– ದಿನಾಂಕ: 08.12.2025 ರಂದು ಇದ್ದಂತೆ.
2.	(1) ಶ್ರೀ ಜೈದೀಪ್ ಜೆ (ಸಾಲಗಾರರು/ಅರ್ಜಿದಾರರು) (2) ಶ್ರೀಮತಿ ಈಶ್ವರಿ (ಸಹ–ಅರ್ಜಿದಾರರು/ಜಾಮೀನುದಾರರು), ಇವರಿಬ್ಬರ ವಿಳಾಸ: 74, 1ನೇ ಮಹಡಿ, ರಸ್ತೆ 2, ವಿದ್ಯಾರಣ್ಯಪುರ, ಬೆಂಗಳೂರು–560097. ಮತ್ತೊಂದು ವಿಳಾಸ: ಶ್ರೀ ಜೈದೀಪ್ ಜೆ, ಜೆಬಿ ಬಿ 2 101 ಜನಪ್ರಿಯ ಅಪಾರ್ಟ್‌ಮೆಂಟ್ ಬಿನ್ನಮಂಗಲ ನೆಲಮಂಗಲ ಬೆಂಗಳೂರು 560097. ಮತ್ತೊಂದು ವಿಳಾಸ: ನಂ.64 171 2ನೇ ಮಹಡಿ ಮೇಲಿನ ಸಬ್ ರಿಜಿಸ್ಟರ್ ಕಛೇರಿ ಕೊಡಿಗೇಹಳ್ಳಿ ಮುಖ್ಯರಸ್ತೆ ಬೆಂಗಳೂರು–560092.	ಷೆಡ್ಯೂಲ್ ಆಸ್ತಿ: PHR056104329123 ಶ್ರೀ ಜೈದೀಪ್ ಜೆ ಬಿನ್ ಶ್ರೀ ಗಿರೀಶ್ ಪ್ರಸಾದ್ ಭಟ್ ಅವರಿಗೆ ಸೇರಿದ ಆಸ್ತಿಯ ವಿವರ ಷೆಡ್ಯೂಲ್ ಸಿ : Row House ನಂ.220–ಬ್ಲಾಕ್ 22, ಟೈಪ್–3, ವಿಸ್ತೀರ್ಣ 134.06 ಚದರ ಮೀಟರ್‌ಗಳು, ಆಲೂರು ಬಿಡಿಎ, ಆಲೂರು ಗ್ರಾಮ, ಹುಸ್ಕೂರು ರಸ್ತೆ, ಬೆಂಗಳೂರಿನಲ್ಲಿದೆ. ಹೆಚ್ಚಿನ ಮಾಹಿತಿಗಾಗಿ ಶ್ರೀ ರಘುನಾಥ್, ಮೊಬೈಲ್ ನಂ.9886960484ನ್ನು ಸಂಪರ್ಕಿಸಿ.	08.12.2025 ಎನ್‌ಪಿಎ ದಿನಾಂಕ : 01.07.2022	Power Home Vanilla BRE Loan A/c No. PHR056102898058 Amount : Rs. 32 ,41,768/- ಒಟ್ಟು ಬಾಕಿ ಮೊತ್ತ ರೂ. 54,43,996/– ದಿನಾಂಕ: 08.12.2025 ರಂದು ಇದ್ದಂತೆ.
3.	(1) ಶ್ರೀ ಜಾನ್ ರಾಜ್‌ಕುಮಾರ್ ಜೆ ಟಿ, ನಂ.146, ವುಡ್ ಕ್ರಾಫ್ಟ್, ಮಂಜುನಾಥ ನಗರ, 2ನೇ ಕ್ರಾಸ್, 2ನೇ ಹಂತ, ಬೆಂಗಳೂರು–560010. ಮತ್ತೊಂದು ವಿಳಾಸ: ನಂ.129/1–2 2ನೇ ಹಂತ WOC ರಸ್ತೆ, ಚರ್ಚ್ ಎದುರು, ಮಂಜುನಾಥ ನಗರ, ಬೆಂಗಳೂರು–560010. (ಸಾಲಗಾರರು/ಅರ್ಜಿದಾರರು). (2) ಶ್ರೀಮತಿ ಶ್ಯಾಮಲಾ ಜೆ ಜೆ, ನಂ.146, ವುಡ್ ಕ್ರಾಫ್ಟ್, ಮಂಜುನಾಥ ನಗರ, 2ನೇ ಕ್ರಾಸ್, 2ನೇ ಹಂತ, ಬೆಂಗಳೂರು–560010. (3) ಶ್ರೀ ಪಿ ಟಿ ತಂಗರಾಜ್, 146, 18ನೇ ಮೇನ್, 2ನೇ ಕ್ರಾಸ್, 3ನೇ ಹಂತ, ಮಂಜುನಾಥ ನಗರ, ಬೆಂಗಳೂರು–560010. (ಸಹ–ಅರ್ಜಿದಾರರು/ಜಾಮೀನುದಾರರು)	ಷೆಡ್ಯೂಲ್ ಆಸ್ತಿ : MHR056111349995 ಶ್ರೀ ಜಾನ್ ಟಿ ರಾಜಕುಮಾರ್ ಬಿನ್ ಶ್ರೀ.ತಂಗರಾಜ್ ಜಾನ್ ಪೆರಿಯಸ್ವಾಮಿ ಅವರಿಗೆ ಸೇರಿದ ಆಸ್ತಿಯ ವಿವರ ಷೆಡ್ಯೂಲ್ ಆಸ್ತಿ : ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ಬಿಡಿಎ ನಂ.142, ಕಾರ್ಪೋರೇಷನ್ ನಂ.142 (ಒಂದುನೂರ ನಲವತ್ತೆರಡು). ಈ ಆಸ್ತಿಯು 1ನೇ ಹಂತ, 3ನೇ ಫೇಸ್, ವೆಸ್ಟ್ ಆಫ್ ಕಾರ್ಡ್ ರಸ್ತೆ, ಬೆಂಗಳೂರಿನಲ್ಲಿದ್ದು, ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ.20ರಲ್ಲಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಆಸ್ತಿ ನಂ.142ಎ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಆಸ್ತಿ ನಂ.143, ದಕ್ಷಿಣಕ್ಕೆ: ಆಸ್ತಿ ನಂ.142ಬಿ. ವಿಸ್ತೀರ್ಣ: ಐಟಂ ಎ : ಪೂರ್ವದಿಂದ ಪಶ್ಚಿಮಕ್ಕೆ: 34.6 ಅಡಿ (ಮೂವತ್ತನಾಲ್ಕು ಅಡಿ ಆರು ಇಂಚುಗಳು) ಮತ್ತು ಉತ್ತರದಿಂದ ದಕ್ಷಿಣಕ್ಕೆ: 17.0 ಅಡಿ (ಹದಿನೇಳು), ಐಟಂ ಬಿ: ಪೂರ್ವದಿಂದ ಪಶ್ಚಿಮಕ್ಕೆ: 11–9 ಅಡಿ (ಹನ್ನೊಂದು ಅಡಿ ಒಂಭತ್ತು ಇಂಚುಗಳು), ಉತ್ತರದಿಂದ ದಕ್ಷಿಣಕ್ಕೆ: 31–0 ಅಡಿ (ಮೂವತ್ತೊಂದು) ಒಟ್ಟು ವಿಸ್ತೀರ್ಣ 68.31 ಚದರ ಮೀಟರ್‌ಗಳು, ಜೊತೆಗೆ ಅಂದಾಜು 9 ಚದರಗಳು ನೆಲ ಮಹಡಿಯ ಬಿಲ್ಟ್‌ಅಪ್ ಪ್ರದೇಶ, ಅಂದಾಜು 9 ಚದರಗಳು ಮೊದಲನೇ ಮಹಡಿ ಬಿಲ್ಟ್‌ಅಪ್ ಪ್ರದೇಶ ಮತ್ತು ಅಂದಾಜು 9 ಚದರಗಳು ಎರಡನೇ ಮಹಡಿ ಬಿಲ್ಟ್‌ಅಪ್ ಪ್ರದೇಶ ಜೊತೆಗೆ ಮೊಸಾಯಿಕ್ ಫ್ಲೋರ್, ಆರ್‌ಸಿಸಿ ರೂಫ್‌ನಿಂದ ನಿರ್ಮಿಸಲಾಗಿದೆ, ವಿದ್ಯುತ್, ನೀರು ಮತ್ತು ಇತರ ನಾಗರೀಕ ಸೌಲಭ್ಯಗಳನ್ನೊಳಗೊಂಡಿದೆ. ಹೆಚ್ಚಿನ ಮಾಹಿತಿಗಾಗಿ ಶ್ರೀ ರಘನಾಥ್, ಮೊಬೈಲ್ ನಂ.9886960484ನ್ನು ಸಂಪರ್ಕಿಸಿ.	08.12.2025 ಎನ್‌ಪಿಎ ದಿನಾಂಕ : 30.01.2020	Home Loan Loan A/c No. MHR056111349995 Amount : Rs. 39,00,000/- ಒಟ್ಟು ಬಾಕಿ ಮೊತ್ತ ರೂ. 69,58,745/– ದಿನಾಂಕ: 08.12.2025 ರಂದು ಇದ್ದಂತೆ.
4.	(1) ಶ್ರೀ ಮಧು ಕುಮಾರ್ ಆರ್‌ಎಂ ಬಿನ್ ಶ್ರೀ ಮಲ್ಲು, (2) ಶ್ರೀ ಚಂದ್ರಶೇಖರ್ ಆರ್‌ಎಂ ಬಿನ್ ಶ್ರೀ ಮಲ್ಲು, ಇವರಿಬ್ಬರ ವಿಳಾಸ: 570/581/1ಎ, Shiua Shivali Nkeshwaran ಗುರು ಮಲ್ಲೇಶ್ವರ ಲೇಔಟ್, ಅಲ್ಲನಹಳ್ಳಿ, ರಿಂಗ್ ರೋಡ್, ಮೈಸೂರು–570028. ಮತ್ತೊಂದು ವಿಳಾಸ: 533, ಕೆಸರೆ, 2ನೇ ಹಂತ, ಆರ್.ಎಸ್. ನಾಯ್ಡು ನಗರ, ಮೈಸೂರು, ಆಟೋ ಸ್ಟ್ಯಾಂಡ್ ಹತ್ತಿರ, ಕರ್ನಾಟಕ–570007.	ಶ್ರೀ ಮಧುಕುಮಾರ್ ಆರ್ ಎಂ & ಚಂದ್ರಶೇಖರ್ ಆರ್ ಎಂ ಅವರಿಗೆ ಸೇರಿದ ಆಸ್ತಿಯ ವಿವರ ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಮನೆಯ ನಂ.533, 2ನೇ ಹಂತ, ಕೆಸರೆ ಬಡಾವಣೆ, ಎನ್‌ಆರ್ ಮೊಹಲ್ಲಾ, ಮೈಸೂರು–570007ರಲ್ಲಿದೆ. ಪ್ಲಾಟ್‌ನ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 6.00 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 9.00 ಮೀಟರ್‌ಗಳು ಮತ್ತು ನೆಲ ಮಹಡಿ ಆರ್.ಸಿ.ಸಿ. ಮನೆಯ ವಿಸ್ತೀರ್ಣ 3.91 ಚದರ ಮೀಟರ್‌ಗಳು, ಜೊತೆಗೆ ಮೊಸಾಯಿಕ್ ನೆಲಹಾಸು, ಮತ್ತು ವಿದ್ಯುತ್, ನೀರು ಮತ್ತು ಸ್ಯಾನಿಟರಿ ಸೌಲಭ್ಯಗಳನ್ನು ಒಳಗೊಂಡಿರುವ ಆಸ್ತಿಯಾಗಿದೆ. ಒಳಗೊಂಡಿರುವ ಹಕ್ಕುಗಳು: ಸಾಮಾನ್ಯ ಪ್ರದೇಶ, ನೀರಿನ ಬಚ್ಚಲು, ಚರಂಡಿ, ಶೌಚಾಲಯಗಳು ಮತ್ತು ಎಲ್ಲಾ ಪ್ರಸ್ತುತ ಮತ್ತು ಭವಿಷ್ಯದ ಫಿಕ್ಚರ್‌ಗಳು ಮತ್ತು ಫಿಟ್ಟಿಂಗ್‌ಗಳನ್ನು ಒಳಗೊಂಡಿದೆ. ಪೂರ್ವಕ್ಕೆ: ಆಸ್ತಿ ನಂ.533/ಎ, ಪಶ್ಚಿಮಕ್ಕೆ: ಆಸ್ತಿ ನಂ.532, ಉತ್ತರಕ್ಕೆ: ಆಸ್ತಿ ನಂ.534, ದಕ್ಷಿಣಕ್ಕೆ: ರಸ್ತೆ. ಹೆಚ್ಚಿನ ಮಾಹಿತಿಗಾಗಿ ಶ್ರೀ ಪ್ರೇಮ್, ಮೊಬೈಲ್ ನಂ.8880041234ನ್ನು ಸಂಪರ್ಕಿಸಿ.	08.12.2025 ಎನ್‌ಪಿಎ ದಿನಾಂಕ: 28.11.2025	ASSET POWER BRE Loan A/c No. LPR015106438157 Amount : Rs.37,99,000/- ಒಟ್ಟು ಬಾಕಿ ಮೊತ್ತ ರೂ.35,64,176/– ದಿನಾಂಕ: 04.12.2025 ರಂದು ಇದ್ದಂತೆ.
5.	(1) ಶ್ರೀಮತಿ ಉಷಾ ಎನ್ ಕೋಂ ಶ್ರೀ ರವಿಶಂಕರ್ ಹೆಚ್ ಆರ್ 69, 6ನೇ ಕ್ರಾಸ್ ಬೃಂದಾವನ ಎಕ್ಸ್‌ಟೆನ್ಷನ್, ಮೆಡ್ ಪ್ಲಸ್, ಮೈಸೂರು–570020. ಮತ್ತೊಂದು ವಿಳಾಸ: ನಿವೇಶನ ನಂ.15, ದೀಪಕ್ ಅಶ್ವಥ್ ನಾರಾಯಣ ಕೆ ಹೇಮನಹಳ್ಳಿ ಗ್ರಾಮ, ಇಲವಾಲ, ಹೋಬಳಿ, ಮೈಸೂರು–571130. ಮತ್ತೊಂದು ವಿಳಾಸ: 1/164 ಎನ್‌ಎಸ್ ರಸ್ತೆ ದೇವರಾಜ ಮೊಹಲ್ಲಾ ಬಿದರಾಮಕೃಷ್ಣಮಂದಿರ, ಮೈಸೂರು–570024. ಮತ್ತೊಂದು ವಿಳಾಸ: ನಿವೇಶನ ನಂ.16, ದೀಪಕ್ ಅಶ್ವಥ್ ನಾರಾಯಣ ಕೆ ಹೇಮನಹಳ್ಳಿ ಗ್ರಾಮ ಇಲವಾಲ ಹೋಬಳಿ–571130. (2) ಶ್ರೀ ರವಿಶಂಕರ್ ಹೆಚ್ ಆರ್ ಬಿನ್ ಶ್ರೀ ರಾಜಶೇಖರಮೂರ್ತಿ ಹೆಚ್‌ಪಿ ನಂ.1713, 22ನೇ ಕ್ರಾಸ್, ರೂಪ ನಗರ, ಅಮ್ಮಾ ಆಸ್ಪತ್ರೆ ಹತ್ತಿರ, ಮೈಸೂರು–570026. ಮತ್ತೊಂದು ವಿಳಾಸ: 69, 6ನೇ ಕ್ರಾಸ್ ಬೃಂದಾವನ ಎಕ್ಸ್‌ಟೆನ್ಷನ್, ಮೆಡ್ ಪ್ಲಸ್, ಮೈಸೂರು–570020. ಮತ್ತೊಂದು ವಿಳಾಸ: ನಿವೇಶನ ನಂ.16, ದೀಪಕ್ ಅಶ್ವಥ್ ನಾರಾಯಣ ಕೆ ಹೇಮನಹಳ್ಳಿ ಗ್ರಾಮ ಇಲವಾಲ ಹೋಬಳಿ–571130.	ಶ್ರೀಮತಿ ಉಷಾ ಎನ್ & ಶ್ರೀ ರವಿಶಂಕರ್ ಹೆಚ್ ಆರ್ ಅವರಿಗೆ ಸೇರಿದ ಆಸ್ತಿಯ ವಿವರ ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಖಾಲಿ ನಿವೇಶನ ನಂ.15 (ಹದಿನೈದು), ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 6 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: (12+6.8)/2 ಮೀಟರ್‌ಗಳು, ಒಟ್ಟು ವಿಸ್ತೀರ್ಣ 56.4 ಚದರ ಮೀಟರ್‌ಗಳು, ಈ ಆಸ್ತಿಯು ಕೆ.ಹೇಮನಹಳ್ಳಿ ಗ್ರಾಮ, ಇಲವಾಲ ಹೋಬಳಿ, ಮೈಸೂರು ತಾಲ್ಲೂಕು, ಮೈಸೂರಿನಲ್ಲಿದೆ. [ಸರ್ವೆ ನಂ.121/4ರಲ್ಲಿ ನಿವೇಶನವನ್ನು ರೂಪಿಸಲಾಗಿದ್ದು, ವಿಸ್ತೀರ್ಣ 1 (ಒಂದು) ಎಕರೆ 0.17 (ಹದಿನೇಳು) ಗುಂಟೆಗಳು, ಈ ಭೂಮಿಯು ಕೆ.ಹೇಮನಹಳ್ಳಿ ಗ್ರಾಮ, ಇಲವಾಲ ಹೋಬಳಿ, ಮೈಸೂರು ತಾಲ್ಲೂಕು, ಮೈಸೂರಿನಲ್ಲಿದೆ] ಮತ್ತು ನಿವೇಶನದ ಚಕ್ಕುಬಂದಿ: ಪೂರ್ವಕ್ಕೆ: ಖಾಸಗಿ ಆಸ್ತಿ, ಪಶ್ಚಿಮಕ್ಕೆ: ನಿವೇಶನ ನಂ.14, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಖಾಸಗಿ ಆಸ್ತಿ. ಹೆಚ್ಚಿನ ಮಾಹಿತಿಗಾಗಿ ಶ್ರೀ ಪ್ರೇಮ್, ಮೊಬೈಲ್ ನಂ.8880041234ನ್ನು ಸಂಪರ್ಕಿಸಿ.	08.12.2025 ಎನ್‌ಪಿಎ ದಿನಾಂಕ: 30.11.2025	POWER HOME VANILLA BRE Loan A/c No. PHR015106899555 Amount : Rs. 5,73,335/- ಒಟ್ಟು ಬಾಕಿ ಮೊತ್ತ ರೂ.1,90,264/– ದಿನಾಂಕ: 04.12.2025 ರಂದು ಇದ್ದಂತೆ.
6.	(1) ಶ್ರೀ ರವಿಶಂಕರ್ ಹೆಚ್‌ಆರ್ ಬಿನ್ ರಾಜಶೇಖರಮೂರ್ತಿ ಹೆಚ್‌ಪಿ 63/8, 2ನೇ ಮಹಡಿ, 6ನೇ ಮುಖ್ಯರಸ್ತೆ, ವಿವೇಕಾನಂದ ನಗರ, ಕತ್ರಿಗುಪ್ಪೆ ಮುಖ್ಯರಸ್ತೆ, ಬನಶಂಕರಿ 3ನೇ ಹಂತ, ಬೆಂಗಳೂರು–560085. ಮತ್ತೊಂದು ವಿಳಾಸ: 1713, 22ನೇ ಕ್ರಾಸ್, ರೂಪ ನಗರ ಬೋಗಾದಿ, ಅಮುತಕೃಪ ಆಸ್ಪತ್ರೆ ಹತ್ತಿರ, ಮೈಸೂರು–570026. ಮತ್ತೊಂದು ವಿಳಾಸ: ನಿವೇಶನ ನಂ.15, ದೀಪಕ್ ಅಶ್ವಥ್ ನಾರಾಯಣ ಕೆ ಹೇಮನಹಳ್ಳಿ ಗ್ರಾಮ, ಇಲವಾಲ, ಹೋಬಳಿ, ಮೈಸೂರು–571130. (2) ಶ್ರೀಮತಿ ಉಷಾ ಎನ್ ಕೋಂ ಶ್ರೀ ರವಿಶಂಕರ್ ಹೆಚ್ ಆರ್, 69, 6ನೇ ಕ್ರಾಸ್, ಬೃಂದಾವನ ಎಕ್ಸ್‌ಟೆನ್ಷನ್, ಮೆಡ್ ಪ್ಲಸ್, ಮೈಸೂರು–570020. ಮತ್ತೊಂದು ವಿಳಾಸ: ನಿವೇಶನ ನಂ.15, ದೀಪಕ್ ಅಶ್ವಥ್ ನಾರಾಯಣ ಕೆ ಹೇಮನಹಳ್ಳಿ ಗ್ರಾಮ, ಇಲವಾಲ, ಹೋಬಳಿ, ಮೈಸೂರು–571130.	ಶ್ರೀ ರವಿಶಂಕರ್ ಹೆಚ್ ಆರ್ & ಶ್ರೀಮತಿ ಉಷಾ ಎನ್ ಅವರಿಗೆ ಸೇರಿದ ಆಸ್ತಿಯ ವಿವರ ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಆಸ್ತಿಯ ನಿವೇಶನ ನಂ.16, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 12.00 ಮೀಟರ್‌ಗಳು & ಉತ್ತರದಿಂದ ದಕ್ಷಿಣಕ್ಕೆ: (10.22 + 10.67)/2 ಮೀಟರ್‌ಗಳು, ಒಟ್ಟು ವಿಸ್ತೀರ್ಣ 125.34 ಚದರ ಮೀಟರ್‌ಗಳು, ವಾಸಯೋಗ್ಯ ಪರಿವರ್ತಿತ ಭೂಮಿಯು ಸರ್ವೆ ನಂ.121/4ರಲ್ಲಿ ರೂಪಿಸಲಾಗಿದೆ, ವಿಸ್ತೀರ್ಣ 01 ಎಕರೆ 17 ಗುಂಟೆಗಳು, ಈ ಆಸ್ತಿಯು ಕೆ.ಹೇಮನಹಳ್ಳಿ ಗ್ರಾಮ, ಇಲವಾಲ ಹೋಬಳಿ, ಮೈಸೂರು ತಾಲ್ಲೂಕಿನಲ್ಲಿದೆ, ದಿನಾಂಕ 16.10.2017ರಂದು ಅಂಗೀಕರಿಸಿರುವ ಆದೇಶ ನಂ.ALN (1) CR.391/2017(15568) ರ ಪ್ರಕಾರ ಪರಿವರ್ತಿಸಲಾಗಿದೆ ಮತ್ತು ಇದನ್ನು ಮೈಸೂರಿನ ಮುಡಾ ಲೇಔಟ್‌ಗಳನ್ನಾಗಿ ಅನುಮೋದಿಸಲಾಗಿದೆ, ಚಕ್ಕುಬಂದಿ: ಪೂರ್ವಕ್ಕೆ: ಸಿಎ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ನಿವೇಶನ ನಂ.17, ದಕ್ಷಿಣಕ್ಕೆ: ರಸ್ತೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 12.00, ಉತ್ತರದಿಂದ ದಕ್ಷಿಣಕ್ಕೆ: (10.22+10.67)/2 ಮೀಟರ್‌ಗಳು, ಒಟ್ಟು ವಿಸ್ತೀರ್ಣ 125.34 ಮೀಟರ್‌ಗಳು. ಹೆಚ್ಚಿನ ಮಾಹಿತಿಗಾಗಿ ಶ್ರೀ ಪ್ರೇಮ್, ಮೊಬೈಲ್ ನಂ.8880041234ನ್ನು ಸಂಪರ್ಕಿಸಿ.	08.12.2025 ಎನ್‌ಪಿಎ ದಿನಾಂಕ: 30.11.2025	POWER HOME VANILLA BRE Loan A/c No. PHR015106886931 Amount : Rs. 10,13,860/- ಒಟ್ಟು ಬಾಕಿ ಮೊತ್ತ ರೂ.3,18,602/– ದಿನಾಂಕ: 04.12.2025 ರಂದು ಇದ್ದಂತೆ
7	(1) ಶ್ರೀ ನವಂತ್ ಗಣಪತರಾವ್ ಶಿರಸೆ ಬಿನ್ ಶ್ರೀ ಗಣಪತರಾವ್ ಶಿರಸೆ, (2) ಶ್ರೀ.ಸಂತೋಷ್ ಗಣಪತರಾವ್ ಶಿರಸೆ ಬಿನ್ ಶ್ರೀ.ಗಣಪತ್‌ರಾವ್ ಶಿರಸೆ, ಇವರಿಬ್ಬರ ವಿಳಾಸ: ಸಾಯಿ ಆನಂದ್ ನಗರ dhawade wasti Baba Anand mangala karyalaya road Bhosari, ಪುಣೆ–411039. ಮತ್ತೊಂದು ವಿಳಾಸ: ಸಿಎಂಎಸ್ ನಂ.29 944 21 ಜಿಐಎಸ್ ಪಿಐಡಿ ನಂ.59 583 503 5 ತ್ರಿಪುರನಾಥ ಬಸವಕಲ್ಯಾಣ, ಬೀದರ್–585402.	ಶ್ರೀ. ನವನಾಥ ಗಣಪತರಾವ್ ಶಿರಸೆ ಅವರಿಗೆ ಸೇರಿದ ಆಸ್ತಿಯ ವಿವರ ಮನೆಯ ಸಿಎಂಸಿ ನಂ.29–944/21, ಪಿಐಡಿ ನಂ.59–583–503/5 ವಿಸ್ತೀರ್ಣ 108 ಚದರ ಮೀಟರ್, ಜಿಎಫ್–92.903 ಚದರ ಮೀಟರ್ ಪ್ಲಿಂತ್ ಪ್ರದೇಶ, ಈ ಆಸ್ತಿಯು ಎನ್‌ಎ ಭೂಮಿ ಸರ್ವೆ ನಂ.222/2, ತ್ರಿಪುರಂತ ಗ್ರಾಮ, ಬಸವಕಲ್ಯಾಣ ತಾಲ್ಲೂಕು, ಬೀದರ್ ಜಿಲ್ಲೆಯಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: ತೆರೆದ ಪ್ಲಾಟ್ ನಂ.40, ಪಶ್ಚಿಮಕ್ಕೆ: 9 ಮೀಟರ್ ಅಗಲದ ರಸ್ತೆ, ಉತ್ತರಕ್ಕೆ: ಪ್ಲಾಟ್ ನಂ.20, ದಕ್ಷಿಣಕ್ಕೆ: ಪ್ಲಾಟ್ ನಂ.22. ಹೆಚ್ಚಿನ ಮಾಹಿತಿಗಾಗಿ ಶ್ರೀ ಸಂಜಯ್ ಪ್ರಸಾದ್, ಮೊಬೈಲ್ ನಂ.9916566630ನ್ನು ಸಂಪರ್ಕಿಸಿ.	08.12.2025 ಎನ್‌ಪಿಎ ದಿನಾಂಕ: 03.10.2025	POWER HOME VANILLA BRE Loan A/c No. PHR034210826236 Amount : Rs.16,00,000/ - ಒಟ್ಟು ಬಾಕಿ ಮೊತ್ತ ರೂ.15,81,782/– ದಿನಾಂಕ: 08.12.2025 ರಂದು ಇದ್ದಂತೆ.
8	(1) ಮೆ॥ ಶ್ರೀ ಅಭಯ್ ಪೆಟ್ರೋಲಿಯಂ, ಇದನ್ನು ಪ್ರತಿನಿಧಿಸುವ ಮಾಲೀಕರು ಶ್ರೀಮತಿ ವಿಜಯಲಕ್ಷ್ಮಿ ಮತ್ತು ಪ್ರತಿನಿಧಿಸುವ ಜಾಮೀನುದಾರರು: ಶ್ರೀ ಅಭಿಷೇಕ್, ಸರ್ವೆ ನಂ.91/10, ಕೊಪ್ಪಳ ರಸ್ತೆ, ಕುಷ್ಟಗಿ, ಕೊಪ್ಪಳ–583277. (2) ಶ್ರೀಮತಿ ವಿಜಯಲಕ್ಷ್ಮಿ ಕೋಂ ಶ್ರೀ ಬಸನಗೌಡ ಮಾಲಿಪಾಟೀಲ್ ಕಂದಕೂರು, ಕೊಪ್ಪಳ–583277. (3) ಶ್ರೀ ಅಭಿಷೇಕ್ ಬಿನ್ ಶ್ರೀ ಬಸನಗೌಡ ಮಾಲಿಪಾಟೀಲ್ ಕಂದಕೂರು, ಕೊಪ್ಪಳ–583277.	ಶ್ರೀಮತಿ ವಿಜಯಲಕ್ಷ್ಮಿ ಅವರಿಗೆ ಸೇರಿದ ಆಸ್ತಿಯ ವಿವರ ಷೆಡ್ಯೂಲ್–1 : ಸ್ಥಿರಾಸ್ತಿಗಳ ವಿವರ : ಮನೆಯ ಆಸ್ತಿಯ ಪ್ಲಾಟ್ ನಂ.68, ವಾಸಯೋಗ್ಯ ಆಸ್ತಿ ನಂ.12–8–92, ಆಸ್ತಿಯ ಹಳೆ ನಂ.68–3557, ಅಸೆಸ್‌ಮೆಂಟ್ ನಂ.68–3557, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 06 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 12 ಮೀಟರ್‌ಗಳು, ಒಟ್ಟು 72 ಚದರ ಮೀಟರ್‌ಗಳು, ನಿರ್ಮಿತ ಪ್ರದೇಶ ಜಿ.ಎಫ್. 40.87732 ಚದರ ಮೀಟರ್‌ಗಳು, ಪ್ಲಾಟ್ ನಂ.68/1, ವಾಸಯೋಗ್ಯ ಆಸ್ತಿ ನಂ.12–510–191, ಆಸ್ತಿಯ ಹಳೆ ನಂ.68/1–3558, ಅಸೆಸ್‌ಮೆಂಟ್ ನಂ.68/1–3558, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 03 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 12 ಮೀಟರ್‌ಗಳು, ಒಟ್ಟು ವಿಸ್ತೀರ್ಣ 36 ಚದರ ಮೀಟರ್‌ಗಳು, ನಿರ್ಮಿತ ಪ್ರದೇಶ ಜಿ.ಎಫ್. 29.72896 ಚದರ ಮೀಟರ್‌ಗಳು, ಪ್ಲಾಟ್ ನಂ.69, ವಾಸಯೋಗ್ಯ ಆಸ್ತಿಯ ನಂ.12–510–189, ಆಸ್ತಿಯ ಹಳೆ ನಂ.69–3559, ಅಸೆಸ್‌ಮೆಂಟ್ ನಂ.69–3559, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 6.096012 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 12.192024 ಮೀಟರ್‌ಗಳು, ಒಟ್ಟು ವಿಸ್ತೀರ್ಣ 74.3224 ಚದರ ಮೀಟರ್‌ಗಳು, ನಿರ್ಮಿತ ಪ್ರದೇಶ ಜಿ.ಎಫ್.44.59344 ಚದರ ಮೀಟರ್‌ಗಳು, ಪ್ಲಾಟ್ ನಂ.69/1, ಆಸ್ತಿ ನಂ.12–510–187, ಆಸ್ತಿಯ ಹಳೆ ನಂ.69/1–3560, ಅಸೆಸ್‌ಮೆಂಟ್ ನಂ.69/1–3560, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 3.048006 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 6.096012 ಮೀಟರ್‌ಗಳು, ಪಟ್ಟು ವಿಸ್ತೀರ್ಣ 18.5806 ಚದರ ಮೀಟರ್‌ಗಳು, ನಿರ್ಮಿತ ಪ್ರದೇಶ ಜಿ.ಎಫ್.15.607704 ಚದರ ಮೀಟರ್‌ಗಳು (336 ಚದರ ಅಡಿ), ವಾಣಿಜ್ಯ ಉದ್ದೇಶಕ್ಕಾಗಿ ಕಮರ್ಷಿಯಲ್ ಆಸ್ತಿ, ಪ್ಲಾಟ್ ನಂ.69/2, ಆಸ್ತಿ ನಂ.12–8–92, ಆಸ್ತಿಯ ಹಳೆ ನಂ.68–3557, ಅಸೆಸ್‌ಮೆಂಟ್ ನಂ.68–3557, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 06 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 12 ಮೀಟರ್‌ಗಳು, ಒಟ್ಟು ವಿಸ್ತೀರ್ಣ 72 ಚದರ ಮೀಟರ್‌ಗಳು (480 ಚದರ ಅಡಿ), & ಉಳಿಕೆಯ ತೆರೆದ ಭಾಗದ ವಿಸ್ತೀರ್ಣ 384 ಚದರ ಅಡಿ, ಎನ್.ಎ & ಟೌನ್ ಯೋಜನಾ ಪ್ರಾಧಿಕಾರ, ಧಾರವಾಡ, ಅನುಮೋದಿತ ನಿವೇಶನ ನಂ.45/1/2, ಟೌನ್ ಮುನಿಸಿಪಲ್ ಕೌನ್ಸಿಲ್, ಕುಷ್ಟಗಿ ವ್ಯಾಪ್ತಿಯಲ್ಲಿದೆ, ಈ ಆಸ್ತಿಯು ಹೊಸಪೇಟೆ ರಸ್ತೆ, ಕುಷ್ಟಗಿ, ಕೊಪ್ಪಳ ಜಿಲ್ಲೆಯಲ್ಲಿದ್ದು, ಕೊಪ್ಪಳ ನೋಂದಾಯಿತ ಜಿಲ್ಲೆ ಮತ್ತು ಉಪ–ನೋಂದಣಿ ಕುಷ್ಟಗಿ ವ್ಯಾಪ್ತಿಯಲ್ಲಿದೆ, ಈ ಆಸ್ತಿಯು ಶ್ರೀಮತಿ ವಿಜಯಲಕ್ಷ್ಮಿ ಕೋಂ ಬಸನಗೌಡ ಮಾಲಿಪಾಟೀಲ್, ವಿಳಾಸ: ಕಂಡಕೂರ, ಕುಷ್ಟಗಿ, ಕೊಪ್ಪಳ ಜಿಲ್ಲೆಯಲ್ಲಿದೆ. ವಿಸ್ತೀರ್ಣ ವಾಸಯೋಗ್ಯ ಆಸ್ತಿ ನಂ.12–8–92, ಆಸ್ತಿಯ ಹಳೆ ನಂ.68–3557. ಪೂರ್ವದಿಂದ ಪಶ್ಚಿಮಕ್ಕೆ: 06 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 12 ಮೀಟರ್‌ಗಳು, ಒಟ್ಟು ವಿಸ್ತೀರ್ಣ 72 ಚದರ ಮೀಟರ್‌ಗಳು. ವಿಸ್ತೀರ್ಣ ವಾಸಯೋಗ್ಯ ಆಸ್ತಿಯ ನಂ.12–510–191, ಆಸ್ತಿಯ ಹಳೆ ನಂ.68/1–3558, ಪೂರ್ವದಿಂದ ಪಶ್ಚಿಮಕ್ಕೆ: 03 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 12 ಮೀಟರ್‌ಗಳು, ಒಟ್ಟು ವಿಸ್ತೀರ್ಣ 36 ಚದರ ಮೀಟರ್‌ಗಳು. ವಿಸ್ತೀರ್ಣ ವಾಸಯೋಗ್ಯ ಆಸ್ತಿ ನಂ.12–510–189, ಆಸ್ತಿ ಹಳೆ ನಂ.69–3559, ಪೂರ್ವದಿಂದ ಪಶ್ಚಿಮಕ್ಕೆ: 6.096012 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 12.192024, ಒಟ್ಟು ವಿಸ್ತೀರ್ಣ 74.3224 ಚದರ ಮೀಟರ್‌ಗಳು, ವಿಸ್ತೀರ್ಣ ಆಸ್ತಿ ನಂ.12–510–187, ಆಸ್ತಿಯ ಹಳೆ ನಂ.69/1–3560, ಪೂರ್ವದಿಂದ ಪಶ್ಚಿಮಕ್ಕೆ: 3.048006 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 6.096012 ಮೀಟರ್‌ಗಳು, ಒಟ್ಟು ವಿಸ್ತೀರ್ಣ 18.5806 ಚದರ ಮೀಟರ್‌ಗಳು, ವಿಸ್ತೀರ್ಣ ಆಸ್ತಿ ನಂ.12–8–92, ಆಸ್ತಿ ಹಳೆ ನಂ.68–3557, ಪೂರ್ವದಿಂದ ಪಶ್ಚಿಮಕ್ಕೆ: 06 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 12 ಮೀಟರ್‌ಗಳು, ಒಟ್ಟು ವಿಸ್ತೀರ್ಣ 72 ಚದರ ಮೀಟರ್‌ಗಳು (480 ಚದರ ಅಡಿ), ಪ್ಲಾಟ್ ನಂ.69/1 & 69/2ರ ಸಾಮಾನ್ಯ ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಉತ್ತರಕ್ಕೆ: ವೀರಭದ್ರಗೌಡರವರ ಪ್ಲಾಟ್, ಪಶ್ಚಿಮಕ್ಕೆ: ಖರೀದಾರರ ಪ್ಲಾಟ್, ದಕ್ಷಿಣಕ್ಕೆ: ರಸ್ತೆ. ಷೆಡ್ಯೂಲ್–II : ಸ್ಥಿರಾಸ್ತಿಗಳ ವಿವರ : ಮನೆಯ ಆಸ್ತಿಯ ವಾಸಯೋಗ್ಯ ಪ್ಲಾಟ್ ನಂ.1, ಆಸ್ತಿ ನಂ.31–11–01, ಆಸ್ತಿಯ ಹಳೆ ನಂ.01–7255, ಅಸೆಸ್‌ಮೆಂಟ್ ನಂ.01–7255, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 09 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 12 ಮೀಟರ್‌ಗಳು, ಒಟ್ಟು 108 ಚದರ ಮೀಟರ್‌ಗಳು, ಪ್ಲಾಟ್ ನಂ.2, ಆಸ್ತಿ ನಂ.31–11–02, ಆಸ್ತಿಯ ಹಳೆ ನಂ.02–7256, ಅಸೆಸ್‌ಮೆಂಟ್ ನಂ.02–7256, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 06 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 12 ಮೀಟರ್‌ಗಳು, ಒಟ್ಟು ವಿಸ್ತೀರ್ಣ 108 ಚದರ ಮೀಟರ್‌ಗಳು, ಪ್ಲಾಟ್ ನಂ.19, ಆಸ್ತಿ ನಂ.31–528–19, ಆಸ್ತಿಯ ಹಳೆ ನಂ.19–7273, ಅಸೆಸ್‌ಮೆಂಟ್ ನಂ.18–7273, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 09 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 12 ಮೀಟರ್‌ಗಳು, ಒಟ್ಟು ವಿಸ್ತೀರ್ಣ 108 ಚದರ ಮೀಟರ್‌ಗಳು, ಪ್ಲಾಟ್ ನಂ.20, ಆಸ್ತಿ ನಂ.31–528–20, ಆಸ್ತಿಯ ಹಳೆ ನಂ.20–7274, ಅಸೆಸ್‌ಮೆಂಟ್ ನಂ.20–7274, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 09 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 12 ಮೀಟರ್‌ಗಳು, ಒಟ್ಟು ವಿಸ್ತೀರ್ಣ 108 ಚದರ ಮೀಟರ್‌ಗಳು, ತೆರೆದ ಪ್ಲಾಟ್‌ಗಳು ಎನ್.ಎ & ಟೌನ್ ಯೋಜನಾ ಪ್ರಾಧಿಕಾರ, ಕೊಪ್ಪಳ ಅನುಮೋದಿತ ಸರ್ವೆ ನಂ.119/2/ಎ, ಟೌನ್ ಮುನಿಸಿಪಲ್ ಕೌನ್ಸಿಲ್, ಕುಷ್ಟಗಿ ವ್ಯಾಪ್ತಿಯಲ್ಲಿದೆ, ಈ ಆಸ್ತಿಯು ನೇರಬೆಂಚಿ ರಸ್ತೆ, ಗಿರೀಶ್ ಲಿಂಬಿಕಾಯಿ ಲೇಔಟ್, ಕುಷ್ಟಗಿ, ಕೊಪ್ಪಳ ಜಿಲ್ಲೆಯಲ್ಲಿದ್ದು, ಕೊಪ್ಪಳ ನೋಂದಾಯಿತ ಜಿಲ್ಲೆ ಮತ್ತು ಉಪ–ನೋಂದಾಯಿತ ಕುಷ್ಟಗಿ ವ್ಯಾಪ್ತಿಯಲ್ಲಿದೆ, ಈ ಆಸ್ತಿಯು ಶ್ರೀಮತಿ ವಿಜಯಲಕ್ಷ್ಮಿ ಕೋಂ ಬಸನಗೌಡ ಮಾಲಿಪಾಟೀಲ್, ವಿಳಾಸ: ಕಂಡಕೂರು, ಕುಷ್ಟಗಿ, ಕೊಪ್ಪಳ ಜಿಲ್ಲೆ ಅವರ ಹೆಸರಿನಲ್ಲಿದೆ. ವಿಸ್ತೀರ್ಣ ಪ್ಲಾಟ್ ನಂ.1, ಆಸ್ತಿ ನಂ.31–11–01, ಆಸ್ತಿಯ ಹಳೆ ನಂ.01–7255, ಪೂರ್ವದಿಂದ ಪಶ್ಚಿಮಕ್ಕೆ: 09 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 12 ಮೀಟರ್‌ಗಳು, ಒಟ್ಟು ವಿಸ್ತೀರ್ಣ 108 ಚದರ ಮೀಟರ್‌ಗಳು, ವಿಸ್ತೀರ್ಣ ಪ್ಲಾಟ್ ನಂ.2, ಆಸ್ತಿ ನಂ.31–11–02, ಆಸ್ತಿಯ ಹಳೆ ನಂ.02–7256, ಪೂರ್ವದಿಂದ ಪಶ್ಚಿಮಕ್ಕೆ: 09 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 12 ಮೀಟರ್‌ಗಳು, ಒಟ್ಟು ವಿಸ್ತೀರ್ಣ 108 ಚದರ ಮೀಟರ್‌ಗಳು, ವಿಸ್ತೀರ್ಣ ಪ್ಲಾಟ್ ನಂ.19, ಆಸ್ತಿ ನಂ.31–528–19, ಆಸ್ತಿಯ ಹಳೆ ನಂ.19–7273, ಪೂರ್ವದಿಂದ ಪಶ್ಚಿಮಕ್ಕೆ: 09 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 12 ಮೀಟರ್‌ಗಳು, ಒಟ್ಟು ವಿಸ್ತೀರ್ಣ 108 ಚದರ ಮೀಟರ್‌ಗಳು, ವಿಸ್ತೀರ್ಣ ಪ್ಲಾಟ್ ನಂ.19, ಆಸ್ತಿ ನಂ.31–528–19, ಆಸ್ತಿಯ ಹಳೆ ನಂ.19–7273, ಪೂರ್ವದಿಂದ ಪಶ್ಚಿಮಕ್ಕೆ: 09 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 12 ಮೀಟರ್‌ಗಳು, ವಿಸ್ತೀರ್ಣ ಪ್ಲಾಟ್ ನಂ.20, ಆಸ್ತಿ ನಂ.31–528–20, ಆಸ್ತಿಯ ಹಳೆ ನಂ.20–7274, ಪೂರ್ವದಿಂದ ಪಶ್ಚಿಮಕ್ಕೆ: 09 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 12 ಮೀಟರ್‌ಗಳು, ಒಟ್ಟು ವಿಸ್ತೀರ್ಣ 108 ಚದರ ಮೀಟರ್‌ಗಳು, ಚಕ್ಕುಬಂದಿ: ಪ್ಲಾಟ್ ನಂ.1: ಪೂರ್ವಕ್ಕೆ: ನರೆಬೆಂಚಿ ರಸ್ತೆ, ಉತ್ತರಕ್ಕೆ: ಪ್ಲಾಟ್ ನಂ.02, ಪಶ್ಚಿಮಕ್ಕೆ: ಪ್ಲಾಟ್ ನಂ.20, ದಕ್ಷಿಣಕ್ಕೆ: ಸರ್ವೆ ನಂ.118 (ಪಾರ್ಟ್). ಚಕ್ಕುಬಂದಿ: ಪ್ಲಾಟ್ ನಂ.2: ಪೂರ್ವಕ್ಕೆ: ನರೆಬೆಂಚಿ ರಸ್ತೆ, ಉತ್ತರಕ್ಕೆ: ಪ್ಲಾಟ್ ನಂ.02, ಪಶ್ಚಿಮಕ್ಕೆ: ಪ್ಲಾಟ್ ನಂ.19, ದಕ್ಷಿಣಕ್ಕೆ: ಪ್ಲಾಟ್ ನಂ.01. ಚಕ್ಕುಬಂದಿ: ಪ್ಲಾಟ್ ನಂ.19: ಪೂರ್ವಕ್ಕೆ: ನರೆಬೆಂಚಿ ರಸ್ತೆ, ಉತ್ತರಕ್ಕೆ: ಪ್ಲಾಟ್ ನಂ.02, ಪಶ್ಚಿಮಕ್ಕೆ: ಪ್ಲಾಟ್ ನಂ.20, ದಕ್ಷಿಣಕ್ಕೆ: ಪ್ಲಾಟ್ ನಂ.118 (ಪಾರ್ಟ್). ಚಕ್ಕುಬಂದಿ: ಪ್ಲಾಟ್ ನಂ.20: ಪೂರ್ವಕ್ಕೆ: ಪ್ಲಾಟ್ ನಂ.01, ಉತ್ತರಕ್ಕೆ: ಪ್ಲಾಟ್ ನಂ.19, ಪಶ್ಚಿಮಕ್ಕೆ: 09 ಮೀಟರ್ ರಸ್ತೆ, ದಕ್ಷಿಣಕ್ಕೆ: ಸರ್ವೆ ನಂ.118 (ಪಾರ್ಟ್). ಹೆಚ್ಚಿನ ಮಾಹಿತಿಗಾಗಿ ಸಂಗಯ್ಯ, ಕಲೆಕ್ಷನ್ ಮ್ಯಾನೇಜರ್, ಮೊಬೈಲ್ ನಂ.9739349666ನ್ನು ಸಂಪರ್ಕಿಸಿ.	04.12.2025 ಎನ್‌ಪಿಎ ದಿನಾಂಕ: 27.11.2025	OVER DRAFT MSME-GSTOD (OVER DRAFT) Loan A/c No. 923030001157340 Amount : Rs.1,21,50,000/- ಒಟ್ಟು ಬಾಕಿ ಮೊತ್ತ ರೂ. 1,17,70,087/– (ಇದರಲ್ಲಿ ದಿನಾಂಕ: 05.12.2025 ರವರೆಗಿ ಬಡ್ಡಿ ಸೇರಿದೆ)

ದಯವಿಟ್ಟು ಗಮನಿಸಿ, ಮೇಲೆ ತಿಳಿಸಿದ ಕಾಯಿದೆಯ ಸೆಕ್ಷನ್–13 ರ ಉಪ–ಸೆಕ್ಷನ್ 13 ರಲ್ಲಿ ಉಲ್ಲೇಖಿಸಿರುವಂತೆ, ಈ ಸೂಚನೆಯಲ್ಲಿ ಉಲ್ಲೇಖಿಸಲಾದ ಭದ್ರತೆಯ ಅಡಿಯಲ್ಲಿ ಹೇಳಲಾದ ಯಾವುದೇ ಸ್ವತ್ತುಗಳನ್ನು ನಮ್ಮ ಬ್ಯಾಂಕಿನ ಪೂರ್ವ ಲಿಖಿತ ಅನುಮತಿಯಿಲ್ಲದೆ ನೀವು ಮಾರಾಟ, ಗುತ್ತಿಗೆ ಅಥವಾ ಇತರ ರೀತಿಯಲ್ಲಿ ವರ್ಗಾಯಿಸಬಾರದು.

ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಸೂಚನೆಯ ಆದೇಶಾನುಸಾರವಾಗಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಮೇಲೆ ಉಲ್ಲೇಖಿಸಲಾದ ಸಾಲಗಾರರು ಮತ್ತು/ಅಥವಾ ಖಾತರಿದಾರರು (ಎಲ್ಲೆಲ್ಲಿ ಅನ್ವಯವಾಗುತ್ತದೆಯೋ) ಈ ಮೇಲೆ ತಿಳಿಸಿಲಾದ ಬಾಕಿ ಉಳಿದಿರುವ ಮೊತ್ತವನ್ನು ಭವಿಷ್ಯದ ಬಡ್ಡಿ ಮತ್ತು ಅನ್ವಯವಾಗುವ ಶುಲ್ಕಗಳೊಂದಿಗೆ, ಈ ಸೂಚನೆ ಪ್ರಕಟಣೆಗೊಂಡ ದಿನಾಂಕದಿಂದ 60 ದಿನಗಳೊಳಗಾಗಿ ಪಾವತಿಸುವಂತೆ ಸಲಹೆ ನೀಡಲಾಗಿದ್ದು, ವಿಫಲವಾದಲ್ಲಿ ಸೂಚನಾ ತಾರೀಖಿನಿಂದ 60 ದಿನಗಳ ಅವಧಿ ಮುಕ್ತಾಯದ ನಂತರ, 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆಯ ನಿಬಂಧನೆಗನುಸಾರವಾಗಿ, ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.

ಮೇಲೆ ತಿಳಿಸಲಾದ ಕಾಯ್ದೆಯ ವಿಭಾಗ 13(13), ಉಪ–ವಿಭಾಗ(2)ರ ಅಡಿಯಲ್ಲಿ ಉಲ್ಲೇಖಿಸಿರುವಂತೆ, ಯಾವುದೇ ಒಬ್ಬ ಸಾಲಗಾರ ಈ ಸೂಚನೆಯು ತಲುಪಿದ ನಂತರ, ಭದ್ರತಾ ಸಾಲ ನೀಡಿದವರ ಲಿಖಿತ ಪೂರ್ವಾನುಮತಿ ಪಡೆಯದೇ, ಸೂಚನೆಯಲ್ಲಿ ಪ್ರಸ್ತಾಪಿಸಲಾಗಿರುವ ಭದತಾ ಆಸ್ತಿಗಳನ್ನು ಮಾರಾಟದ ಮೂಲಕ ವರ್ಗಾಯಿಸುವುದಾಗಲಿ, ಭೋಗ್ಯಕ್ಕೆ ನೀಡುವುದಾಗಲಿ ಅಥವಾ ಬೇರೆ ರೀತಿಯಲ್ಲಿ ಬಳಸಿಕೊಳ್ಳುವುದಾಗಲಿ ಮಾಡುವಂತಿಲ್ಲ ಎಂಬುದನ್ನು ದಯವಿಟ್ಟು ಗಮನಿಸತಕ್ಕದ್ದು.

ಆಕ್ಟ್‌ನ ಸೆಕ್ಷನ್ 13ರ ಸಬ್ ಸೆಕ್ಷನ್ (8)ರಲ್ಲಿನ ನಿಯಮಗಳ ಅನುಸಾರ ಭದ್ರತಾ ಸ್ವತ್ತುಗಳನ್ನು ಹಿಂದಕ್ಕೆ ಪಡೆದುಕೊಳ್ಳಲು ಕಾಲಾವಕಾಶವನ್ನು ನೀಡಲಾಗುವುದು ಎಂದು ಈ ಮೂಲಕ ಸಾಲಗಾರರ ಗಮನಕ್ಕೆ ತರಲಾಗುವುದು. ಸಾರ್ವಜನಿಕ ಹರಾಜಿಗಾಗಿ ಅಥವಾ ಭೋಗ್ಯ, ಹಂಚಿಕೆ ಅಥವಾ ಮಾರಾಟದ ಮೂಲಕ ಭದ್ರತಾ ಸ್ವತ್ತುಗಳ ವರ್ಗಾವಣೆಗಾಗಿ ಸಾರ್ವಜನಿಕ ಅಥವಾ ಖಾಸಗಿ ಒಪ್ಪಂದಕ್ಕೆ ಉಲ್ಲೇಖಗಳನ್ನು ಅಥವಾ ಟೆಂಡರ್ ಆಹ್ವಾನಿಸುವ ಸೂಚನಾ ಪ್ರಕಟಣೆಯ ದಿನಾಂಕಕ್ಕಿಂತ ಮೊದಲು ಯಾವುದೇ ಸಮಯದಲ್ಲಿ ಸಾಲಗಾರರು, ಸುರಕ್ಷಿತ ಸಾಲದಾತರ ಖರ್ಚು, ವೆಚ್ಚ ಮತ್ತು ಶುಲ್ಕಗಳನ್ನು ಒಳಗೊಂಡಂತೆ ಎಲ್ಲಾ ಬಾಕಿಯನ್ನು ಪಾವತಿಸಿ, ಭದ್ರತಾ ಸ್ವತ್ತುಗಳನ್ನು ಬಿಡಿಸಿಕೊಳ್ಳಬಹುದು.

ದಿನಾಂಕ : 31.12.2025
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ಎಕ್ಸಿಸ್ ಬ್ಯಾಂಕ್ ಲಿಮಿಟೆಡ್

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

"ಜ್ಞಾನ ಸಂಗಮ", ಬೆಳಗಾವಿ – 590018, ಕರ್ನಾಟಕ

ಸಂಖ್ಯೆ:ವಿ.ತಾ.ವಿ./ಬೆ/ಸ್ಥಾ.ಅ./2025–26/ಐ.ಎಫ್.ಟಿ. ನಂ.116/5168 ದಿನಾಂಕ: 30–12–2025

ಅಲ್ಪಾವಧಿ ಟೆಂಡರ್ ಪ್ರಕಟಣೆ

(ದ್ವಿ–ಲಕೋಟೆ ಪದ್ಧತಿ) (ಕೆ.ಪಿ.ಪಿ. ಪೋರ್ಟಲ್ ಮೂಲಕ ಮಾತ್ರ)

ಕುಲಸಚಿವರು, ವಿತಾವಿ, ಬೆಳಗಾವಿ ಇವರಿಂದ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ ಕೆ.ಡಬ್ಲ್ಯೂ. ರ ಪ್ರಕಾರ ಕೆ.ಪಿ.ಪಿ. ಪೋರ್ಟಲ್ ಮೂಲಕ ಟೆಂಡರ್‌ನ್ನು ಆಮಂತ್ರಿಸಲಾಗಿದೆ. ಕಾಮಗಾರಿ ಹೆಸರು: ವಿತಾವಿಯ "ಜ್ಞಾನ ಸಂಗಮ" ಬೆಳಗಾವಿಯ ಆವರಣದಲ್ಲಿರುವ 1ನೇ ಮಹಡಿಯ ಆಡಳಿತ ಕಛೇರಿಗೆ (ಉತ್ತರ ಭಾಗ) ಒಳಾಂಗಣ ಕಾಮಗಾರಿಗಳನ್ನು ನಿರ್ವಹಿಸುವ ಕಾಮಗಾರಿ ಮೊತ್ತ ರೂ. 1,19,48,336/– (ತೆರಿಗೆ ರಹಿತ). ಇತರೆ ಮಾಹಿತಿಗಳನ್ನು ವೆಬ್‌ಸೈಟ್: https://kppp.karnataka.gov.in ಮೂಲಕ ದಿನಾಂಕ: 30–12–2025 ರಿಂದ ಪಡೆದುಕೊಳ್ಳಬಹುದು.

ಸಹಿ/– ಕುಲಸಚಿವರು
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.

ವಾಸಾಸಂಇ/ಬೆಳಗಾವಿ/1560/ಅಡ್ವಟೋರ್/2025–26

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ

#1, ಸಿದ್ದಯ್ಯ ಪುರಾಣಿಕ್ ರಸ್ತೆ, ಕೆ.ಹೆಚ್.ಬಿ ಕಾಲೋನಿ, ಮಾಗಡಿ ರಸ್ತೆ ಬೆಂಗಳೂರು 560079
ದೂರವಾಣಿ ಸಂಖ್ಯೆ: +91–80–29619801 ಮಿಂಚ್ ಅಂಚೆ: md.ksmscl@gmail.com

No: KSMSCL/DRUGS & EQPT/TND/03/2025-26 Date: 31.12.2025

ಟೆಂಡರ್ ಪ್ರಕಟಣೆ

ಉಲ್ಲೇಖ : ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ:

1. KSMSCL/EQPT/HFW/ECRP II/ LMO/ TND/38/2025-26 (IND 0353) Date: 20.12.2025
2. KSMSCL/EQPT/HFW/15THFC/PAPSMEAR/TND/14/2025-26 (IND_0256 Call 02) Date: 30.12.2025
3. KSMSCL/EQPT/HFW/NUHM /RDK KITS/TND/39/2025-26 (IND_0354), Date: 30.12.2025
4. KSMSCL/HFW/SCM/ 39/2025-26 Date: 30.12.2025
5. KSMSCL/DRUGS/TND/PRGM/NUTRITION/VIT A SYRUP/68/ 2025-26/Call-2, Dt: 30.12.2025 (IND-0333 Call-2).
6. KSMSCL/DRUGS/RETND/2022-23 AI/BANDAGE CLOTH/75/ 2025-26, Dt: 31.12.2025 (IND-0355).

e-ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರಂತೆ ಈ ಕೆಳಕಂಡ ರಾಷ್ಟ್ರ ವ್ಯಾಪ್ತಿ ಇ–ಟೆಂಡರ್ ಕರೆಯಲಾಗಿದೆ.

(1) ECRP-II ಕಾರ್ಯಕ್ರಮದ ಅಡಿಯಲ್ಲಿ LMO ಟ್ಯಾಂಕ್‌ಗಳಿಗೆ ಟೆಲಿಮೆಟ್ರಿ ಘಟಕಗಳ ಪೂರೈಕೆ, ಸ್ಥಾಪನೆ ಮತ್ತು ನಿರ್ವಹಣೆಗೆ ಸಂಬಂಧಿಸಿದ ಟೆಂಡರ್–IND 0353" **(2)** 15ನೇ ಹಣಕಾಸು ಆಯೋಗದಡಿಯಲ್ಲಿ ಗರ್ಭಕಂಟಕ ಕ್ಯಾನ್ಸರ್ ತಪಾಸಣೆಗಾಗಿ ಪ್ಯಾಪ್ ಸ್ಮಿಯರ್ ಕಿಟ್ಟುಗಳ ಪೂರೈಕೆಗೆ ಸಂಬಂಧಿಸಿದ ಟೆಂಡರ್–IND 0256 Call-02 (3) 15ನೇ ಹಣಕಾಸು ಆಯೋಗದಡಿಯಲ್ಲಿ RDK ಕಿಟ್ಟುಗಳ ಪೂರೈಕೆಗೆ ಸಂಬಂಧಿಸಿದ ಟೆಂಡರ್– IND 0354 (4) ಕೆಎಸ್‌ಎಂಎಸ್‌ಸಿಎಲ್‌ಗೆ ಔಷಧಿಗಳು, ಬಳಕೆ ಸಾಮಗ್ರಿಗಳು ಹಾಗೂ ವೈದ್ಯಕೀಯ ಸಾಧನಗಳ ಸಾರಿಗೆಗಾಗಿ ಮಾಸಿಕ ದರ ಒಪ್ಪಂದ ಆಧಾರದ ಮೇಲೆ ಕಾರ್ಗೋ ವಾಹನ ಸೇವೆಗಳನ್ನು ಒದಗಿಸುವ ಟೆಂಡರ್–SE0031 **(5)** 2025–26ನೇ ಸಾಲಿನ ಪೌಷ್ಟಿಕ ಆಹಾರ ಕಾರ್ಯಕ್ರಮದ ಬೇಡಿಕೆಯ Vitamin A Syrup ಗಳನ್ನು ಖರೀದಿಸಿ ಪೂರೈಸಲು ಮರುಟೆಂಡರ್ ಆಹ್ವಾನಿಸುವ ಕುರಿತು. (IND-0333 Call-2). **(6)** 2022–23ನೇ ಸಾಲಿನ ವಾರ್ಷಿಕ ಬೇಡಿಕೆ ಪಟ್ಟಿಯಲ್ಲಿನ Bandage Cloth ಗಳನ್ನು ಖರೀದಿಸಿ ಪೂರೈಸಲು ಮರುಟೆಂಡರ್ ಆಹ್ವಾನಿಸುವ ಕುರಿತು. (IND-0355).

ತಾಂತ್ರಿಕ ವಿವರಣೆ, ಇ.ಎಮ್.ಡಿ, ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಈ–ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್‌ಸೈಟ್ ಮುಖಾಂತರ: https://kppp.karnataka.gov.in ನಲ್ಲಿ ಟೆಂಡರ್‌ಗಳ ದಾಸ್ತಾವೇಜುಗಳನ್ನು ಡೌನ್ ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ಕೆ.ಎಸ್.ಎಂ.ಎಸ್.ಸಿ.ಎಲ್, ಬೆಂಗಳೂರು

ವಾಸಾಸಂಇ/ವಾ.ಪ್ರ/4765/ಎಸ್‌ಐ/2025–26

ಕರ್ನಾಟಕ ಸರ್ಕಾರ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ವಿಜಯಪುರ ಉಪ ವಿಭಾಗ, ವಿಜಯಪುರ

ಸಂಖ್ಯೆ:ಬಿ1/ಬಜೆಟ್/ವಿಜೆಪಿ/ಟೆಂಡರ್/2025–26 ದಿನಾಂಕ: 24.12.2025

ಟೆಂಡರ್ ಪ್ರಕಟಣೆ

2025–26 ನೇ ಸಾಲಿನಲ್ಲಿ ವಿಜಯಪುರ ಪ್ರಾದೇಶಿಕ ಅರಣ್ಯ ವಿಭಾಗ ವ್ಯಾಪ್ತಿಯಲ್ಲಿ ಟ್ರೀ ಪಾರ್ಕ ಹಾಗೂ ಸಿ.ಎಸ್.ಆರ್ ಯೋಜನೆಗಳಡಿ ಅರಣ್ಯೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ಮೂಲಕ ಇಂಡೆಂಟ್ ಸಂಖ್ಯೆ:KFD/2025-26/OW/ WORK_INDENT29616, 29617, 29620, 29621, 29622, 29624, 29625, 29631, 29633, 29634, 29635, 29626 & 29628 ರಂತೆ ಟೆಂಡರ್‌ನ್ನು ಕರೆಯಲಾಗಿದೆ. ದಿನಾಂಕ: 06.01.2026 ರ ವರೆಗೆ ಟೆಂಡರ್ ಹಾಕುವ ಮತ್ತು ದಿನಾಂಕ: 08.01.2026 ರಂದು ಬೆಳಿಗ್ಗೆ 11.00 ಗಂಟೆಗೆ ಟೆಕ್ನಿಕಲ್ ಮತ್ತು ಫೈನಾನ್ಸಿಯಲ್ ಬಿಡ್ ತೆರೆಯಲಾಗುವುದು. ಟೆಂಡರ್‌ದಲ್ಲಿ ಭಾಗವಹಿಸಲಿಚ್ಚಿಸುವವರು kppp.karnataka.gov.in ಮೂಲಕ ಟೆಂಡರ್ ನಿಬಂಧನೆ ಇತ್ಯಾದಿ ಮಾಹಿತಿಯನ್ನು ಪಡೆದುಕೊಳ್ಳಬಹುದು.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ವಿಜಯಪುರ ಉಪ ವಿಭಾಗ, ವಿಜಯಪುರ

ವಾಸಾಸಂಇ/ವಿಜಯಪುರ/575/ ಕೆಎಸ್‌ಎಂಸಿಎ/2025–26

ಬಿ. ನಾಗೇಂದ್ರ ಆಪ್ತನ ಮನೆ ಮೇಲೆ ಸಿಬಿಐ ದಾಳಿ

ಬಳ್ಳಾರಿ: ಮಾಜಿ ಸಚಿವ ಬಿ. ನಾಗೇಂದ್ರ ಅವರ ಆಪ್ತ ವಿಶ್ವನಾಥ ಮನೆ ಮೇಲೆ ಬಳ್ಳಾರಿಯಲ್ಲಿ ಸಿಬಿಐ ಅಧಿಕಾರಿಗಳು ಬುಧವಾರ ದಾಳಿ ನಡೆಸಿದ್ದಾರೆ. ಬಳ್ಳಾರಿ ನಗರದ

ಬೆಂಗಳೂರು ರಸ್ತೆಯಲ್ಲಿರುವ ವಿಶ್ವನಾಥ ನಿವಾಸಕ್ಕೆ ನಾಲ್ಕು ಜನ ಅಧಿಕಾರಿಗಳ ತಂಡ ದಾಳಿ ನಡೆಸಿದ್ದು, ಮನೆ ಪರಿಶೀಲನೆ ನಡೆಸಲಾಗಿದೆ. ಈ ವೇಳೆ ವಿಶ್ವನಾಥ ಮನೆಯಲ್ಲಿಲ್ಲದ ಕಾರಣ, ಅವರ ಸಹೋದರ ಮಹೇಶ್‌ರನ್ನು ಸಿಬಿಐ ಅಧಿಕಾರಿಗಳು ಬ್ರೂಸ್ ಪೇಟೆ ಪೊಲೀಸ್ ಠಾಣೆಗೆ ಕರೆತಂದಿದ್ದಾರೆ. ಠಾಣೆಯಲ್ಲಿಯೇ ಸಿಬಿಐ ಅಧಿಕಾರಿಗಳು ವಿಶ್ವನಾಥ ಸಂಬಂಧಿತ ಮಾಹಿತಿ ಸಂಗ್ರಹಿಸುತ್ತಿದ್ದಾರೆ. ಈ ದಾಳಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಬಹು ಕೋಟಿ ಹಗರಣಕ್ಕೆ ಸಂಬಂಧಿಸಿದೆ ಎನ್ನಲಾಗಿದ್ದು, ಪ್ರಕರಣದಲ್ಲಿ ವಿಶ್ವನಾಥ ಪಾತ್ರವಿದೆ ಎಂಬ ಆರೋಪದ ಮೇರೆಗೆ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಪಂಚಾಯತರಾಜ್ ಇಂಜಿನೀಯರಿಂಗ್ ವಿಭಾಗ, ಕಲಬುರಗಿ

ಸಂ.ಕಾನಿಅ/ಪಂರಾಇಂ/ವಿಕ/ತಾಶಾ–5/ಟೆಂಡರ್/2025–26/5265 ದಿನಾಂಕ:29.12.2025

ಇ –ಪ್ರೋಕ್ಯೂರಮೆಂಟ್ ಟೆಂಡರ್ ಪ್ರಕಟಣೆ (ದ್ವಿ–ಲಕೋಟೆ ಪದ್ದತಿಯಲ್ಲಿ)

1) ಕಾಮಗಾರಿಗಳ ಇಂಡೆಂಟ್ ಸಂಖ್ಯೆ : 1. Construction of additional one class room, Library and science lab play ground with swing, slides and other equipment, compound wall installation of rain water harvesting system, science lab equipment and interactive desktop computer with all in one printer for Govt. Boys High School building at Ijeri Village in Jewargi Taluka Indent No. 21846, 2. Construction of Govt Higher Primary School at Karkihalli village in Yadrami Taluka Indent No. 21965, 2) ಲೆಕ್ಕ ಶೀರ್ಷಿಕೆ: **ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಯೋಜನೆ,** 3) ಟೆಂಡರಿಗಿಟ್ಟ ಅಂದಾಜು ಮೊತ್ತ : ಇಂಡೆಂಟ್ ಸಂಖ್ಯೆ: 21846, **ರೂ.79,91,856.59,** ಇಂಡೆಂಟ್ ಸಂಖ್ಯೆ: 21965, **ರೂ.1,00,74,819.42,** 4) ಗುತ್ತಿಗೆದಾರರ ಅರ್ಹತೆ : 3ನೇ ದರ್ಜೆ ಮತ್ತು ಮೇಲ್ಪಟ್ಟು, 5) ಟೆಂಡರ್ ಫಾರಂ ಪಡೆಯುವ ದಿನಾಂಕ : **30.12.2025 ರಿಂದ 13.01.2026 ಸಾಯಂಕಾಲ 4.00 ಗಂಟೆವರೆಗೆ.** 6) ಟೆಂಡರ್ ಅರ್ಜಿ ಬೆಲೆ: ಇ–ಪ್ರೋಕ್ಯೂರಮೆಂಟ್ ನಿಯಮಾನುಸಾರ. 7) ಇ.ಎಂ.ಡಿ. : ಇಂಡೆಂಟ್ ಸಂಖ್ಯೆ: 21846, **ರೂ.1,60,000.00,** ಇಂಡೆಂಟ್ ಸಂಖ್ಯೆ: 21965, **ರೂ.2,00,000.00,** 8) ಟೆಂಡರ್ ಸಲ್ಲಿಸುವ **ದಿನಾಂಕ: 30.12.2025 ರಿಂದ 13.01.2026 ಸಾಯಂಕಾಲ 4.00 ಗಂಟೆಯ ವರೆಗೆ,** 9) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 14.01.2026 ಸಾಯಂಕಾಲ 4.00 ಗಂಟೆ** ನಂತರ, 10) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 16.01.2026 ಬೆಳಿಗ್ಗೆ 11.00 ಗಂಟೆ** ನಂತರ. 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ : ಕಾರ್ಯನಿರ್ವಾಯಕ ಅಭಿಯಂತರವರ ಕಛೇರಿ, ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕರ್ನಾಟಕ ಗ್ರಾಮೀಣ ಬ್ಯಾಂಕ್ ಎದುರಿಗೆ, ಕುಸನೂರ ರಸ್ತೆ, ರಾಜಾಪುರ ಕಲಬುರಗಿ, 12) ಅಂತರಜಾಲ ತಾಣದ ವಿಳಾಸ : www.kppp.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಪಂಚಾಯತರಾಜ್ ಇಂಜಿನೀಯರಿಂಗ್ ವಿಭಾಗ, ಕಲಬುರಗಿ

ವಾ.ಸಾ.ಸಂ.ಇ.ಕಲಬುರಗಿ/905/ದೇಶಪಾಂಡೆ ಪಬ್ಲಿಸಿಟಿ/2025–26

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರಕಾರದ ಒಂದು ಉದ್ಯಮ)

ಕಾರ್ಯಾಲಯ ಕಾರ್ಯನಿರ್ವಾಹಕ ಇಂಜಿನೀಯರರು, ಕೃಭಾಜನಿ(ನಿ), ಜೆ.ಬಿ.ಸಿ.ವಿಭಾಗ ಸಂಖ್ಯೆ. 2 ಭೀಮರಾಯನಗುಡಿ
eejbc2@gmail.com

ಸಂಖ್ಯೆ: ಕೃಭಾಜನಿನಿ/ಜೆಬಿಸಿ/ವಿ–2/ಟಿಎನ್‌ಡಿ/ಯೋಶಾ/2025–26/982 ದಿನಾಂಕ. : 30.122025

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ ಜೆ.ಬಿ.ಸಿ.ವಿಭಾಗ ಸಂಖ್ಯೆ. 2, ಭೀಮರಾಯನಗುಡಿ ರವರು ಇ–ಟೆಂಡರಿಂಗ್ ಮುಖಾಂತರ ಟೆಂಡರ್ ಅಹ್ವಾನಿಸಲಾಗಿದ್ದು, ಕಾಮಗಾರಿಗಳ ವಿವರಗಳು ಈ ಕೆಳಗಿನಂತಿರುತ್ತವೆ;

ಕಾಮಗಾರಿಗಳ ಇಂಡೆಂಟ್ ಸಂಖ್ಯೆ: works indent no: 1)2464CALL-2, 2)2689

1) ಟೆಂಡರಗೆ ಇಟ್ಟ ಮೊತ್ತ: ಗರಿಷ್ಠ ಮೊತ್ತ ರೂ. 91.79 ಲಕ್ಷಗಳಲ್ಲಿ, ಕನಿಷ್ಠ ಮೊತ್ತ ರೂ. 38.11 ಲಕ್ಷಗಳಲ್ಲಿ **2) ಟೆಂಡರಗೆ ಇಟ್ಟ ಇ.ಎಂ.ಡಿ ಮೊತ್ತ:** ಗರಿಷ್ಠ ಮೊತ್ತ ರೂ. 1,83,600.00 ಕನಿಷ್ಠ ಮೊತ್ತ ರೂ. 76,500.00 **3) ಇ–ಟೆಂಡರಿಂಗ ಲಭ್ಯವಾಗುವ ಅವಧಿ:** 01.01.2026 ಮುಂಜಾನೆ 11.30 ಗಂಟೆ ಯಿಂದ 08.01.2026 ಸಾಯಂಕಾಲ 05.00 ಗಂಟೆ ವರೆಗೆ. **4) ಇ–ಟೆಂಡರಿಂಗ ಕೊನೆಯ ದಿನಾಂಕ:** 08.01.2026 ಸಾಯಂಕಾಲ 05.00 ಗಂಟೆ ವರೆಗೆ. **5) ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ:** 10.01.2026 ಮುಂಜಾನೆ 11.30 ಗಂಟೆಗೆ, ಸದರಿ ವಿಭಾಗ ಕಛೇರಿಯಲ್ಲಿ **5) ಆರ್ಥಿಕ ಟೆಂಡರ್ ತೆರೆಯುವ ದಿನಾಂಕ:** 15.01.2026 ಮುಂಜಾನೆ 11.30 ಗಂಟೆಗೆ, ಸದರಿ ವಿಭಾಗ ಕಛೇರಿಯಲ್ಲಿ 7) ಸಂಪರ್ಕಿಸಬೇಕಾದ ಕಛೇರಿ ವಿಳಾಸ ಹೆಚ್ಚಿನ ಮಾಹಿತಿಗಾಗಿ ವೆಬಸೈಟ್ http://www.kppp.Karnataka.gov.in ನಲ್ಲಿ ನೋಡಬಹುದು ಹಾಗೂ ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿ(ನಿ), ಜೆ.ಬಿ.ಸಿ.ವಿಭಾಗ ಸಂಖ್ಯೆ. 2
ಭೀಮರಾಯನಗುಡಿ

ವಾ.ಸಾ.ಸಂ.ಇ/ಯಾದಗಿರಿ/442/ಕೆ.ಎಸ್.ಎಂ.ಸಿ.ಎ/2025–26

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಬಾಗಲಕೋಟೆ

ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬಾಗಲಕೋಟೆ

ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ:126, ನವನಗರ, ಬಾಗಲಕೋಟೆ
ದೂರವಾಣಿ: 08354–235042 ಇ–ಮೇಲ್: bgkeezpe@yahoo.com ಫ್ಯಾಕ್ಸ್: 08354–235043

ಸಂ:ಕಾನಿಇಂ/ಪಂರಾಇಂವಿ/ಬಿಜಿಕೆ/ಪಿಬಿ–1/ಸಿ.ಎಮ್.ಐ.ಡಿ.ಪಿ/ಟೆಂಡರ್/2025–26/4455 ದಿನಾಂಕ: 23.12.2025

ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಏಕ & ದ್ವಿ–ಲಕೋಟೆ ಟೆಂಡರ್ ಪ್ರಕಟಣೆ ಕೆ.ಡಬ್ಲ್ಯೂ–1, 2, & 3 ಬಿಡ್ ಡಾಕ್ಯೂಮೆಂಟ್

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ ಮಾನ್ಯ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ (ಸಿ.ಎಮ್.ಐ.ಡಿ.ಪಿ) ಅಭಿವೃದ್ಧಿ ಕಾಮಗಾರಿಗಳಿಗೆ ಯೋಜನೆ ಅಡಿಯಲ್ಲಿ ಮುಧೋಳ, ಹುನಗುಂದ, ಬಾಗಲಕೋಟೆ ವಿಧಾನಸಭಾ ಕ್ಷೇತ್ರಕ್ಕೆ ಹಂಚಿಕೆಯಾದ ತಲಾ **ರೂ.50.00 ಕೋಟಿ** ಮೊತ್ತದ ಯೋಜನೆ ಅಡಿಯಲ್ಲಿ ಆಯ್ಕೆಯಾದ ಬಾಗಲಕೋಟೆ ಜಿಲ್ಲೆ ಹುನಗುಂದ, ಮುಧೋಳ ಹಾಗೂ ಬಾದಾಮಿ ವಿಧಾನಸಭಾ ಮತಕ್ಷೇತ್ರದ ಗ್ರಾಮೀಣ ರಸ್ತೆ, ಸೇತುವೆ ಕಾಮಗಾರಿಗಳಿಗೆ **Standard Tender Document KW-1, 2 & 3** ರ ನಿಬಂಧನೆಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999–2000ರ ಪ್ರಕಾರ ಆ್ಯಕ್ಟ್ 2000ರ ನಿಯಮದಂತೆ ಏಕ & ದ್ವಿ–ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಸಾಮಾನ್ಯ ಗುತ್ತಿಗೆ ಇಂಡೆಂಟ್ ನಂ: 21962, 21991, 21992, 21993, 22043, 21932, 21956, 21959, 21974, 22193, 22194, 22197, 22198, 22199, 22200, 22037, 22047, 22049, 22051, 22053, 22055, 21865, 21868, 21984, 21988, 21996, 22007, 22008, 22010, 22011, 22012, 22019, 22023, 22024, 22025, 22026

ಪ್ರವರ್ಗ–2 (ಎ) ವರ್ಗದ ಗುತ್ತಿಗೆಯ ಇಂಡೆಂಟ್ ಸಂಖ್ಯೆ: 21935, 21939, 21953, 21968, 22192, 22056, 21867, 21981, 21994, 21995, 22005, 22013

ಪ್ರವರ್ಗ–1 ವರ್ಗದ ಗುತ್ತಿಗೆಯ ಇಂಡೆಂಟ್ ಸಂಖ್ಯೆ: 22196,

ಪರಿಶಿಷ್ಟ ಜಾತಿ ವರ್ಗದ ಗುತ್ತಿಗೆಯ ಇಂಡೆಂಟ್ ಸಂಖ್ಯೆ: 22044, 21949, 21964, 22054, 21866, 21987, 22004, 22016, 22017, 22018

ಪರಿಶಿಷ್ಟ ಪಂಗಡ ವರ್ಗದ ಗುತ್ತಿಗೆಯ ಇಂಡೆಂಟ್ ಸಂಖ್ಯೆ: 21934, 21871, 22020, 22022

ಇದ್ದು, ಕಾಮಗಾರಿಗಳ ವಿವರ, ಅಂದಾಜು ಮೊತ್ತ, ಗುತ್ತಿಗೆದಾರರ ಅರ್ಹತೆ ವಿವರ, ಟೆಂಡರ್ ಮೊತ್ತ (ರೂ.20.00 ದಿಂದ 80.00 ಲಕ್ಷಗಳ ಮಿತಿಗೊಳಪಟ್ಟು), ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತ ಎಲ್ಲ ವಿವರಗಳು ಇ–ಪೋರ್ಟಲ್‌ನಲ್ಲಿ ಇದ್ದಂತೆ.

ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್–ಬಿಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು **ಸಮಯ: 12.01.2025** ರ ಸಾಯಂಕಾಲ **5.30 ಗಂಟೆವರೆಗೆ.** ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು **ಸಮಯ: 14.01.2025** ರಂದು ಮುಂಜಾನೆ **11.00 ಗಂಟೆಯ** ನಂತರ. ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ: ತಾಂತ್ರಿಕ ಬಿಡ್ ಅನುಮೋದನೆ ನಂತರ ಸೂಚನೆ: ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಚೇರಿಗೆ ಅಥವಾ ವೆಬ್‌ಸೈಟ್ https://kppp.karnataka.gov.in/ ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಪಂಚಾಯತ ರಾಜ್ (ಇಂ)ವಿಭಾಗ, ಬಾಗಲಕೋಟೆ.

ವಾ.ಸಾ.ಇ/ಬಾಗಲಕೋಟೆ/469/ದೇಶಪಾಂಡೆಪಬ್ಲಿಸಿಟಿ/2025–26

ಪಾ. ರಾಜಗೋಪಾಲ್ ನಿಧನ

ಬೆಂಗಳೂರು: ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳ ಸಮನ್ವಯ ಸಮಿತಿಯ ಸ್ಥಾಪಕ ಪ್ರಧಾನ ಕಾರ್ಯದರ್ಶಿ, ಬ್ಯಾಂಕ್ ಕನ್ನಡದ ಜೀವನದಿ ಎಂದೇ ಖ್ಯಾತರಾಗಿದ್ದ ಪಾ. ರಾಜಗೋಪಾಲ್ (79) ಡಿ.31 ರಂದು ಮಲ್ಲೇಶ್ವರಂ ನಲ್ಲಿರುವ ತಮ್ಮ

ನಿವಾಸದಲ್ಲಿ ಕೊನೆಯುಸಿರು ಎಳೆದಿದ್ದಾರೆ. ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ 1972 ರಲ್ಲಿಯೇ ಮೊದಲ ಕನ್ನಡ ಸಂಘವನ್ನು ಸ್ಥಾಪಿಸಿದ ಪಾ.ರಾಜಗೋಪಾಲ್, ನಂತರ ಬ್ಯಾಂಕುಗಳ ಕನ್ನಡ ಸಂಘಗಳ ಸಮನ್ವಯ ಸಮಿತಿಯನ್ನು ಕಟ್ಟುವ ಮೂಲಕ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕನ್ನಡ ಅನುಷ್ಠಾನಕ್ಕೆ ನಿರಂತರತವಾಗಿ ಶ್ರಮಿಸಿದವರು. ಬ್ಯಾಂಕ್‌ಗಳಲ್ಲಿ ಕನ್ನಡ ಬಳಕೆ, ಸೇವೆ ಮತ್ತು ಆಡಳಿತ ದಲ್ಲಿ ಕನ್ನಡಕ್ಕೆ ಗೌರವ ದೊರಕಿಸಿ ಕೊಡಬೇಕು ಎಂಬ ಧ್ಯೇಯದೊಂ ದಿಗೆ ಅವರು ಕೊನೆಯವರೆಗೂ ಕಾರ್ಯನಿರ್ವಹಿಸಿದರು. ಪ್ರಾಚಾರ್ಯ ಎಚ್.ಎಸ್.ಕೆ. ಅವರ ಮಾರ್ಗದರ್ಶನದಲ್ಲಿ ಹೊರತಂದ ಬ್ಯಾಂಕಿಂಗ್ ನಿಘಂಟು ಹಾಗೂ ಬ್ಯಾಂಕಿಂಗ್ ಪ್ರಪಂಚ ತ್ರೈಮಾಸಿಕ ಪತ್ರಿಕೆಯ ಪ್ರಕಟಣೆಯಲ್ಲಿ ಪಾ. ರಾಜಗೋಪಾಲ್ ಅವರ ಪಾತ್ರ ಅತ್ಯಂತ ಪ್ರಮುಖವಾಗಿತ್ತು. ಕರ್ನಾಟಕದ ಉದ್ದಗಲಕ್ಕೂ ಸಮನ್ವಯ ಸಮಿತಿ ನಡೆಸಿದ ಬ್ಯಾಂಕಿಂಗ್ ಕಮ್ಮಟಗಳು ಹಾಗೂ ಕಾರ್ಯಕ್ರಮಗಳ ಸಂಘಟನೆಯಲ್ಲಿ ಅವರು ಮುಂಚೂಣಿಯಲ್ಲಿ ನಿಂತಿದ್ದರು. ಅಲ್ಲದೆ, ಭಾರತೀಯ ಸ್ಟೇಟ್ ಬ್ಯಾಂಕ್ ಹಾಗೂ ಸಾರ್ವಜನಿಕ ವಲಯದ ಬ್ಯಾಂಕುಗಳ ಅಖಿಲ ಕರ್ನಾಟಕ ಬ್ಯಾಂಕ್ ಕನ್ನಡ ಸಂಘಗಳ ಪರಿಷತ್ತು ಸ್ಥಾಪನೆಯಲ್ಲಿ ಪ್ರಮುಖ ಪಾತ್ರ ವಹಿಸಿ, ಬ್ಯಾಂಕುಗಳಲ್ಲಿ ಕನ್ನಡ ಅನುಷ್ಠಾನಕ್ಕೆ ಸಂಘಟಿತ ಹೋರಾಟ ನಡೆಸಿದರು. ಪಾ.ರಾಜಗೋಪಾಲ್ ಅವರ ನಿಧನದಿಂದ ಕನ್ನಡ ಚಳವಳಿಗೆ ಅಪಾರ ನಷ್ಟ ಉಂಟಾಗಿದೆ ಎಂದು ಸಮನ್ವಯ ಸಮಿತಿ, ಕನ್ನಡವೇ ಸತ್ಯ ವೇದಿಕೆ ಸಂತಾಪ ವ್ಯಕ್ತಪಡಿಸಿದೆ.

ಸಮಾಚಾರ ಸಣ್ಣದಲ್ಲ

ಬಸ್ ಪಲ್ಟಿ: 12 ವಿದ್ಯಾರ್ಥಿಗಳಿಗೆ ಗಾಯ



ಶಿರಸಿ: ದಾವಣಗೆರೆಯಿಂದ ಪ್ರವಾಸಕ್ಕೆ ಬಂದಿದ್ದ ವಿದ್ಯಾರ್ಥಿಗಳ ಬಸ್ ಅಪಘಾತಕ್ಕೀಡಾಗಿದ್ದು, ಬಸ್‌ನಲ್ಲಿದ್ದ 50 ವಿದ್ಯಾರ್ಥಿಗಳ ಪೈಕಿ 12 ವಿದ್ಯಾರ್ಥಿಗಳು ತೀವ್ರವಾಗಿ ಗಾಯಗೊಂಡಿರುವ ಘಟನೆ ಶಿರಸಿಯಲ್ಲಿ ನಡೆದಿದೆ. ದಾವಣಗೆರೆಯ ಜೈನ್ ಪಿಯು ಕಾಲೇಜಿನ ವಿದ್ಯಾರ್ಥಿಗಳ ಬಸ್ ಪಲ್ಟಿಯಾಗಿದೆ. ಪ್ರವಾಸಕ್ಕೆ ಬಂದಿದ್ದ ವಿದ್ಯಾರ್ಥಿಗಳು ವಿಭೂತಿ ಫಾಲ್ಸ್‌ಗೆ ಹೋಗುವಾಗ ಶಿರಸಿ ತಾಲೂಕಿನ ಮತ್ತಿಘಟ್ಟ ಸಮೀಪದ ಹಸೆಮನೆ ತಿರುವಿನಲ್ಲಿ ಬಸ್ ಪಲ್ಟಿಯಾಗಿದೆ. ಘಟನೆಯಲ್ಲಿ 10 ರಿಂದ 12 ವಿದ್ಯಾರ್ಥಿಗಳಿಗೆ ಗಾಯಗೊಂಡಿದ್ದಾರೆ. ಅಪಘಾತಕ್ಕೀಡಾದ ತಕ್ಷಣ ಗಾಯಾಳು ವಿದ್ಯಾರ್ಥಿಗಳನ್ನು ಚಿಕಿತ್ಸೆಗಾಗಿ ಅಂಕೋಲಾ ಹಾಗೂ ಶಿರಸಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಕಳೆದ ಡಿಸೆಂಬರ್ 28ರಂದು ದಾವಣಗೆರೆಯಿಂದ ವಿದ್ಯಾರ್ಥಿಗಳು ಪ್ರವಾಸಕ್ಕೆ ಬಂದಿದ್ದರು. ಅದರ ಭಾಗವಾಗಿ ಮಂಗಳವಾರ ಬೆಳಗ್ಗೆ ಶಿರಸಿ ಮಾರಿಕಾಂಬಾ ದೇವಾಲಯಕ್ಕೆ ತೆರಳಿ, ಅಲ್ಲಿಂದ ಯಾನ ಹಾಗೂ ವಿಭೂತಿ ಫಾಲ್ಸ್‌ಗೆ ತೆರಳಬೇಕಿತ್ತು. ಮಾರ್ಗಮಧ್ಯೆ ತಿರುವಿನಲ್ಲಿ ಚಾಲಕನ ನಿಯಂತ್ರಣ ತಪ್ಪಿ ಬಸ್ ಪಲ್ಟಿಯಾಗಿದೆ. ಸ್ಥಳಕ್ಕೆ ಶಿರಸಿ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಬೈಕ್ ಅಪಘಾತ: ಎಎಸ್‌ಐ ಸಾವು

ಚಳ್ಳಕೆರೆ: ತಾಲೂಕಿನ ಸಾಣಿಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೆಗ್ಗೆರೆ ಗ್ರಾಮದ ಸಮೀಪ ಸಂಭವಿಸಿದ ಅಪಘಾತದಲ್ಲಿ ಎಎಸ್‌ಐ ಸ್ಥಳದಲ್ಲೇ ಮೃತಪಟ್ಟಿದ್ದು, ಹಿಂಬದಿಯಲ್ಲಿ ಕುಳಿತಿದ್ದ ಮಹಿಳಾ ಹೆಡ್‌ಕಾನ್‌ಸ್ಟೆಬಲ್ ಗಾಯಗೊಂಡಿದ್ದಾರೆ.

ತಾಲೂಕಿನ ಪರಶುರಾಂಪುರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಎಎಸ್‌ಐ ಮಂಜುನಾಥ್ (49) ಮೃತಪಟ್ಟಿದ್ದು, ಚಿತ್ರದುರ್ಗ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಹೆಡ್‌ಕಾನ್‌ಸ್ಟೆಬಲ್ ಸೂರ್ಯಪ್ರಭಾ ಗಾಯಗೊಂಡಿದ್ದು, ಚಳ್ಳಕೆರೆ ಆಸ್ಪತ್ರೆಗೆ ದಾಖಲಿಸಲಾಗಿದೆ. ಮಂಜುನಾಥ್ ಹಾಗೂ ಸೂರ್ಯಪ್ರಭಾ ಅವರು ಐಮಂಗಲ ಪೊಲೀಸ್ ತರಬೇತಿ ಶಾಲೆಯಿಂದ ಚಳ್ಳಕೆರೆ ಕಡೆಗೆ ಬೈಕ್‌ನಲ್ಲಿ ತೆರಳುತ್ತಿದ್ದರು. ಹೆಗ್ಗೆರೆ ಕ್ರಾಸ್ ಬಳಿ ಅಡ್ಡ ಬಂದ ನಾಯಿಯನ್ನು ತಪ್ಪಿಸಲು ಹೋದಾಗ ಬೈಕ್ ಸ್ಕಿಡ್ ಆಗಿ ಅಪಘಾತ ಸಂಭವಿಸಿದೆ.

ಟೋಲ್ ಸಿಬ್ಬಂದಿ ಮೇಲೆ ಹಲ್ಲೆ: ಇಬ್ಬರ ಸೆರೆ

ಮಂಗಳೂರು: ಮಂಗಳೂರು ಸಮೀಪದ ಬಂಟ್ವಾಳ ಟೋಲ್ ಪ್ಲಾಜಾ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿ ಸಾರ್ವಜನಿಕ ಆಸ್ತಿಗೆ ಹಾನಿ ಮಾಡಿದ ಆರೋಪದ ಮೇಲೆ ಇಬ್ಬರು ವ್ಯಕ್ತಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ. ಡಿಸೆಂಬರ್ 29ರ ಬೆಳಗ್ಗೆ ಬಂಟ್ವಾಳ ತಾಲೂಕಿನ ಬ್ರಹ್ಮರಕೂಟ್ಲು ಟೋಲ್ ಗೇಟ್‌ನಲ್ಲಿ ಸಿಬ್ಬಂದಿ ಹಲ್ಲೆ ನಡೆಸಲಾಗಿದ್ದು, ಈ ಸಂಬಂಧ ಕಾಸರಗೋಡು ಜಿಲ್ಲೆಯ ಮುಳ್ಳೇರಿಯಾ ನಿವಾಸಿ ಪ್ರಶಾಂತ್ ಬಿ(25) ನೀಡಿದ ದೂರಿನ ಆಧಾರದ ಮೇಲೆ ಪೊಲೀಸರು ಕೇಸ್ ದಾಖಲಿಸಿಕೊಂಡು, ಇಬ್ಬರನ್ನು ಬಂಧಿಸಿದ್ದಾರೆ. ಲಾರಿಯೊಂದು ರಸ್ತೆಯ ತಪ್ಪು ಬದಿಯಿಂದ ಟೋಲ್ ಗೇಟ್ ಬಳಿ ಬಂದಿದ್ದು, ಈ ವೇಳೆ ಪ್ರಶಾಂತ್ ಟೋಲ್ ಇನ್‌ಚಾರ್ಜ್ ಆಗಿ ಕರ್ತವ್ಯದಲ್ಲಿದ್ದರು. ಸಿಬ್ಬಂದಿ ಪದೇ ಪದೇ ವಿನಂತಿಸಿದರೂ ಲಾರಿ ಚಾಲಕ ಟೋಲ್ ಶುಲ್ಕ ಪಾವತಿಸಲು ನಿರಾಕರಿಸಿ ಬಲವಂತವಾಗಿ ತಪ್ಪಿಸಿಕೊಳ್ಳಲು ಯತ್ನಿಸಿದ ಕಾರಣ ಟೋಲ್ ಗೇಟ್ ಸೌಕರ್ಯಕ್ಕೆ ಹಾನಿಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ:** ಸಂತೆ ಮೈದಾ ಶ್ರೀನಿವಾಸಪುರ, ಕೋಲಾರ
- **ಸಮಸ್ಯೆಯೇನು?** ಮನೆಗಳಿಗೆ ನುಗ್ಗುವ ಮಳೆ ನೀರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸುವ ಕುರಿತು.
- **ಪರಿಹಾರ:** ಮಳೆ ಬಂದ ವೇಳೆ ಶ್ರೀನಿವಾಸಪುರದ ಸಂತೆ ಮೈದಾನ ಹಾಗೂ ಅಮಾನಿಕೆರೆಯಿಂದ ನೀರು ಮನೆಗಳಿಗೆ ನುಗ್ಗುತ್ತಿದ್ದು, ಸಮಸ್ಯೆ ಪರಿಹರಿಸಲು ಸ್ಥಳೀಯರೊಬ್ಬರು ದೂರು ಸಲ್ಲಿಸಿದ್ದರು. ಸ್ಥಳ ಪರಿಶೀಲನೆ ನಡೆಸಿದ ಪುರಸಭೆ ಅಧಿಕಾರಿಗಳು ಚರಂಡಿಗಳಲ್ಲಿ ತುಂಬಿಕೊಂಡಿದ್ದ ಹೂಳು ತೆರವು ಮಾಡಿಸಿದ್ದಾರೆ.

ಸಹೃದಯಿ ಭಾರತ ನಿರ್ಮಾಣವೇ ಶ್ರೀ ನಾರಾಯಣ ಗುರುಗಳ ಆಶಯ

ಮನುಷ್ಯರು ಒಗ್ಗಟ್ಟಾಗಿ ಬಾಳುವ ಸಹೃದಯಿ ಭಾರತ ನಿರ್ಮಾಣ ಗುರುಗಳ ಕನಸಾಗಿತ್ತು: ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ



ಕೇರಳದ ತಿರುವನಂತಪುರಂ ಜಿಲ್ಲೆಯ ಶಿವಗಿರಿ ಮಠಕ್ಕೆ ಸಿಎಂ ಸಿದ್ದರಾಮಯ್ಯ ಬುಧವಾರ ಭೇಟಿ ನೀಡಿದರು.

ಬೆಂಗಳೂರು: ವೈವಿಧ್ಯತೆಯ ನಡುವೆ ಮನುಷ್ಯರು ಒಗ್ಗಟ್ಟಾಗಿ ಬಾಳುವ ಸಹೃದಯಿ ಭಾರತ ನಿರ್ಮಾಣ ನಾರಾಯಣ ಗುರುಗಳ ಆಶಯವಾಗಿತ್ತು. ನೈತಿಕತೆ ಇಲ್ಲದ ಅಹಂಕಾರದ ಭಾಷೆಯಲ್ಲಿ ಕೋಮುವಾದ ಮಾತಾಡುವ ಬಗ್ಗೆ ನಾರಾಯಣ ಗುರುಗಳು ಎಚ್ಚರಿಸಿದ್ದರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಕೇರಳದ ತಿರುವನಂತಪುರಂ ಜಿಲ್ಲೆಯ ಶಿವಗಿರಿ ಮಠದಲ್ಲಿ ಬುಧವಾರ ಶ್ರೀ ನಾರಾಯಣ ಧರ್ಮಸಂಗಮ ಟ್ರಸ್ಟ್ ಆಯೋಜಿಸಿರುವ ಮಠದ ಯಾತ್ರಾರ್ಥಿಗಳ ಸಮಾವೇಶದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ನಾರಾಯಣ ಗುರುಗಳು ಕೇವಲ ಒಬ್ಬ ಸಂತ ಮಾತ್ರ ಆಗಿರಲಿಲ್ಲ. ಸಮಾನತೆ ಮತ್ತು ನೈತಿಕತೆಯ ಚಳವಳಿಯಾಗಿದ್ದರು. ಹೀಗಾಗಿ ಶಿವಗಿರಿ ತೀರ್ಥಯಾತ್ರೆ ಕೂಡ ಚಳವಳಿಯ ಸ್ವರೂಪ ಪಡೆದು ಜಾತಿ ದೌರ್ಜನ್ಯವನ್ನು ಅಳಿಸಿ ಸಮಾಜವನ್ನು ಸಾಮಾಜಿಕ ನ್ಯಾಯದ ಕಡೆ ಮುನ್ನಡೆಸಬೇಕು. ಇದೇ ನಾರಾಯಣ ಗುರುಗಳು ಕಂಡ ಭಾರತ. ಇಂತಹ ಭಾರತವನ್ನು ನಾವು ಒಟ್ಟಾಗಿ ಗಟ್ಟಿಗೊಳಿಸಬೇಕಿದೆ ಎಂದಿದ್ದಾರೆ.

ಶಿವಗಿರಿ ಮಠ 'ಜೀವಂತ ಸಂವಿಧಾನ: ರಾಜಕಾರಣ ನೈತಿಕತೆಯಿಂದ ದೂರವಾಗುತ್ತಾ, ಧರ್ಮವು ನೈತಿಕತೆಗಿಂತ ಹೆಚ್ಚಾಗಿ ಅಧಿಕಾರಕ್ಕಾಗಿ ಆಯುಧವಾಗುತ್ತಿರುವ ಅಪಾಯದ ದಿನಗಳಲ್ಲಿ ಶಿವಗಿರಿ ಒಂದು ನೈತಿಕ ಚಳವಳಿಯಾಗಿ ನಮಗೆ ಆದರ್ಶವಾಗಬೇಕು. ಶಿವಗಿರಿ ಮಠ 'ಜೀವಂತ ಸಂವಿಧಾನ'ದಂತೆ ಕಾರ್ಯನಿರ್ವಹಿಸು ತ್ತಿದೆ. ಶಿವಗಿರಿ ತೀರ್ಥಯಾತ್ರೆಯು ಭಾರತದ ಮೂಲ 'ಕೋಮು-ವಿರೋಧಿ' ಯೋಜನೆಯಾಗಿದೆ. ಸಮಾಜವು ಕೃತಕವಾಗಿ ಸೃಷ್ಟಿಸಲ್ಪಟ್ಟ ದ್ವೇಷದಿಂದ ಧ್ರುವೀಕರಣಗೊಳ್ಳುತ್ತಿರುವಾಗ, ಶಿವಗಿರಿಯು ಪ್ರಾಬಲ್ಯಕ್ಕಿಂತ 'ಸಂವಾದ'ವನ್ನು, ಶ್ರೇಣೀಕೃತ ವ್ಯವಸ್ಥೆಗಿಂತ 'ಸಮಾನತೆ' ಯನ್ನು ಮತ್ತು ಸಾಂಕೇತಿಕತೆಗಿಂತ ನೈತಿಕತೆ'ಯನ್ನು ಎತ್ತಿ ಹಿಡಿಯುತ್ತದೆ ಎಂದಿದ್ದಾರೆ.

ಆಧುನಿಕ ರಾಷ್ಟ್ರ ನಿರ್ಮಾಣದಲ್ಲಿ ಶಿವಗಿರಿ ತೀರ್ಥಯಾತ್ರೆಯ ಪಾತ್ರ ಎನ್ನುವುದು ಕೇವಲ ಸಾಂಕೇತಿಕವಲ್ಲ. ಇದು ಇಂದಿನ ತುರ್ತು ಅಗತ್ಯ ಮತ್ತು ನಮ್ಮ ಕಾಲದ ಬಿಕ್ಕಟ್ಟುಗಳಿಗೆ ನೇರ ಉತ್ತರ. ಇದರ ಹಿಂದಿರುವ ಶಕ್ತಿ ಶ್ರೀ ನಾರಾಯಣ ಗುರುಗಳು. ಅವರು ಕೇವಲ ಒಬ್ಬ ಸಂತನಲ್ಲ, ಬದಲಾಗಿ ಭಾರತದ ಶ್ರೇಷ್ಠ ಸಾಮಾಜಿಕ ದಾರ್ಶನಿಕರಲ್ಲಿ ಒಬ್ಬರು ಎಂದು ತಿಳಿಸಿದ್ದಾರೆ.

ಬಸವಣ್ಣ, ನಾರಾಯಣ ಗುರುಗಳ ಸಿದ್ಧಾಂತ ಒಂದೇ

ಬಸವಣ್ಣನವರ 'ಕಾಯಕ' ತತ್ವವು ನಾರಾಯಣ ಗುರುಗಳ ಆರ್ಥಿಕ ಸ್ವಾವಲಂಬನೆಯ ಚಿಂತನೆಯಲ್ಲಿ ಪ್ರತಿಧ್ವನಿಸುತ್ತದೆ. ಬಸವಣ್ಣನವರು ವಚನಗಳ ಮೂಲಕ ಭಕ್ತಿಯನ್ನು ಜನಸಾಮಾನ್ಯರ ಕೈಗೆ ನಿಲುಕು ವಂತೆ ಮಾಡಿದರೆ, ನಾರಾಯಣ ಗುರುಗಳು ದೈವತ್ವವನ್ನೇ ಎಲ್ಲರಿಗೂ ಹಂಚುವ ಮೂಲಕ ಮನುಷ್ಯರು ಹುಟ್ಟಿನಿಂದ ಮೇಲು ಕೀಳಲ್ಲ, ಅಸ್ತಿತ್ವ ದಿಂದ ಸಮಾನರು ಎಂದು ಸಾರಿದರು. ಅವರಿಬ್ಬರೂ ಧರ್ಮವನ್ನು ಬಹಿಷ್ಕಾರದ ಸಾಧನದಿಂದ ಸಾಮಾಜಿಕ ನ್ಯಾಯದ ಭಾಷೆಯನ್ನಾಗಿ ಪರಿವರ್ತಿಸಿದರು ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಶಿವಗಿರಿ ಮಠವು ಕೇವಲ ಒಂದು ಯಾತ್ರಾ ಕೇಂದ್ರವಾಗಿರದೇ, ಭಾರತದ ಆತ್ಮಸಾಕ್ಷಿಯ ನೈತಿಕ ವಿಶ್ವವಿದ್ಯಾಲಯವಾಗಿದೆ. ಈ ಪವಿತ್ರ ಕ್ಷೇತ್ರದಲ್ಲಿ ನಿಮ್ಮ ಮುಂದೆ ನಿಂತಿರುವುದು ನನ್ನ ಸೌಭಾಗ್ಯ. ಇದು ಬೌದ್ಧಿಕ ಮತ್ತು ವಿಶ್ವದ ಮಾನವಕುಲದ ಚಳವಳಿಯಾಗಿದೆ. ಇದು ಭೌಗೋಳಿಕವಲ್ಲ, ನೈತಿಕತೆಯ ಪ್ರವಾಸ.

– ಸಿದ್ದರಾಮಯ್ಯ ಮುಖ್ಯಮಂತ್ರಿ

ಇನ್ಮುಂದೆ ಆನ್‌ಲೈನ್ ಮೂಲಕ ಕಂದಾಯ ಕೋರ್ಟ್ ಕಲಾಪ

ಬೆಂಗಳೂರು: ಕಂದಾಯ ಇಲಾಖೆ ವ್ಯಾಪ್ತಿಯ ನ್ಯಾಯಾಲಯಗಳನ್ನು ಆನ್‌ಲೈನ್ ಮೂಲಕವೇ ನಡೆಸಲು ಅವಕಾಶ ನೀಡಲು ರಾಜ್ಯ ಸರಕಾರ ತೀರ್ಮಾನಿಸಿದೆ.

ಈ ಬಗ್ಗೆ ಅಧಿಕೃತ ಆದೇಶ ಹೊರಡಿಸಿರುವ ಕಂದಾಯ ಇಲಾಖೆ, ಕಂದಾಯ ನ್ಯಾಯಾಲಯಗಳನ್ನು ಹೇಗೆ ನಡೆಸಬೇಕು ಎನ್ನುವ ಬಗ್ಗೆ ಈ ಹಿಂದೆ ಯಾವುದೇ ಸ್ಪಷ್ಟ ನಿಯಮಗಳಿರಲಿಲ್ಲ. ಆದ್ದರಿಂದ ಅನೇಕ ಬಾರಿ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯಗಳು ತಮ್ಮ ಅಧಿಕಾರ ವ್ಯಾಪ್ತಿ ಮೀರಿ ಅನೇಕ ಆದೇಶಗಳನ್ನು ಹೊರಡಿಸಿರುವ ಉದಾಹರಣೆಗಳು ಸಾಕಷ್ಟಿವೆ. ಆದ್ದರಿಂದ ಕಂದಾಯ ನ್ಯಾಯಾಲಯಗಳ ವ್ಯಾಪ್ತಿಯನ್ನು ಸ್ಪಷ್ಟಪಡಿಸಿ ಆದೇಶ ಹೊರಡಿಸಲಾಗಿದೆ.

ವಿಡಿಯೊ ಕಾನ್ಫರೆನ್ಸ್ ಮೂಲಕವೇ ವಿಚಾರಣೆಗೆ ಹಾಜರಾಗಲು ಅವಕಾಶ

ಇದರೊಂದಿಗೆ ಕಂದಾಯ ನ್ಯಾಯಾಲಯಗಳಲ್ಲಿ ಡಿಜಿಟಲೈಸೇಷನ್ ಮೂಲಕ ಆದೇಶಗಳನ್ನು ನೀಡುವ ವ್ಯವಸ್ಥೆಗೆ ಈಗಾಗಲೇ ಚಾಲನೆ ನೀಡಲಾಗಿತ್ತು. ಇವುಗಳ ಸುಧಾರಣಾ ಕಾನೂನುಗಳಿಗೆ ನ್ಯಾಯಿಕ ಬಲವನ್ನು ಒದಗಿಸುವ ಜತೆಗೆ ಇಲ್ಲಿ ನೀಡಲಾಗುತ್ತಿದ್ದ ಆದೇಶ ಗಳ ಮೇಲೂ ನಿಗಾ ವಹಿಸುವ ವ್ಯವಸ್ಥೆಯನ್ನು ರೂಪಿಸಲಾಗಿತ್ತು. ಸಂಬಂಧಿತ ಅಧಿಕಾರಿಗಳು ಕಾನೂನು ಮೀರಿ ಯಾರೂ ನ್ಯಾಯದಾನ ನೀಡಲು ಸಾಧ್ಯವಿಲ್ಲದಂತಹ ಪರಿಸ್ಥಿತಿ ನಿರ್ಮಾಣ ಮಾಡಲಾಗಿತ್ತು. ಇದೀಗ ಕಂದಾಯ ನ್ಯಾಯಾಲಯಗಳನ್ನು ಆನ್‌ಲೈನ್ ಮೂಲಕ ನಡೆಸುವ ವ್ಯವಸ್ಥೆಯನ್ನೂ ನೂತನ ಕಾನೂನಿನ ಮೂಲಕ ತರಲಾಗುತ್ತಿದೆ.

ಕಚೇರಿ ಅಲೆದಾಟಕ್ಕೆ ಬ್ರೇಕ್: ಕೃಷ್ಣಬೈರೇಗೌಡ

ಈ ಬಗ್ಗೆ ಪ್ರಕಟಣೆಯಲ್ಲಿ ಪ್ರತಿಕ್ರಿಯಿಸಿರುವ ಕಂದಾಯ ಸಚಿವ ಕೃಷ್ಣಬೈರೇಗೌಡ, ಜನಸಾಮಾನ್ಯರು ತಮ್ಮ ಕೆಲಸಕ್ಕಾಗಿ ಸರಕಾರಿ ಕಚೇರಿಗಳಿಗೆ ಅಲೆದು ಜುಗುಪ್ಸೆಗೊಂಡಿದ್ದಾರೆ. ಹೀಗಾಗಿ ಜನರು ಸರಕಾರಿ ಕಚೇರಿಗಳಿಗೆ ಅಲೆಯುವುದಕ್ಕೆ ಪೂರ್ಣ ವಿರಾಮ ನೀಡಬೇಕು ಎಂಬ ಉದ್ದೇಶದಿಂದಲೇ ಅಧಿಕಾರ ಸ್ವೀಕರಿಸಿದ ಮೊದಲ ದಿನದಿಂದಲೂ ಇ-ಆಡಳಿತಕ್ಕೆ ಹೆಚ್ಚು ಒತ್ತು ನೀಡಿದ್ದೆವು. ವಿಎಗಳಿಗೂ ಲ್ಯಾಪ್ ಟಾಪ್ ನೀಡುವ ಮೂಲಕ ಕಂದಾಯ ಇಲಾಖೆಯ ಕಾರ್ಯವೈಖರಿಯಲ್ಲಿ ಪಾರದರ್ಶಕತೆ ತರಲಾಗಿತ್ತು. ಭೂ ಸುರಕ್ಷಾ ಯೋಜನೆಯ ಮೂಲಕ ಎಲ್ಲಾ ಭೂ ದಾಖಲೆಗಳನ್ನೂ ಆನ್‌ಲೈನ್ ಮೂಲಕ ಪಡೆಯುವುದಕ್ಕೆ ಅವಕಾಶ ನೀಡಲಾಗಿತ್ತು. ಇದೀಗ ಕಂದಾಯ ನ್ಯಾಯಾಲಯಗಳನ್ನೂ ಆನ್‌ಲೈನ್ ಮೂಲಕ ನಡೆಸುವ ಮಹತ್ವದ ತೀರ್ಮಾನ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ವಿಡಿಯೊ ಕಾನ್ಫರೆನ್ಸ್ ಮೂಲಕ ಭಾಗವಹಿಸಬಹುದು

ಸರಕಾರದ ಈ ತೀರ್ಮಾನದಿಂದ ನ್ಯಾಯಾಲಯದ ವಿಚಾರಣೆಗಳನ್ನು ಆನ್‌ಲೈನ್‌ನಲ್ಲಿ ವೀಕ್ಷಿಸಲು ಮತ್ತು ವಿಡಿಯೊ ಕಾನ್ಫರೆನ್ಸಿಂಗ್ ಮೂಲಕ ಭಾಗವಹಿಸಲು ಸಾಧ್ಯವಾಗುತ್ತದೆ. ಇದು ಕಂದಾಯ ಇಲಾಖೆ ಕಚೇರಿಗಳಲ್ಲಿ ಪದೇ ಪದೇ ಓಡಾಡುವ ಅಗತ್ಯವನ್ನು ಕಡಿಮೆ ಮಾಡುತ್ತದೆ. ಈ ಕ್ರಮವು ಸಮಯ ಉಳಿಸುವುದು, ನ್ಯಾಯದ ಪ್ರವೇಶವನ್ನು ಸುಧಾರಿಸುವುದು ಮತ್ತು ಸರಕಾರ, ನಾಗರಿಕರ ನಡುವೆ ವಿಶ್ವಾಸ ಬಲಪಡಿಸುವ ಗುರಿಯನ್ನು ಹೊಂದಿದೆ. ಸದ್ಯ ಪ್ರಾಯೋಗಿಕವಾಗಿ ಜಾರಿಗೊಳಿಸಲಾಗಿದ್ದು, ಹಂತಹಂತವಾಗಿ ಇಡೀ ರಾಜ್ಯಕ್ಕೆ ವಿಸ್ತರಿಸಲಾಗುವುದು ಎಂದು ಹೇಳಲಾಗಿದೆ.

ಬಸ್‌ನಲ್ಲಿ ಯುವತಿಗೆ ಲೈಂಗಿಕ ಕಿರುಕುಳ

ಕಾರವಾರ: ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಯುವತಿಯೊಬ್ಬರು ನಿದ್ದೆಯಲ್ಲಿದ್ದಾಗ, ಪಕ್ಕದ ಸೀಟಿನಲ್ಲಿದ್ದ ವ್ಯಕ್ತಿಯೊಬ್ಬ ಲೈಂಗಿಕ ದೌರ್ಜನ್ಯ ಎಸಗಿರುವ ಘಟನೆ ಕಾರವಾರದಲ್ಲಿ ನಡೆದಿದೆ. ಚಲಿಸುವ ಬಸ್‌ನಲ್ಲಿ ನಿದ್ದೆ ಮಾಡುತ್ತಿದ್ದ ಯುವತಿಯೊಬ್ಬಳಿಗೆ ಲೈಂಗಿಕ ದೌರ್ಜನ್ಯ ಎಸಗಿದ ಘಟನೆ ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದು, ಕಾಮುಕನ ನೀಚ ಕೃತ್ಯವನ್ನು ಯುವತಿ ಎದೆಗುಂದದೆ ವಿಡಿಯೊ ಮಾಡಿ ಕಾಮುಕನ ಬಣ್ಣ ಬಟಾ ಬಯಲು ಮಾಡಿದ್ದಾರೆ. ಪಕ್ಕದ ಸೀಟಿನಲ್ಲಿದ್ದ ಕಾಮುಕ, ಯುವತಿ ನಿದ್ದೆಯಲ್ಲಿದ್ದಾಗ ಆಕೆಯ ಎದೆಯ ಮೇಲೆ ಕೈ ಹಾಕಿ ಅಸಭ್ಯವಾಗಿ ವರ್ತಿಸಿದ್ದಾನೆ.

ವಲಸಿಗರ ತನಿಖೆಗೆ ಸರಕಾರ ಎಸ್‌ಐಟಿ ರಚಿಸಲಿ: ಶಾಸಕ ಭರತ್ ಶೆಟ್ಟಿ ಒತ್ತಾಯ

ಹೊರರಾಜ್ಯದವರಿಗೆ ಮನೆ ಕಟ್ಟಿಕೊಡುವ ಔಚಿತ್ಯವೇನು?

ಮಂಗಳೂರು: ಬೆಂಗಳೂರಿನ ಕೋಗಿಲು ಬಡಾವಣೆಯಲ್ಲಿ ಅಕ್ರಮವಾಗಿ ನೆಲೆಸಿದ್ದ ವಲಸಿಗರು ಯಾರು? ಅವರು ಅಲ್ಲಿಗೆ ಬಂದು ನೆಲೆಸಲು ಅವಕಾಶ ಕೊಟ್ಟಿದ್ದು ಯಾರು? ಅವರು ಬಂದಿದ್ದು ಏಕೆ? ಅವರು ಬಂದಿದ್ದು ಎಲ್ಲಿಂದ ಎಂಬ ಬಗ್ಗೆ ಸಮಗ್ರ ತನಿಖೆಯಾಗಬೇಕು. ಇದಕ್ಕಾಗಿ ಸರಕಾರ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಬೇಕು ಎಂದು ಶಾಸಕ ಡಾ.ವೈ.ಭರತ್ ಶೆಟ್ಟಿ ಒತ್ತಾಯಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಅಲ್ಲಿ ಒಕ್ಕಲೆಬ್ಬಿಸಿದವರಿಂದ ಯಾವುದೇ ದಾಖಲೆ ಪತ್ರವನ್ನು ಕೇಳದೆಯೇ ಅವರಿಗೆ ನಾಲ್ಕೈದು ಕಿ.ಮೀ ದೂರದಲ್ಲಿ ಪುನರ್‌ವಸತಿ ಕಲ್ಪಿಸಲು ಸಿದ್ದರಾಮಯ್ಯ ನೇತೃತ್ವದ ಸರಕಾರ ಮುಂದಾಗಿದೆ. ಈ ಬೆಳವಣಿಗೆಗಳ ಹಿಂದೆ ವಸತಿ ಸಚಿವ ಜಮೀರ್ ಅಹಮದ್ ಖಾನ್ ಕೈವಾಡ ಇದೆ ಎಂದು ಅವರು ಆರೋಪಿಸಿದರು.

ಅಕ್ರಮ ವಲಸಿಗರಿಗೆ ವಸತಿ ಕಲ್ಪಿಸುವುದರ ಹಿಂದೆ ಕೇರಳದ ರಾಜಕೀಯ ಒತ್ತಡ ಕೆಲಸ ಮಾಡಿದೆ. ಎರಡೂವರೆ ವರ್ಷದಲ್ಲಿ ರಾಜ್ಯದ ಬಡವರಿಗೆ ಸರಕಾರ ಒಂದೇ ಒಂದು ಮನೆ ಕೊಟ್ಟಿಲ್ಲ. ನಗರದಲ್ಲಿ ವಸತಿ ಜಮೀನಿಗಾಗಿ ನಮೂನೆ 94ಸಿ ಮತ್ತು 94ಸಿ.ಸಿ ಅಡಿ ಅರ್ಜಿ ಸಲ್ಲಿಸಲಿಕ್ಕೂ ಅವಕಾಶ ಕಲ್ಪಿಸಿಲ್ಲ. ನಮ್ಮ ರಾಜ್ಯದವರ ಪರಿಸ್ಥಿತಿ ಹೀಗಿರುವಾಗ ಹೊರರಾಜ್ಯದ ಅಕ್ರಮ ವಲಸಿಗರಿಗೆ ಮನೆ ಕಟ್ಟಿಕೊಡುವ ಔಚಿತ್ಯವಾದರೂ ಏನು ಎಂದು ಪ್ರಶ್ನಿಸಿದರು.

ಕೋಗಿಲು ಬಡಾವಣೆಯಲ್ಲಿ ಅಕ್ರಮವಾಗಿ ಮನೆಕಟ್ಟಿಕೊಂಡ ವಲಸಿಗರಿಗೆ ಒಮ್ಮೆಗೆ ಮಾತ್ರ ಅನ್ವಯವಾಗುವಂತೆ ಉಚಿತವಾಗಿ ಮನೆ ಕಟ್ಟಿಕೊಡುವುದಾಗಿ ಸರಕಾರ ಹೇಳುತ್ತಿದೆ. ಸಚಿವ ಸಂಪುಟಕ್ಕೆ ಈ ಬಗ್ಗೆ ವಿಶೇಷ ಅಧಿಕಾರ ಇರಬಹುದು. ಆದರೂ ಈ ವಿಚಾರದಲ್ಲಿ ಕಾನೂನು ಹೋರಾಟ ನಡೆಸುವ ಬಗ್ಗೆ ಚಿಂತನೆ ನಡೆಸಿದ್ದೇವೆ.

–ಭರತ್ ಶೆಟ್ಟಿ ಶಾಸಕ

ಬಿಜೆಪಿ ಆಡಳಿತದಲ್ಲೇ ಬಡಾವಣೆ ನಿರ್ಮಾಣ

ಚಿತ್ರದುರ್ಗ: ಕೋಗಿಲು ಪ್ರದೇಶದಲ್ಲಿ ಬಡಾವಣೆ ನಿರ್ಮಾಣ ಬಿಜೆಪಿ ಅವರ ಆಡಳಿತದಲ್ಲೇ ಆಗಿರ ಬಹುದು ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದ್ದಾರೆ.ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ

29–30 ವರ್ಷಗಳಿಂದ ಎಲ್ಲಾ ಪಕ್ಷದ ಸರಕಾರಗಳ ಆಡಳಿತ ನಡೆಸಿದ್ದು, ಯಾರ ಕಾಲದಲ್ಲಿ ಬಡಾವಣೆ ಆಗಿದೆ. ಬಡಾವಣೆ ಆಗಿರೋದು ನಿಜ. ಆದರೆ ಯಾರು ಮಾಡಿದ್ದು? ಹೇಗೆ ಗೊತ್ತಾಗುತ್ತದೆ? ಬಿಜೆಪಿ ಆಡಳಿತಾವಧಿಯಲ್ಲಿಯೇ ಬಡಾವಣೆ ನಿರ್ಮಾಣ ಆಗಿರಬಹುದೇನೋ? ಎಂದು ಪ್ರಶ್ನೆ ಮಾಡಿದರು. ಕೋಗಿಲು ಪ್ರದೇಶದಲ್ಲಿ ಗುಡಿಸಲುಗಳು ಅನಧಿಕೃತ ಇರಬಹುದು ಹಾಗಾಗಿ ತೆರವುಗೊಳಿಸಿದ್ದಾರೆ. ಅದು ಚರ್ಚೆ ಮಾಡುವ ವಿಷಯವೇ ಅಲ್ಲ. ಅಲ್ಲದೆ ಪರಿಹಾರ ಕ್ರಮ ಕೈಗೊಳ್ಳುವುದಾಗಿ ತಿಳಿಸಿರುವುದರಿಂದ ಈ ವಿಷಯ ಪ್ರಸ್ತಾಪ ಅಪ್ರಸ್ತುತ ಎಂದರು.ಗುಡಿಸಲು ತೆರವುಗೊಳಿಸಿ ಪರ್ಯಾಯ ವ್ಯವಸ್ಥೆಗೆ ಕ್ರಮ ಕೈಗೊಳ್ಳಲಾಗಿದೆ. ಈ ವಿಚಾರದಲ್ಲಿ ಬಿಜೆಪಿ ಕೋರ್ಟ್ ಮೊರೆ ಹೋಗುತ್ತಿರುವ ಬಗ್ಗೆ ಅವರಿಗೆ ಕೇಳಿ ಎಂದು ಹೇಳಿದರು. ಬಳ್ಳಾರಿಯಲ್ಲಿ 10 ಸಾವಿರ ಬಾಂಗ್ಲಾ ದೇಶದ ಪ್ರಜೆಗಳಿದ್ದಾರೆಂದು ಮಾಜಿ ಸಚಿವ ಬಿ.ಶ್ರೀರಾಮುಲು ಹೇಳಿಕೆ ವಿಚಾರವಾಗಿ ಮಾತನಾಡಿ, ಅನೇಕ ಕಡೆ ತೋಟಗಳಲ್ಲಿ ಕೆಲಸ ಮಾಡುತ್ತಾರೆ. ಅವರು ಪಶ್ಚಿಮ ಬಂಗಾಳದವರಾ? ಬಾಂಗ್ಲಾ ದೇಶದವರಾ? ಇದನ್ನು ಕೇಂದ್ರ ಮತ್ತು ರಾಜ್ಯ ಸರಕಾರ ಪತ್ತೆ ಮಾಡಬೇಕು ಎಂದರು.

ಹೆಚ್ಚಿನ ಪರಿಹಾರ ಕಲ್ಪಿಸಲು ಪ್ರಯತ್ನ

ಹುಬ್ಬಳ್ಳಿ: ಇನಾಂವೀರಾಪುರ ಗ್ರಾಮದಲ್ಲಿ ನಡೆದ ಮರ್ಯಾದಾ ಹತ್ಯೆ ಕೃತ್ಯ ದುರಾದೃಷ್ಟಕರ. ವಿಶೇಷ ಪ್ರಕರಣ ಅಂತ ಹೇಳಿ ಹೆಚ್ಚಿನ ಪರಿಹಾರ ಕಲ್ಪಿಸಲು ಪ್ರಯತ್ನಿಸಲಾಗುವುದು ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ ಹೇಳಿದರು. ಬುಧವಾರ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 12ನೇ ಶತಮಾನದಲ್ಲಿ ಬಸವಣ್ಣ ಅಂತರ್ಜಾತಿ ಮದುವೆ ಮಾಡಿಸಿದ್ದರು. ಕಾನೂನು ಪ್ರಕಾರ ಏನು ಕ್ರಮವಾಗಬೇಕೋ ಅದು ಆಗು ತ್ತದೆ. ಘಟನೆ ಬಗ್ಗೆ ಇಲಾಖೆ ಕ್ರಮ ಕೈಗೊಂಡಿದೆ. ಕಾನೂನು ಚೌಕಟ್ಟಿನಲ್ಲಿ ಏನು ಕ್ರಮ ಕೈಗೊಳ್ಳ ಬೇಕೋ ಅದನ್ನು ಮಾಡುತ್ತದೆ. ಜನರ ಮನಸ್ಥಿತಿ ಬದಲಾಗಬೇಕು ಎಂದರು. ಸಕ್ರಾಂತಿ ನಂತರ ರಾಜ್ಯದಲ್ಲಿ ಕ್ರಾಂತಿ ಆಗುತ್ತೆ ಅನ್ನೋ ಪ್ರಶ್ನೆಗೆ ಕ್ರಾಂತಿ ಎಂದರೆ ಏನು ಅಂತ ಮರು ಪ್ರಶ್ನೆ ಹಾಕಿದ ಸಚಿವರು, ಎಲ್ಲದರ ಬಗ್ಗೆ ಹೈಕಮಾಂಡ್ ನಿರ್ಧಾರ ಕೈಗೊಳ್ಳುತ್ತದೆ ಎಂದರು. ಹುಬ್ಬಳ್ಳಿ ವಿಮಾನ ನಿಲ್ದಾಣಕ್ಕೆ ಗೃಹ ಸಚಿವ ಡಾ.ಜಿ. ಪರಮೇಶ್ವರ ಆಗಮಿಸುತ್ತಿದ್ದಂತೆ ಮುಂದಿನ ಸಿಎಂ ಪರಮೇಶ್ವರಗೆ ಜೈವಾಗಲಿ ಎಂದು ಅಭಿಮಾನಿಗಳು ಅವರ ಮುಂದೆಯೇ ಜೈಕಾರ ಹಾಕಿದದ್ದು ಎಲ್ಲರ ಗಮನ ಸೆಳೆಯಿತು.

ವಾರದಲ್ಲಿ ಹಂಪಿಗೆ 4 ಲಕ್ಷ ಪ್ರವಾಸಿಗರ ಭೇಟಿ

ಸೂಕ್ತ ವಸತಿ ಸೌಲಭ್ಯಗಳಿಲ್ಲದೆ ಪರದಾಟ | ಅಧಿಕಾರಿಗಳ ವಿರುದ್ಧ ಆಕ್ರೋಶ

ಹಂಪಿ: ಯುನೆಸ್ಕೋ ವಿಶ್ವ ಪರಂಪರೆಯ ತಾಣವಾದ ಹಂಪಿಗೆ ಕಳೆದ ವಾರದಲ್ಲಿ ಪ್ರವಾಸಿಗರ ಸಂಖ್ಯೆಯಲ್ಲಿ ಏರಿಕೆ ಕಂಡಿದೆ. ಅಧಿಕೃತ ಅಂದಾಜಿನ ಪ್ರಕಾರ ಸುಮಾರು ನಾಲ್ಕರಿಂದ 5 ಲಕ್ಷ ಪ್ರವಾಸಿಗರು ಭೇಟಿ ನೀಡಿದ್ದಾರೆ.

ಕ್ರಿಸ್‌ಮಸ್ ರಜೆಯ ಹಿನ್ನೆಲೆಯಲ್ಲಿ, ಕರ್ನಾಟಕ ಮತ್ತು ನೆರೆಯ ರಾಜ್ಯಗಳಿಂದ ಶಾಲಾ ಕಾಲೇಜುಗಳು ಆಯೋಜಿಸಿದ ಶೈಕ್ಷಣಿಕ ಪ್ರವಾಸಗಳು ಈ ತೀವ್ರ ಏರಿಕೆಗೆ ಪ್ರಮುಖ ಕಾರಣ ಎಂದು ಹೇಳಲಾಗಿದೆ. ವಿಜಯನಗರ ಜಿಲ್ಲಾಡಳಿತದ ಅಧಿಕಾರಿಗಳು, ಇತ್ತೀಚಿನ ವರ್ಷಗಳಲ್ಲಿ ದಾಖಲಾದ ಅತಿ ಹೆಚ್ಚು ಪ್ರವಾಸಿಗರ ಸಂಖ್ಯೆ ಇದಾಗಿದ್ದು, ಸಾಂಸ್ಕೃತಿಕ ಮತ್ತು ಐತಿಹಾಸಿಕ ತಾಣವಾಗಿ ಹಂಪಿಯ ಜನಪ್ರಿಯತೆ ಹೆಚ್ಚುತ್ತಿದೆ ಎಂದು ಹೇಳಿದ್ದಾರೆ.

ಶಿಲಾ ರಥ, ವಿರೂಪಾಕ್ಷ ದೇವಸ್ಥಾನ ಮತ್ತು ಇತರ ಪ್ರಸಿದ್ಧ ಸ್ಮಾರಕಗಳಂತಹ ಪ್ರವಾಸಿ ತಾಣಗಳು ವಾರವಿಡೀ ಜನದಟ್ಟಣೆಯಿಂದ ಕೂಡಿದ್ದವು, ಪ್ರಮುಖ ಸ್ಮಾರಕಗಳು ಮತ್ತು ವೀಕ್ಷಣಾ ಕೇಂದ್ರಗಳಲ್ಲಿ ಉದ್ದನೆಯ ಸರತಿ ಸಾಲುಗಳು ಕಂಡುಬಂದವು.

ಈ ಏರಿಕೆಯು ಸ್ಥಳೀಯ ವ್ಯಾಪಾರಿಗಳು, ಮಾರ್ಗದರ್ಶಕರು, ಸಾರಿಗೆ ನಿರ್ವಾಹಕರು ಮತ್ತು ಸಣ್ಣ ಆತಿಥ್ಯ ವ್ಯವಹಾರಗಳಿಗೆ ಹರ್ಷ ತಂದಿದೆ. ಬೀದಿ ವ್ಯಾಪಾರಿಗಳು, ಮಾರಾಟಗಾರರು ಮತ್ತು ತಿನಿಸು ಗಳು ಮಾರಾಟದಲ್ಲಿ ಗಮನಾರ್ಹ ಏರಿಕೆಯಾಗಿದೆ. ಆಟೋ-ರಿಕ್ಷಾ ಚಾಲಕರು ಮತ್ತು ಪ್ರವಾಸ ಮಾರ್ಗ ದರ್ಶಕರು ವಾರದ ಬಹುಪಾಲು ಸಂಪೂರ್ಣವಾಗಿ ಬುಕ್ ಆಗಿದ್ದಾರೆ ಎಂದು ತಿಳಿದು ಬಂದಿದೆ. ಹಂಪಿ ಸುಂದರವಾಗಿದೆ, ಆದರೆ ಸೌಲಭ್ಯಗಳು ಇಲ್ಲಿಗೆ ಬರುವ ಜನರ ಸಂಖ್ಯೆಗೆ ಹೊಂದಿಕೆಯಾಗುವುದಿಲ್ಲ ಎಂದು ಹೈದರಾಬಾದ್‌ನ ಪ್ರವಾಸಿಗರೊಬ್ಬರು ಹೇಳಿದರು, ಅವರು ಕೊಠಡಿಗಳ ಲಭ್ಯತೆಯಿಲ್ಲದ ಕಾರಣ ಸಮುದಾಯ ಭವನದಲ್ಲಿ ತಂಗಿದ್ದರು.



ಅಗತ್ಯ ವ್ಯವಸ್ಥೆ ಕಲ್ಪಿಸಲು ಒತ್ತಾಯ

ಭವಿಷ್ಯದಲ್ಲಿ ಪ್ರವಾಸಿಗರ ಸಂಖ್ಯೆ ಏರಿಕೆಯಾಗುವುದರಿಂದ ಅದಕ್ಕೆ ಬೇಕಾದ ಅನುಕೂಲ ಮಾಡಿಕೊಡಲು ಸರಕಾರವು ಪೂರ್ವಭಾವಿ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸ್ಥಳೀಯ ಪಾಲುದಾರರು ಮತ್ತು ಪ್ರವಾಸೋದ್ಯಮ ತಜ್ಞರು ಒತ್ತಾಯಿಸಿದ್ದಾರೆ. ಬಜೆಟ್ ವಾಸ್ತವ್ಯದ ಮೂಲಕ ವಸತಿ ಸಾಮರ್ಥ್ಯವನ್ನು ಹೆಚ್ಚಿಸುವುದು ಮತ್ತು ಸಾರ್ವಜನಿಕ ಸೌಲಭ್ಯಗಳನ್ನು ಸುಧಾರಿಸುವುದು ಸಲಹೆಗಳಲ್ಲಿ ಸೇರಿವೆ. ತಾಣದ ಪರಂಪರೆಯ ಮೌಲ್ಯಕ್ಕೆ ಧಕ್ಕೆಯಾಗದಂತೆ ಸೌಲಭ್ಯಗಳನ್ನು ಹೆಚ್ಚಿಸಲು ಮತ್ತು ಸುಸ್ಥಿರ ಪ್ರವಾಸೋದ್ಯಮವಕ್ಕಾಗಿ ಯೋಜನೆಗಳನ್ನು ಚರ್ಚಿಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹುಲಿ ಸೆರೆ: ನಿಟ್ಟುಸಿರುಬಿಟ್ಟ ಜನತೆ

ಚಾಮರಾಜನಗರ: ತಾಯಿ ಹುಲಿಯೊಂದಿಗೆ ನಾಲ್ಕು ಮರಿ ಹುಲಿಗಳು ಬೀಡುಬಿಟ್ಟಿರುವ ಚಾಮರಾಜನಗರ ತಾಲೂಕಿನ ನಂಜೇದೇವನ ಪುರ ಸಮೀಪ ಗಂಡು ಹುಲಿಯೊಂದು ಕಾಣಿಸಿಕೊಂಡಿದ್ದು, ಮಂಗಳವಾರ ರಾತ್ರಿ 10ರ ಸುಮಾರಿಗೆ ಸೆರೆ ಹಿಡಿಯಲಾಗಿದೆ.

ನಂಜೇದೇವನಪುರ, ವೀರನಪುರ, ಆನೆ ಮಡುವಿನ ಕೆರೆ ಬಳಿ 5 ಹುಲಿಗಳಿವೆ ಎಂದು ಕಾರ್ಯಾಚರಣೆ ನಡೆಸಲಾಗುತ್ತಿತ್ತು. ಮಂಗಳ ವಾರ ರಾತ್ರಿ, ಗಂಡು ಹುಲಿ ಕಾಣಿಸಿಕೊಂಡ ಕೂಡಲೇ ಸಾಕಾನೆಗಳ ಸಹಾಯದಿಂದ ಅರಿವಳಿಕೆ ಕೊಟ್ಟು ಸೆರೆ ಹಿಡಿಯಲಾಗಿದೆ. ಕೂಂಬಿಂಗ್ ಎಕ್ಸ್‌ಪರ್ಟ್ ಸುಗ್ರೀವ ಕರಾರುವಕ್ಕಾಗಿ ಹುಲಿಯ ವಾಸನೆ ಪತ್ತೆ ಹಚ್ಚಿ ತನ್ನ ಮಾವುತ ಶಂಕರ್‌ಗೆ ಸೂಚನೆ ನೀಡಿತ್ತು. ತಕ್ಷಣ ಸುಗ್ರೀವ ಆನೆಯ ಸಹಾಯದಿಂದ ಆನೆಮಡುವಿನ ಕೆರೆ ಪಕ್ಕ ನೀರು ಕುಡಿಯಲು ಬಂದ ಹುಲಿಗೆ ಪಶು ವೈದ್ಯರು ಅರಿವಳಿಕೆ ಕೊಟ್ಟರು. ಬಳಿಕ ಸೆರೆ ಹಿಡಿಯಲಾಯಿತು. ಒಂದು ತಾಯಿ ಹುಲಿ ಮತ್ತು ನಾಲ್ಕು ಮರಿಗಳು ಒಂದೆಡೆ ಇದ್ದರೆ, ಈ ಗಂಡು ಹುಲಿ ಪ್ರತ್ಯೇಕವಾಗಿತ್ತು. ಇದರಿಂದ ನಂಜೇದೇವನ ಪುರದಲ್ಲಿ ಇದ್ದದ್ದು 5 ಅಲ್ಲ 6 ಹುಲಿ ಎಂಬಂತಾಗಿದೆ. ಕಲ್ಪುರದಲ್ಲಿ ಕಳೆದ ತಿಂಗಳು ಕ್ಯಾಮರಾ ಟ್ರ್ಯಾಪ್‌ನಲ್ಲಿ ಕ್ಯಾಪ್ಚರ್ ಆಗಿದ್ದ ದೊಡ್ಡ ಗಾತ್ರದ ಹುಲಿ ಇದಾಗಿದೆ ಎನ್ನಲಾಗಿದೆ.

ವಿಶ್ವವಾಣಿ

ಸಂಪಾದಕೀಯ

ಆನಂದದ ಸೆಲೆಯೊಂದು ಜಿನುಗಲಿ

ನೋಡನೋಡುತ್ತಿದ್ದಂತೆ 2025ನೇ ವರ್ಷ ಮುಗಿದೇ ಹೋಗಿದೆ. ಈ ವರ್ಷದ ಕಡೆಯ ದಿನಕ್ಕೆ ವಿದಾಯ ಹೇಳಿ 2026ರ ಮೊದಲ ದಿನದಲ್ಲಿ ನಾವಿಂದು ನಿಂತಿದ್ದೇವೆ. ಭಾರತೀಯರಿಗೆ ಇದು ಹೊಸ ವರ್ಷವಲ್ಲ, ಪಾಶ್ಚಾತ್ಯರಿಗೆ ಮಾತ್ರ ಹೊಸವರ್ಷ, ಇದನ್ನು ನಾವೇಕೆ ಆಚರಿಸಬೇಕು? ಆಚರಿಸಬೇಕೇ, ಬೇಡವೇ ಎಂಬ ಪ್ರಶ್ನೆಗಳಿಗೆ ನಾವೀಗ ಹೋಗುವುದು ಬೇಡ. ಇಡೀ ಜಗತ್ತು ಹೊಸವರ್ಷದ ಆಗಮನಕ್ಕೆ ಸಜ್ಜಾಗಿರುವಾಗ ಈಗ ವಿವೇಚಿಸಬೇಕಾದ ಹಲವು ಸಂಗತಿಗಳಿವೆ. ಹೊಸ ವರ್ಷಾಚರಣೆ ಯಾವತ್ತೂ ಅತಿರೇಕಕ್ಕೆ ಹೋಗಿ ನಮ್ಮ ಜೀವನದ ನಾಶದವರೆಗೆ ಹೋಗಬಾರದು. ಹೊಸವರ್ಷದಲ್ಲಿ ಹಳೆಯ ತಪ್ಪುಗಳನ್ನು ಮುಂದುವರಿಸಬಾರದು, ನಮ್ಮದೇ ಗುಣಮಟ್ಟವನ್ನು ವೃದ್ಧಿಸಿಕೊಳ್ಳಬೇಕು. ಹೊಸ ಸಂಬಂಧಗಳನ್ನು ಶುರು ಮಾಡುವುದು ಎಷ್ಟು ಮುಖ್ಯವೋ ಸಂಬಂಧಗಳನ್ನು ಅಷ್ಟೇ ಹದವಾಗಿ ಕಾಪಾಡಿಕೊಳ್ಳುವುದು ಅಗತ್ಯ. ಬೆಲೆಯೇರಿಕೆ ನಮ್ಮ ಕೈಗೆ ಸಿಗದೆ ಓಡುತ್ತಿದೆ. ಅದಕ್ಕೆ ತಕ್ಕಂತೆ ಹಣ ಗಳಿಸಲು ಸಾಧ್ಯವಾಗದೇ ಪರದಾಡುವ ದೊಡ್ಡ ವರ್ಗ ಭಾರತದಲ್ಲಿದೆ. ಮಕ್ಕಳ ಶಿಕ್ಷಣ, ಕುಟುಂಬದ ಆರೋಗ್ಯವನ್ನು ನಿಭಾಯಿಸುವುದು ಒಂದು ಸಂಸಾರಕ್ಕೆ ಜೀವಮಾನದ ಕಷ್ಟವಾಗಿದೆ. ಇದರ ಜೊತೆಗೆ ಸ್ವಂತಕ್ಕೊಂದು ಮನೆ ಕಟ್ಟಿಕೊಂಡರೆ ಆ ಸಾಲ ತೀರಿಸುವ ಚಿಂತೆಯಲ್ಲೇ ಬದುಕು ಮುಗಿದುಹೋಗುತ್ತದೆ. ಇವೆಲ್ಲ ಪ್ರತಿವರ್ಷ ಜನರನ್ನು ಬಾಧಿಸುವ ಸಮಸ್ಯೆಗಳು. ಇವನ್ನೆಲ್ಲ ಮೀರಿಯೂ ಜೀವನದಲ್ಲಿ ಉತ್ಸಾಹ, ಸಂತೋಷಗಳನ್ನು ಕಂಡುಕೊಳ್ಳಬೇಕು. ಇವನ್ನೆಲ್ಲ ಹೊರಗಿನ ಜಗತ್ತಿನಿಂದ ಪಡೆದುಕೊಳ್ಳಲು ಸಾಧ್ಯವೇ ಇಲ್ಲ. ನಮ್ಮನ್ನು ನಾವೇ ಅರ್ಥ ಮಾಡಿಕೊಳ್ಳುವ ಮೂಲಕ ಆನಂದದ ಸೆಲೆಯನ್ನು ಪತ್ತೆಹಚ್ಚಬಹುದು. ಅಂತಹದ್ದೊಂದು ನಿರಂತರ ಆನಂದದ ಸೆಲೆ ಎಲ್ಲರಿಗೂ ಸಿಗಲಿ ಎನ್ನುವುದು ನಮ್ಮ ಹಾರೈಕೆ.

ಸೊಂಪಾದಕೀಯ

26ಕ್ಕೇರಿದ ಕ್ಯಾಲೆಂಡರ್

ಪ್ರತಿವರ್ಷದಂತೆ ಈ ವರ್ಷ ಕೂಡಾ ಹೊಸ ವರ್ಷ ಬಂದಿದೆ ಅಂದ್ರೆ ಅದು ತಮಾಷೆಯ ಮಾತಾಗುತ್ತೆ. ಆದರೂ ಪ್ರಾಕ್ಟಿಕಲ್ ಆಗಿ ಹೊಚ್ಚ ಹೊಸತು, ಇದೀಗ ಬಂದಿದೆ ಎನ್ನುವಂತೆ ಮತ್ತೊಂದು ಹೊಸ ವರ್ಷ ತೆರೆದುಕೊಳ್ಳುತ್ತಿದೆ. ನಮ್ಮೆಲ್ಲರ ಕ್ಯಾಲೆಂಡರ್‌ನ ವರ್ಷದ ಕಾಲಂನಲ್ಲಿ ಇನ್ನು ಮುಂದೆ ಹೊಸ ಅಂಕೆ ಕಾಣಬರುತ್ತದೆ. 2026 ಎಂಬ ಹೊಸ ಲೋಕಕ್ಕೆ ಸಿದ್ಧವಾಗುತ್ತಿದ್ದೇವೆ. ಹೊಸ ಲೋಕದ ಜೊತೆ ಎಂದಿನಂತೆ ಹೊಸ ಲೆಕ್ಕಾಚಾರಗಳೂ ತೆರೆದುಕೊಳ್ಳುತ್ತವೆ. ಏನೇ ನಿರಾಶಾವಾದಿ ಆದ್ರೂ, ಈ ವರ್ಷನಾದ್ರೂ...ಅಂತ ಅವನ ಹೊಸ ಆಸೆಗಳು ಮತ್ತೆ ಗರಿಗೆದರುತ್ತವೆ. ಇಷ್ಟು ವರ್ಷಗಳ ಸೋಲು ಈ ಹೊಸ ವರ್ಷದ ನೆಪದಲ್ಲಿ ಮರೆತು ಹೋಗುತ್ತದೆ. ಈ ಹೊಸ ವರ್ಷ ಪ್ರಾಕ್ಟಿಕಲ್ ಆಗಿ ಏನೂ ಬದಲಾವಣೆ ಮಾಡದಿದ್ದರೂ ಮನುಷ್ಯನ ಮನಸ್ಸಿನಲ್ಲಿ ಒಂದು ಹೊಸ ಹುರುಪು ಹುಟ್ಟು ಹಾಕೋ ಶಕ್ತಿ ಅಂತೂ ಈ ಹೊಸ ಕ್ಯಾಲೆಂಡರ್‌ಗೆ ಇರುತ್ತದೆ. ಕಳೆದ ವರ್ಷದ 12 ತಿಂಗಳು, 365 ದಿನಗಳು ಕಳೆದು ಹೋಗಿದ್ದೇ ಗೊತ್ತಾಗಿರುವುದಿಲ್ಲ. ಈ ವರ್ಷದ ಕ್ಯಾಲೆಂಡರ್‌ನಲ್ಲೂ ಅವೇ 12 ತಿಂಗಳುಗಳು, 365 ದಿನಗಳೇ ಇರುತ್ತವೆ. ಆದರೂ ಈ ವರ್ಷ ಗುಂಡು ಹಾಕೋದು ಬಿಡ್ತೀನಿ, ಸಿಗರೇಟ್ ಬಿಡ್ತೀನಿ ಎನ್ನುವ ರೆಸಲ್ಯೂಷನ್‌ಗಳು, ಈ ವರ್ಷ ಅವಳನ್ನ ಮರೆತು ಬಿಡ್ತೀನಿ ಅಂತ ಪರ ಪರ ಎದೆ ಕೆರೆದುಕೊಳ್ಳುವ ನಿರ್ಧಾರಗಳು ತೆರೆದುಕೊಳ್ಳುವ ಹೊತ್ತು. ಇದರ ಜೊತೆಗೆ ಈ ವರ್ಷ ಬ್ಯುಸಿನೆಸ್ ಮಾಡ್ತೀನಿ, ಮದುವೆ ಆಗ್ತೀನಿ, ಸಿನಿಮಾ ಮಾಡ್ತೀನಿ ಅಂತ ಬದುಕಿನ ಜವಾಬ್ದಾರಿಗಳಿಗೂ ಈ ರೆಸಲ್ಯೂಷನ್ ಕಾಲಂನಲ್ಲಿ ಜಾಗ ಉಂಟು. ಈ ಕೆರಿಯರ್ ಓರಿಯೆಂಟೆಡ್ ಕನಸುಗಳು ಅಲ್ಟ್ರಾ ಎಚ್‌ಡಿ ರೆಸಲ್ಯೂಷನ್‌ನಲ್ಲಿ, ಡಾಲ್ಬಿ ಅಟ್ಮಾಸ್ ಸೌಂಡಿನೊಂದಿಗೆ 7.1 ಸರೌಂಡ್ ಸೌಂಡ್‌ನೊಂದಿಗೆ ನಮ್ಮ ಕಣ್ಣ ಮುಂದೆ ಕುಣಿದಾಡುತ್ತವೆ, ಕಿವಿಯಲ್ಲಿ ಗುಯ್ ಗುಡುತ್ತಿರುತ್ತವೆ. ಎಲ್ಲರ ಅಂತಹ ಕನಸುಗಳು ಈ ವರ್ಷವಾದರೂ ಈಡೇರಲಿ ಎಂಬ ಆಶಯದೊಂದಿಗೆ. ಎಲ್ಲರಿಗೂ ಹೊಸ ವರ್ಷದ ಶುಭಾಶಯಗಳು.

ಸಂಪಾದಕರ ಸದ್ಯಶೋಧನೆ

ಇದೆಂಥ ವಿಚಿತ್ರ ಪರೀಕ್ಷೆ

ಪ್ರತಿದಿನ ದೆಹಲಿ, ಮುಂಬೈ ಮತ್ತು ಬೆಂಗಳೂರಿನಂಥ ಭಾರತದ ಪ್ರಮುಖ ವಿಮಾನ ನಿಲ್ದಾಣಗಳಲ್ಲಿ ಲಕ್ಷಾಂತರ ಪ್ರಯಾಣಿಕರು ತಮ್ಮ ಪ್ರಯಾಣವನ್ನು ಆರಂಭಿಸುತ್ತಾರೆ ಮತ್ತು ಮುಗಿಸುತ್ತಾರೆ. ನಾವೆಲ್ಲರೂ ಸಾಮಾನ್ಯವಾಗಿ ವಿಮಾನದ ಟಿಕೆಟ್ ದರಗಳು, ಸಮಯ ಮತ್ತು ಆರಾಮದಾಯಕ ಆಸನಗಳ ಬಗ್ಗೆ ಚರ್ಚಿಸುತ್ತೇವೆ. ಆದರೆ, ನಮ್ಮ ಸುರಕ್ಷತೆಯನ್ನು ಖಾತ್ರಿಪಡಿಸುವಲ್ಲಿ ದಶಕಗಳಿಂದಲೂ ಒಂದು ವಿಚಿತ್ರವೆನ್ನಿಸುವ ಆದರೆ ಅತ್ಯಂತ ನಿರ್ಣಾಯಕವಾದ ಪ್ರಕ್ರಿಯೆಯೊಂದು ತೆರೆಮರೆಯಲ್ಲಿ ನಡೆಯುತ್ತಿದೆ ಎಂಬುದು ಬಹುತೇಕರಿಗೆ ತಿಳಿದಿರಲಿಕ್ಕಿಲ್ಲ . ಆ ಪ್ರಕ್ರಿಯೆಯೇ ಜೆಟ್ ಎಂಜಿನ್‌ಗಳ ಮೇಲೆ 'ಸತ್ತ ಕೋಳಿಗಳನ್ನು' ವಿಶೇಷ ಫಿರಂಗಿಯ ಮೂಲಕ ಹಾರಿಸುವುದು! ಕೇಳಲು ಇದು ತಮಾಷೆಯಾಗಿ ಅಥವಾ ಕಟ್ಟುಕತೆಯಂತೆ ಅನಿಸಬಹುದು. ಆದರೆ ಇದು ಜಾಗತಿಕ ವಿಮಾನಯಾನ ಸುರಕ್ಷತೆಯ ಒಂದು ಅವಿಭಾಜ್ಯ ಅಂಗ. ಇದನ್ನು ತಾಂತ್ರಿಕವಾಗಿ 'ಬರ್ಡ್ ಸ್ಟ್ರೈಕ್ ಸಿಮ್ಯುಲೇಶನ್' ಎಂದು ಕರೆಯಲಾಗುತ್ತದೆ. ವಿಮಾನ ಹಾರಾಟದ ಸಮಯದಲ್ಲಿ ಹಕ್ಕಿಗಳು ಅಪ್ಪಳಿಸಿದರೆ ಏನಾಗುತ್ತದೆ ಎಂಬುದನ್ನು ಪರೀಕ್ಷಿಸಲು ಮತ್ತು ಪ್ರಯಾಣಿಕರ ಪ್ರಾಣಕ್ಕೆ ಅಪಾಯವಾಗದಂತೆ ನೋಡಿಕೊಳ್ಳಲು ಈ ಪರೀಕ್ಷೆ ಅತ್ಯಗತ್ಯ. ಏನಿದು 'ಬರ್ಡ್ ಸ್ಟ್ರೈಕ್' ಅಥವಾ ಪಕ್ಷಿ ಅಪ್ಪಳಿಸುವಿಕೆ? ವಿಮಾನವೊಂದು ಟೇಕಾಫ್ ಅಥವಾ ಲ್ಯಾಂಡಿಂಗ್ ಪ್ರಕ್ರಿಯೆಯಲ್ಲಿದ್ದಾಗ, ಅದು ಭೂಮಿಗೆ ಹತ್ತಿರದಲ್ಲಿರುತ್ತದೆ. ಈ ಸಮಯದಲ್ಲಿ ಆಕಾಶದಲ್ಲಿ ಹಾರಾಡುವ ಪಕ್ಷಿಗಳು ವಿಮಾನಕ್ಕೆ ಡಿಕ್ಕಿ ಹೊಡೆಯುವ ಸಾಧ್ಯತೆ ಅತಿ ಹೆಚ್ಚು. ಒಂದು ಸಣ್ಣ ಪಕ್ಷಿ ಬೃಹತ್ ವಿಮಾನಕ್ಕೆ ಏನು ಹಾನಿ ಮಾಡಬಲ್ಲದು ಎಂದು ನೀವು ಯೋಚಿಸಬಹುದು. ಆದರೆ ವಿಜ್ಞಾನವು ಬೇರೆಯೇ ಕಥೆಯನ್ನು ಹೇಳುತ್ತದೆ. ವಿಮಾನವು ಗಂಟೆಗೆ ಸುಮಾರು 300ರಿಂದ 800 ಕಿಮೀ ವೇಗದಲ್ಲಿ ಚಲಿಸುತ್ತಿರುತ್ತದೆ. ಭೌತಶಾಸ್ತ್ರದ ಪ್ರಕಾರ, ವೇಗ ಹೆಚ್ಚಾದಂತೆ ವಸ್ತುವಿನ ಅಪ್ಪಳಿಸುವಿಕೆಯ ಶಕ್ತಿ ಅಗಾಧವಾಗಿ ಹೆಚ್ಚುತ್ತದೆ. ಕೇವಲ ಎರಡು ಕೆಜಿ ತೂಕದ ಒಂದು ಹಕ್ಕಿ, ವೇಗವಾಗಿ ಚಲಿಸುವ ಜೆಟ್ ಎಂಜಿನ್‌ಗೆ ಅಪ್ಪಳಿಸಿದಾಗ, ಅದು ಹಲವು ಟನ್ ತೂಕದ ಸುತ್ತಿಗೆಯಿಂದ ಹೊಡೆದಷ್ಟೇ ಬಲವನ್ನು ಉಂಟುಮಾಡುತ್ತದೆ. ಈ ಘಟನೆಯನ್ನೇ 'ಬರ್ಡ್ ಸ್ಟ್ರೈಕ್' ಎನ್ನಲಾಗುತ್ತದೆ. ಇದು ವಿಮಾನದ ಎಂಜಿನ್ ಅನ್ನು ಸಂಪೂರ್ಣವಾಗಿ ನಾಶಮಾಡಬಲ್ಲದು ಅಥವಾ ಕಾಕ್ಪಿಟ್‌ನ ಗಾಜನ್ನು ಒಡೆದು ಪೈಲಟ್‌ಗಳಿಗೆ ಗಾಯವನ್ನುಂಟು ಮಾಡಬಲ್ಲದು. ಕೋಳಿಗಳನ್ನು ಬಳಸುವ ಆಲೋಚನೆ ಬಂದಿದ್ದು ಹೇಗೆ? ಈ ವಿಶಿಷ್ಟ ಪರೀಕ್ಷಾ ವಿಧಾನದ ಮೂಲವು 1950ರ ದಶಕದಷ್ಟು ಹಿಂದಕ್ಕೆ ಹೋಗುತ್ತದೆ. ಬ್ರಿಟಿಷ್ ಏರೋಸ್ಪೇಸ್ ಕಂಪನಿಯಾದ 'ಡಿ ಹ್ಯಾವಿಲ್ಯಾಂಡ್' ಈ ಪದ್ಧತಿಯನ್ನು ಹುಟ್ಟುಹಾಕಿತು ಎಂದು ಹೇಳಲಾಗುತ್ತದೆ. ಆ ಕಾಲದಲ್ಲಿ ಜೆಟ್ ಎಂಜಿನ್‌ಗಳ ಬಳಕೆ ಹೆಚ್ಚಾಗತೊಡಗಿತ್ತು ಮತ್ತು ವಿಮಾನಗಳ ವೇಗವೂ ಹೆಚ್ಚಾಗಿತ್ತು. ಇದರೊಂದಿಗೆ ಪಕ್ಷಿಗಳು ವಿಮಾನಕ್ಕೆ ಅಪ್ಪಳಿಸಿ ಅಪಘಾತಗಳು ಸಂಭವಿಸುವ ಭೀತಿಯೂ ಹೆಚ್ಚಾಯಿತು. ಇಂಜಿನಿಯರ್‌ಗಳಿಗೆ ಒಂದು ದೊಡ್ಡ ಸವಾಲು ಎದುರಾಯಿತು: ನೆಲದ ಮೇಲೆ ನಿಂತು, ಆಕಾಶದಲ್ಲಿ ನಡೆಯುವ ಈ ಭಯಾನಕ ಅಪಘಾತವನ್ನು ಕೃತಕವಾಗಿ ಸೃಷ್ಟಿಸಿ ಪರೀಕ್ಷಿಸುವುದು ಹೇಗೆ? ಇದಕ್ಕೆ ಅವರು ಕಂಡುಕೊಂಡ ಪರಿಹಾರವೇ 'ಚಿಕನ್ ಗನ್'. ಇದೊಂದು ದೊಡ್ಡ ಸಂಕುಚಿತ ಗಾಳಿಯ ಫಿರಂಗಿ (Compressed-air cannon). ಸಾಮಾನ್ಯ ಪಕ್ಷಿಗಳ ತೂಕ ಮತ್ತು ಸಾಂದ್ರತೆಯನ್ನು ಹೋಲುವ ವಸ್ತುವೆಂದರೆ ಅದು ಕೋಳಿ. ಆದ್ದರಿಂದ, ಅವರು ಸತ್ತ ಕೋಳಿಗಳನ್ನು ಈ ಫಿರಂಗಿಯಲ್ಲಿ ತುಂಬಿಸಿ, ವಿಮಾನದ ವೇಗಕ್ಕೆ ಸಮನಾದ ವೇಗದಲ್ಲಿ ಎಂಜಿನ್‌ಗಳ ಮೇಲೆ ಹಾರಿಸಲು ಪ್ರಾರಂಭಿಸಿದರು. ಪರೀಕ್ಷಾ ಪ್ರಕ್ರಿಯೆ ಹೇಗಿರುತ್ತದೆ? ಇಂದು ಯಾವುದೇ ಹೊಸ ವಿಮಾನ ಎಂಜಿನ್ ಅಥವಾ ವಿಮಾನದ ಮಾದರಿಯನ್ನು ವಾಣಿಜ್ಯ ಬಳಕೆಗೆ ಅನುಮೋದಿಸುವ ಮೊದಲು, ಅದು ಕಡ್ಡಾಯವಾಗಿ ಈ ಪರೀಕ್ಷೆಯಲ್ಲಿ ಉತ್ತೀರ್ಣವಾಗಲೇಬೇಕು. ಈ ಪ್ರಕ್ರಿಯೆಯು ಅತ್ಯಂತ ಕರಾರುವಾಕ್ಕಾಗಿರುತ್ತದೆ. ಪರೀಕ್ಷೆಗೆ ಬಳಸುವ ಕೋಳಿಗಳು ಕಾಯಿಲೆಯಿಂದ ಸತ್ತವುಗಳಲ್ಲ, ಬದಲಿಗೆ ಮಾರುಕಟ್ಟೆಯಲ್ಲಿ ದೊರೆಯುವ ಉತ್ತಮ ಗುಣಮಟ್ಟದ ಕೋಳಿಗಳಾಗಿರುತ್ತವೆ. ಅವುಗಳ ತೂಕ ನಿಗದಿತ ಪ್ರಮಾಣದಲ್ಲಿರಬೇಕು (ಸಾಮಾನ್ಯವಾಗಿ ಒಂದರಿಂದ ನಾಲ್ಕು ಕೆಜಿ). ಫಿರಂಗಿ ಇದೆಯಲ್ಲ, ಇದೊಂದು ಉದ್ದನೆಯ ಬ್ಯಾರೆಲ್ ಉಳ್ಳ ಬಂದೂಕಿನಂತಹ ಯಂತ್ರ. ಸಂಕುಚಿತ ಗಾಳಿಯನ್ನು ಬಳಸಿ ಇದು ಕೋಳಿಯನ್ನು ಗಂಟೆಗೆ 400-600 ಕಿಮೀ ವೇಗದಲ್ಲಿ ಹಾರಿಸಬಲ್ಲದು. ತಿರುಗುತ್ತಿರುವ ಜೆಟ್ ಎಂಜಿನ್‌ನ ಫ್ಯಾನ್ ಬ್ಲೇಡ್‌ಗಳಿಗೆ ನೇರವಾಗಿ ಅಥವಾ ವಿಮಾನದ ಮುಂಭಾಗದ ಗಾಜಿಗೆ ಗುರಿ ಇಡಲಾಗುತ್ತದೆ. ಹಕ್ಕಿ ಅಪ್ಪಳಿಸಿದಾಗ ಎಂಜಿನ್ ಮುಂಭಾಗದ ಬ್ಲೇಡ್‌ಗಳು ಮುರಿಯಬಹುದು.

'ಸ್ನಾಕ್' ಸವಿಯುತ್ತಾ, ಹೊಸವರ್ಷಕ್ಕೆ ಕಾಲಿಡೋಣ !

ನೂರೆಂಟು ವಿಶ್ವ

ವಿಶ್ವೇಶ್ವರ ಭಟ್

vbhat@me.com

ನಾನು ಪ್ರತಿನಿತ್ಯ ನಮ್ಮ ಓದುಗರು ಕೇಳುವ ಹತ್ತು ಪ್ರಶ್ನೆಗಳಿಗೆ 'ಭಟ್ಟರ ಸ್ನಾಕ್' ಅಂಕಣದಲ್ಲಿ ಉತ್ತರಿಸುತ್ತೇನೆ. ಓದುಗರಂತೆ ಅವರ ಪ್ರಶ್ನೆಗಳೂ ಚಿತ್ರ-ವಿಚಿತ್ರವಾಗಿರುತ್ತವೆ. ತಮ್ಮ ಹೆಸರು ಪತ್ರಿಕೆಯಲ್ಲಿ ಪ್ರಕಟವಾಗಬೇಕು ಎಂಬ ಆಶಯದಂತೆ, ಅವರ ಮನಸ್ಸಿನಲ್ಲಿ ಹೊಳೆಯುವ ತರಲೆ, ಕುಚೋದ್ಯ, ತಮಾಷೆಯ ಪ್ರಶ್ನೆಗಳಿಗೆ ನನ್ನಿಂದ ಉತ್ತರ ಪಡೆಯುವ, ಕಾಲೆಳೆಯುವ, ಒಂದಷ್ಟು ಖುಷಿ ಪಡುವ, ಹಂಚುವ ಆಶಯವಿರುತ್ತದೆ. ಆ ಅಂಕಣಕ್ಕೆ ಅದಕ್ಕಿಂತ ಹೆಚ್ಚಿನ ಯಾವ ಉದ್ದೇಶವಾಗಲಿ, ದುರುದ್ದೇಶವಾಗಲಿ ಇಲ್ಲ. ನಮ್ಮ ಪತ್ರಿಕೆಯ ಸಂಪಾದಕೀಯ ಪುಟ ತುಸು ಭಾರ. ಎರಡು ಪೂರ್ತಿ ಪುಟಗಳಲ್ಲಿ ಭರ್ಜರಿ ಅಂಕಣ, ಲೇಖನಗಳಿರುವಾಗ, ಲೈಟ್ ರೀಡಿಂಗ್ ಇರಲಿ ಎಂದು 'ಭಟ್ಟರ ಸ್ನಾಕ್' ಬರೆಯಲಾಗುತ್ತದೆ. ವಾಸ್ತವವಾಗಿ, ಈ ಅಂಕಣದ ಜನಪ್ರಿಯತೆಗೆ ಅದಕ್ಕೆ ಪ್ರಶ್ನೆ ಕೇಳುವ ಓದುಗರೇ ಕಾರಣ. ಅವರ ಪ್ರಶ್ನೆ ಚುರುಕು, ತರಲೆ, ಚೋದ್ಯ, ವ್ಯಂಗ್ಯವಿದ್ದಷ್ಟೂ ಉತ್ತರ ನೀಡಲು ಒಂಥರಾ ಕಿಕ್ ಬರುತ್ತದೆ. 'ಸ್ನಾಕ್'ಗೆ 'ಕಿಕ್' ಇಲ್ಲದಿದ್ದರೆ ಹೇಗೆ? ಅದಕ್ಕೆ ಕೆಲವರು ಇದು ಸ್ನಾಕೋ, ಐಸ್‌ಕ್ರೀಮೋ ಎಂದು ಕೇಳುವುದುಂಟು. ಇದೊಂದು ಶುದ್ಧ ಟೈಮ್‌ಪಾಸ್ ಕಳ್ಳೇಕಾಯಿ!

ನಾನು ಕಳೆದ ಹನ್ನೊಂದು ವರ್ಷಗಳ ಅವಧಿಯಲ್ಲಿ ದಿನಕ್ಕೆ ಹತ್ತು ಪ್ರಶ್ನೆಗಳಿಗೆ ಉತ್ತರಿಸುತ್ತಾ ಬಂದಿದ್ದೇನೆ. ಹೀಗೆ ಉತ್ತರಿಸಿದ್ದೇ ಸುಮಾರು ಮೂವತ್ತೊಂದು ಸಾವಿರ ಆಗಿದೆ ಎಂದು ಇತ್ತೀಚೆಗೆ ಸ್ನೇಹಿತರಾದ ಕಿರಣ್ ಹೇಳಿದಾಗಲೇ ನನಗೆ ಅದರ 'ವಾಲ್ಯೂಮ್' ಅರಿವಿಗೆ ಬಂದಿದ್ದು. ಇಲ್ಲಿ ತನಕ ನೀವು 'ಭಟ್ಟರ ಸ್ನಾಕ್' ಅಂಕಣದಲ್ಲಿ ಪ್ರಕಟವಾದ ಪ್ರಶ್ನೋತ್ತರಗಳನ್ನು ಸೇರಿಸಿದರೆ, ಇನ್ನೂರು ಪುಟಗಳ ಹದಿನೈದು ಪುಸ್ತಕಗಳಾಗಬಹುದು ಎಂಬ ಸಣ್ಣ ಲೆಕ್ಕವನ್ನೂ ಅವರೇ ನೀಡಿದರು. ಆ ಪೈಕಿ ವೀರಪ್ಪ ಮೊಯಿಲಿ ಮತ್ತು ಕುಮಾರಸ್ವಾಮಿಯವರ ಬಗ್ಗೆ ಬರೆದಿದ್ದನ್ನು ಸೇರಿಸಿದರೇ ಎರಡು ಪ್ರತ್ಯೇಕ ಪುಸ್ತಕವಾದೀತು ಎಂದು ಹೇಳಿದ್ದು ಅವರೇ. ಈ ಮೂವತ್ತೊಂದು ಸಾವಿರ ಪ್ಲಸ್ ಪ್ರಶ್ನೋತ್ತರಗಳ ಪೈಕಿ ಆಯ್ದ ಹತ್ತು ಪ್ರಶ್ನೋತ್ತರಗಳನ್ನು ಹೇಳಿ ಅಂದ್ರೆ, ನನಗೆ ಸಾಧ್ಯವಿಲ್ಲ. ಅಸಲಿಗೆ ನಿನ್ನೆ ಬರೆದ ಉತ್ತರಗಳೇ ನೆನಪಿರುವುದಿಲ್ಲ. ಆ ಕ್ಷಣಕ್ಕೆ ಹೊಳೆದ ಉತ್ತರ ನೀಡಿ ನಾನು ಮರೆತುಬಿಡುತ್ತೇನೆ. ಓದುಗರೇ ನೆನಪಿಟ್ಟುಕೊಂಡು ಆಗಾಗ ನನಗೆ ಹೇಳುವುದುಂಟು.

ಮೊನ್ನೆ ದಿಲ್ಲಿ ವಿಮಾನ ನಿಲ್ದಾಣದಲ್ಲಿ ಭೇಟಿಯಾದ ಓದುಗರೊಬ್ಬಳು, 'ಭಟ್ಟರ ಸ್ನಾಕ್'ನಲ್ಲಿ ಪ್ರಕಟವಾದ, ಅವರಿಗೆ ಇಷ್ಟವಾದ ಆರೇಳು ಪ್ರಶ್ನೋತ್ತರಗಳನ್ನು ಪಟಪಟನೆ ಹೇಳಿ ಅಚ್ಚರಿ ಮೂಡಿಸಿದರು. ಅವ್ಯಾವವೂ ನನಗೇ ನೆನಪಿರಲಿಲ್ಲ. 'ಭಟ್ರೇ, ನಿಮಗೆ ಯಾರೋ ಜನಪ್ರಿಯತೆ ಅಂದ್ರೆ, ಏನು ಅಂತ ಕೇಳಿದ್ದರು. ಅದಕ್ಕೆ ನೀವು ಕೊಟ್ಟ ಉತ್ತರ ನನಗೆ ಬಹಳ ಖುಷಿ ಕೊಟ್ಟಿತ್ತು' ಎಂದರು. 'ನಾನೇನು ಉತ್ತರ ಕೊಟ್ಟಿದ್ದೆ ಹೇಳಿ' ಎಂದೆ. ಅದಕ್ಕೆ ಅವರು. 'ಜನಪ್ರಿಯತೆ ಅಂದ್ರೆ ಅದು ಗಾಳಿಯಲ್ಲಿ ಕಟ್ಟಿದ ಗೋಪುರ, ಯಾರೋ ಒಬ್ಬರು ಜೋರಾಗಿ ಸೀನಿದರೂ ಬಿದ್ದುಹೋಗಬಹುದು ಎಂದು ಉತ್ತರಿಸಿದ್ದಿರಿ' ಎಂದರು. ಹಾಗೆ ಅವರು ಹೇಳಿದ ಇನ್ನೊಂದು ಪ್ರಶ್ನೆ- 'ಭಟ್ರೇ, ನಿಮ್ಮ ಪ್ರಕಾರ ಸ್ವರ್ಗ ಎಲ್ಲಿದೆ? ಅದಕ್ಕೆ ನಾನು ನೀಡಿದ ಉತ್ತರ - 'ತೆರಿಗೆ ಪಾವತಿಸಿದ ನಂತರ ಮನುಷ್ಯನ ಜೇಬಿನಲ್ಲಿ ಉಳಿಯುವ ಹಣದಲ್ಲಿದೆ'!.

'ಇನ್ನೊಂದು ಹೇಳಲಾ?' ಎಂದು ಕೇಳಿದರು. 'ಖಂಡಿತವಾಗಿಯೂ ಹೇಳಿ' ಅಂದೆ. 'ಜೀವನದ ಗುರಿ ಯಾವುದಾಗಿರಬೇಕು?' ಎಂಬ ಪ್ರಶ್ನೆಗೆ ನೀವು, 'ಬೇರೆಯವರ ಜೇಬಿಗೆ ಕೈಹಾಕದೇ ನಿಮ್ಮ ಜೇಬನ್ನು ತುಂಬಿಸಿಕೊಳ್ಳುವುದು ಮತ್ತು ಬೇರೆಯವರ ನಿದ್ದೆಗೆಡಿಸದೇ ನೀವು ಶಾಂತವಾಗಿ ನಿದ್ರೆ ಮಾಡುವುದು!' ಎಂದು ಉತ್ತರಿಸಿದ್ದಿರಿ ಎಂದರು. ಅವರು ಇನ್ನೂ ಕೆಲವು ಪ್ರಶ್ನೋತ್ತರಗಳನ್ನು ಹೇಳಿದರು. ಈಗ ನನಗೆ ಅವು ನೆನಪಾಗುತ್ತಿಲ್ಲ. 'ಭಟ್ಟರ ಸ್ನಾಕ್' ಪ್ರಶ್ನೋತ್ತರಗಳೆಂದರೆ, ಪಾತರಗಿತ್ತಿ ಇದ್ದಂತೆ. ಪಾತರಗಿತ್ತಿಯಂತೆ ಸುಂದರ, ವೈವಿಧ್ಯಮಯ. ಹಾಗೆಂದು ಅವುಗಳನ್ನು ಹಿಡಿಯಲು ಹೋದರೆ ಕೈಗೆ ಸಿಗುವುದಿಲ್ಲ. ಅದೇನು ನಿತ್ಯವೂ ಓದಲೇಬೇಕು ಅಂತೇನೂ ಇಲ್ಲ. ಓದದಿದ್ದರೆ ಕಳೆದುಕೊಳ್ಳುವುದೇನಿಲ್ಲ. ಊಟವಾದ ಮೇಲೆ ಎಲೆ-ಅಡಕೆ ಹಾಕಿದ ಹಾಗೆ, ಲವಂಗ-ಬಡೇಸೊಪ್ಪು ಬಾಯಲ್ಲಿಟ್ಟುಕೊಂಡಂತೆ. ಅದಕ್ಕಿಂತ ಹೆಚ್ಚೂ ಅಲ್ಲ, ಕಮ್ಮಿಯೂ ಅಲ್ಲ. ಹೆಚ್ಚೆಂದರೆ, ಬಾಳೆಎಲೆ ತುದಿಯಲ್ಲಿರುವ ಉಪ್ಪು-ಉಪ್ಪಿನಕಾಯಿ ಇದ್ದಂತೆ ಎಂದು ಹೇಳಬಹುದು. ಅವಿಲ್ಲದೆಯೂ ಊಟ ಮಾಡಬಹುದಲ್ಲ?

'ಭಟ್ಟರ ಸ್ನಾಕ್' ಬರೆಯುವಾಗ ನನ್ನಲ್ಲಿ ಯಾವ ಅಜೆಂಡಾಗಳಾಗಲಿ, ಸ್ಕೀಮುಗಳಾಗಲಿ, ದ್ವೇಷ-ಮತ್ಸರವಾಗಲಿ, settling scores ಅಂತಾರಲ್ಲ ಅದಾಗಲಿ, ಯಾವುವೂ ಇರುವುದಿಲ್ಲ. ಹೆಚ್ಚೆಂದರೆ ಆಗಾಗ ಸುಮ್ಮನೆ ಕಾಲೆಳೆದಿರಬಹುದು, ಕಿಚಾಯಿಸಿರಬಹುದು. ಅದನ್ನೇ ಬೇರೆ ರೀತಿಯಲ್ಲಿ ಭಾವಿಸಿದರೆ ನಾನು ನಿರುತ್ತರ. ನಾನು ಯಾರ ಕುರಿತು ಬರೆದಿದ್ದೇನೋ, ಮರುದಿನ ಅವರೇ ಎದುರಾದಾಗ, ನಮ್ಮ ಸ್ನೇಹಕ್ಕೆ ಕುಂದುಂಟಾಗಬಾರದು. ಆ ರೀತಿಯ ಅನೇಕ ಅನುಭವಗಳು ನನಗೆ ಆಗಿವೆ. ಹೆಸರು ಹೇಳಲು ಇಚ್ಛಿಸದ ನನ್ನ ಆತ್ಮೀಯ ಸ್ನೇಹಿತ ಮತ್ತು ಅವನ ಗರ್ಲ್‌ಫ್ರೆಂಡ್ ಬ್ರೇಕಪ್ ಆಗಿತ್ತು. ಆತ ಬಹಳ ಖಿನ್ನಮನಸ್ಕನಾಗಿದ್ದ. ಊಟ-ತಿಂಡಿ ಸೇರೊಲ್ಲ ಅಂತ ಬೇಸರದಲ್ಲಿದ್ದ. ಈ ವಿಷಯವನ್ನು ನಮ್ಮಿಬ್ಬರಿಗೂ ಆತ್ಮೀಯನಾದ ಮತ್ತೊಬ್ಬ ಸ್ನೇಹಿತ ನನಗೆ ತಿಳಿಸಿದ. ಅಷ್ಟೇ ಅಲ್ಲ, ಆತನೇ ಒಂದು ಪ್ರಶ್ನೆ ಹಾಕಿ, 'ಇದಕ್ಕೆ ಭಟ್ಟರ ಸ್ನಾಕ್ ಅಂಕಣದಲ್ಲಿ ಉತ್ತರಿಸಿ' ಎಂಬ ಸಲಹೆಯನ್ನೂ ಕೊಟ್ಟ. ಪ್ರಶ್ನೆ ಏನಂದರೆ - 'ನನ್ನ ಗರ್ಲ್ ಫ್ರೆಂಡ್ ನನ್ನನ್ನು ಬಿಟ್ಟು ಹೋಗಿದ್ದಾಳೆ, ನಾನು ಈಗ ಏನು ಮಾಡಲಿ?'. ಅದಕ್ಕೆ ನಾನು ನೀಡಿದ ಉತ್ತರ - 'ಅಯ್ಯಾ, ಲಾಟರಿ ಹೊಡೆಯದಿದ್ದಾಗ ಯಾರಾದರೂ ಅಳುತ್ತಾರೆಯೇ? ಇನ್ನೊಂದು ಟಿಕೆಟ್ ಖರೀದಿಸುತ್ತಾರೆ ಅಷ್ಟೇ! ಲಾಟರಿ ಅಂಗಡಿ ಎಲ್ಲಿದೆ ನೋಡು' ಎಂದು ಉತ್ತರಿಸಿದ್ದೆ. ಇದನ್ನು ಮರುದಿನ ಅವನಿಗೆ ತೋರಿಸಿದಾಗ, ಆತ ಬಹಳ ಖುಷಿಪಟ್ಟನಂತೆ. ಅದಾಗಿ ಮೂರು ತಿಂಗಳ ನಂತರ ಆತ ಮತ್ತೊಬ್ಬ ಹುಡುಗಿ ಜತೆ ಅಡ್ಡಾಡಲಾರಂಭಿಸಿದ!

ಇದು 'ಭಟ್ಟರ ಸ್ನಾಕ್'. ಅಷ್ಟೇ. ಅದಕ್ಕೆ ಬಹಳ ತರ್ಕ-ಹಿನ್ನೆಲೆ ಇರುವುದಿಲ್ಲ. ಆ ಕ್ಷಣಕ್ಕೆ ಹೊಳೆಯುವ ತಮಾಷೆಯ ಉತ್ತರ ನೀಡುವುದಷ್ಟೇ. ಎಷ್ಟೋ ಸಲ ನಾನು ನನ್ನನ್ನೇ ಗೇಲಿ ಮಾಡಿಕೊಳ್ಳುತ್ತೇನೆ. ಇತ್ತೀಚೆಗೆ ಓದುಗರೊಬ್ಬರು, 'ನಿಮ್ಮ ಮನೆಯಲ್ಲಿ ನಿಮ್ಮ ಮಾತು ನಡೆಯುತ್ತದೆಯೇ?' ಎಂದು ಕೇಳಿದ್ದರು. ಅದಕ್ಕೆ, 'ನಾನು ಹೇಳಿದ ಕೆಲಸವನ್ನು ನಾನು ಒಬ್ಬನೇ ಮಾಡಿಕೊಳ್ಳಬೇಕಾದಾಗ ಮಾತ್ರ ನನ್ನ ಮಾತು ಅಲ್ಲಿ ಚಾಚೂ ತಪ್ಪದೆ ನಡೆಯುತ್ತದೆ' ಎಂದು ಬರೆದಿದ್ದೆ. ಇನ್ನೊಮ್ಮೆ ಓದುಗರೊಬ್ಬರು, 'ನಿಮ್ಮನ್ನು ನೋಡಿದರೆ ನನಗೆ ವಾಕರಿಕೆ ಬರುತ್ತದೆ, ಭಟ್ರೇ' ಎಂದು ಬರೆದಿದ್ದರು. ಅದಕ್ಕೆ ನಾನು ಬರೆದಿದ್ದೆ - 'ಒಳ್ಳೆಯದೇ ಆಯಿತು, ಹೊಟ್ಟೆಯಲ್ಲಿರೋ ಕೊಳೆ ಎಲ್ಲ ಹೊರಗೆ ಬರಲಿ. ನನ್ನ ಪತ್ರಿಕೆಯ ಕೆಲಸವೇ ಅದು, ಜನರ ಹೊಟ್ಟೆಯಲ್ಲಿರುವ ಮತ್ತು ತಲೆಯಲ್ಲಿರುವ ಕೊಳೆಯನ್ನು ಹೊರಹಾಕುವುದು!'. ಇತ್ತೀಚೆಗೆ ಓದುಗರೊಬ್ಬರು, 'ಪತ್ರಿಕೆಯಲ್ಲಿ ಪ್ರಕಟವಾಗುವುದೆಲ್ಲವೂ ಸತ್ಯವಾ?' ಎಂಬ ಪ್ರಶ್ನೆಗೆ, ನಮ್ಮನ್ನೇ ಗೇಲಿ ಮಾಡಿಕೊಳ್ಳುತ್ತಾ ತಮಾಷೆಗೆ, 'ಪತ್ರಿಕೆಯ ಹೆಸರು, ವಾರ ಮತ್ತು ದಿನಾಂಕ ಮಾತ್ರ ಸತ್ಯ' ಇಂದು ಉತ್ತರಿಸಿದ್ದೆ.

ಕೆಲ ದಿನಗಳ ಹಿಂದೆ ಓದುಗರೊಬ್ಬರು, 'ನೀವು ಇಷ್ಟೊಂದು ಜನರನ್ನು ಟೀಕಿಸುತ್ತೀರಲ್ಲ, ನಿಮ್ಮ ಬಗ್ಗೆ ಜನರು ಏನು ಅಂದುಕೊಳ್ಳುತ್ತಾರೆ ಎಂದು ನಿಮಗೆ ಚಿಂತೆಯಿಲ್ಲವೇ?' ಎಂದು ಕೇಳಿದ್ದರು. ಅದಕ್ಕೆ 'ಜನರು ನನ್ನ ಬಗ್ಗೆ ಏನು ಅಂದುಕೊಳ್ಳುತ್ತಾರೆ ಎಂದು ಯೋಚಿಸಲು ಶುರು ಮಾಡಿದರೆ, ನಾನು ಬರೆಯುವುದನ್ನೇ ನಿಲ್ಲಿಸಬೇಕಾಗುತ್ತದೆ. ಅಷ್ಟಕ್ಕೂ, ಜನರು ನನ್ನನ್ನು ಬೈಯ್ಯದಿದ್ದರೆ ನನಗೆ ನಿದ್ದೆಯೇ ಬರುವುದಿಲ್ಲ' ಎಂದಿದ್ದೆ. 'ನಿಮ್ಮ ದೃಷ್ಟಿಯಲ್ಲಿ ಯಶಸ್ವಿ ಸಂಪಾದಕ ಅಂದ್ರೆ ಯಾರು?' ಎಂಬ ಪ್ರಶ್ನೆಗೆ, ನನ್ನ ಉತ್ತರ ಹೀಗಿತ್ತು - 'ಯಾವ ಸಂಪಾದಕನ ವಿರುದ್ಧ ಅತಿ ಹೆಚ್ಚು ಕೋರ್ಟ್ ಕೇಸುಗಳಿರುತ್ತವೋ, ಅವನೇ ಯಶಸ್ವಿ ಸಂಪಾದಕ. ಉಳಿದವರು ಪಂಚಾಂಗದ ಸಂಪಾದಕರಾಗಿರಲು ಲಾಯಕ್ಕು. ನನ್ನ ಮೇಲೆ ನೂರಕ್ಕೂ ಹೆಚ್ಚು ಕೇಸುಗಳಿವೆ.. ಹಾಂ..!'

ಐದಾರು ವರ್ಷಗಳ ಹಿಂದೆ, ಓದುಗರೊಬ್ಬರು ಕೇಳಿದ ಪ್ರಶ್ನೆಗೆ ನಾನು ನೀಡಿದ ಉತ್ತರ ಪ್ರತಿಭಟನೆಗೆ, ಗೇಲಿಗೆ, ಟ್ರೋಲ್ ಗೆ ಕಾರಣವಾಗಿತ್ತು. ಅಷ್ಟೇ ಆಗಿದ್ದರೆ ಪರವಾಗಿರಲಿಲ್ಲ, ಅಷ್ಟಕ್ಕೇ ನನ್ನ ವಿರುದ್ಧ ಕೋರ್ಟ್ ಕೇಸು ಕೂಡ ದಾಖಲಾಯಿತು. ಅಷ್ಟಕ್ಕೆಲ್ಲ ಕಾರಣವಾದ ಆ ಪ್ರಶ್ನೆ ಮತ್ತು ಉತ್ತರವನ್ನು ಹೇಳಬೇಕು. ಓದುಗರೊಬ್ಬರು 'ಭಟ್ರೇ, ಒಂದು ಹಳ್ಳಿ ಮುಂದುವರಿದಿದೆ ಎಂಬುದನ್ನು ಅಳೆಯುವ ಮಾನದಂಡ ಯಾವುದು?' ಎಂದು ಕೇಳಿದ್ದರು. ಅದಕ್ಕೆ ನಾನು ತಮಾಷೆಗೆ, 'ಯಾವ ಹಳ್ಳಿಯ ಹೆಂಗಸರೆಲ್ಲ ಬ್ರಾ ಧರಿಸುತ್ತಾರೋ, ಆ ಹಳ್ಳಿ ಮುಂದುವರಿದಿದೆ ಎಂದು ಹೇಳಬಹುದು' ಎಂದು ಉತ್ತರಿಸಿದ್ದೆ. ಈ ಉತ್ತರ ನೂರಾರು ಮಹಿಳಾಮಣಿಗಳ ಪಿತ್ತವನ್ನು ನೆತ್ತಿಗೇರಿಸಿತ್ತು. ಅಷ್ಟೇ ಸಾಕಾಯಿತು. ಇದೊಂದು ಪ್ರಶ್ನೋತ್ತರವನ್ನು ಇಟ್ಟುಕೊಂಡು ಪ್ರಗತಿಪರ ಲೇಖಕಿಯೊಬ್ಬಳು ರಾಯಚೂರಿನ ನ್ಯಾಯಾಲಯದಲ್ಲಿ ನನ್ನ ವಿರುದ್ಧ ಅಶ್ಲೀಲ, ಸ್ತ್ರೀದ್ವೇಷ, ಹಳ್ಳಿ ಹೆಂಗಸರ ನಿಂದನೆ, ಮಹಿಳೆಯರ ಗೇಲಿ, ಸಾಮಾಜಿಕ ಸ್ವಾಸ್ಥ್ಯಕ್ಕೆ ಭಂಗ... ಹೀಗೆ ಏಳು ಸೆಕ್ಷನ್ ಅಡಿಯಲ್ಲಿ ನನ್ನ ವಿರುದ್ಧ ಕೇಸು ಹಾಕಿದಳು.

ನಾನು ಮೂರು ವರ್ಷಗಳ ಅವಧಿಯಲ್ಲಿ ಏಳೆಂಟು ಬಾರಿ ನ್ಯಾಯಾಲಯಕ್ಕೆ ಅಲೆದೆ. ವಿದೇಶ ಪ್ರವಾಸವೊಂದೇ ಅಲ್ಲ, ನನಗೆ ಕೋರ್ಟಿಗೆ ಅಲೆಯುವುದೂ ಅತ್ಯಂತ ಖುಷಿಯ ವಿಚಾರವೇ. ಇದು ನನಗೆ ವರದಾನವಾಗಿದ್ದು ಬೇರೆ ಮಾತು, ಇರಲಿ. ನಂತರ ನ್ಯಾಯಾಧೀಶರು, ಕೇಸು ಹಾಕಿದ ಪ್ರಗತಿಪರ ಲೇಖಕಿಯನ್ನು ಕೋರ್ಟಿಗೆ ಕರೆಯಿಸಿ, 'ಆ ಪ್ರಶ್ನೋತ್ತರ ಓದಿ ನನಗೂ ನಗು ಬಂತು. ನಾನೂ ನಿತ್ಯ 'ಭಟ್ಟರ ಸ್ನಾಕ್' ಓದುತ್ತೇನೆ. ಆ ಅಂಕಣದ ಆಶಯ ಮತ್ತು ಉತ್ತರದ ಹಿಂದಿರುವ ಹಾಸ್ಯವನ್ನು ಗಮನಿಸಿ. ಹಳ್ಳಿ ಹೆಂಗಸರನ್ನು ಗೇಲಿ ಮಾಡಬೇಕು ಎಂದಿದ್ದರೆ ಲೇಖನವನ್ನೇ ಬರೆಯುತ್ತಿದ್ದರು. ಮೊಸರಲ್ಲಿ ಕಲ್ಲು ಹುಡುಕಿ, ಪರವಾಗಿಲ್ಲ, ಆದರೆ ಬಂಡೆ ಹುಡುಕುವ ಕೆಲಸ ಮಾಡಬಾರದು, ಕೋರ್ಟಿನ ಸಮಯವನ್ನು ಹಾಳು ಮಾಡಬೇಡಿ' ಎಂದು ಆ ಕೇಸನ್ನು ವಜಾಗೊಳಿಸಿ ಫೈಲನ್ನು ಬಿಸಾಕಿಬಿಟ್ಟರು. ಇಡೀ ಪ್ರಕರಣದಿಂದ ನನಗೆ ಹೊಸ ನಾಮಕರಣವಾಯಿತು -'ಬ್ರಾಭಟ್ಟ'!

ಇದು 'ಭಟ್ಟರ ಸ್ನಾಕ್' ಅಸಲಿ ತಾಕತ್ತು. ನಾನು ಕೆಲವೊಮ್ಮೆ ನನ್ನ ಟೀಕಾಕಾರರಿಗೆ ಪುಟಗಟ್ಟಲೆ ಬರೆಯುವ ಬದಲು, ಈ ಅಂಕಣದಲ್ಲಿ ಒಂದು ಸಾಲಿನಲ್ಲಿ ಉತ್ತರಿಸಿದ್ದಿದೆ. ಒಂದು ಪುಟದಲ್ಲಿ ಬರೆಯುವುದಕ್ಕಿಂತ, ಐದಾರು ಪದಗಳ ಒಂದು ವಾಕ್ಯ ಹೆಚ್ಚು ಪರಿಣಾಮಕಾರಿ ಎಂಬುದು ಎಷ್ಟೋ ಸಲ ಮನವರಿಕೆಯಾಗಿದೆ. ಹೀಗಾಗಿ ಅನೇಕ ಓದುಗರು ಮುಖಪುಟ ನೋಡಿ, 'ಭಟ್ಟರ ಸ್ನಾಕ್'ಗೆ ಬರುತ್ತಾರೆ. ('ನಿಮಗೂ-ಓದುಗರಿಗೂ ಏನು ವ್ಯತ್ಯಾಸ?' ಎಂಬ ಪ್ರಶ್ನೆಗೆ ನೀಡಿದ ಉತ್ತರ - 'ನಾನು ರಾತ್ರಿ ಸ್ನಾಕ್ ಹಾಕಿದರೆ (ಬರೆದರೆ), ಓದುಗರು ಬೆಳಗ್ಗೆ ಬೆಳಗ್ಗೆಯೇ ಹಾಕುತ್ತಾರೆ! (ಓದುತ್ತಾರೆ!)

ಕನ್ನಡದಲ್ಲಿ ಬೀಚಿ, ರಾಶಿ, ಲಂಕೇಶ್, ರವಿ ಬೆಳಗೆರೆ ಮುಂತಾದ ಹಲವರು ಓದುಗರ ತರಲೆ ಪ್ರಶ್ನೆಗೆ ಕಿಚಾಯಿಸುವ ಉತ್ತರ ಬರೆಯುತ್ತಿದ್ದರು. ಅವರ ಅಂಕಣಗಳು ಬಹಳ ಪ್ರಸಿದ್ಧವಾಗಿದ್ದವು. ಓದುಗರ ಪ್ರಶ್ನೆಗಳಿಗೆ ನೀಡಿದ ಉತ್ತರಗಳನ್ನು ಸಂಗ್ರಹಿಸಿ ಪುಸ್ತಕರೂಪದಲ್ಲಿ ತಂದ ಬೀಚಿಯವರ 'ಉತ್ತರಭೂಪ' ಈಗಲೂ ಕಚಗುಳಿಯಿಡುವ ಕೃತಿ. ರವಿ ಬೆಳಗೆರೆ ಕೂಡ 'ಕೇಳಿ' ಹೆಸರಿನಲ್ಲಿ ತಂದ ಕೃತಿಯೂ ಗಮನಾರ್ಹವೇ. ನನಗೆ ಆದರ್ಶ 'ಫಿಲಂ ಇಂಡಿಯಾ' ಮತ್ತು 'ಮದರ್ ಇಂಡಿಯಾ' ಪತ್ರಿಕೆಯ ನಿರ್ಭೀತ ಸಂಪಾದಕ ಬಾಬುರಾವ್ ಪಟೇಲ್. ನಾನು ಇವರನ್ನು ಕುರಿತು 'ಮತ್ತೊಬ್ಬ ಉಕ್ಕಿನ ಮನುಷ್ಯ - ಬಾಬುರಾವ್ ಪಟೇಲ್' ಎಂಬ ಕೃತಿಯನ್ನು ಬರೆದಿದ್ದೇನೆ. ಅವರ ಪ್ರಶ್ನೋತ್ತರ ಅಂಕಣವನ್ನು ಓದಲೆಂದೇ ಜನ ಪತ್ರಿಕೆಗಳನ್ನು ಖರೀದಿಸುತ್ತಿದ್ದರು. ಅವರು ಪ್ರತಿ ಸಂಚಿಕೆಯಲ್ಲಿ ನೂರಕ್ಕೂ ಹೆಚ್ಚು ಓದುಗರ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದರು. ಕೆಲವೊಮ್ಮೆ ಅವರ ಪ್ರಶ್ನೋತ್ತರ ಅಂಕಣ ಹತ್ತು ಪುಟಗಳನ್ನು ಮೀರಿ ಹೋಗುತ್ತಿತ್ತು. ಆದರೆ ಅವೆಲ್ಲವೂ highly readable!

ಬಾಬುರಾವ್ ಪಟೇಲ್ ಅಂದಿನ ಪ್ರಧಾನಿ ನೆಹರು ಅವರನ್ನು ಈ ಅಂಕಣದಲ್ಲಿ ಕಟುವಾಗಿ ಟೀಕಿಸುತ್ತಿದ್ದರು. ನೆಹರು ಅದನ್ನು ತಪ್ಪದೇ ಓದುತ್ತಿದ್ದರು ಮತ್ತು ಎಂಜಾಯ್ ಮಾಡುತ್ತಿದ್ದರು. ಒಮ್ಮೆ ಇಡೀ ಸಂಚಿಕೆಯಲ್ಲಿ ಒಂದೇ ಒಂದು ಪ್ರಶ್ನೆಯೂ ನೆಹರು ಕುರಿತು ಇರಲಿಲ್ಲ. ಅದಕ್ಕೆ ನೆಹರು, 'ಈ ತಿಂಗಳು ನಾನು ಅಪ್ರಸ್ತುತನಾಗಿದ್ದೇನೆ. ಬಾಬುರಾವ್ ಪಟೇಲ್ ಕೂಡ ನನ್ನನ್ನು ಅವರ ಅಂಕಣದಲ್ಲಿ ಪ್ರಸ್ತಾಪಿಸಿಲ್ಲ' ಎಂದು ತಮಾಷೆಯಾಗಿ ಹೇಳಿದ್ದರು. ಕೆಲವು ಪ್ರಶ್ನೋತ್ತರಗಳು : 1. ನೆಹರು ಅವರು ಯಾವಾಗಲೂ ಶಾಂತಿಯ ಬಗ್ಗೆ ಮಾತನಾಡುತ್ತಾರಲ್ಲ, ಅದಕ್ಕೆ ನಿಮ್ಮ ಅಭಿಪ್ರಾಯವೇನು? ಪಟೇಲ್: ನೆಹರು ಅವರ ಶಾಂತಿ ಮಂತ್ರವು ಒಬ್ಬ ಶಾಕಾಹಾರಿ ಹುಲಿಯಂತಿದೆ. ಅವರು ಜಗತ್ತಿಗೆ ಶಾಂತಿ ಬೋಧಿಸುತ್ತಾರೆ, ಆದರೆ ದೇಶದ ಗಡಿಗಳನ್ನು ರಕ್ಷಿಸಲು ಮರೆತುಬಿಡುತ್ತಾರೆ. ಅವರ ಶಾಂತಿ ಪಾರಿವಾಳಗಳು ನಮ್ಮ ದೇಶದ ಭದ್ರತೆಯನ್ನೇ ತಿಂದು ಹಾಕುತ್ತಿವೆ! 2. ನೆಹರು ಅವರು ಅಂತಾರಾಷ್ಟ್ರೀಯ ಮಟ್ಟದಲ್ಲಿ ದೊಡ್ಡ ನಾಯಕ ಎಂದು ಕರೆಸಿಕೊಳ್ಳುತ್ತಾರಲ್ಲ? ಉತ್ತರ: 'ಹೌದು, ಅವರು ಭಾರತದ ಹೊರಗೆ ಅತ್ಯಂತ ಪ್ರಸಿದ್ಧ ನಾಯಕ ಮತ್ತು ಭಾರತದ ಒಳಗೆ ಅತ್ಯಂತ ಗೊಂದಲಮಯ ನಾಯಕ. ಅವರು ಜಗತ್ತನ್ನು ಸರಿಪಡಿಸಲು ಹೊರಟಿದ್ದಾರೆ, ಆದರೆ ಸ್ವಂತ ಮನೆಯಲ್ಲಿ (ದೇಶದಲ್ಲಿ) ಬೆಂಕಿ ಬಿದ್ದಿರುವುದು ಅವರಿಗೆ ಕಾಣಿಸುತ್ತಿಲ್ಲ.' 3. ಪಂಡಿತ್ ನೆಹರು ಅವರು ಭಾರತಕ್ಕೆ ನೀಡಿದ ಅತಿದೊಡ್ಡ ಕೊಡುಗೆ ಏನು? ಉತ್ತರ: ತಮ್ಮ ಶೇರ್ವಾನಿ ಮತ್ತು ಗುಲಾಬಿ ಹೂವಿನ ಮೂಲಕ ಭಾರತದ ಬಡತನವನ್ನು ಬಹಳ 'ಸ್ಟೈಲಿಶ್' ಆಗಿ ಜಗತ್ತಿಗೆ ತೋರಿಸಿದ್ದು! 4. ನೆಹರು ಅವರಿಗೆ ಪ್ರಜಾಪ್ರಭುತ್ವದ ಮೇಲೆ ನಂಬಿಕೆ ಇದೆಯೇ? ಉತ್ತರ: ಖಂಡಿತ ಇದೆ, ಎಲ್ಲಿಯವರೆಗೆ ಜನರೆಲ್ಲರೂ ಅವರ ಮಾತನ್ನು ಒಪ್ಪುತ್ತಾರೋ ಅಲ್ಲಿಯವರೆಗೆ ಮಾತ್ರ ಅವರಿಗೆ ಪ್ರಜಾಪ್ರಭುತ್ವದ ಮೇಲೆ ಅಪಾರ ನಂಬಿಕೆ! 5. ನೆಹರು ಅವರು ತಾವೊಬ್ಬ ಶ್ರೇಷ್ಠ ಇತಿಹಾಸಕಾರ ಎಂದು ಭಾವಿಸುತ್ತಾರಲ್ಲ? ಉತ್ತರ: 'ಹೌದು, ಅವರು ಇತಿಹಾಸವನ್ನು ಬರೆಯುವುದರಲ್ಲಿ ಮತ್ತು ಓದುವುದರಲ್ಲಿ ಎಷ್ಟು ನಿಪುಣರೋ, ಅಷ್ಟೇ ವೇಗವಾಗಿ ಇತಿಹಾಸದಿಂದ ಪಾಠ ಕಲಿಯುವುದನ್ನು ಮರೆತುಬಿಡುವುದರಲ್ಲಿಯೂ ನಿಪುಣರು!

ನೆಹರು ಅವರು ಬಾಬುರಾವ್ ಪಟೇಲ್ ಅವರನ್ನು ದ್ವೇಷಿಸಲಿಲ್ಲ. ಅವರ ಬಗ್ಗೆ ಕೋಪಿಸಿಕೊಳ್ಳಲು ಇಲ್ಲ. ಒಮ್ಮೆ ಸಂಸತ್ತಿನ ಮೊಗಸಾಲೆಯಲ್ಲಿ ಪಟೇಲ್ ಎದುರಾದಾಗ ಅವರನ್ನು ಆಲಂಗಿಸಿಕೊಂಡರು. ಅದಕ್ಕೆ ಪಟೇಲ್, 'ನಿಮ್ಮನ್ನು ಆಲಂಗಿಸಿಕೊಳ್ಳುವುದರಲ್ಲಿ ಸಂತೋಷವೂ ಇದೆ, ಆತಂಕವೂ ಇದೆ' ಎಂದರು. ಅದಕ್ಕೆ ನೆಹರು ಯಾಕೆ ಎಂದು ಪ್ರಶ್ನಿಸಿದ್ದಕ್ಕೆ ಪಟೇಲ್ ಹೇಳಿದ್ದು - 'ಪ್ರಧಾನಿ ಆಲಂಗಿಸಿದ್ದಕ್ಕೆ ಸಂತೋಷ, ನಿಮ್ಮ ಕಿಸೆಯಲ್ಲಿರುವ ಗುಲಾಬಿ ಚುಚ್ಚಬಹುದೇನೋ ಎಂಬ ಆತಂಕ!' ಅದನ್ನು ಕೇಳಿ ನೆಹರು ಬಾಯ್ತುಂಬಾ ನಕ್ಕಿದ್ದರು.

ಮೊನ್ನೆ ನಾನು 'ಭಟ್ಟರ ಸ್ನಾಕ್'ನಲ್ಲಿ ತಾಳಮದ್ದಳೆ ಅರ್ಥಧಾರಿಯೊಬ್ಬರ ಬಗ್ಗೆ ಬರೆದ ಬರೀ ನಾಲ್ಕು ಪದಗಳ ಉತ್ತರ ಎಷ್ಟೆಲ್ಲ ಚರ್ಚೆಗೆ ಕಾರಣವಾಯಿತಲ್ಲ? ತಮ್ಮನ್ನು ಯಾರೂ ತಮಾಷೆ ಮಾಡಬಾರದು, ಕಾಲೆಳೆಯಬಾರದು, ತಮ್ಮನ್ನು ಜಗದ್ಗುರುಗಳಂತೆ ಸಂಬೋಧಿಸಬೇಕು ಎಂಬ ಯೋಚನೆಯೇ ನಮ್ಮ ಸುತ್ತ ಆವರಿಸಿರುವ ಭಯಾನಕತೆಯನ್ನು ತೋರಿಸುತ್ತದೆ. ಯಾರಾದರೂ ತಮಾಷೆಗೆ ಕಾಲೆಳೆದಾಗ, ಕೂದಲು (ಜುಟ್ಟು) ಎಳೆಯಲು ಮುಂದಾಗಬಾರದಷ್ಟೇ. ಒಂದು ಖುಷಿ, ಸಂತಸ ಹತ್ತಾಗಲಿ, ಇಪ್ಪತ್ತು ಇಪ್ಪತ್ತಾರು (2026) ಆಗಲಿ!

ಹೊಳೆಯುವ ಬೆಳ್ಳಿ ಕೊಳ್ಳುವ ಖುಷಿ ಇನ್ನೆಲ್ಲಿ!

ಬೆಳ್ಳಿಯು ಪರಿಶುದ್ಧತೆ, ಸಮೃದ್ಧಿ ಹಾಗೂ ದೈವೀಶಕ್ತಿಯ ಸಂಕೇತ. ಆದರೆ ಇತ್ತೀಚೆಗೆ ಬೆಳ್ಳಿಯ ದರ ಏರುತ್ತಿರುವ ಪರಿ ನೋಡಿದರೆ ಅಚ್ಚರಿಯಾಗುತ್ತಿದೆ. ಜಗತ್ತಿನಲ್ಲಿ ಬೆಳ್ಳಿಯ ನಿಕ್ಷೇಪ ಬಹಳ ಕಡಿಮೆಯಿದೆ, ಆದರೆ ಬೇಡಿಕೆ ಬಹಳ ಹೆಚ್ಚಿದೆ. ಹೀಗಾಗಿಯೇ ಈ ಅಮೂಲ್ಯ ಲೋಹ ನಮ್ಮ ಕೈಗೆಟಕುತ್ತಿಲ್ಲ.

ಸಂಗತ

ಡಾ.ವಿಜಯ್ ದರಡಾ

vveditoped@gmail.com

ಪಾಕಿಸ್ತಾನಿ ಕವಿ ಕತೀಲ್ ಶಿಫಾಯ್ ಬರೆದ ಗಜಲ್ ಒಂದರ ಸಾಲು ಇತ್ತೀಚೆಗೆ ನನಗೆ ಪದೇಪದೇ ನೆನಪಾಗುತ್ತಿದೆ. ಸುಮ್ಮನೆ ನನ್ನಷ್ಟಕ್ಕೆ ನಾನದನ್ನು ಹಾಡಿಕೊಳ್ಳುತ್ತಿದ್ದೇನೆ. 'ಚಾಂದಿ ಜೈಸಾ ರಂಗ್ ಹೈ ತೇರಾ! ಈ ಸಾಲಿನಲ್ಲಿ ಬೆಳ್ಳಿಯ ಸೌಂದರ್ಯವನ್ನು ಕವಿ ಎಷ್ಟು ಸುಂದರವಾಗಿ ಕಟ್ಟಿಕೊಟ್ಟಿದ್ದಾನೆ. ಅಷ್ಟೇ ಸುಂದರವಾಗಿ ಪಂಕಜ್ ಉಧಾಸ್ ಅದನ್ನು ತನ್ಮಯತೆಯಿಂದ ಹಾಡಿ ನಮ್ಮ ಆತ್ಮಕ್ಕೆ ತಟ್ಟುವಂತೆ ಮಾಡಿದ್ದಾರೆ. ಈ ಹಾಡು ಕೇಳಿದವರು ಯಾರಾದರೂ ಮರೆಯಲುಂಟೇ? ಏಕೆ ನನಗೀಗ ಇದು ನೆನಪಾಗುತ್ತಿದೆ ಅಂದರೆ ಬೆಳ್ಳಿ ಇತ್ತೀಚೆಗೆ ಬಹಳ ಸುದ್ದಿಯಲ್ಲಿದೆ. ಬನ್ನಿ, ನಾವೀಗ ಬೆಳ್ಳಿಯ ಬಗ್ಗೆಯೇ ಮಾತನಾಡೋಣ.

ಬೆಳ್ಳಿ ಎಂಬ ಲೋಹಕ್ಕೆ ವೈಜ್ಞಾನಿಕವಾಗಿ ಸಾಕಷ್ಟು ಮಹತ್ವವಿದೆ. ಆದರೆ ಭಾರತೀಯ ನಂಬಿಕೆಗಳ ಪ್ರಕಾರ ಇದು ಶುದ್ಧತೆ, ಸಮೃದ್ಧಿ ಮತ್ತು ದೈವೀಶಕ್ತಿಯ ಸಂಕೇತ. ಎಲ್ಲಾ ದೇವರಿಗೂ ಒಡೆಯನಾದ ಭಗವಾನ್ ಪರಮೇಶ್ವರ ಕೂಡ ಇದನ್ನು ತನ್ನ ಜಟೆಯ ಮೇಲೆ ಚಂದ್ರನೊಂದಿಗೆ ಧರಿಸಿದ್ದಾನೆ. ಸಾಮಾನ್ಯವಾಗಿ ದೇವರ ವಿಗ್ರಹಗಳನ್ನು ಬೆಳ್ಳಿಯಿಂದ ತಯಾರಿಸುತ್ತಾರೆ. ಬೆಳ್ಳಿಯ ಫಲಕದ ಮೇಲೆ ಅಸಂಖ್ಯ ಶಾಸನ ಅಥವಾ ಬರಹಗಳನ್ನು ಬರೆಯಲಾಗಿದೆ. ನಮ್ಮ ಯತಿ ಮುನಿಗಳು ಬೆಳ್ಳಿಯ ಲೋಟದಲ್ಲಿ ನೀರು ಕುಡಿಯುತ್ತಾರೆ. ಮನೆಗೆ ಬಂದ ವಿಶೇಷ ವ್ಯಕ್ತಿಗಳಿಗೆ ನಾವು ಹೆಚ್ಚಿನ ಆತಿಥ್ಯ ನೀಡಬೇಕು ಅಂದರೆ ಬೆಳ್ಳಿಯ ತಟ್ಟೆಯಲ್ಲಿ ಊಟ ಬಡಿಸುತ್ತೇವೆ. ಮಗುವಿಗೆ ಮೊದಲ ಊಟದ ತುತ್ತನ್ನು ಬೆಳ್ಳಿಯ ಚಮಚದಿಂದಲೇ ತಿನ್ನಿಸುವುದು ಭಾರತೀಯ ಪರಂಪರೆಯಲ್ಲಿ ರೂಢಿಯಲ್ಲಿದೆ. 'ಅವನು ಬೆಳ್ಳಿಯ ಚಮಚವನ್ನು ಬಾಯಿಯಲ್ಲಿಟ್ಟುಕೊಂಡೇ ಹುಟ್ಟಿದ್ದಾನೆ ಎಂಬ ಜನಪ್ರಿಯ ನುಡಿಗಟ್ಟನ್ನಂತೂ ನಾವೆಲ್ಲರೂ ಕೇಳಿಯೇ ಇದ್ದೇವೆ. ಬೆಳ್ಳಿಯ ಮಹತ್ವದ ಬಗ್ಗೆ ಇನ್ನೊಂದು ಮಾತಿದೆ - 'ಒಂದೋ ನೀವು ಬೆಳ್ಳಿಯ ಚಪ್ಪಲಿ ಹಾಕಿಕೊಂಡಿರಬೇಕು, ಇಲ್ಲಾ ಅಧಿಕಾರ ಹೊಂದಿರಬೇಕು'.

ಬೆಳ್ಳಿಗೆ ಇಷ್ಟೆಲ್ಲಾ ಮಹತ್ವ ಇರುವುದರಿಂದಲೇ ಕವಿಗಳು ಮತ್ತು ಗೀತ ರಚನೆಕಾರರು ಬೆಳ್ಳಿಯ ಸೌಂದರ್ಯ ಮತ್ತು ಚಂದ್ರನ ಬಗ್ಗೆ ಸಾಕಷ್ಟು ಕವಿತೆಗಳನ್ನು ಬರೆದಿದ್ದಾರೆ. ಕತೀಲ್ ಶಿಫಾಯಿ ಬರೆಯುತ್ತಾರೆ: 'ಚಾಂದಿ ಜೈಸಾ ರಂಗ್ ಹೈ ತೇರಾ, ಸೋನೇ ಜೈಸೆ ಬಾಲ್; ಏಕ್ ತೂ ಹಿ ಧನವಾನ್ ಹೈ ಗೋರಿ, ಬಾಕಿ ಸಬ್ ಕಂಗಾಲ್! (ನಿನ್ನ ಮೈಬಣ್ಣ ಬೆಳ್ಳಿ, ಕೂದಲ ಬಣ್ಣ ಬಂಗಾರ. ಹುಡುಗಿ, ನೀನೊಬ್ಬಳೇ ಶ್ರೀಮಂತೆ. ಇನ್ನುಳಿದವರೆಲ್ಲ ತುಂಬಾ ಬಡವರು). ಆದರೆ ಇದನ್ನು ಬರೆಯುವಾಗ ಮುಂದೊಂದು ದಿನ ಬೆಳ್ಳಿ ಇಷ್ಟೊಂದು ದುಬಾರಿಯಾದೀತು ಎಂದು ಕತೀಲ್ ಯೋಚನೆ ಮಾಡಿದ್ದರೇ? 'ಹರ್ ಆಂಗನ್ ಮೇ ಆಯೇ ತೇರೆ ಉಜಾಲೇ ರೂಪ್ ಕೀ ಧೂಪ್; ಛೇಲ್ ಛಬೀಲಿ ರಾಣಿ ತೋಡಾ ಗೂಂಘಟ್ ಔರ್ ನಿಕಾಲ್! (ನಿನ್ನ ಪ್ರಕಾಶಮಾನವಾದ ರೂಪದ ಬೆಳಕು ಎಲ್ಲಾ ಅಂಗಳವನ್ನೂ ತಲುಪಲಿ. ಓ ಸುಂದರ ರಾಣಿ, ಮುಖದ ಪರದೆ ಸರಿಸಿ ಸ್ವಲ್ಪ ಹೊರಗೆ ಒಡಾಡು). ಆದರೆ ಚೋದ್ಯವೇನಾಗಿದೆ ನೋಡಿ. ಆ ರಾಣಿ ತನ್ನ ಮುಸುಕನ್ನು ಯಾವ ಪರಿ ಎತ್ತಿದ್ದಾಳೆ ಅಂದರೆ, ಅದರ ಪ್ರಖರತೆಗೆ ಈಗ ಜಗತ್ತೇ 'ಅಯ್ಯೋ ಬೆಳ್ಳಿ ಅಯ್ಯೋ ಬೆಳ್ಳಿ! ಎಂದು ಅಳುತ್ತಿದೆ. ಗಜಲ್‌ನ ಮುಂದಿನ ಸಾಲು 'ಸಾಮನೇ ತು ಆಯೇ ತೋ ಧಡಕನ್ ಮಿಲ್ ಕರ್ ಲಾಖೋಂ ದಿಲ್; ಅಬ್ ಜಾನಾ ಧರತಿ ಪರ್ ಕೈಸೇ ಆತೇ ಹೈ ಭೌಚಾಲ್! ನೀನು ನನ್ನ ಮುಂದೆ ಬಂದಾಗ ಲಕ್ಷಾಂತರ ಹೃದಯಗಳು ಒಂದಕ್ಕೊಂದು ಬಡಿಯುತ್ತವೆ. ಈಗ ನನಗೆ ಗೊತ್ತಾಯಿತು, ಭೂಕಂಪನಗಳು ಹೇಗೆ ಸಂಭವಿಸುತ್ತವೆ ಎಂದು! ನಿಜವೇ ಅಲ್ಲವೇ? ಇತ್ತೀಚೆಗೆ ಜಗತ್ತಿನಲ್ಲಿ ಬೆಳ್ಳಿಯ ಬೆಲೆ ಭೂಕಂಪನವನ್ನೇ ಉಂಟುಮಾಡಿದೆಯಲ್ಲ.

2000ನೇ ಇಸ್ವಿಯಲ್ಲಿ 7900 ರುಪಾಯಿ ಇದ್ದ ಒಂದು ಕೆಜಿ ಬೆಳ್ಳಿಯ ಬೆಲೆ 2025ರಲ್ಲಿ ಮೂವತ್ತು ಪಟ್ಟು ಹೆಚ್ಚಿನ ಬೆಲೆಗೆ ಮೌಲ್ಯವನ್ನು ಏರಿಸಿಕೊಳ್ಳುತ್ತದೆ ಎಂದು ಯಾರು ತಾನೇ ಊಹಿಸಿದ್ದರು? ಬೆಳ್ಳಿಯ ಈಗಿನ ಪರಿಸ್ಥಿತಿಯನ್ನು ನೋಡಿದರೆ ಕವಿತೆಯ ಇನ್ನೊಂದು ಸಾಲು ನೆನಪಾಗುತ್ತದೆ: 'ಬೀಚ್ ಮೇ ರಂಗ್ ಮಹಲ್ ಹೈ ತೇರಾ ಖಾಯಿ ಚಾರೋ ಔರ್; ಹಮ್ ಸೇ ಮಿಲನೇ ಕೀ ಅಬ್ ಗೋರಿ ತೂ ಹೈ ರಾಹ್ ನಿಕಾಲ್! ನಿನ್ನ ಸುತ್ತ ನಾಲ್ಕೂ ಕಡೆಗಳಲ್ಲಿ ಬಣ್ಣದ ಗೋಡೆಗಳ ಅರಮನೆಯಿದೆ. ಹೇ ಹುಡುಗಿ, ನನ್ನನ್ನು ಭೇಟಿಯಾಗಲು ಹೇಗೆ ಬರಬೇಕೆಂದು ನೀನೇ ಈಗೊಂದು ದಾರಿ ಹುಡುಕು. ಆದರೆ ಏನು ತಾನೇ ಹೇಳಲು ಸಾಧ್ಯ? ನಿಮ್ಮ ಮತ್ತು ನನ್ನಂತಹ ಆಭರಣ ಮೋಹಿಗಳ ಸಮಸ್ಯೆಯೇ ಬೇರೆ. ಬೆಳ್ಳಿಯ ಬೆಲೆ ನಮ್ಮ ಕಿಸೆಯನ್ನು ಸುಡುತ್ತಿದೆ, ಏನು ಮಾಡುವುದು ಎಂದು ನಾವು ಪರದಾಡುತ್ತಿದ್ದೇವೆ. ಈಗ ಅದೇ ಗಜಲ್‌ನ ಕೊನೆಯ ಸಾಲನ್ನು ಕೇಳಿ: 'ಯೇ ದುನಿಯಾ ಹೈ ಖುದ್ ಗರಜೋಂ ಕಿ ಲೇಕಿನ್ ಯಾರ್ ಕತೀಲ್; ತೂನೆ ಹಮಾರೇ ಸಾತ್ ದಿಯಾ ತೋ ಜಿಯೇ ಹಜಾರೋಂ ಸಾಲ್! ಇದು ಸ್ವಾರ್ಥಿಗಳ ಜಗತ್ತು. ಆದರೆ ಗೆಳೆಯ ಕತೀಲ್, ನೀನು ನಮ್ಮೊಂದಿಗೆ ನಿಂತರೆ ಸಾವಿರಾರು ವರ್ಷಗಳ ಕಾಲ ಹೀಗೇ ಬದುಕಬಹುದು.

ಬಹುಶಃ ಇದೇ ಕಾರಣಕ್ಕೆ ನಮ್ಮ ಹಿರಿಯರು ಇನ್ನೊಂದು ನುಡಿಗಟ್ಟು ಬಳಸುತ್ತಿದ್ದರು. 'ಚಾಂದಿ ಕಾಟ್ನಾ ಎಂಬ ಹಿಂದಿ ನುಡಿಗಟ್ಟು. ಅಂದರೆ ಅದ್ದೂರಿಯಾಗಿ, ಬಿಂದಾಸ್ ಆಗಿ, ನಮ್ಮದೇ ಸ್ಟೈಲ್‌ನಲ್ಲಿ ಬದುಕುವುದು.

ಕವಿತೆಗಳನ್ನು ದಾಟಿ ವಾಸ್ತವಕ್ಕೆ ಬರೋಣ. ಏಕೆ ಇತ್ತೀಚೆಗೆ ಬೆಳ್ಳಿಯ ಬೆಲೆ ಆ ಪರಿ ನಾಟಕೀಯವಾಗಿ ಏರಿಕೆಯಾಗುತ್ತಿದೆ? ಏಕೆ ಚಿನ್ನದ ದರಕ್ಕಿಂತ ಹೆಚ್ಚಿನ ವೇಗದಲ್ಲಿ ಬೆಳ್ಳಿ ಬೆಲೆ ಏರಿಕೆಯಾಗುತ್ತಿದೆ? ಸರಳವಾಗಿ ಹೇಳಬೇಕು ಅಂದರೆ, ತಾಂತ್ರಿಕ ಪ್ರಗತಿಯು ಬೆಳ್ಳಿಯ ಬೇಡಿಕೆ ಗಗನಕ್ಕೇರುವಂತೆ ಮಾಡಿದೆ. ಇಂದು ಔದ್ಯೋಗಿಕ ಕ್ಷೇತ್ರದಲ್ಲಿ ಬೆಳ್ಳಿಗೆ ತುಂಬಾ ಬೇಡಿಕೆ ಬಂದಿದೆ. ವಿದ್ಯುಚ್ಚಾಲಿತ ವಾಹನಗಳು, ವಿದ್ಯುತ್ ಉಪಕರಣಗಳಿಂದ ಹಿಡಿದು ಸೋಲಾರ್ ಪ್ಯಾನೆಲ್‌ಗಳು ಮತ್ತು ರಕ್ಷಣಾ ಉಪಕರಣಗಳವರೆಗೆ ನಾನಾ ರೀತಿಯ ವಸ್ತುಗಳಲ್ಲಿ ಬೆಳ್ಳಿಯನ್ನು ದೊಡ್ಡ ಪ್ರಮಾಣದಲ್ಲಿ ಬಳಸಲಾಗುತ್ತಿದೆ. ಬೆಳ್ಳಿಯ ಬೇಡಿಕೆ ಹೆಚ್ಚಳದ ಹಿಂದೆ ಚೀನಾದ ಪಾತ್ರ ದೊಡ್ಡದಿದೆ.



2022ರಲ್ಲೊಂದೇ ಚೀನಾ ಸುಮಾರು 4000 ಟನ್‌ಗಳಷ್ಟು ಬೆಳ್ಳಿಯನ್ನು ಕೇವಲ ಸೋಲಾರ್ ಉತ್ಪನ್ನಗಳ ತಯಾರಿಕೆಗೆ ಬಳಸಿದೆ. ಈಗ ಅದರ ಬೇಡಿಕೆ ಇನ್ನೆಷ್ಟು ಹೆಚ್ಚಾಗಿರಬಹುದು ಎಂಬುದನ್ನು ಯಾರಾದರೂ ಊಹಿಸಬಹುದು. ಚೀನಾ ಬಳಿ 70,000 ಟನ್‌ಗಳಷ್ಟು ಬೆಳ್ಳಿಯ ದಾಸ್ತಾನಿದೆ. ಪ್ರತಿ ವರ್ಷ ಅದು 3300 ಟನ್‌ಗಳಷ್ಟು ಬೆಳ್ಳಿಯನ್ನು ಉತ್ಪಾದಿಸುತ್ತದೆ. ಮೆಕ್ಸಿಕೋ ದೇಶ ವಾರ್ಷಿಕ 6000 ಟನ್ ಬೆಳ್ಳಿ ಉತ್ಪಾದನೆಯೊಂದಿಗೆ ಜಗತ್ತಿನಲ್ಲೇ ಮೊದಲ ಸ್ಥಾನದಲ್ಲಿದೆ.

ಭಾರತದ ವಿಷಯಕ್ಕೆ ಬರೋಣ. 2024ರಲ್ಲಿ ಜಗತ್ತಿನಲ್ಲಿ ಒಟ್ಟು 25,000 ಟನ್ ಬೆಳ್ಳಿ ಉತ್ಪಾದನೆ ಮಾಡಿದ್ದರೆ, ಭಾರತದಲ್ಲಿ ಕೇವಲ 700 ಟನ್ ಬೆಳ್ಳಿ ಉತ್ಪಾದನೆ ಮಾಡಲಾಗಿತ್ತು. ನಮ್ಮ ದೇಶದಲ್ಲಿ ಬೆಳ್ಳಿಯನ್ನು ಉತ್ಪಾದನೆ ಮಾಡುವ ಅತಿ ದೊಡ್ಡ ಕಂಪನಿಯೆಂದರೆ ಅನಿಲ್ ಅಗರ್ವಾಲ್ ನೇತೃತ್ವದ ವೇದಾಂತ ಗ್ರೂಪ್‌ಗೆ ಸೇರಿದ ಹಿಂದೂಸ್ತಾನ್ ಜಿಂಕ್ ಲಿಮಿಟೆಡ್ ಕಂಪನಿ. ಉದಯ್‌ಪುರದ ಬಳಿಯಲ್ಲಿರುವ ಜವಾರ್ ಮೈನ್ಸ್ ನಮ್ಮ ದೇಶದ ಅತಿದೊಡ್ಡ ಬೆಳ್ಳಿಯ ಗಣಿ. ಆಂಧ್ರಪ್ರದೇಶ, ಜಾರ್ಖಂಡ್ ಮತ್ತು ಕರ್ನಾಟಕದಲ್ಲೂ ಸೀಮಿತ ಪ್ರಮಾಣದಲ್ಲಿ ಬೆಳ್ಳಿಯ ನಿಕ್ಷೇಪ ಮತ್ತು ಉತ್ಪಾದನೆಯಿದೆ. ಭಾರತವು ತಾನು ಉತ್ಪಾದಿಸುವುದಕ್ಕಿಂತ ಹೆಚ್ಚು ಬೆಳ್ಳಿಯನ್ನು ಬಳಕೆ ಮಾಡುತ್ತದೆ. ಇಲ್ಲಿ ಬೆಳ್ಳಿ ಹೆಚ್ಚಾಗಿ ಬಳಕೆಯಾಗುವುದು ಆಭರಣಕ್ಕೆ. ಆದರೆ ಈಗ ಔದ್ಯೋಗಿಕ ವಲಯದಿಂದ ಬೆಳ್ಳಿಗೆ ಬೇಡಿಕೆ ವಿಪರೀತವಾಗಿ ಹೆಚ್ಚಿದೆ. ಇಂತಹ ಸಂದರ್ಭದಲ್ಲಿ ಬೆಳ್ಳಿಯ ಬೆಲೆ ಗಗನಕ್ಕೇರುವುದರಲ್ಲಿ ಯಾವುದೇ ಆಶ್ಚರ್ಯವಿಲ್ಲ.

ಆದರೆ ಹೀಗೇ ಎಷ್ಟು ದಿನ ನಡೆಯುತ್ತದೆ? ಜಗತ್ತು ಚಿಂತೆಗೆ ಬಿದ್ದಿದೆ. ಭೂಗರ್ಭದಿಂದ ನಾವು ಕೇಳಿದಷ್ಟು ಕಾಲ ಬೆಳ್ಳಿ ಸಿಗುತ್ತಲೇ ಇರುವುದಿಲ್ಲ. ಅಮೆರಿಕದ ಜಿಯಾಲಜಿಕಲ್ ಸರ್ವೇ ಇಲಾಖೆಯ ಅಧ್ಯಯನದ ಪ್ರಕಾರ, ಭೂಗರ್ಭದಲ್ಲಿ ಸದ್ಯಕ್ಕೆ ಗುರುತು ಮಾಡಿದಂತೆ ಒಟ್ಟು 5.3 ಲಕ್ಷ ಟನ್ ಬೆಳ್ಳಿಯ ಸಂಗ್ರಹವಿದೆ. ಮುಂದಿನ ಎಂಟು ವರ್ಷಗಳಲ್ಲಿ ಅದು ಖಾಲಿಯಾಗುತ್ತದೆ. ಇದರ ಹೊರತಾಗಿ ಭೂಮಿಯ ಆಳದಲ್ಲಿ ಇರಬಹುದಾದ ಬೆಳ್ಳಿಯ ನಿಕ್ಷೇಪವನ್ನೂ ಗಣನೆಗೆ ತೆಗೆದುಕೊಂಡರೆ ಹೆಚ್ಚೆಂದರೆ ಮುಂದಿನ 20 ವರ್ಷಗಳ ಕಾಲ ಬೆಳ್ಳಿ ಸಿಗಬಹುದು. ಸದ್ಯಕ್ಕೆ ನಾವು ಮಾಡಬಹುದಾದ ಏಕೈಕ ಕೆಲಸವೆಂದರೆ ಇನ್ನೂ ದೊಡ್ಡ ಪ್ರಮಾಣದ ಬೆಳ್ಳಿಯ ನಿಕ್ಷೇಪಗಳು ಮುಂದಿನ ದಿನಗಳಲ್ಲಿ ಸಿಗಬಹುದು ಎಂಬ ಆಶಾಭಾವನೆಯನ್ನು ಇರಿಸಿಕೊಳ್ಳುವುದಷ್ಟೆ. ಇಲ್ಲವಾದರೆ 'ಚಾಂದಿ ಜೈಸಾ ರಂಗ್ ಹೈ ತೇರಾ ಎಂದು ಹಾಡುತ್ತಾ ಇರಬಹುದು.

ಒಂದು ಕುತೂಹಲಕರ ಸಂಗತಿ ಹೇಳುತ್ತೇನೆ. ಅಮೆರಿಕ ತನ್ನ ಮೊದಲ ಪರಮಾಣು ಬಾಂಬ್ ತಯಾರಿಸಿದಾಗ ಅದಕ್ಕೆ ಅಪಾರ ಶಕ್ತಿಯುಳ್ಳ ಅಯಸ್ಕಾಂತದ ಅಗತ್ಯವಿತ್ತು. ಆ ಅಯಸ್ಕಾಂತವನ್ನು ತಯಾರಿಸಲು ಸುಮಾರು 12,000 ಟನ್‌ನಿಂದ 14,000 ಟನ್‌ಗಳಷ್ಟು ಬೆಳ್ಳಿಯನ್ನು ಬಳಸಲಾಗಿತ್ತು. ಹಾಗಂತ ಬೆಳ್ಳಿಯು ಪರಮಾಣು ಬಾಂಬ್‌ನ ಒಂದು ಭಾಗವೇನೂ ಆಗಿರಲಿಲ್ಲ. ಆದರೆ ಬೆಳ್ಳಿಯನ್ನು ಬಳಸದೆ ಇದ್ದಿದ್ದರೆ ಪರಮಾಣು ಬಾಂಬ್ ವಿನಾಶಕಾರಿಯಾಗುತ್ತಿರಲಿಲ್ಲ. ಅಂದರೆ ಬೆಳ್ಳಿಯು ತನ್ನದೇ ಆದ ರೀತಿಯಲ್ಲಿ ಮಹಾನ್ ವಿನಾಶಕಾರಿ ಲೋಹ ಎಂದಾಯಿತು!

ನೂರು ವರ್ಷಗಳ ಹಿಂದೆ ಬ್ರಿಟಿಷ್ ಕವಿ ವಾಲ್ಟರ್ ಡಿ ಲಾ ಮೇರ್ ಬರೆದ ಪದ್ಯ ನೆನಪಿಗೆ ಬರುತ್ತಿದೆ:

ನಿಧಾನವಾಗಿ, ನಿಶ್ಶಬ್ದವಾಗಿ, ಚಂದ್ರನು
ಬೆಳ್ಳಿಯ ಬೂಟಿನಲ್ಲಿ ರಾತ್ರಿ ನಡೆಯುತ್ತಿದ್ದಾನೆ;
ಈ ಕಡೆ, ಆ ಕಡೆ ಇಣುಕಿ ನೋಡುತ್ತಿದ್ದಾನೆ,
ಬೆಳ್ಳಿ ಮರದ ಮೇಲೆ ಬೆಳ್ಳಿ ಹಣ್ಣುಗಳು ಕಾಣುತ್ತಿವೆ!

ನಿಜವಾಗಿಯೂ ಈಗ ಬೆಳ್ಳಿಯು ಬೆಳ್ಳಿಯ ಮರವನ್ನೇ ಹತ್ತಿ ಕುಳಿತಿದೆ. ಚಿನ್ನದ ವಿಷಯವನ್ನು ಇನ್ನೊಮ್ಮೆ ಮಾತನಾಡೋಣ!

ಭಟ್ಟರ್ ಸ್ನ್ಯಾಕ್

- **ಶ್ರೀನಿವಾಸ ಜೋಶಿ, (ಇಮೇಲ್ ಮೂಲಕ)**
ಭಟ್ರೇ, ಗಂಡ – ಹೆಂಡತಿ ಎಷ್ಟು ಪ್ರೀತಿಸುತ್ತಾರೆ ಅನ್ನೋದನ್ನು ಹೇಗೆ ಕಂಡುಹಿಡಿಯಬಹುದು ?
– **ಬೈಕಿನಲ್ಲಿ ಹೇಗೆ ಕುಳಿತುಕೊಳ್ಳುತ್ತಾರೆ ಅನ್ನೋದನ್ನು ನೋಡಿದ್ರೆ ಗೊತ್ತಾಗೊಲ್ವಾ ?!**

- **ಲತಾ ಗಣೇಶ, (ಇಮೇಲ್ ಮೂಲಕ)**
ಭಟ್ರೇ, ನನ್ನ ಬೈಕಿನ ಹಿಂದೆ ಏನೆಂದು ಬರೆಯಿಸಲಿ ?
– **ನನಗಿರಲಿ ನಗೆ, ನಿಮಗಿರಲಿ ಹೊಗೆ !**

- **ಮಾಲಾ ಎಸ್.,ಬೆಂಗಳೂರು**
ಭಟ್ರೇ, ನಿನ್ನ ನೋಡಿದ ಕೂಡಲೇ, ಪ್ರೀತಿ ಮೂಡುವುದು ಮೊದಲೇ …. ಎಂದು ಹಾಡುತ್ತಾನಲ್ಲ ?
– **ಬರೀ ಹಾಡುತ್ತಲೇ ಇರುವುದು ಒಳ್ಳೆಯ ಲಕ್ಷಣವಲ್ಲಮ್ಮ !**

- **ಮುರುಳಿ ಕೆಂಚಪ್ಪ, ಕನಕಪುರ**
ಭಟ್ರೇ, ನಾನು ಶ್ರೀಮಂತರ ಮನೆಯ ನಾಯಿಯಾಗಿ ಹುಟ್ಟ ಬೇಕಿತ್ತು ಅನಿಸುತ್ತಿದೆ, ನಿಮಗೆ ?
– **ಆ ಶ್ರೀಮಂತ ನಾನೇ ಆಗಿರಬೇಕು ಎಂದೆನಿಸುತ್ತಿದೆ !**

- **ಸತೀಶ್ ಎಲ್.ವಿ.,(ಇಮೇಲ್ ಮೂಲಕ)**
ಭಟ್ರೇ, ಮೀಸೆ ಬಂದ ಹುಡುಗನಿಗೆ ದೇಶ ಕಾಣೊಲ್ಲ ಅಂತಾರಲ್ಲ?
– **ಅದಕ್ಕಿಂತ ಈ ಗಾದೆಯ ಮುಂದುವರಿದ ಭಾಗ ನೀನಿನ್ನೂ ಕೇಳಿಲ್ಲ..ಛೇ !**

- **ವೇಣುಗೋಪಾಲ ಕಂಚಿತೋಟ, (ಇಮೇಲ್ ಮೂಲಕ)**
ಭಟ್ರೇ, ನಿಮ್ಮನ್ನು ನೋಡಿದ್ರೆ, ಮಾತು ಕೇಳಿದ್ರೆ ಒಳ್ಳೆಯವರು ಅಂತ ಅನಿಸುತ್ತದೆಯಲ್ಲ?
– **ಅವು ಬರೀ ಸ್ಯಾಂಪಲ್ ಅಷ್ಟೇ !**

- **ಪ್ರದೀಪ ನಾಯಕ, ಬೆಂಗಳೂರು**
ಕುಡಿತದ ಚಟದಿಂದ ಬಳಲುತ್ತಿ ರುವ ನನ್ನ ತಂದೆಯ ವರನ್ನು ಮರ್ಯಾದೆಯಿಂದ ಹೇಗೆ ಕರೆಯಲಿ?
– **ತೀರ್ಥರೂಪ !**

- **ಸಂದೇಶ ಹೆಗಡೆ, ಹೊನ್ನಾವರ**
ಭಟ್ರೇ, ಒಂದು ಗಂಟೆ ಭೇಟಿ ಆಗಿಲ್ಲವಂತೆ?
– **ವಿಷಯ ಅದಲ್ಲ… ವಿಷಯ ಅದಲ್ಲ… ತಿಂಗಳಲ್ಲಿ ಎರಡು ಸಲ ಭೇಟಿಯಾಗಿರೋದು!**

- **ಕೆ. ಸೋಮಶೇಖರ, ಉಡುಪಿ**
ಭಟ್ರೆ, ಕೊನೆಗೂ ನಿಮ್ಮಿಂದ ಸ್ಪಷ್ಟನೆ ಬರಲಿಲ್ಲವಲ್ಲಾ ಅಂತ ಕೆಲವರು ಬೊಬ್ಬೆ ಹೊಡೆಯುತ್ತಿದ್ದಾರಲ್ಲ?
– **ಶ್ರೀಮಠದ ಸ್ಪಷ್ಟನೆ ಮುಂದೆ ನನ್ನದು ಯಾವ ಲೆಕ್ಕ?!**

ಅಂಗಾಲಿನಡಿಗೆ ಕಾಲದ ಕಚಗುಳಿ



ಕಾಡುದಾರಿ
ಹರೀಶ್ ಕೇರ
vveditoped@gmail.com

ಆಲೋಚಿಸಿದರೆ ಗಾಬರಿಯಾಗುತ್ತದೆ- ಎಷ್ಟು ಬೇಗ ಕಾಲ ಸರಿದುಹೋಗುತ್ತದೆ. ಮೊನ್ನೆ ಮೊನ್ನೆ ತಾನೇ 2025ರ ಕ್ಯಾಲೆಂಡರನ್ನು ಗೋಡೆಗೆ ತೂಗುಹಾಕಿದಂತಿದೆ. ಇಂದು ಅದರ ಜಾಗದಲ್ಲಿ ಮತ್ತೊಂದು ದಿನದರ್ಶಿಕೆ ಬಂದು ಕುಳಿತಿದೆ. ಮುಂಜಾನೆ ನಿದ್ದೆ ಎದ್ದು ಹೊರಗೆ ಹೆಜ್ಜೆ ಹಾಕಿದರೆ ಮಂಜು ಕವಿದಿದೆ. ಹುಲ್ಲಿನ ಮೇಲೆ ಇಬ್ಬನಿ ಕುಳಿತು ಕಾಲಿಗೆ ಕಚಗುಳಿ ಇಡುತ್ತಿದೆ. ಅರಳಿ ಮರದಲ್ಲಿ ಕುಳಿತು ಕೂಗುತ್ತಿರುವ ಹಕ್ಕಿಗೆ ಹೆಸರಿಲ್ಲ. ಅದರ ತುದಿಯಲ್ಲಿ ಕುಳಿತ ಹದ್ದು ರೆಕ್ಕೆ ಬಡಿದ ಫಡಫಡ ಸದ್ದು ಇಷ್ಟು ಕೇಳಿಸುತ್ತಿದೆ. ಅದು ಈಗ ಮೇಲೆದ್ದು ಬಾನಿನಲ್ಲಿ ಇನ್ನಷ್ಟು ಮತ್ತಷ್ಟು ಎತ್ತರಕ್ಕೇರಿ ವರ್ತುಲಾಕಾರದಲ್ಲಿ ಸುತ್ತುಹಾಕುತ್ತಿದೆ. ನಮ್ಮ ಕಾಲ- ದೇಶ ಆ ಎತ್ತರದಿಂದ ಅದಕ್ಕೆ ಹೇಗೆ ಕಾಣಿಸುತ್ತಿರುವುದೋ ಏನೋ.

ಕವಿ ಕೆ.ಎಸ್.ನರಸಿಂಹಸ್ವಾಮಿ ಬಣ್ಣಿಸುತ್ತಾರೆ- ಗಡಿಯಾರದಂಗಡಿಯ ಮುಂದೆ ಬರಿದಿರ ಕುದುರೆ/ ಕಣ್ಣಪಟ್ಟಿಯ ಕಂಡು ಕನ್ನಡಿಯಲ್ಲಿ/ ಗಂಟೆ ಎಷ್ಟೆಂದು ಕೇಳಿದರೆ ಹೇಳೇ ಹೇಳಲೇ? ಎಷ್ಟೊಂದು ಗಡಿಯಾರ ಅಂಗಡಿಯಲಿ! ಹೌದು, ಇದು ಮಾರಾಟಕ್ಕಿಟ್ಟ ವಾಚುಗಳ ಅಂಗಡಿಯಲ್ಲ, ರಿಪೇರಿಗೆ ಬಂದ ಗಡಿಯಾರಗಳ ಅಂಗಡಿ. ಹೀಗಾಗಿ ಒಂದೊಂದು ಗಡಿಯಾರವೂ ಒಂದೊಂದು ಸಮಯ ತೋರಿಸುತ್ತದೆ. ಮೆಚ್ಚಲು ಬರುವ ಮುನ್ನ ಗಡಿಯಾರದಂಗಡಿಯ ಅಲ್ಲಿ ರಿಪೇರಿಗೆ ಬಂದ ನೂರಾರು ಗಡಿಯಾರಗಳು ಸಾಮಾನ್ಯ ದೃಶ್ಯ ಆಗಿದ್ದವು. ಈಗ ಅಂಥ ಗಡಿಯಾರದಂಗಡಿಯ ಸಮಯವೂ ನಿಂತುಹೋದಂತಿದೆ.

ಮುಂದೆ ಹೋದಂತೆ ಕವಿಗೆ ವಸಂತಾದಿ ಋತುಗಳೆಲ್ಲವೂ ಭಿನ್ನಭಿನ್ನ ಚಿತ್ರಿಕೆಗಳಾಗಿ ಕಾಣಿಸುತ್ತವೆ. ವಸಂತ- ಆಗ ಚೈತ್ರದ ಮಾವು ಜೋಲುನಾಯಿಯ ಜೋಲಿ/ ತಳಿರ ಕೆನ್ನಾಲಗೆಯ ಬೆಂಕಿ ಪರದೆ. ಗ್ರೀಷ್ಮ- ಹುಚ್ಚುಬೇಸಿನ ತಲೆಗೆ ಕಟ್ಟಿ ಹಾಡಿನ ಪಡಿಗೆ/ ಬಂಗಾರದಂಗಾಲು ಮೋಡದೆಡೆಗೆ. ವರ್ಷ ಋತು- ಅಲ್ಲಿದ ಮೋಡ ಮುಂಗಾರು ಕಾಲಿನ ಕೊಡಿಗೆ/ಜಿಂಕೆ ಚಿಕ್ಕಡದಂತು ಕಾಡುಹೊಳೆ. ಇನ್ನು ಹೇಮಂತ- ಮಳೆ ನಿಂತು ಚಳಿ ಬಂತು ಗಲ್ಲ ಬೆಳ್ಳಗೆ ಹುಡುಗಿ/ ಬಳಿಹೂವ ಮುಟ್ಟಿಸಿದೆ ನನ್ನ ತುಟಿಗೆ. ಶಿಶಿರ- ಸಂಜೆಗೊಟ್ಟಲು ಮುದುಕಿ ಕೊನೆಯ ಕೆಂಡವ ಕೆದಕಿ/ ಎತ್ತಿ ಮುಡಿದಳು ತನ್ನ ಗಂಟು ಜಡೆಗೆ. ಕೆಸ್‌ನ ಹೀಗೆ ಕವಿತೆ ಪ್ರತಿಮೆ ರೂಪಕಗಳಲ್ಲಿಯೇ ಇಡೀ ಕಾಲದ ಪಯಣವನ್ನು ಹಿಡಿದಿಡುತ್ತದೆ.

ಸಮಾಜಸುಧಾರಕನ ಅಂಗಡಿ ಆಗಿರುವ ಕವಿಗೂ ಸಂಸಾರ ತಾಪತ್ರಯಗಳು, ಈ ಬಗೆ ಮನುಷ್ಯನ ಸಂಕಷ್ಟ ಜಂಜಡಗಳು ಇಲ್ಲದಿಲ್ಲ. ಕತ್ತು ಹಿಸುಕಿದ ಬಳ್ಳಿ ಕಳೆದ ಬೇಗೆ, ಜೀನು ತಲೆಹೊಕ್ಕಿರುವ ತನಗಿದುದರೊಡನೆ, ಸಂಜೆ ತೀರದ ಸಾಲ, ಹರಹು ಮುಳುಗು, ಬರುಗಾಳಿ ಬೀಳಿಸಿದ ಮೂರನೆಯ ದಾರಿ- ಮನೆ, ಅಲ್ಲೊಂದು ಒಂದೆ ನವನೆ ಆಳುವ ಮಗು- ಹೀಗೆ. ಕವಿಗೂ ಇತ್ತು ಮೊದಲಿನವರೆಗೆ ಬದಲಿಸುವಾಸೆ. ಕವಿತೆಯ 'ಮೂಲೆ ಬಲ್ಲವನು ಹಿಡಿದು ಮುಂದೆ ನಡೆದೆ'. ಆದರೇನಾಯ್ತು- 'ನನಗಿಂತ ಮೊದಲ ಬದಲಾದ ಬಂಡೆಯ ಕಂಡೆ'- ಬದಲಿಸಲು ಹೊರಟವರು ಬದಲಿಸುವ ಮೊದಲೇ ತಾವೇ ಬದಲಾಗುವರು. ಇದು ಕಾಲದ ಚೋದ್ಯ.

ಕವಿತೆಯ ಕೊನೆಗೆ ಕವಿ ತಲುಪುವ ತೀರ್ಮಾನ ಹೃದಯವೇಧಕವಾದದ್ದು- ಗಂಟೆ ಎಷ್ಟೆಂದು ಕೇಳಿದೆ ನೀನು. ಹೇಳಿದೆ/ ಗಡಿಯಾರ ನಡೆದಷ್ಟು ಗಂಟೆ. It is not an explanation of things, It is something better- ಅಂದರೆ ಕಾಲವನ್ನು ವಿವರಿಸುವುದಷ್ಟೇ ಅಲ್ಲ- ಅನುಭವಿಸುವುದು. ಈ ಅರ್ಥದಲ್ಲಿ ಕಾಲವೂ ಬದುಕೂ ಬೇರೆ ಇಲ್ಲ. ಎರಡೂ ಒಂದರೊಳಗೊಂದು ಜೋಡಿಕೊಂಡಿವೆ. ನಿಶ್ಶಬ್ದ ರಾತ್ರಿಯಲ್ಲಿ ಅನಂತ ಆಕಾಶದಲ್ಲಿ ಮಿನುಗುತ್ತಿರುವ ಲಕ್ಷಾಂತರ ಚುಕ್ಕಿಗಳನ್ನು ನೋಡುತ್ತಿರು

ವಾಗ, ಗಾಬರಿಯಾಗಿ ಮೆರೆಯುತ್ತಿರುವ ಕಡಲಿನ ತೀರದಲ್ಲಿ ನಿಂತು ಉರುಳುವ ಹೆದ್ದೆರೆಗಳನ್ನು ಗಮನಿಸುತ್ತಿರುವಾಗ, ಎಕರೆಗಟ್ಟಲೆ ಹಬ್ಬಿರುವ ಜೋಳ- ಭತ್ತದ ಹೊಲಗಳಲ್ಲಿ ತೆನೆಗಳು ರೈತರ ಬೆವರು ತುಂಬಿಕೊಂಡು ಗಾಳಿಗೆ ತಲೆದೂಗುತ್ತಿರುವುದನ್ನು ಕಂಡಾಗ ಇದು ಅನುಭವವಾಗುತ್ತದೆ.

ಇಂಥ ಕಾಲಕ್ಕೆ ಒಂದು ಆರಂಭದ ಬಿಂದು ಇದೆಯೆ? ಈ ಪ್ರಶ್ನೆಗೆ ಉತ್ತರಿಸುವುದು ಬಲು ಕಷ್ಟ. ದೇವರನ್ನು ನಂಬುವವರು ಅಥವಾ ಆಸ್ತಿಕರಿಗೆ ಇದು ಒಂದು ಬದಲಾದ ಪ್ರಶ್ನೆಯೇನಲ್ಲ. ವಿಶ್ವದಂತೆ ಕಾಲವೂ ದೇವರ ಸೃಷ್ಟಿ. ದೇವರು ಯಾವಾಗ ಬ್ರಹ್ಮಾಂಡವನ್ನು ಸೃಷ್ಟಿಸಿದನೋ ಅಂದಿನಿಂದ ಕಾಲದ ಸೃಷ್ಟಿಯೂ ಆಯಿತು. ಇದು ಕ್ರೈಸ್ತರ ಚಿಂತನೆ. ಆದರೆ ವೇದಾಂತದ ಅರಿವು ಸ್ವಲ್ಪ ಬೇರೆ. ದೇವರು ಅನಾದಿ, ಅನಂತ, ನಿರ್ಗುಣವಾಗಿರುವಂತೆ ಕಾಲವೂ ಅನಾದಿ, ಅನಂತ ಮತ್ತು ನಿರ್ಗುಣ. ಇದನ್ನು ಸೂಚಿಸಲೆಂದೇ ನಾಲ್ಕು ಯುಗಗಳು- ಕೃತ, ತ್ರೇತಾ, ದ್ವಾಪರ ಮತ್ತು ಕಲಿ. ಕಲಿಯುಗ ಮುಗಿದ ಬಳಿಕ ಪ್ರಳಯವಾಗಿ ಮತ್ತೆ ಮೊದಲಿನಂತೆ ಕೃತಯುಗ ಆರಂಭವಾಗುತ್ತದೆ. ಅಂದರೆ ಕಾಲಕ್ಕೆ ಆದಿಯಿಲ್ಲ, ಅಂತ್ಯವಿಲ್ಲ, ಆದರೆ ಚಕ್ರೀಯಗತಿಯಿದೆ. ಸಾವಿರ ಚತುರ್ಯುಗಗಳು ಸೃಷ್ಟಿಕರ್ತ ಬ್ರಹ್ಮನ ಒಂದು ಹಗಲು. ಬ್ರಹ್ಮನಿಗೂ ನೂರು ವರ್ಷ ವಯಸ್ಸು. ಈಗ ನಡೆಯುತ್ತಿರುವುದು ಬ್ರಹ್ಮನ ಐವತ್ತೊಂದನೇ ವರ್ಷ. ಇದಕ್ಕೆ ಶ್ವೇತವರಾಹ ಕಲ್ಪವೆಂಬ ಚಂದದ ಹೆಸರಿದೆ. ಈ ಲೆಕ್ಕ ಅರ್ಥ ಮಾಡಿಕೊಳ್ಳುವುದು ಸುಲಭವಲ್ಲ.

ಆದರೆ ವಿಜ್ಞಾನಿಗಳು ಕಾಲ ಯಾವಾಗ ಆರಂಭವಾಯಿತು ಎಂಬ ಪ್ರಶ್ನೆಗೆ ಉತ್ತರಿಸಲು ಕಷ್ಟಪಡಬೇಕಾಗುತ್ತದೆ. ವಿಜ್ಞಾನಿಗಳಲ್ಲೂ ಈ ಬಗ್ಗೆ ಒಮ್ಮತವಿಲ್ಲ. ಹೆಚ್ಚಿನವರು, ಬಿಗ್‌ಬ್ಯಾಂಗ್ ಅಥವಾ ಮಹಾಸ್ಫೋಟ ಯಾವಾಗ ಆಯಿತೋ ಆಗಿನಿಂದಲೇ ಕಾಲದ ಆರಂಭವೂ ಆಯಿತು ಎನ್ನುತ್ತಾರೆ. ಆದರೆ ಮಹಾಸ್ಫೋಟದ ಮೊದಲು ಏನಿತ್ತು? ಒಂದು ಬೃಹತ್ತಾದ ದ್ರವ್ಯರಾಶಿ ಇದ್ದಿರಬೇಕು. ಅದು ಸಿಡಿದಾಗ, ಆ ಮಹಾ ದ್ರವ್ಯರಾಶಿ ಘನೀಕೃತಗೊಳ್ಳುವ ಪ್ರಕ್ರಿಯೆಯಲ್ಲಿಯೂ ಕಾಲ ಇದ್ದಿರಬೇಕಲ್ಲವೇ? ಇಲ್ಲೂ ಮೂರು ಬಗೆಯ ಚಿಂತನೆಯ ಧಾರೆಗಳಿವೆ.

ಒಂದು, ಸ್ಫೋಟದ ಮುನ್ನ ದ್ರವ್ಯರಾಶಿ ಹಾಗೂ ಕಾಲವೆಲ್ಲವೂ ಏಕೀಭವಿಸಿದ್ದ ಒಂದು ಮೂಲ ಸ್ಥಿತಿ ಇದ್ದಿರಬೇಕು. ಅದನ್ನೆ ಸಿಂಗ್ಯುಲಾರಿಟಿ ಎನ್ನಲಾಗುತ್ತದೆ. ಇಂದಿನ ಈ ವಿಶ್ವವೆಲ್ಲವನ್ನೂ ಕಾಲದಲ್ಲಿ ಹಿನ್ನೂಕುತ್ತ ಹೋಗಿ ಒಂದು ಬಿಂದುವಿನಲ್ಲಿ ಅಡಕಿದರೆ ಹೇಗಿರುತ್ತದೋ ಅದು. ಆದರೆ ಇಂಥ ಪರಿಸ್ಥಿತಿಯಲ್ಲಿ ಇರಬಹುದಾದ ಕಾಲ-ದ್ರವ್ಯದ ಗೋಜಲು ಊಹಾತೀತ. ಎರಡನೆಯದು, ಮಹಾಸ್ಫೋಟದ ನಂತರ ಈಗಿನ ಜಗತ್ತು ವಿಸ್ತಾರಗೊಳ್ಳುತ್ತಾ ಇದೆ. ಆದರೆ ಮಹಾಸ್ಫೋಟದ ಕುದಿಬಿಂದುವಿನತ್ತ ಅದರ ಹಿಂದಿನ ವಿಶ್ವ ಸಾಗಿಬಂದಿರಬಹುದು. ಅಂದರೆ ಮಹಾದ್ರವ್ಯರಾಶಿಯಾಗಿ ಕುಗ್ಗುವುದು ಮತ್ತು ಅದು ಸ್ಫೋಟಗೊಂಡು ಹಿಗ್ಗುವುದು- ಇವು ನಿರಂತರವಾಗಿ ಈ ವಿಶ್ವದಲ್ಲಿ ನಡೆಯುತ್ತಿರಬೇಕು. ಅಂದರೆ ಕಾಲವು ಒಂದು ಬಿಂದುವಿನಿಂದ ಆರಂಭವಾಗುವುದಿಲ್ಲ. ಅದೂ ಚಕ್ರಗತಿಯದ್ದು. ಇದು ನಮ್ಮ ವೇದಾಂತದ ದರ್ಶನವನ್ನು ಹೋಲುತ್ತದೆ. ಮೂರನೆಯದು, ಈ ವಿಶ್ವವೆಂಬುದಕ್ಕೆ ಆದಿಯಿಲ್ಲ, ಅಂತ್ಯವೂ ಇಲ್ಲ. ಮಹಾಸ್ಫೋಟವೂ ಇರಲಿಲ್ಲ. ಇದು ನಿರಂತರವಾಗಿ ಇರುವ, ವಿಸ್ತರಿಸುತ್ತಲೇ ಇರುವ ಒಂದು ಮಹಾ ಅಸ್ತಿತ್ವ. ಅಂದರೆ ಕಾಲ ಎಲ್ಲಿ ಆರಂಭವಾಗಿದೆ, ಎಲ್ಲಿ ಅಂತ್ಯವಾಗಲಿದೆ ಎಂಬ ಜ್ಞಾನ ನಮಗೆ ಎಂದೂ ಸಿಗದು.

ಮಹಾವಿಜ್ಞಾನಿಗಳಲ್ಲಿ ಒಬ್ಬನಾದ ಆಲ್ಬರ್ಟ್ ಐನ್‌ಸ್ಟೈನ್ ಹೇಳುವಂತೆ, ಕಾಲ ಎಂಬುದು ಕೂಡ ಸಾಪೇಕ್ಷ. ಶಕ್ತಿಯ ಸ್ವರೂಪ ಬದಲಾಗುವಂತೆ, ಕಾಲವನ್ನು ಯಾರು ನೋಡುತ್ತಿದ್ದಾರೆ ಎಂಬುದರ ಮೇಲೆ ಅದು ದೀರ್ಘವೋ ಕ್ಲುಪ್ತವೋ ನಿರ್ಧಾರವಾಗುತ್ತದೆ. ಬೆಳಕಿನ ವೇಗದಲ್ಲಿ ಯಾರಾದರೂ ಚಲಿಸುತ್ತಾ ಇದ್ದರೆ, ಅವನ ದೇಹಕ್ಕೆ ಯಾವ ಬದಲಾವಣೆಯೂ ಆಗದು. ಅಂದರೆ ಕಾಲ ಅವನ ಪಾಲಿಗೆ ಸ್ತಬ್ಧ. ಆದರೆ ಅದನ್ನು ನೋಡುತ್ತಾ ಇರುವವನ ದೇಹದ ಮೇಲೆ ಕಾಲದ ಪ್ರಭಾವ ಆಗಿರುತ್ತದೆ. ನಿಜಕ್ಕೂ ಕಾಲ ಮತ್ತು ಅವಕಾಶ (ಸ್ಪೇಸ್)ಗಳು ಒಂದಕ್ಕೊಂದು ಬಿಡಿಸಲಾಗದಂತೆ ಹೆಣೆದುಕೊಂಡಿವೆ. ಅತ್ಯಂತ ವೇಗದಲ್ಲಿ ಬಂದ ಟ್ರಕ್ಕು ನಮ್ಮಿಂದ ಒಂದಡಿ ದೂರದಲ್ಲಿ ಥಟ್ಟನೆ ಬ್ರೇಕ್ ಹಾಕಿ ನಿಂತರೆ, ಸಾವಿಗೂ ನಮಗೂ ಇರುವ ಅಂತರ ಒಂದಡಿ ಅಥವಾ ಒಂದು ಸೆಕೆಂಡ್.

ಅವಕಾಶದಲ್ಲಿ ಮೂರು ಆಯಾಮಗಳು ಇರುವುದು ನಮಗೆ ಗೊತ್ತು- ಉದ್ದ, ಅಗಲ ಹಾಗೂ ಎತ್ತರ. ಇದನ್ನು ಹೊಂದಿಕೊಂಡು ಮೇಧಾವಿ ವಿಜ್ಞಾನಿ ಸ್ಟೀಫನ್ ಹಾಕಿಂಗ್ ಇನ್ನೊಂದು ವಿಚಿತ್ರ ಥಿಯರಿಯನ್ನು ಮಂಡಿಸುತ್ತಾನೆ. ನಮಗೆ ಎರಡು ಕಾಲಗಳು ಗೊತ್ತು- ಭೂತಕಾಲ ಮತ್ತು ಭವಿಷ್ಯಕಾಲ. ವರ್ತಮಾನ ಎಂಬುದು ನಮ್ಮ ಈ ಕ್ಷಣದ ಒಂದು ಬಿಂದು ಅಷ್ಟೆ. ಆ ಬಿಂದುವಿನಿಂದ ಸರಳ ರೇಖೆಯಲ್ಲಿ ಹಿಂದಕ್ಕಿರುವುದು ಭೂತಕಾಲ, ಮುಂದಕ್ಕಿರುವುದು ಭವಿಷ್ಯಕಾಲ. ಹಾಗೆಯೇ ಒಂದು ನೇರ ಕಾಲ (ವರ್ಟಿಕಲ್ ಟೈಮ್) ಯಾಕೆ ಇರಲಾರದು? ಇದನ್ನು ಆತ ಕಾಲ್ಪನಿಕ ಕಾಲ' ಎಂದು ಕರೆಯುತ್ತಾನೆ. ಇದನ್ನು ಒಂದು ಕಾಗದದ ಮೇಲೆ ಚಿತ್ರಿಸಿದರೆ ಹೆಚ್ಚು ಸ್ಪಷ್ಟವಾಗುತ್ತದೆ- ಎರಡೂ ದಿಕ್ಕಿಗೆ ಹರಿದ ರೇಖೆಗಳು ಭೂತ, ಭವಿಷ್ಯವಾದರೆ, ಮೇಲಕ್ಕೆಳೆದ ಗೆರೆ ಕಾಲ್ಪನಿಕ ಕಾಲ. ಆದರೆ ಕಾಲ್ಪನಿಕ ಕಾಲವಿದೆ ಎಂದು ಗುರ್ತಿಸುವುದು, ಅದರ ಕಾರ್ಯವೈಖರಿ ನಿರ್ಧರಿಸುವುದು ಹೇಗೆ? ನಾವೂ ಈ ಕಾಲ್ಪನಿಕ ಕಾಲದಲ್ಲಿ ಚಲಿಸಬಹುದೇ? ಕ್ವಾಂಟಂ ಫಿಸಿಕ್ಸ್ ಈ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿದೆ. ಉತ್ತರ ಸಿಕ್ಕಿಲ್ಲ.

ಇಂಥ ಪ್ರಶ್ನೆಗಳಿಗೆ ಉತ್ತರ ಸಿಗುವುದಿಲ್ಲ. ಇವೆಲ್ಲ ಅಮೂರ್ತ ಹರಟೆಗಳೆಂದು ಹೇಳುವವರಿದ್ದಾರೆ. ಆದರೆ ನ್ಯಾಯ, ಡೆಮಾಕ್ರಸಿ- ಎಲ್ಲವೂ ಮೊದಲಿಗೆ ಅಮೂರ್ತ ಕಲ್ಪನೆಗಳೇ ಆಗಿದ್ದವು. ಕಾಲವೂ ಹಾಗೇ. ವಿಜ್ಞಾನ ಮುಂದುವರಿದಂತೆ ಅದು ಹೆಚ್ಚು ಮೂರ್ತವಾಗಬಹುದು. ಅಥವಾ ಇನ್ನೂ ಜಟಿಲವಾಗಬಹುದು. ತತ್ವಜ್ಞಾನಿಗಳೂ ಕಾಲದ ಬಗ್ಗೆ ಚಿಂತಿಸಿದ್ದಾರೆ. ಅವು ಇನ್ನಷ್ಟು ಅಸ್ಪಷ್ಟವಾಗಿವೆ. ಕೆಲವರು ಇರುವುದು ವರ್ತಮಾನವೊಂದೇ, ಭವಿಷ್ಯ- ಭೂತವಿಲ್ಲ ಎನ್ನುತ್ತಾರೆ. ಕೆಲವರು ಇವು ಮೂರೂ ಅವಕಾಶದಲ್ಲಿ ಸಮಾನವಾಗಿ ಇದೆಯೆನ್ನುತ್ತಾರೆ. ಕೆಲವರ ಪಾಲಿಗೆ ವರ್ತಮಾನ ಮತ್ತು ಭೂತ ಮಾತ್ರ ಸತ್ಯ, ಭವಿಷ್ಯ ಕಲ್ಪನೆ ಮಾತ್ರ. ವಾಸ್ತವವಾದಿಗಳಿಗೆ ಸಮಯ ಎಂದರೆ ಎರಡು ಘಟನೆಗಳ ನಡುವಿನ ಅವಧಿ. ಆ ಘಟನೆಗಳ- ಬದಲಾವಣೆಗಳ ಹಿನ್ನೆಲೆಯಲ್ಲಿ ಮಾತ್ರ ವಿವರಿಸಬಹುದಾದಂಥದು. ಇನ್ನು ಕೆಲವರೆನ್ನುವಂತೆ ಸಮಯ ವಸ್ತುನಿಷ್ಠ ಸತ್ಯವಲ್ಲ, ಅದು ಅನುಭವಗಳ ವ್ಯತ್ಯಾಸದ ಹಿನ್ನೆಲೆಯಲ್ಲಿ ನಾವು ಕಟ್ಟಿಕೊಳ್ಳುವ ಒಂದು ಪರಿಕಲ್ಪನೆ.

ಸದ್ಯ ಕೇವಲ ಮರ್ತ್ಯರಾದ ನಾವು ಕಣ್ಣಿಗೆ ಕಾಣುವ ನಮ್ಮ ದೇಹದ ಬದಲಾವಣೆಗಳನ್ನು ನೋಡಿಕೊಂಡು, ಎಷ್ಟೊಂದು ಕಾಲ ಸರಿಯಿತು ಎಂದು ಹೇಳುವುದೆಲ್ಲಾ ನಮಗಷ್ಟೆ ಮುಖ್ಯ; ಈ ವಿಶ್ವಕ್ಕಲ್ಲ. ಆದರೂ ಕ್ಯಾಲೆಂಡರ್ ತಿರುವಿಹಾಕುವ ಈ ಗಳಿಗೆಯಲ್ಲಿ ಇಂಥ ಬ್ರಹ್ಮಾಂಡ ಚಿಂತನೆಗೆ ನಮ್ಮನ್ನು ಪ್ರೇರೇಪಿಸುವ ಕವಿಗಳನ್ನೂ ವಿಜ್ಞಾನಿಗಳನ್ನೂ ತತ್ವಜ್ಞಾನಿಗಳನ್ನೂ ಮುಖ್ಯವೆಂದೇ ಭಾವಿಸದೆ ನಿರ್ವಾಹವಿಲ್ಲ.

ತಾಳ-ಮೇಳ

ಪ್ರಿಯದರ್ಶನ ಭಟ್ಟ

ಇವರೇ ರಂಗಭೂಷಣರು

ಸೀತಾಪಹಾರ ಪ್ರಸಂಗ. ಸಂನ್ಯಾಸಿ ವೇಷ ಧರಿಸಿದ ರಾವಣನ ಪಾತ್ರಧಾರಿಯೊಬ್ಬರು-''ಸಂನ್ಯಾಸಿಗಳಿಗೆ ಒಂದು ಹಿಡಿ ಭಿಕ್ಷೆ ಹಾಕಿದರೆ ಅವರ ಕುಲಗೋತ್ರ ಉದ್ಧಾರವಾಗುತ್ತದೆ. ಸಂನ್ಯಾಸವೆಂದರೆ ಅದು ಅಷ್ಟು ಸುಲಭವಲ್ಲ. ಮನುಷ್ಯನೆಂದರೆ ಹತ್ತು ಮುಖ; ಹುಚ್ಚು ಮನಸ್ಸುಳ್ಳವನು. ಹುಚ್ಚು ಮನಸ್ಸಿನ ಹತ್ತು ಮುಖ. ಒಂದೊಂದು ಮುಖ ಒಂದೊಂದು ದರ್ಶನ ಮಾಡಿಸುತ್ತದೆ. ಅದಕ್ಕಾಗಿ ಆ ಒಂಭತ್ತು ಮುಖಗಳನ್ನು ವ್ಯವಸಾಯಾತ್ಮಿಕವಾದ ಜ್ಞಾನಮುಖದಲ್ಲಿ ಬಂಧಿಸಬೇಕು'' ಅನ್ನುತ್ತಾ ಪೀಠಿಕೆಯನ್ನು ಆರಂಭಿಸುತ್ತಾರೆ. ಹೀಗೆ ಹೇಳುತ್ತಲೇ ಅವರು ಡಾ|| ಶಿವರಾಮ ಕಾರಂತರ ಹುಚ್ಚು ಮನಸ್ಸಿನ ಹತ್ತು ಮುಖಗಳು ಕಾದಂಬರಿಯನ್ನು ವಾಚ್ಯವಾಗಿಸಿ, ಅದರೊಳಗೆ ತಾನು ಹತ್ತು ಮುಖವುಳ್ಳ ರಾವಣ ಎಂಬುದನ್ನು ಧ್ವನಿಸಿದ ಅವರ ಪರಿ ನಿಜಕ್ಕೂ ಚೇತೋಹಾರಿಯಾದುದು. ಪುರಾಣದ ರಾವಣನ ವ್ಯಕ್ತಿತ್ವಕ್ಕೆ ಮತ್ತು ಪೌರಾಣಿಕ ಆವರಣಕ್ಕೆ ಸ್ವಲ್ಪವೂ ಕುಂದಾಗದಂತೆ ಆಧುನಿಕ ಕಾದಂಬರಿಯೊಂದನ್ನು ಧ್ವನಿಸಿದ ಅವರ ಪ್ರತಿಭಾ ಸಂಪತ್ತು ನಿಜಕ್ಕೂ ಪ್ರಶಂಸಾರ್ಹವಾದುದು.

ಹಾಗೆಯೇ ಸೀತೆಯ ಬಳಿ ಬಂದ ಆತ ಅವಳ ಹತ್ತಿರ ''ಅಮ್ಮ, ನಾವು ಎಳವೆಯಲ್ಲೇ ಸಂಪತ್ತು, ಐಶ್ವರ್ಯ, ಹೆಂಡತಿ, ಮಕ್ಕಳು, ಅಧಿಕಾರ ಹೊಂದಿದವರು. ಇವೆಲ್ಲ ಏನಿದ್ದರೇನು? ಇವೆಲ್ಲ ರಸ ಅಲ್ಲ. ಕೈ ಕಸ ಅಮ್ಮ. ರಸ ಎಲ್ಲಿದೆ? ಅನ್ನುತ್ತಾ ತನ್ನ ತಾಯಿ ಕೈಕಸೆ ಎಂಬುದನ್ನೂ, ಜೊತೆಗೆ ತಾನೊಬ್ಬ ಲಂಪಟ ಎಂಬುದನ್ನೂ ಧ್ವನಿಸಿಬಿಡುತ್ತಾರೆ. ಮುಂದುವರಿದು ಅವರು-''ನಾನು ಬಹಳ ಕಡೆ ಭಿಕ್ಷೆ ಪಡೆದಿದ್ದೇನೆ. ಆದರೆ ಎಲ್ಲೂ ತೃಪ್ತಿಯಾಗುವಷ್ಟು ಭಿಕ್ಷೆ ಸಿಗಲಿಲ್ಲ. ಹೊಟ್ಟೆಯೇನೋ ತುಂಬುತ್ತದೆ. ಆದರೆ ಅಂತರಂಗ ತೃಪ್ತಿಯಾಗುವುದಿಲ್ಲ. ನಿಮ್ಮ ಕೈಯಿಂದ ಸಿಗುವ ಭಿಕ್ಷೆ ಅಂತರಂಗಕ್ಕೆ ತೃಪ್ತಿಯಾದೀತು!'' ಅನ್ನುತ್ತಾ ರಾವಣನ ಹತ್ತಿಕ್ಕಲಾಗದ ಕಾಮವನ್ನು ಅಭಿವ್ಯಕ್ತಿಸಿಬಿಡುತ್ತಾರೆ.

ಇದು ಸುಮಾರು 30-40 ವರ್ಷಗಳ ಹಿಂದಿನ ತಾಳಮದ್ದಳೆಯೊಂದರ ಅರ್ಥಗಾರಿಕೆಯ ಸೊಗಸು. ಇದರ ಧ್ವನಿಪೂರ್ಣತೆ, ಔಚಿತ್ಯವನ್ನು ಕೆಡಿಸಿದೆ ಆಧುನಿಕತೆಯನ್ನು ತಂದ ರೀತಿ, ಸಂಕ್ಷಿಪ್ತತೆಯಲ್ಲೂ ರಾವಣನ ವ್ಯಕ್ತಿತ್ವದ ಮುಖ್ಯಅಂಶ ಕಾಮುಕತನವನ್ನು ಅನಾವರಣಗೊಳಿಸಿದ ಪರಿ-ಇವೇ ಮೊದಲಾದ ವಾಗರ್ಥವನ್ನು ಇಂದು ಎಲ್ಲಿಂದ ನೋಡೋಣ ಹೇಳಿ. ಇದನ್ನು ಇಷ್ಟು ಸೊಗಸಾಗಿ ಹೇಳಿದವರು ಖ್ಯಾತ ಅರ್ಥಧಾರಿ ಶೇಣಿ ಗೋಪಾಲಕೃಷ್ಣ ಭಟ್ಟರು.

ಹಾಗೆಯೇ ಇನ್ನೊಂದು ಮನೋಜ್ಞವಾದ, ಮೈನವಿರೇಳಿಸುವ, ಮತ್ತೆಮತ್ತೆ ಮೆಲುಕು ಹಾಕುವ ಅರ್ಥಗಾರಿಕೆ. ಪ್ರಸಂಗ -ಕರ್ಣಪರ್ವದ ಒಂದು ಸನ್ನಿವೇಶ. ಅರ್ಜುನನ ಎದುರಿಗೆ ಕರ್ಣನ ಪಾತ್ರಧಾರಿ ಅಬ್ಬರಿಸುತ್ತಿದ್ದಾನೆ. ''ಎಲವೋ ಅರ್ಜುನ, ಶಿಖಂಡಿಯನ್ನು ಮುಂದಿಟ್ಟುಕೊಂಡು ಭೀಷ್ಮನನ್ನು ಗೆದ್ದ ಭೀಷ್ಮ ಪರ್ವ ಇದಲ್ಲ. ವಂಚನೆಯಿಂದ ದ್ರೋಣನನ್ನು ಗೆದ್ದ ದ್ರೋಣ ಪರ್ವ ಇದಲ್ಲ. ನೋಡು ಈಗ ನನ್ನ ಪ್ರತಾಪವನ್ನು'' ಎಂದು ಅಬ್ಬರಿಸಿ ಬೊಬ್ಬಿರಿಯುತ್ತಾನೆ. ಇಲ್ಲಿ ನಾವು ಗಮನಿಸಬೇಕಾದುದು ಕರ್ಣ ತನ್ನ ಯುದ್ಧಪರ್ವವನ್ನು ಆರಂಭಿಸಿದ್ದಾನೆ ಎಂಬುದನ್ನು. ಅದರಲ್ಲೂ ಒಂದು ವಿಶೇಷತೆಯೆಂದರೆ ಕರ್ಣ ಪರ್ವ ಎಂಬ ಶಬ್ದದ ಹಂಗೇ ಇಲ್ಲದೆ ಕರ್ಣಪರ್ವವನ್ನು ಧ್ವನಿಸಿದ್ದು.

ಮುಂದೆ ಇದೇ ಕರ್ಣ ತನ್ನ ಕೈಗೆ ಸಿಕ್ಕ ಸರ್ಪಾಸ್ತ್ರವನ್ನು ಹಿಡಿದುಕೊಂಡು ಅದಕ್ಕೂ ತನಗೂ ಅಭೇದವನ್ನು ಕಲ್ಪಿಸಿಕೊಂಡು, ಅರ್ಥ ಹೇಳುತ್ತಾ, ಪ್ರೇಕ್ಷಕರನ್ನು ಮತ್ತೊಂದು ಹೊಸ ಚಿಂತನೆಯತ್ತ ಹೊರಳಿಸುತ್ತಾನೆ. ''ಯುದ್ಧದ ಹಾಲು ಕಾದು ಕೆನೆ ಬರುವ ಈ ಆಯತ ಸಂದರ್ಭದಲ್ಲಿ ಸರ್ಪಾಸ್ತ್ರವೊಂದು ನನ್ನ ಕೈ ಸೇರಿತಲ್ಲ! ಮುಂದೆ ಅರ್ಧ ಸರ್ಪ. ಹಿಂದೆ ಅರ್ಧ ಬಾಣ. ಮೋಡ ಮುಸುಕಿದ ಸೂರ್ಯನ ಹಾಗೆ. ಕರ್ಣನ ಜೀವನವೂ ಹೀಗೆಯೇ. ನನ್ನ ಪ್ರತಾಪವನ್ನು ಜಗತ್ತಿಗೆ ತೋರಿಸಿದ್ದೇನೆ. ಆದರೆ ನಾನು ಯಾರು ಅಂತ ಜಗತ್ತಿಗೆ ಗೊತ್ತಿಲ್ಲ. ಇಲ್ಲಿ ಮೈವಡೆದ ಈ ಸರ್ಪಾಸ್ತ್ರ ಯಾರು? ಏನು? ಎಂಬುದು ಗೊತ್ತಿಲ್ಲ. ಹಾಗೆಯೇ ಕರ್ಣ ಯಾರು ಎಂಬುದೂ ಜಗತ್ತಿಗೆ ಗೊತ್ತಿಲ್ಲ'' ಅಂತ ಹೇಳುತ್ತಾನೆ. ಇಲ್ಲಿ ಸರ್ಪಾಸ್ತ್ರ ಮತ್ತು ಕರ್ಣನ ಅಭೇದ ಕಲ್ಪನೆಯೇ ಬಹು ಸುಂದರವಾದುದು. ಯಾವ ಶಬ್ದಾಡಂಬರವೂ ಇಲ್ಲದೆ ಸರಳವಾಗಿ, ಸಂಕ್ಷಿಪ್ತವಾಗಿ ಹೇಳಬೇಕಾದುದನ್ನು ಹೇಳಿದ ರೀತಿ ನಿಜಕ್ಕೂ ತಾಳಮದ್ದಳೆಗೇ ಒಂದು ಆದರ್ಶಪ್ರಾಯವಾದುದು. ಇಂದು ಇಂತಹವರನ್ನು ಎಲ್ಲಿಂದ ಹುಡುಕಿ ತರೋಣ ಹೇಳಿ. ಇದನ್ನು ನಿರೂಪಿಸಿದವರು ಖ್ಯಾತ ಅರ್ಥಧಾರಿ, ಚಿಂತಕ, ವಿಮರ್ಶಕ ಡಾ|| ಎಂ.ಪ್ರಭಾಕರ ಜೋಶಿ.

ಇನ್ನೊಬ್ಬ ಪ್ರಸಿದ್ಧ ಅರ್ಥಧಾರಿ, ಖ್ಯಾತ ಸಾಹಿತಿ ಡಾ|| ರಮಾನಂದ ಬನಾರಿಯವರು ವೀರಮಣಿ ಕಾಳಗದಲ್ಲಿ ಈಶ್ವರನ ಪಾತ್ರ ವಹಿಸಿಕೊಂಡು-''ಏರಿ ವೃಷಭನ ಚಂದ್ರಚೂಡ ಭಾಗೀರಥಿಯು'' ಪದ್ಯಕ್ಕೆ ಪೀಠಿಕೆ ಹೇಳುವಾಗ ''ನಾನೀಗ ವೃಷಭಾರೂಢನಾಗಿದ್ದೇನೆ; ಎತ್ತನ್ನು ಏರಿದ್ದೇನೆ; ಭಕ್ತರನ್ನು ಉದ್ಧರಿಸುವವನು ನಾನು; ಪತಿತರನ್ನು ಎತ್ತುವವನು ನಾನು; ನನ್ನ ವಾಹನ ಎತ್ತು. ಅದು ಭಕ್ತರನ್ನು ಎತ್ತು ಎಂದು ಹೇಳುತ್ತದೆ. ನಾನಿರುವುದೇ ಎತ್ತುವುದಕ್ಕಾಗಿ'' ಎಂದು ಹೇಳುತ್ತಾ ನಮ್ಮನ್ನು ಹೊಸ ಪ್ರಪಂಚಕ್ಕೇ ಒಯ್ದುಬಿಡುತ್ತಾರೆ.

ಇಂದಿನ ಅರ್ಥಧಾರಿಗಳಲ್ಲೂ ಇಂತಹವರು ಇದ್ದಾರೆ. ಅಂತಹವರೇ ತಾಳಮದ್ದಳೆ ರಂಗಭೂಮಿಯ ಸೌಂದರ್ಯವನ್ನು, ತತ್ತ್ವವನ್ನು ಉಳಿಸುವವರು. ಅಂತಹವರಲ್ಲಿ ಅಗ್ರಮಾನ್ಯರಾಗಿ ಕಾಣಸಿಗುವವರೆಂದರೆ ಖ್ಯಾತ ಅರ್ಥಧಾರಿ ರಾಧಾಕೃಷ್ಣ ಕಲ್ಚಾರ್ ಒಬ್ಬರು. ಯಕ್ಷಗಾನ ಕುರಿತಾಗಿಯೇ ಹತ್ತೆಂಟು ಪುಸ್ತಕಗಳನ್ನು ಬರೆದಿದ್ದಾರೆ. ಇನ್ನೊಬ್ಬರು ಸುಣ್ಣಂಬಳ ವಿಶ್ವೇಶ್ವರ ಭಟ್ಟರು. ವೃತ್ತಿಪರ ಕಲಾವಿದರು ಮತ್ತು ಅರ್ಥಧಾರಿಗಳು. ವೇಷ ಮತ್ತು ಅರ್ಥಧಾರಿಕೆ ಎರಡರಲ್ಲೂ ಸಮಾನ ಯೋಗ್ಯತೆಯುಳ್ಳವರು. ಪುರಾಣ-ಕಾವ್ಯೇತಿಹಾಸಗಳನ್ನು ಚೆನ್ನಾಗಿ ಓದಿಕೊಂಡವರು.

ಈ ಕಲಾವಿದರಂತೆಯೇ ತಾಳಮದ್ದಳೆ ರಂಗವನ್ನು ಶ್ರೀಮಂತಗೊಳಿಸುವಲ್ಲಿ, ತಮಗೆ ಕೊಟ್ಟ ಪಾತ್ರವನ್ನು ಅಚ್ಚುಕಟ್ಟಾಗಿ ನಿರ್ವಹಿಸುವಲ್ಲಿ, ಪುರಾಣಪ್ರಪಂಚವನ್ನು ಸಾಕಾರಗೊಳಿಸುವಲ್ಲಿ ತಮ್ಮದೇ ಆದ ವೈಶಿಷ್ಟ್ಯವನ್ನು ಮೂಡಿಸಿದ ಶ್ರೀಯುತರಾದ ಸರ್ಪಂಗಳ ಈಶ್ವರ ಭಟ್ಟ, ಗಣರಾಜ ಕುಂಬ್ಳೆ, ಗಣಪತಿ ಭಟ್ಟ ಸಂಕದಗುಂಡಿ, ಪವನ ಕಿರಣಕೆರೆ, ಹರೀಶ ಭಟ್ಟ ಬಳಂತಿಮಗರು, ಜಯಪ್ರಕಾಶ ಶೆಟ್ಟಿ ಪೆರ್ಮುದೆ, ನಾರಾಯಣ ಯಾಜಿ ಮೊದಲಾದವರು ನಿಜಕ್ಕೂ ಅಭಿನಂದನಾರ್ಹರು. ಇವರೆಲ್ಲರೂ ತಾಳಮದ್ದಳೆ ರಂಗಭೂಷಣರೇ.

ಇಂತಹ ಅರ್ಥಧಾರಿಗಳನ್ನು ಕುರಿತು ಗ.ನಾ.ಭಟ್ಟರು ಎರಡು ಮಾತುಗಳನ್ನು ಬರೆಯಬಹುದಿತ್ತು. ಯಾಕೆ ಬರೆದಿಲ್ಲವೋ ಗೊತ್ತಿಲ್ಲ. ಆದರೆ ಒಂದಂತೂ ಸತ್ಯ. ಎಲ್ಲ ಕ್ಷೇತ್ರದಲ್ಲೂ ಇರುವಂತೆಯೇ ತಾಳಮದ್ದಳೆ ಕ್ಷೇತ್ರದಲ್ಲೂ ಬೇಕಾದಷ್ಟು ಅಪಸವ್ಯಗಳಿವೆ; ಕುರೂಪಗಳಿವೆ; ವಿಕೃತಿಗಳಿವೆ; ಅತಿರೇಕಗಳಿವೆ. ಇವನ್ನು ದೊಡ್ಡದು ಮಾಡದೆ ಧನಾತ್ಮಕವಾಗಿ ಚಿಂತಿಸಿದರೆ ತಾಳಮದ್ದಳೆಯೆಂಬ ಆಕಾಶಗಂಗೆಯಲ್ಲಿ ಇನ್ನೂ ಅನೇಕ ಹೊಳೆಯುವ ನಕ್ಷತ್ರಗಳು ಸಿಗುತ್ತವೆ.

ಕೊನೆಯದಾಗಿ ಒಂದು ಮಾತನ್ನು ಹೇಳಬಯಸುತ್ತೇನೆ. ಅದು ದಿ|| ಕೊರ್ಗಿ ವೇಂಕಟೇಶ್ವರ ಉಪಾಧ್ಯಾಯರು ಹೇಳಿದ ಮಾತು. ಅದು ಎಲ್ಲ ಕಲಾವಿದರಿಗೂ ಅನುಸಂಧೇಯ ಅಂತ ಭಾವಿಸುತ್ತೇನೆ. ''ಯಕ್ಷಗಾನ ಕಲಾಕಾರನಿಗೆ ಬಹುಶ್ರುತತತ್ತ್ವ ಎಷ್ಟಿದ್ದರೂ ಕಡಿಮೆಯೇ. ಯುಕ್ತಿ, ಧರ್ಮಶಾಸ್ತ್ರ, ರಾಜನೀತಿ, ಯೋಗ, ಅಧ್ಯಾತ್ಮಜ್ಞಾನ, ಸುಭಾಷಿತ, ಗಾದೆಮಾತು, ಅಲಂಕಾರ, ಪೌರಾಣಿಕ ಕಥಾ ಪರಿಚಯ, ತರ್ಕಶಕ್ತಿ, ವರ್ಣನಕೌಶಲ, ಕಾವ್ಯಾಭ್ಯಾಸ, ನಿರೂಪಣತಂತ್ರ, ಮಾತು ಬೆಳೆಸುವ ಜಾಣ್ಮೆ, ಒಟ್ಟಂದದ ನೋಟ, ಪಾತ್ರದ ಪ್ರಧಾನ ಲಕ್ಷ್ಯ, ಪ್ರಸಂಗಾವಧಾನತೆ, ಅವಧಿಗನುಗುಣವಾಗಿ ಹಿಗ್ಗಿಸುವ ಕುಗ್ಗಿಸುವ ಕಲೆ, ಭಾಷಾಶುದ್ಧಿ, ಅಭಿನಯ ಸಿದ್ಧಿ, ದೈಹಿಕ ಸಾಮರ್ಥ್ಯ, ಯಾವ ಪಾತ್ರವನ್ನಾದರೂ ನಿರ್ವಹಿಸಬಲ್ಲೆ ಎಂಬ ಆತ್ಮವಿಶ್ವಾಸ, ಕಂಠತ್ರಾಣ, ಈ ಮುಂತಾದ ಹಾಗೂ ಇನ್ನೂ ಅನೇಕ ಗುಣಗಳನ್ನು ಕಲಾಕಾರ ತನ್ನದಾಗಿಸಿಕೊಳ್ಳಬೇಕು''. ಇವನ್ನು ಅರ್ಥಧಾರಿಗಳು ಸಾಧಿಸಿದ್ದೇ ಆದರೆ ತಾಳಮದ್ದಳೆಯೆಂಬ ಈ ಕಲಾಪ್ರಕಾರ ವಿಶ್ವವಿನೂತನವಾಗುವುವದರಲ್ಲಿ ಸಂಶಯವೇ ಇಲ್ಲ. ವಿಶ್ವವಾಣಿ ಸಂಪಾದಕ ವಿಶ್ವೇಶ್ವರ ಭಟ್ಟರು ಇದಕ್ಕೊಂದು ಮುಕ್ತ ವೇದಿಕೆ ಕಲ್ಪಿಸಿದ್ದು ಅದೂ ಸಾರ್ಥಕವಾಗುತ್ತದೆ.

ಕರಾವಳಿ ಸುರಕ್ಷತೆ: ಕರ್ನಾಟಕದ ಹೊಣೆಗಾರಿಕೆ, ಭಾರತದ ಭದ್ರತೆ

ಗಂಟಾಘೋಷ
ಗುರುರಾಜ್ ಗಂಟಿಹೊಳೆ
vveditoped@gmail.com

ಭಾರತದ ಭೌಗೋಳಿಕ ಸುರಕ್ಷತೆ ಎಂದರೆ ಕೇವಲ ಭೂಸೀಮೆಗಳ ರಕ್ಷಣೆಯಲ್ಲ. 7,500 ಕಿಮೀಗೂ ಅಧಿಕ ಉದ್ದದ ಕರಾವಳಿಯು ಭಾರತದ ಆರ್ಥಿಕ, ವ್ಯಾಪಾರ, ಶಕ್ತಿ ಮತ್ತು ಭದ್ರತಾ ವ್ಯವಸ್ಥೆಯ ಜೀವನಾಡಿಯಾಗಿದೆ. ಆದರೆ ಇಂದಿನ ದಿನಗಳಲ್ಲಿ ಕರಾವಳಿ ಪ್ರದೇಶಗಳು ದೇಶದ ಸಾಫ್ಟ್ ಬಾರ್ಡರ್ ಆಗಿ ರೂಪಾಂತರಗೊಳ್ಳುತ್ತಿವೆ.

ಬಹು ಆಯಾಮದ ಭದ್ರತಾ ವ್ಯವಸ್ಥೆಯು ಕರಾವಳಿಯಲ್ಲಿ ಸಂಪೂರ್ಣ ಹೈಟೆಕ್ ತಂತ್ರಜ್ಞಾನದ ಆಧಾರಿತವಾಗಿ ಜಾರಿಯಾಗಬೇಕಿದೆ. ಈಗಿರುವ ವ್ಯವಸ್ಥೆಯಲ್ಲಿ ಎಷ್ಟೇ ಭದ್ರತೆ ಬಗ್ಗೆ ವಿವೇಚಿಸಿದರೂ ಇತ್ತೀಚಿನ ದಶಕಗಳಲ್ಲಿ ಉಗ್ರವಾದ, ಕಳ್ಳಸಾಗಣೆ, ಮಾದಕ ದ್ರವ್ಯ ವ್ಯಾಪಾರ, ಮಾನವ ಕಳ್ಳಸಾಗಣೆ, ಹಣಕಾಸು ಅಪರಾಧಗಳು ಮತ್ತು ಅಂತರಾಷ್ಟ್ರೀಯ ಅಪರಾಧ ಜಾಲಗಳ ಚಟುವಟಿಕೆಗಳು ನಡೆಯುತ್ತಿರುವ ಹಿನ್ನೆಲೆಯಲ್ಲಿ ಕರಾವಳಿ ಸುರಕ್ಷತೆ ಎಂಬ ವಿಷಯವು ಕೇವಲ ಕರಾವಳಿ ರಾಜ್ಯಗಳ ಸಮಸ್ಯೆಯಾಗದೇ, ದೇಶದ ಸಮಗ್ರ ಭದ್ರತೆಯ ಮೂಲ ಅಂಶವಾಗಿ ಪರಿಣಮಿಸಿದೆ.

ಮುಂಬೈ ಉಗ್ರ ದಾಳಿ ದೇಶಕ್ಕೆ ನೀಡಿದ ಅತ್ಯಂತ ದೊಡ್ಡ ಪಾಠವೆಂದರೆ, ಕರಾವಳಿ ಸುರಕ್ಷತೆ ಎಂದರೆ ರಾಷ್ಟ್ರೀಯ ಸುರಕ್ಷತೆ. ಈ ಹಿನ್ನಲೆಯಲ್ಲಿ, ಕರಾವಳಿ ಭದ್ರತೆಯಲ್ಲಿ ಕೋಸ್ಟಲ್ ಗಾರ್ಡ್ ವಿಭಾಗದಲ್ಲಿ, ರಾಜ್ಯ ಪೋಲೀಸ್-ಮರೈನ್ ಪೋಲೀಸ್ -ಪೋರ್ಟ್ ಅಥಾರಿಟಿಸ್-ಇಂಟೆಲಿಜೆನ್ಸ್ ಏಜೆನ್ಸಿಗಳ ನಡುವೆ ಪರಿಣಾಮಕಾರಿ ಸಂಯೋಜನೆಯ ಅಗತ್ಯತೆ ತೀವ್ರವಾಗಿದೆ. ವಿಶೇಷವಾಗಿ ಕರ್ನಾಟಕದ ಕರಾವಳಿಯ ಉಡುಪಿ, ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಗಳು ದೇಶಕ್ಕೆ ಒಂದು ಮಾದರಿ ಆಗಿ ರೂಪುಗೊಳ್ಳುವ ಅಪಾರ ಸಾಧ್ಯತೆ ಹೊಂದಿವೆ. ಕರಾವಳಿಯು ಭೂಸೀಮೆಗಳಂತಿಲ್ಲದೆ, ಕರಾವಳಿ ಪ್ರದೇಶಗಳು ಸದಾ ತೆರೆಯಲ್ಪಟ್ಟಂತಿವೆ. ಅಸಂಖ್ಯಾತ ಮೀನುಗಾರಿಕಾ ದೋಣಿಗಳು, ನೂರಾರು ಲ್ಯಾಂಡಿಂಗ್ ಪಾಯಿಂಟ್‌ಗಳು, ರಾತ್ರಿ ಸಮಯದ ಸಂಚಾರ, ಸ್ಥಳೀಯ ಜನರೊಂದಿಗೆ ಬೆರೆತು ಹೋಗುವ ಅಪರಾಧಿಗಳು ಕರಾವಳಿ ವ್ಯಾಪ್ತಿಯಲ್ಲಿ ಸಾಧ್ಯತೆ ಹೆಚ್ಚಾಗಿರುತ್ತದೆ.

ಭೂಸೀಮೆಗಳಲ್ಲಿ ಬಿಎಸ್‌ಎಫ್/ಐಟಿಬಿಪಿ/ ಆರ್ಮಿ ಜೊತೆಗೆ ಫೆನ್ಸ್, ಚೆಕ್ ಪಾಯಿಂಟ್, ನಿರಂತರ ಗಸ್ತುಗಾವಲು ಇದ್ದೇ ಇರುತ್ತದೆ. ಇದೇ ತೆರನಾಗಿ, ಕರಾವಳಿಯಲ್ಲಿ ಸೂಕ್ಷ್ಮವಾದ/ವಿವಾದಾತ್ಮಕ ಗಡಿವ್ಯಾಪ್ತಿ, ಅತಿಕ್ರಮಿಸುವ ಜವಾಬ್ದಾರಿ, ಕೊನೆ ಹಂತದ ದುರ್ಬಲ ಪೋಲಿಸ್ ವ್ಯವಸ್ಥೆ ಮುಂತಾದವುಗಳು ಅಪರಾಧಿಗಳಿಗೆ ಕಳ್ಳರಿಗೆ ಕಡಿಮೆ ಅಪಾಯ; ಹೆಚ್ಚು ಲಾಭ ಕೊಡುವ ರಹದಾರಿಗಳಂತಾಗಿವೆ ಎನ್ನಬಹುದು. ಇದು ಕರಾವಳಿ ಪ್ರದೇಶ ಹೊಂದಿರುವ ಜಗತ್ತಿನ ಎಲ್ಲ ರಾಷ್ಟ್ರಗಳ ನಿತ್ಯ ಸಮಸ್ಯೆಯೂ ಆಗಿದೆ.

ಕರ್ನಾಟಕವು 320 ಕಿಲೋಮೀಟರ್‌ಗಳಷ್ಟು ಕರಾವಳಿಯನ್ನು ಹೊಂದಿರುವ ಪ್ರಮುಖ ರಾಜ್ಯ. ಅರಬ್ಬಿ ಸಮುದ್ರಕ್ಕೆ ಮುಖವಾಗಿರುವ ಉತ್ತರಕನ್ನಡ, ಉಡುಪಿ ಮತ್ತು ದಕ್ಷಿಣಕನ್ನಡ ಜಿಲ್ಲೆಗಳು ರಾಜ್ಯದ ಆರ್ಥಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಜೀವನದಲ್ಲಿ ನಿರ್ಣಾಯಕವಾಗಿವೆ. ಆದ್ದರಿಂದ ಸಮುದ್ರತೀರದ ಸುರಕ್ಷತೆಯು ಕರ್ನಾಟಕದ ಹೊಣೆಗಾರಿಕೆಯ ಜೊತೆಗೆ ಭಾರತದ ಭದ್ರತೆಯ ಬಗ್ಗೆ ಸೂಕ್ಷ್ಮ ಪ್ರದೇಶವೂ ಆಗಿದೆ.

ಭಾರತದ ಭೂಸೀಮೆಗಳು ಕಟ್ಟುನಿಟ್ಟಾದ ಭದ್ರತಾ ವ್ಯವಸ್ಥೆಯಿಂದ ರಕ್ಷಿಸಲ್ಪಟ್ಟಿದ್ದರೂ, ಸಮುದ್ರದ ಮೂಲಕ ಇರುವ ಕರಾವಳಿ ಪ್ರದೇಶಗಳು ಸಹಜವಾಗಿ ಸಾಫ್ಟ್ ಬಾರ್ಡರ್ ಎಂದು ಪರಿಗಣಿಸಲಾಗುತ್ತದೆ. ಇದಕ್ಕೆ, ಸಮುದ್ರದಲ್ಲಿ ನಿರಂತರ ಪಹರೆ ನಡೆಸುವುದು ಭೂಮಿಗಿಂತ ಹೆಚ್ಚು ಸಂಕೀರ್ಣವಾಗಿರುವುದು, ಸಾವಿರಾರು ಮೀನುಗಾರರ ದೋಣಿಗಳು ದಿನನಿತ್ಯ ಸಮುದ್ರಕ್ಕೆ ತೆರಳುತ್ತವೆಯಾದ್ದರಿಂದ ರಕ್ಷಣಾ ಸೂಕ್ಷ್ಮತೆ ಹೆಚ್ಚಾಗಿರುವುದರ ಜೊತೆಗೆ, ಸಣ್ಣ ದ್ವೀಪಗಳು, ನದಿಮುಖಗಳು, ಬ್ಯಾಕ್‌ವಾಟರ್‌ಗಳು ಅಪರಾಧಿಗಳಿಗೆ ಅಡಗಿಕೊಳ್ಳುವ ಅವಕಾಶ ನೀಡುತ್ತವೆ.

2008ರ ಮುಂಬೈ ದಾಳಿ ಈ ಸಾಫ್ಟ್ ಬಾರ್ಡರ್ ಅಪಾಯವನ್ನು ದೇಶಕ್ಕೆ ಕಣ್ಣಿಗೆ ಕಟ್ಟುವಂತೆ ತೋರಿಸಿತು. ಸಮುದ್ರ ಮಾರ್ಗದ ಮೂಲಕ ಉಗ್ರರು ದೇಶ ಪ್ರವೇಶಿಸಿದ ಈ ಘಟನೆ ನಂತರ ಕರಾವಳಿ ಭದ್ರತೆಗೆ ರಾಷ್ಟ್ರ ಮಟ್ಟದಲ್ಲಿ ಹೊಸ ನೀತಿಗಳು ರೂಪುಗೊಂಡವು. ಕರ್ನಾಟಕದ ಕರಾವಳಿಯ ಭೌಗೋಳಿಕ ಮತ್ತು ಆರ್ಥಿಕ ಮಹತ್ವವನ್ನು ಗಮನಿಸಿದಾಗ, ಕರ್ನಾಟಕ ಕರಾವಳಿಯು ಪಶ್ಚಿಮಘಟ್ಟಗಳ ಸಾಲಿನಲ್ಲಿ ಹರಡಿದೆ. ಆರ್ಥಿಕ ಮಹತ್ವ ಕೂಡ ಹೆಚ್ಚು ಗಮನಾರ್ಹವಾಗಿದ್ದು, ನ್ಯೂ ಮಂಗಳೂರು ಬಂದರು ವ್ಯವಸ್ಥೆಯು ಕಬ್ಬಿಣದ ಅದಿರು, ಕಲ್ಲಿದ್ದಲು, ಪೆಟ್ರೋಲಿಯಂ ಉತ್ಪನ್ನಗಳ ಪ್ರಮುಖ ದ್ವಾರವೆಂದೇ ಗುರುತಿಸಿಕೊಳ್ಳುತ್ತದೆ. ಇಲ್ಲಿನ ಮೀನುಗಾರಿಕೆಯು ಲಕ್ಷಾಂತರ ಜನರ ಜೀವನಾಧಾರವಾಗಿದೆ. ಜೊತೆಗೆ, ಪ್ರವಾಸೋದ್ಯಮ ಕ್ಷೇತ್ರಗಳು, ಬೀಚ್‌ಗಳು, ಧಾರ್ಮಿಕ ಕ್ಷೇತ್ರಗಳು, ಶಿಕ್ಷಣ ಕೇಂದ್ರಗಳು ಬಹಳಷ್ಟಿದ್ದು, ಈ ಎಲ್ಲಾ ಚಟುವಟಿಕೆಗಳು ಕರಾವಳಿಯ ಭದ್ರತೆ ಕುಸಿದರೆ ನೇರವಾಗಿ ಹೊಡೆತಕ್ಕೆ ಒಳಗಾಗುತ್ತವೆ.

ಕರಾವಳಿ ಭದ್ರತೆಗೆ ಇರುವ ಅಪಾಯಗಳನ್ನು ನಾವು ಗಮನಿಸಿದಾಗ, ಕಳ್ಳಸಾಗಣೆ ಮತ್ತು ಮಾದಕ ದ್ರವ್ಯ ವ್ಯಾಪಾರ ವಿಚಾರವಾಗಿ, ಅಂತರಾಷ್ಟ್ರೀಯ ಡ್ರಗ್ ಕಾರ್ಟೆಲ್‌ಗಳು ಸಮುದ್ರ ಮಾರ್ಗವನ್ನು ಹೆಚ್ಚು ಬಳಸುತ್ತಿವೆ ಎಂಬ ವರದಿಯಿದೆ. ಕರ್ನಾಟಕ ಕರಾವಳಿ ಶ್ರೀಲಂಕಾ, ಪಾಕಿಸ್ತಾನ, ಮಧ್ಯಪ್ರಾಚ್ಯ ಮತ್ತು ದಕ್ಷಿಣ ಏಷ್ಯಾದ ಮಾರ್ಗಗಳಿಗೆ ಸಮೀಪದಲ್ಲಿರುವುದರಿಂದ ಅಪಾಯದ ಮಟ್ಟ ಯಾವತ್ತಿದ್ದರೂ ಹೆಚ್ಚಾಗಿಯೇ ಎಂಬುದನ್ನು ನಾವು ಗಂಭೀರವಾಗಿ ಪರಿಗಣಿಸಬೇಕಿದೆ.

ಉಗ್ರವಾದ ಮತ್ತು ಅತಿರೇಕ ಚಟುವಟಿಕೆಗಳು, ಸಮುದ್ರ ಮಾರ್ಗದ ಮೂಲಕ ಶಸ್ತ್ರಾಸ್ತ್ರ ಸಾಗಣೆ, ಉಗ್ರರ ನುಸುಳಿಕೆ ಸಂಭವಿಸುವ ಸಾಧ್ಯತೆ ಸದಾ ಇರುತ್ತದೆ. ಇದೆಲ್ಲದರ ನಡುವೆ, ಮಾನವ ಕಳ್ಳಸಾಗಣೆ, ಅಕ್ರಮ ವಲಸೆ, ಮಹಿಳೆಯರು ಮತ್ತು ಮಕ್ಕಳ ಕಳ್ಳಸಾಗಣೆ ಕರಾವಳಿ ಪ್ರದೇಶಗಳಲ್ಲಿ ಕಂಡುಬರುವ ಗಂಭೀರ ಸಮಸ್ಯೆಯಾಗಿದೆ ಎಂದು ಜಾಗತಿಕ ಮಾಧ್ಯಮಗಳು ಎಚ್ಚರಿಸುತ್ತಿವೆ. ತೈಲ ಸೋರಿಕೆ, ಅಕ್ರಮ ಮರಳು ಗಣಿಗಾರಿಕೆ, ಸಮುದ್ರ ಮಾಲಿನ್ಯವೂ ಭದ್ರತೆ ಭಾಗವೇ ಆಗಿದೆ. ಹಾಗೆಯೇ, ಪರಿಸರ ಅಪಾಯಗಳನ್ನು ಯಥೇಚ್ಛವಾಗಿ ಉಂಟುಮಾಡುತ್ತವೆ. ಭಾರತದ ಕರಾವಳಿ ಭದ್ರತಾ ವ್ಯವಸ್ಥೆಯು ಭಾರತೀಯ ನೌಕಾಪಡೆ ಮೂಲಕ ಸಮುದ್ರದ ಹೊರ ವಲಯದ ರಕ್ಷಣೆಯ ಹೊಣೆ ಹಾಗೂ ಅಂತಾರಾಷ್ಟ್ರೀಯ ಜಲ ಪಹರೆ ಜವಾಬ್ದಾರಿ ಹೊತ್ತಿದೆ ಎನ್ನಬಹುದು. ಭಾರತೀಯ ಕರಾವಳಿ ರಕ್ಷಣಾ ಪಡೆಯು ಕರಾವಳಿ ಸಮೀಪದ ಭದ್ರತೆ, ಶೋಧ-ರಕ್ಷಣೆ, ಕಳ್ಳಸಾಗಣೆ ತಡೆ ವಿಚಾರಗಳ ಹೊಣೆ ಹೊತ್ತಿದೆ ಎಂದು ಹೇಳಬಹುದು.

ಕರ್ನಾಟಕದಲ್ಲಿ ಕರಾವಳಿ ಭದ್ರತಾ ವ್ಯವಸ್ಥೆ ಅಡಿಯಲ್ಲಿ ಮರೈನ್ ಪೊಲೀಸ್ ಠಾಣೆಗಳು ಬರುತ್ತಿದ್ದು, ಕರ್ನಾಟಕದಲ್ಲಿ ಹಲವಾರು ಮರೈನ್ ಪೊಲೀಸ್ ಠಾಣೆಗಳು ಸ್ಥಾಪಿತವಾಗಿವೆ. ಆದರೆ, ಸಿಬ್ಬಂದಿ ಕೊರತೆ, ದೋಣಿಗಳ ತಾಂತ್ರಿಕ ಸಮಸ್ಯೆ, ತರಬೇತಿ ಅಭಾವದ ಸಮಸ್ಯೆಗಳು ಕಾರ್ಯಕ್ಷಮತೆಯನ್ನು ಕುಗ್ಗಿಸುತ್ತಿವೆ. ಇಂತಹ ವಿಚಾರದಲ್ಲಿ ಅತ್ಯಾಧುನಿಕ ವ್ಯವಸ್ಥೆ, ಸೂಕ್ತ ತರಬೇತಿ ಹಾಗೂ ಸುಸಜ್ಜಿತ ಶಸ್ತ್ರಾಸ್ತ್ರಗಳ ಅಗತ್ಯತೆ ಹೆಚ್ಚಾಗಿದೆ. ರಾಜ್ಯ ಪೊಲೀಸ್ ಮತ್ತು ಗುಪ್ತಚರ ವ್ಯವಸ್ಥೆಯು ಕರಾವಳಿ ಜಿಲ್ಲೆಗಳಲ್ಲಿ ಇಂಟೆಲಿಜೆನ್ಸ್ ಜಾಲವನ್ನು ಇನ್ನಷ್ಟು ಬಲಪಡಿಸುವ ಅಗತ್ಯವಿದೆ.

ಮೀನುಗಾರ ಸಮುದಾಯವು ಭದ್ರತೆಯ ಮೊದಲ ಸಾಲು ಎಂಬ ಮಾತಿದೆ. ಮೀನುಗಾರರು ಸಮುದ್ರದ ನೈಜ ಕಾವಲುಗಾರರು, ಅವರ ಸಹಕಾರವಿಲ್ಲದೆ ಕರಾವಳಿ ಭದ್ರತೆ ಸಾಧ್ಯವಿಲ್ಲ ಎಂಬುದನ್ನ ಭದ್ರತಾ ವಲಯ ಹಾಗೂ ಅದರ ಮುಖ್ಯ ನಿರ್ವಾಹಕರು ಅರಿಯಬೇಕಿದೆ. ದಶಕಗಳ ಕಾಲ ಅವರೊಂದಿಗೆ ಒಡನಾಟ ಚೆನ್ನಾಗಿದ್ದರೂ, ಬೋಟ್ ನೋಂದಣಿ, ಜಿಪಿಎಸ್, ಟ್ರಾನ್ಸ್‌ಪಾಂಡರ್ ವ್ಯವಸ್ಥೆ ಸೇರಿದಂತೆ ಭದ್ರತಾ ಅರಿವು ಕಾರ್ಯಕ್ರಮಗಳು ಹೆಚ್ಚಾಗಿ ನಡೆದಲ್ಲಿ ಇವು ಮೀನುಗಾರರನ್ನು ವ್ಯವಸ್ಥೆಯ ಭಾಗವಾಗಿಸುತ್ತವೆ.

ತಂತ್ರಜ್ಞಾನ ಮತ್ತು ಕರಾವಳಿ ಭದ್ರತೆ ಕುರಿತು, ವಿವೇಚಿಸಿದಾಗ, ಕೋಸ್ಟಲ್ ಸರ್ವೆಲೆನ್ಸ್ ರಾಡಾರ್ ಸಿಸ್ಟಮ್ (ಸಿಎಸ್‌ಆರ್‌ಎಸ್) ಮತ್ತು ಆಟೋಮ್ಯಾಟಿಕ್ ಐಡೆಂಟಿಫಿಕೇಷನ್ ಸಿಸ್ಟಮ್ (ಎಐಎಸ್) ಜೊತೆಗೆ, ಡ್ರೋನ್ ಮತ್ತು ಸ್ಯಾಟಲೈಟ್ ಮೇಲ್ವಿಚಾರಣೆಯಂತಹ ತಂತ್ರಜ್ಞಾನಗಳು ಮಾನವ ಶಕ್ತಿಗೆ ಪೂರಕವಾಗಬೇಕು. ಇಂತಹ ಕೆಲವು ಪ್ರಮುಖ ಕಾರ್ಯಯೋಜನೆಗಳಿಗೆ, ವಿಶೇಷ ತರಬೇತಿ ಹಾಗೂ ಸಾರ್ವಜನಿಕರ ಸಮನ್ವಯತೆ ಹೊಂದಬೇಕಾದರೆ, ಕೇಂದ್ರ-ರಾಜ್ಯ ಸಮನ್ವಯದ ಸಹಕಾರ ಅಗತ್ಯ.

ಕರಾವಳಿ ಭದ್ರತೆ ಒಂದು ಸಂಯುಕ್ತ ಹೊಣೆಗಾರಿಕೆಯಾಗಿದ್ದು, ಇದಕ್ಕೆ ಕೇಂದ್ರ ಸರ್ಕಾರದ ನೀತಿ, ರಾಜ್ಯ ಸರ್ಕಾರದ ಅನುಷ್ಠಾನದ ಜೊತೆಗೆ, ಸ್ಥಳೀಯ ಸಂಸ್ಥೆಗಳ ಸಹಕಾರ ಎಂಬ ಮೂರು ಪ್ರಮುಖ ಕೊಂಡಿಗಳು ಬೇಕೇಬೇಕು. ಇದಕ್ಕೆ, ಕರ್ನಾಟಕದ ಹೊಣೆಗಾರಿಕೆಯ ನೀತಿ ಮತ್ತು ಕಾರ್ಯಯೋಜನೆ ವ್ಯವಸ್ಥಿತವಾಗಿರಬೇಕಿದೆ. ಇದಕ್ಕಾಗಿ, ಮರೈನ್ ಪೊಲೀಸ್ ಬಲವರ್ಧನೆ, ಬಂದರು ಭದ್ರತೆ, ಕರಾವಳಿ ಗ್ರಾಮಗಳಲ್ಲಿ ಅರಿವು, ತ್ವರಿತ ಪ್ರತಿಕ್ರಿಯಾ ಘಟಕಗಳು ಅತ್ಯಗತ್ಯ. ಈ ವಿಚಾರದಲ್ಲಿ, ಭವಿಷ್ಯದ ಸವಾಲುಗಳು ಮತ್ತು ಅವಕಾಶಗಳು, ಡಿಜಿಟಲ್ ಅಪರಾಧಗಳು, ಹವಾಮಾನ ಬದಲಾವಣೆ, ಅಂತಾರಾಷ್ಟ್ರೀಯ ಸಹಕಾರದಂತಹ ಪ್ರಮುಖ ವಿಚಾರಗಳು ಮುನ್ನೆಲೆಗೆ ಬರುತ್ತವೆ.

ಕರ್ನಾಟಕ ಕರಾವಳಿ ರಕ್ಷಣೆಯ ವೈಶಿಷ್ಟ್ಯಗಳು ಮತ್ತು ಇತರ ಸಮುದ್ರತೀರ ರಾಜ್ಯಗಳಾದ ತೆಲುಗು ರಾಜ್ಯಗಳು, ತಮಿಳುನಾಡು, ಕೇರಳ, ಗುಜರಾತ್, ಮಹಾರಾಷ್ಟ್ರ ರಾಜ್ಯಗಳ ರಕ್ಷಣಾ ವ್ಯವಸ್ಥೆಗಳ ವ್ಯತ್ಯಾಸ ಮತ್ತು ಸೌಲಭ್ಯಗಳ ಕುರಿತು ಗಮನಿಸಿದಾಗ, ಮಲ್ಟಿ ಲೇಯರ್, ಟೆಕ್ನಾಲಜಿ, ಕಮ್ಯೂನಿಟಿ ಮತ್ತು ರ್‍ಯಾಪಿಡ್ ರೆಸ್ಪಾನ್ಸ್ ಸೇರಿದಂತೆ ನಾಲ್ಕು ಅಂಶಗಳನ್ನು ಸಮರ್ಪಕವಾಗಿ ಹೊಂದಿರುವ ರಾಜ್ಯಗಳೇ ಅತ್ಯುತ್ತಮ ಮಾಡೆಲ್ ಎಂದು ಭಾರತದ ಸಮುದ್ರ ರಕ್ಷಣಾ ವ್ಯವಸ್ಥೆಯಲ್ಲಿ ಗುರುತಿಸಲಾಗಿದೆ. ಇವುಗಳಲ್ಲಿ ಮೊದಲ ಸ್ಥಾನದಲ್ಲಿ ನಿಲ್ಲುವುದು ಗುಜರಾತ್. ಬಲವಾದ ಮರೈನ್ ಪೊಲೀಸ್, ಕೋಸ್ಟ್ ಗಾರ್ಡ್, ನೇವಿ ಕೋಆರ್ಡಿನೇಶನ್ ಜೊತೆಗೆ ಆಯಿಲ್, ಗ್ಯಾಸ್, ಇಂಡಸ್ಟ್ರಿ ಸೇರಿದಂತೆ ಪ್ರೈವೇಟ್ ಪೋರ್ಟ್ ಸೆಕ್ಯುರಿಟಿ ಇಂಟಿಗ್ರೇಶನ್ ಹೊಂದಿದೆ. ಶರವೇಗದ ಇಂಟರ್-ಸೆಪ್ಟರ್ ಬೋಟುಗಳು, ರಾತ್ರಿ ಕಾರ್ಯಾಚರಣೆ ಪಡೆಗಳು ಅತ್ಯಂತ ಆಧುನಿಕವಾಗಿವೆ.

ನಂತರದಲ್ಲಿ ಮಹಾರಾಷ್ಟ್ರವು ಪರಿಗಣಿಸಲ್ಪಡುತ್ತಿದ್ದು, ಮುಂಬೈ ಉಗ್ರದಾಳಿಯ ಬಳಿಕ, ಭಾರೀ ಮಟ್ಟದಲ್ಲಿ ಸುರಕ್ಷತೆಯನ್ನು ಹೆಚ್ಚಿಸಲಾಗಿದೆ. ಕೋಸ್ಟಲ್ ಪೋಲೀಸ್ ಠಾಣೆಗಳು ವ್ಯಾಪಕ ಹಾಗೂ ತ್ವರಿತಮಟ್ಟದಲ್ಲಿ ರಾಡಾರ್ ಸಮೂಹ ವ್ಯವಸ್ಥೆ, ಆಧುನಿಕ ಸಾಧನಗಳೊಂದಿಗೆ ಹೈ-ರೆಡಿನೆಸ್ ಮಟ್ಟದಲ್ಲಿ ಪಡೆಗಳಿವೆ ಎನ್ನಬಹುದು. ಪಕ್ಕದ ತಮಿಳುನಾಡು ರಾಜ್ಯವು ಮರೈನ್ ಎಲೈಟ್ ಫೋರ್ಸ್ (ಎಂಇಎಫ್) ಎಂಬ ಅತ್ಯಾಧುನಿಕ ರಕ್ಷಣಾ ಪಡೆಗಳೊಂದಿಗೆ ಕಡಲು ಕಾವಲಿಗೆ ನಿಂತಿದೆ. ಇವುಗಳಿಗೆ ಹೋಲಿಸಿದಲ್ಲಿ, ನಮ್ಮ ಕರ್ನಾಟಕ ಕರಾವಳಿಯ ಸುರಕ್ಷತೆ ಬಗ್ಗೆ ತಳೆದಿರುವ ನಿಲುವು, ಹೊಂದಿರುವ ಸುರಕ್ಷಾ ಸಾಧನಗಳು ಏನೇನೂ ಅಲ್ಲವೇನೋ ಎಂದೆನಿಸುತ್ತದೆ.

ಭಾರತೀಯ ನೌಕಾಪಡೆಯ ಅಂತಾರಾಷ್ಟ್ರೀಯ ಸಮುದ್ರದ ಗಡಿಯನ್ನು ರಕ್ಷಣೆ, ಭಾರತೀಯ ಕರಾವಳಿ ರಕ್ಷಾದಳದಿಂದ ಎಕ್ಸ್‌ಕ್ಲೂಸಿವ್ ಎಕನಾಮಿಕ್ ಝೋನ್ ತನಕ ರಕ್ಷಣಾ-ತಡೆಗಟ್ಟುವ ಕಾರ್ಯ ಮತ್ತು ರಾಜ್ಯಮಟ್ಟದ ಸಮುದ್ರ ಮರಿನ್ ಪೊಲೀಸ್, ಸಮುದ್ರ ತೀರದ ಹೊರಗಿನ ನೀರು ಪ್ರದೇಶಗಳಲ್ಲಿ ತಡೆ ಮತ್ತು ಸಣ್ಣ ರಿಪ್ಲ್ಯುಟೇಷನ್ ಕಾರ್ಯ ಸೇರಿದಂತೆ ಈ ಬಹುಆಯಾಮದ ವ್ಯವಸ್ಥೆಯಲ್ಲಿ ಐಸಿಜಿ ಮತ್ತು ರಾಜ್ಯ ಮರಿನ್ ಪೊಲೀಸ್‌ಗಳ ಸಹಕಾರದಲ್ಲಿಯೇ ಕಾರ್ಯನಿರ್ವಹಿಸುತ್ತವೆ. ಇತರ ಸಮುದ್ರ ರಾಜ್ಯಗಳ ರಕ್ಷಣಾ ವ್ಯವಸ್ಥೆ ಹಾಗೂ ವ್ಯತ್ಯಾಸ ಗಮನಿಸಿದಾಗ, ಆಂಧ್ರಪ್ರದೇಶವು 1000 ಕಿಮೀಗೂ ಅಧಿಕ ಕರಾವಳಿಯನ್ನು ಹೊಂದಿದೆ. ಆದರೆ ನೌಕಾ ಬೋಟ್‌ಗಳ ನಿರ್ವಹಣೆ, ಫಾಸ್ಟ್ ಇಂಟರ್‌ಸೆಪ್ಟರ್ ಬೋಟ್ ಬಳಕೆ ಸೇರಿದಂತೆ ಇತರೆ ಹೆಚ್ಚಿನ ಸೌಕರ್ಯಗಳ ಅಭಾವವೂ ಇದೆ ಎನ್ನಲಾಗಿದೆ.

ಕೇರಳ ರಾಜ್ಯವು 569 ಕಿಮೀ ದಕ್ಷಿಣ-ಪಶ್ಚಿಮ ಕರಾವಳಿ ಹೊಂದಿದ್ದು, ಐಸಿಜಿಯೊಂದಿಗೆ ಹೊಸ ವಿಳಿಂಜಮ್-ಜೆಟ್ಟಿ ಪರಿಕಲ್ಪನೆ ಮೂಲಕ ವಾಯವ್ಯ ಸಮುದ್ರದಿಂದ ಪೆಟ್ರೋಲ್ ಸಾಮರ್ಥ್ಯ ಹೆಚ್ಚಿಸಿಕೊಂಡಿದೆ. ಗುಜರಾತ್ ತೀರಪ್ರದೇಶಕ್ಕೆ ಹೊಂದಿಕೊಂಡಂತೆ ದೊಡ್ಡ ಉದ್ಯಮ, ತೈಲ-ಗ್ಯಾಸ್ ಸೇರಿದಂತೆ ಇಲ್ಲಿ ಹಲವಾರು ಬೃಹತ್ ಉದ್ಯಮ ಪ್ರದೇಶಗಳಿವೆ.

ಇಲ್ಲಿಯ ಮೆರಿನ್ ಪೊಲೀಸ್, ಐಸಿಜಿ, ನೌಕಾಪಡೆ ಸಂಯೋಜನೆ ಅತ್ಯಂತ ಸದೃಢವಾಗಿದೆ. ಮಹಾರಾಷ್ಟ್ರ ಕೂಡ 650 ಕಿಮೀ ತೀರಪ್ರದೇಶ ಹೊಂದಿದ್ದು, ಮುಂಬೈ ಸೇರಿದಂತೆ ಬಹುಮುಖ್ಯ ಅಂತಾರಾಷ್ಟ್ರೀಯ ಬಂದರುಗಳನ್ನು, ತೈಲ-ವಾಣಿಜ್ಯ ಕೇಂದ್ರಗಳ ಪ್ರಮುಖ ಸ್ಥಾನವಾಗಿದೆ. ಕೋಸ್ಟಲ್ ಪೊಲೀಸ್ ಸ್ಟೇಷನ್ ಜೊತೆಗೆ ಬಲವಾದ ಇಂಟರ್-ಸೆಪ್ಟರ್ ಬೋಟ್ ನೆಟ್ವರ್ಕ್ ಹೊಂದಿದೆ. ದೇಶದ ವಿವಿಧ ಸಮುದ್ರತೀರ ರಾಜ್ಯಗಳನ್ನು ನೋಡಿದಾಗ, ಕರ್ನಾಟಕ ಕರಾವಳಿ ಪ್ರದೇಶಕ್ಕೆ ಇನ್ನೂ ಹೆಚ್ಚಿನ ಆದ್ಯತೆ, ಸ್ಥಳೀಯರಿಗೆ ಅತ್ಯಗತ್ಯವಾದ ಮೂಲಸೌಕರ್ಯ, ರಾಜ್ಯ-ದೇಶದ ವ್ಯವಸ್ಥೆಯ ಮೂಲಕ ಹೆಚ್ಚಿನ ಸುರಕ್ಷತೆ, ಆಧುನಿಕ ಸಂವಹನ ಸಾಧನ ಒದಗಿಸಬೇಕಾಗಿದೆ. ಕರಾವಳಿ ಸುರಕ್ಷತೆ ಕರ್ನಾಟಕಕ್ಕೆ ಮಾತ್ರವಲ್ಲ, ಭಾರತದ ಸಮಗ್ರ ಭದ್ರತೆಗೆ ಅವಿಭಾಜ್ಯ ಅಂಗವಾಗಿದೆ. ಕರಾವಳಿ ಸುರಕ್ಷಿತವಾಗಿದ್ದರೆ ಮಾತ್ರ ದೇಶ ಸುರಕ್ಷಿತ. ರಾಜ್ಯ, ಕೇಂದ್ರ, ಸಮುದಾಯ ಮತ್ತು ತಂತ್ರಜ್ಞಾನ ಎಂಬ ಈ ನಾಲ್ಕು ಕಂಬಗಳ ಮೇಲೆ ನಿಂತಿರುವ ಸಮಗ್ರ ಕರಾವಳಿ ಭದ್ರತಾ ವ್ಯವಸ್ಥೆಯೇ ಭಾರತದ ಭದ್ರ ಭವಿಷ್ಯದ ಭರವಸೆಯಾಗಿದೆ. ಸಮುದ್ರದ ಅಲೆಗಳ ಮೇಲೆ ಕಣ್ಣಿಟ್ಟಿರುವ ದೇಶವೇ ತನ್ನ ಭವಿಷ್ಯವನ್ನು ಸುರಕ್ಷಿತಗೊಳಿಸುತ್ತದೆ. ಎಂಬ ಮಾತನ್ನು ನಾವು ನೆನಪಿಡಬೇಕಿದೆ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 351

ಸಮಾಚಾರ ಸಣ್ಣದಲ್ಲ

182 ಕಿ.ಮೀ. ವೇಗದಲ್ಲಿ ಚಲಿಸಿದ ವಂದೇ ಭಾರತ್

ದೆಹಲಿ: ಭಾರತೀಯ ರೈಲ್ವೆ ದೇಶೀಯವಾಗಿ ಹೊಸ ದಾಖಲೆ ನಿರ್ಮಿಸಿದೆ. ಗಂಟೆಗೆ 182 ಕಿಮೀ ವೇಗದಲ್ಲಿ ಇತಿಹಾಸದಲ್ಲೇ ಮಹತ್ತರ ಸಾಧನೆ ಮಾಡಿದೆ. ರಾಜಸ್ಥಾನದ ಕೋಟಾ-ಮಧ್ಯಪ್ರದೇಶದ ಉಜ್ಜೈನ್ ಜಿಲ್ಲೆಯ ನಾಗ್ದಾ ವಿಭಾಗದ ನಡುವೆ ಗಂಟೆಗೆ 182 ಕಿ.ಮೀ ವೇಗದಲ್ಲಿ ವಂದೇ ಭಾರತ್ ಸ್ಲೀಪರ್ ರೈಲು ಸಂಚರಿಸಿದೆ. ವೇಗದಿಂದ ಚಲಿಸುತ್ತಿದ್ದ ರೈಲಿನಲ್ಲಿ 'ವಾಟರ್ ಟೆಸ್ಟ್'(ಒಂದರಮೇಲೊಂದು ಜೋಡಿಸಿದ ನೀರಿನ ಗ್ಲಾಸ್‌ಗಳಿಂದ ಹನಿ ನೀರೂ ಹೊರಕ್ಕೆ ಚೆಲ್ಲಿಲ್ಲ) ಕೂಡಾ ಯಶಸ್ವಿಯಾಗಿದೆ. ಈ ಸಂದರ್ಭದ ವಿಡಿಯೊ ವನ್ನು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ 'ಎಕ್ಸ್' ಖಾತೆ ಯಲ್ಲಿ ಹಂಚಿಕೊಂಡಿದ್ದಾರೆ. ವಂದೇ ಭಾರತ್ ಸ್ಲೀಪರ್ ರೈಲು ಶೀಘ್ರವೇ ಎಸಿ ದರ್ಜೆ ಪ್ರಯಾಣಿಕರ ಸೇವೆಗೆ ದೊರೆಯಲಿವೆ. ದೀರ್ಘ ಪ್ರಯಾಣದ ಸಮಯವನ್ನು ಕಡಿಮೆ ಅವಧಿಯಲ್ಲಿ ತಲುಪುವಂತೆ ಮಾಡಲಿದೆ' ಎಂದು ರೈಲ್ವೆ ಸಚಿವಾಲಯ ತಿಳಿಸಿದೆ.

ಪಾಕ್ ಮನವಿ ಮೇರೆಗೆ ಕದನ ವಿರಾಮ: ಭಾರತ

ದೆಹಲಿ: ಭಾರತ-ಪಾಕಿಸ್ತಾನ ನಡುವಿನ ಮೇ ತಿಂಗಳಲ್ಲಿನ ಸೇನಾ ಸಂಘರ್ಷ ತಡೆಗೆ ತಾನೇ ಮಧ್ಯಸ್ಥಿಕೆ ವಹಿಸಿದ್ದಾಗಿ ಈಗ ಚೀನಾ ಹೇಳಿಕೊಂಡಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ನ ವರಾತದ ನಂತರ ಈಗ ಚೀನಾದ ವೃಥಾಲಾಪ ಶುರುವಾಗಿದೆ. ಆದರೆ, ಕಮ್ಯುನಿಸ್ಟ್ ದೇಶದ ಈ ಹೇಳಿಕೆಯನ್ನು ಭಾರತ ಸಾರಾಸಗಟಾಗಿ ಅಲ್ಲಗಳೆದಿದೆ. ಪಾಕ್ ಜತೆಗೆ ಭಾರತ ಮಾಡಿಕೊಂಡಿರುವ ಮೇ 10ರ ಕದನ ವಿರಾಮ ನಿರ್ಧಾರದಲ್ಲಿ ಯಾವುದೇ ದೇಶವಾಗಲೀ, 3ನೇ ವ್ಯಕ್ತಿಯಾಗಲೀ ಭಾಗಿಯಾಗಿಲ್ಲ. ಪಾಕಿಸ್ತಾನವೇ ಮುಂದಾಗಿ ಬೇಡಿಕೊಂಡಿದ್ದರಿಂದ 'ಆಪರೇಷನ್ ಸಿಂಧೂರ್' ಸೇನಾ ಕಾರ್ಯಚರಣೆಗೆ ಅಲ್ಪವಿರಾಮ ಘೋಷಿಸಲಾಗಿದೆ ಎಂದು ಭಾರತದ ವಿದೇಶಾಂಗ ಸಚಿವಾಲಯ ಬುಧವಾರ ಸ್ಪಷ್ಟವಾಗಿ ಹೇಳಿದೆ. ಆಪರೇಷನ್ ಸಿಂಧೂರ್ ವೇಳೆ ಪಾಕಿಸ್ತಾನವೇ ಕದನ ವಿರಾಮಕ್ಕಾಗಿ ಭಾರತದ ಡಿಜಿಎಂಒ ಬಳಿ ಮನವಿ ಮಾಡಿತು. ಉಭಯ ದೇಶಗಳ ಡಿಜಿಎಂಒಗಳ ನಡುವೆ ಮೇ 10ರ ಮಧ್ಯಾಹ್ನ 3.35ಕ್ಕೆ ಪ್ರಾರಂಭವಾದ ದೂರವಾಣಿ ಕರೆ ಕದನ ವಿರಾಮದ ತಿಳಿವಳಿಕೆಯ ನಿರ್ದಿಷ್ಟ ದಿನಾಂಕ, ಸಮಯವನ್ನು ರೂಪಿಸಿತು ಎಂದು ಭಾರತ ವಿವರಿಸಿದೆ.

ಕೆನಡಿ ಮೊಮ್ಮಗಳು ಕ್ಯಾನ್ಸರ್‌ಗೆ ಬಲಿ

ವಾಷಿಂಗ್ಟನ್: ಅಮೆರಿಕದ ಮಾಜಿ ಅಧ್ಯಕ್ಷ ಜಾನ್ ಎಫ್.ಕೆನಡಿ ಮೊಮ್ಮಗಳು ಟಟಿಯಾನಾ ಸ್ಲೋಸ್‌ಬರ್ಗ್ ಕ್ಯಾನ್ಸರ್‌ಗೆ ಬಲಿಯಾಗಿದ್ದು, 35ನೇ ವರ್ಷಕ್ಕೆ

ಇಹಲೋಕ ತ್ಯಜಿಸಿದ್ದಾರೆ. ತಮ್ಮ ಅನಾರೋಗ್ಯದ ಬಗ್ಗೆ ಟಟಿಯಾನಾ ಇತ್ತೀಚೆಗೆ ಸ್ವತಃ ಹೇಳಿಕೊಂಡಿ ದ್ದರು. 1 ವರ್ಷಕ್ಕಿಂತ ಹೆಚ್ಚು ಬದುಕಿರುವ ಸಾಧ್ಯತೆ ಇಲ್ಲ ಎಂದೇ ಹೇಳಿದ್ದರು. ಟಟಿಯಾನಾ ಅವರು ಸೋಸ್‌ಬರ್ಗ್ ವಿನ್ಯಾಸಕ ಎಡ್ವಿನ್ ಸ್ಲೋಸ್‌ಬರ್ಗ್ ಮತ್ತು ರಾಜತಾಂತ್ರಿಕರಾಗಿದ್ದ ಕ್ಯಾರೋಲಿನ್ ಕೆನಡಿ ಅವರ ಪುತ್ರಿ. 'ನಮ್ಮ ಕುಟುಂಬದ ಸುಂದರ ಸದಸ್ಯೆ ಟಟಿಯಾನಾ ಮಂಗಳವಾರ ಬೆಳಗ್ಗೆ ನಿಧನರಾದರು. ಅವರು ಸದಾ ನಮ್ಮ ಹೃದಯದಲ್ಲಿಯೇ ಇರುತ್ತಾರೆ' ಎಂದು ಜಾನ್ ಎಫ್.ಕೆನಡಿ ಕುಟುಂಬ 'ಜೆಎಫ್‌ಕೆ ಲೈಬ್ರರಿ ಫೌಂಡೇಶನ್' ಜಾಲತಾಣದಲ್ಲಿ ಹೇಳಿ ಕೊಂಡಿದೆ. ಟಟಿಯಾನಾರ ತಾತ ಜಾನ್ ಎಫ್.ಕೆನಡಿ ಅಮೆರಿಕ ಅಧ್ಯಕ್ಷರಾಗಿದ್ದಾಗಲೇ 1963ರಲ್ಲಿ ಹತ್ಯೆಗೀಡಾದರು.

ಕಾರಿನಲ್ಲಿ ಭಾರೀ ಸ್ಫೋಟಕ ಪತ್ತೆ, 2 ಸೆರೆ

ಜೈಪುರ: ಹೊಸ ವರ್ಷದ ಸಂಭ್ರಮದಲ್ಲಿರುವ ದೇಶದಲ್ಲಿ ಭಾರೀ ಸ್ಫೋಟದ ಸಾಧ್ಯತೆಯನ್ನು ರಾಜಸ್ಥಾನ ಪೊಲೀಸರು ತಪ್ಪಿಸಿದ್ದಾರೆ. ಬರೋಣಿ ಪೊಲೀಸ್

ಠಾಣೆ ಪೊಲೀಸರ ತಂಡ ಟೋಂಕ್-ಜೈಪುರ ಹೆದ್ದಾರಿಯಲ್ಲಿ ಮದ್ಯ ಸೇವಿಸಿ ವಾಹನ ಚಲಾಯಿಸುವವರ ತಪಾಸಣೆ ನಡೆಸುತ್ತಿದ್ದಾಗ ಸ್ಫೋಟಕಗಳ ದೊಡ್ಡ ಸಂಗ್ರಹವೇ ಮಾರುತಿ ಸಿಯಾಜ್ ಕಾರಿನಲ್ಲಿ ಪತ್ತೆಯಾಗಿವೆ. 150 ಕೆ.ಜಿ ಅಮೋನಿಯಂ ನೈಟ್ರೇಟ್, 200 ಸ್ಫೋಟಕ ಬ್ಯಾಟರಿ ಸ್ಟಿಕ್‌ಗಳು, ಸ್ಫೋಟಕ್ಕೆ ಬಳಸುವ 1,100 ಮೀ. ತಂತಿ ವಶಕ್ಕೆ ಪಡೆದು, ಸುರೇಂದ್ರ ಮತ್ತು ಸುರೇಂದ್ರ ಮೋಚಿ ಎಂಬವರನ್ನು ಬಂಧಿಸಲಾಗಿದೆ. ಬುಂಡಿ ಪಟ್ಟಣದ ಕಡೆಗೆ ತೆರಳುತ್ತಿದ್ದ ಕಾರನ್ನು ತಡೆಹಿಡಿದು ಪರಿಶೀಲಿಸಿದಾಗ ಯೂರಿಯಾ ಚೀಲಗಳಲ್ಲಿ 150 ಕಿಲೊ ಅಮೋನಿಯಂ ನೈಟ್ರೇಟ್ ತುಂಬಿರುವುದು ಪತ್ತೆಯಾಯಿತು. ಉಳಿದಂತೆ ಸ್ಫೋಟಕ ಬ್ಯಾಟರಿ ಸ್ಟಿಕ್‌ಗಳು, ಸ್ಫೋಟಕ್ಕೆ ಬಳಸುವ ತಂತಿ ಕೂಡಾ ಸಿಕ್ಕಿದೆ. ಬಂಧಿತರ ವಿಚಾರಣೆ ನಡೆದಿದೆ ಎಂದು ಡಿವೈ ಎಸ್‌ಪಿ ಮೃತ್ಯುಂಜಯ್ ಮಿಶ್ರಾ ಸುದ್ದಿಗಾರರಿಗೆ ತಿಳಿಸಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಅಮೆರಿಕದ ಕೌನ್ಸಿಲ್ ಆನ್ ಫಾರಿನ್ ರಿಲೇಷನ್ಸ್ ವರದಿ | ವಿದೇಶಾಂಗ ನೀತಿ ತಜ್ಞರ ಸಮೀಕ್ಷೆ ಆಧರಿಸಿ ಕಾನ್‌ಫ್ಲಿಕ್ಟ್ ಟು ವಾಚ್ ಇನ್

2026ರಲ್ಲಿ ಭಾರತ-ಪಾಕ್ ಮಧ್ಯೆ ಸಮರ: ಅಮೆರಿಕ

ವಾಷಿಂಗ್ಟನ್: ಮತ್ತೆ ಭಯೋತ್ಪಾದಕ ಚಟುವಟಿಕೆ ಹೆಚ್ಚುವುದರಿಂದ 2026ನೇ ವರ್ಷದಲ್ಲಿ ಭಾರತ ಮತ್ತು ಪಾಕಿಸ್ತಾನ ನಡುವೆ ಸೇನಾ ಸಂಘರ್ಷ ಉಂಟಾಗಲಿದೆ ಎಂದು ಅಮೆರಿಕದ ಚಿಂತಕರ ಚಾವಡಿ 'ಕೌನ್ಸಿಲ್ ಆನ್ ಫಾರಿನ್ ರಿಲೇಷನ್ಸ್'(ಸಿಎಫ್‌ಆರ್-ವಿದೇಶಾಂಗ ಸಂಬಂಧಗಳ ಮಂಡಳಿ) ಮುನ್ಸೂಚನೆ ನೀಡಿದೆ.

ಭಾರತ-ಪಾಕ್ ನಡುವೆ 2025ರ ಮೇ 10ರಂದು ಸಂಜೆ 5 ಗಂಟೆಗೆ ಕದನ ವಿರಾಮ ಘೋಷಣೆಯಾಗಿದ್ದರೂ 'ಆಪರೇಷನ್ ಸಿಂಧೂರ್' ಸೇನಾ ಕಾರ್ಯಾಚರಣೆ ಕೊನೆಗೊಂಡಿಲ್ಲ. ಪಾಕ್ ಕಡೆಯಿಂದ ಒಂದು ಗುಂಡು ಹಾರಿಬಂದರೂ ಆಪರೇಷನ್ ಸಿಂಧೂರ್ ಪುನಾರಂಭಗೊಳ್ಳಲಿದೆ ಎಂದು ಭಾರತ ಕಠಿಣ ಮಾತುಗಳಲ್ಲೇ ಪಾಕಿಸ್ತಾನಕ್ಕೆ ಎಚ್ಚರಿಕೆ ನೀಡಿದೆ. ಹಾಗಾಗಿಯೇ ಭಾರತ-ಪಾಕ್ ನಡುವೆ 2026ರಲ್ಲಿ ಮತ್ತೊಮ್ಮೆ ಸೇನಾ ಸಂಘರ್ಷ ಸಾಧ್ಯತೆ ತುಸು ಹೆಚ್ಚಾಗಿಯೇ ಇದೆ ಎಂದೇ ಅಮೆರಿಕದ ಸಿಎಫ್‌ಆರ್ ವರದಿ ಹೇಳುತ್ತಿದೆ. ಅದಕ್ಕೆ ತನ್ನದೇ ಆದ ಗ್ರಹಿಕೆಗಳನ್ನು, ಕಾರಣಗಳನ್ನೂ ಮಂಗಳವಾರ ಪ್ರಕಟಿಸಿದ ವರದಿಯಲ್ಲಿ ತೆರೆದಿಟ್ಟಿದೆ. ಅಮೆರಿಕದ ವಿದೇಶಾಂಗ ನೀತಿಯ ತಜ್ಞರುಗಳ ಸಮೀಕ್ಷೆಯನ್ನು ಆಧರಿಸಿ 'ಕಾನ್‌ಫ್ಲಿಕ್ಟ್ ಟು ವಾಚ್ ಇನ್ 2026' ವರದಿಯನ್ನು 'ಸಿಎಫ್‌ಆರ್' ತಂಡದಿಂದ ಸಿದ್ಧಪಡಿಸಲಾಗಿದೆ. ಅದರಲ್ಲಿ ಭಾರತ-ಪಾಕಿಸ್ತಾನ ಮತ್ತು ಪಾಕಿಸ್ತಾನ-ಅಫ್ಘಾನಿಸ್ತಾನ ಸೇರಿದಂತೆ ವಿವಿಧ ದೇಶಗಳ ನಡುವಿನ 2026ರಲ್ಲಿನ ಸಂಭಾವ್ಯ ಸೇನಾ ಸಂಘರ್ಷದ ಕುರಿತು ಮುನ್ನೋಟ ನೀಡಲಾಗಿದೆ.

ಅಮೆರಿಕಕ್ಕೆ ಪರಿಣಾಮ: ಅದರಲ್ಲಿ ಭಾರತ ಮತ್ತು ಪಾಕಿಸ್ತಾನದ ನಡುವಿನ ಸೇನಾ ಸಂಘರ್ಷದ ಸಾಧ್ಯತೆಯ ಬಗೆಗೆ 'ಮಾಡರೇಟ್'(ಮಧ್ಯಮ ಪ್ರಮಾಣದ) ರೇಟಿಂಗ್ ನೀಡಲಾಗಿದೆ. ಪಾಕಿಸ್ತಾನದ ಕಡೆಯಿಂದ ಗಡಿಭಾಗದಲ್ಲಿ, ಜಮ್ಮು-ಕಾಶ್ಮೀರದಲ್ಲಿ ಮತ್ತೆ ಹೆಚ್ಚುತ್ತಿರುವ ಭಯೋತ್ಪಾದಕ ಚಟುವಟಿಕೆಗಳೇ ಈ ಬಾರಿಯ ದೊಡ್ಡ ಮಟ್ಟದ ಸೇನಾ ಸಂಘರ್ಷಕ್ಕೆ ಕಾರಣವಾಗಲಿವೆ. ಇಂಥದೊಂದು ಸೇನಾ ಸಂಘರ್ಷ ಭಾರತ-ಪಾಕ್ ನಡುವೆ ಉಂಟಾದರೆ ಅದರಿಂದಾಗಿ ಅಮೆರಿಕದ ಮೇಲಿನ ಪರಿಣಾಮವೂ ಮಧ್ಯಮ ಪ್ರಮಾಣದಲ್ಲಿಯೇ ಇರಲಿದೆ ಎಂದೂ ವರದಿ ಗಮನ ಸೆಳೆದಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸರಕಾರ ದೆಹಲಿ ಮತ್ತು ಇಸ್ಲಾಮಾಬಾದ್ ನಡುವಿನ ಸೇನಾ ಸಂಘರ್ಷ ಅಂತ್ಯಗೊಳಿಸಲು ನಿರಂತರ ಯತ್ನಿಸುತ್ತಿದೆ ಎಂದೂ ವರದಿಯಲ್ಲಿ ಹೇಳಲಾಗಿದೆ.

ಅಫ್ಘನ್ ಸಮಸ್ಯೆ: 2026ರಲ್ಲಿ ಗಡಿಯಾಚೆಗಿನ ಉಗ್ರರ ಸರಣಿ ದಾಳಿಗಳಿಂದ ಪ್ರಚೋದನೆ ಉಂಟಾಗಿ ಅಫ್ಘಾನಿಸ್ತಾನ ಮತ್ತು ಪಾಕಿಸ್ತಾನದ ನಡುವೆ ಸಶಸ್ತ್ರ ಸಂಘರ್ಷವಾಗುವ ಸಾಧ್ಯತೆಯೂ ಇದೆ. ಈಗಾಗಲೇ ಅಕ್ಟೋಬರ್‌ನಲ್ಲಿ ಪಾಕ್-ಅಫ್ಘನ್ ಗಡಿಯ 2600 ಕಿಮೀ ಉದ್ದದ ಡ್ಯೂರಾಂಡ್ ಲೈನ್‌ನಲ್ಲಿ 7 ಪ್ರದೇಶಗಳಲ್ಲಿ ಎರಡೂ ದೇಶಗಳ ನಡುವೆ ಸಂಘರ್ಷ ನಡೆಯುತ್ತಲೇ ಇದೆ. ಒಂದೊಮ್ಮೆ 2026ರಲ್ಲಿ ಪಾಕ್ ಮತ್ತು ಅಫ್ಘನ್ ನಡುವೆ ದೊಡ್ಡಮಟ್ಟದ ಸೇನಾ ಸಂಘರ್ಷವಾದರೂ ಅದರಿಂದ ಅಮೆರಿಕದ ಮೇಲೇನೂ ದೊಡ್ಡ ಪರಿಣಾಮ ಆಗುವುದಿಲ್ಲ ಎಂದೂ ಸಿಎಫ್‌ಆರ್ ವರದಿ ಗಮನ ಸೆಳೆದಿದೆ.

2025ರಲ್ಲಿ ಭಾರತ ಖರೀದಿಸಿದ ಪ್ರಮುಖ ರಕ್ಷಣಾ ಸಾಮಗ್ರಿ

ಶಸ್ತ್ರಾಸ್ತ್ರ	ವಿವರ	ಸಂಖ್ಯೆ
ಪ್ರಚಂಡ	ಲಘು ಯುದ್ಧ ಹೆಲಿಕಾಪ್ಟರ್	156
ಎಂಕ್ಯು-9ಬಿ	ಅಮೆರಿಕ ಪ್ರಿಡೇಟರ್ ಡ್ರೋನ್ಸ್	31
ಎನ್‌ಎಎಂಐಎಸ್	ನಾಗ್ ಆಂಟಿಟ್ಯಾಂಕ್ ಮಿಸೈಲ್ ಸಿಸ್ಟಂ	13
ಎಟಿಎಜಿಎಸ್	ಅತ್ಯಾಧುನಿಕ ಆರ್ಟಿಲರಿ ಗನ್ಸ್	307
ಕ್ಯುಆರ್ ಎಸ್ ಎಎಂ	ನೆಲದಿಂದ ಆಕಾಶಕ್ಕೆ ಕ್ಷಿಪಣಿ	?
ವರುಣಾಸ್ತ್ರ	ಶತ್ರು ಜಲಾಂತರ್ಗಾಮಿ ನಾಶಕ	?
ಟಿ-90	ಟ್ಯಾಂಕ್ ಎಂಜಿನ್ ಅಪ್‌ಗ್ರೇಡ್	?

ಕದನ ವಿರಾಮಕ್ಕೆ ಟ್ರಂಪ್ ಪ್ರಯತ್ನ

ಟ್ರಂಪ್ ಅಧ್ಯಕ್ಷತೆಯ 2ನೇ ಅವಧಿಯಲ್ಲಿ ಕಾಂಗೋ ಗಣರಾಜ್ಯ, ಇಸ್ರೇಲ್-ಗಾಜಾ, ಉಕ್ರೇನ್-ರಷ್ಯಾ, ಭಾರತ-ಪಾಕಿಸ್ತಾನ, ಕಾಂಬೋಡಿ-ಥಾಯ್ಲೆಂಡ್ ಸಂಘರ್ಷಗಳೂ ಸೇರಿದಂತೆ ಒಟ್ಟು 8 ಸಂಘರ್ಷಗಳನ್ನು ಕೊನೆಗೊಳಿಸಲು ಶ್ರಮಿಸಲಾಗಿದೆ.

ಮೇ 7ರ ನಸುಕಿನಲ್ಲಿ ಭಾರತದ ಸೇನೆ ಪಾಕ್‌ನಲ್ಲಿರುವ ಉಗ್ರರ ಶಿಬಿರಗಳನ್ನು ಗುರಿಯಾಗಿಸಿ ಆಪರೇಷನ್ ಸಿಂದೂರ್ ಆರಂಭಿಸಿ 100ಕ್ಕೂ ಹೆಚ್ಚು ಭಯೋತ್ಪಾದಕರನ್ನು ಕೊಂದುಹಾಕಿದರು, ಉಗ್ರರ 9 ಶಿಬಿರಗಳನ್ನು ಧ್ವಂಸಗೊಳಿಸಿತು. ಮೇ 7-10ರ ಅವಧಿಯಲ್ಲಿ ಪಾಕ್ ಸೇನೆ ಡ್ರೋನ್‌ಗಳನ್ನು ಬಳಸಿ ಭಾರತದ ದಾಳಿ ಹಿಮ್ಮೆಟ್ಟಿಸಲು ಯತ್ನಿಸಿ ವಿಫಲವಾಯಿತು. ಪಾಕ್‌ನ ಪ್ರತಿ ದಾಳಿಯನ್ನೂ ಭಾರತದ ಸೇನೆ ಯಶಸ್ವಿಯಾಗಿ ನಾಶಪಡಿಸಿತು. ಭಾರತದ ಕಡೆ ಸಾವು-ನೋವು ಅಥವಾ ಹಾನಿ ವರದಿಯಾಗಿಲ್ಲ ಎಂದು ಈವರೆಗಿನ ಸಂಘರ್ಷವನ್ನು ಸಿಎಫ್‌ಆರ್ ವರದಿ ನೆನಪಿಸಿದೆ.

ರಕ್ಷಣಾ ಸಾಮಗ್ರಿ ಖರೀದಿ ಹೆಚ್ಚಳ

ಪಾಕ್‌ನಿಂದ ಉಗ್ರ ಚಟುವಟಿಕೆಗಳಿಗೆ ಉತ್ತೇಜನ ಸಿಗುತ್ತಿರುವುದು ಒಂದೆಡೆಯಾದರೆ, ಮತ್ತೊಂದೆಡೆ ಭಾರತ ರಕ್ಷಣಾ ಇಲಾಖೆಯು ಖರೀದಿಗಳನ್ನು ನಿರಂತರ ಹೆಚ್ಚಿಸುತ್ತಲೇ ಇದೆ. ಈ ಅಂಶ ಕೂಡಾ 2026ರಲ್ಲಿ ಭಾರತ-ಪಾಕ್ ನಡುವಿನ ಸಂಭಾವ್ಯ ಸೇನಾ ಸಂಘರ್ಷದ ಸಾಧ್ಯತೆಯನ್ನು ದಟ್ಟವಾಗಿಸುತ್ತಿದೆ ಎಂದೂ 'ಸಿಎಫ್‌ಆರ್' ವರದಿಯಲ್ಲಿ ಗಮನ ಸೆಳೆಯಲಾಗಿದೆ.

2024-25ರಲ್ಲಿ 2,09,050 ಕೋಟಿ ರು.ಗಳ ರಕ್ಷಣಾ ಸಾಮಗ್ರಿಗಳ ಖರೀದಿಗೆ ಭಾರತ ಸರಕಾರ ಒಪ್ಪಂದಗಳಿಗೆ ಸಹಿ ಹಾಕಿದೆ. ಇದರಲ್ಲಿ 1,68,922 ಕೋಟಿ ರು.ಗಳ ರಕ್ಷಣಾ ಸಲಕರಣೆಗಳನ್ನು ಭಾರತದಲ್ಲಿನ ಕಂಪನಿಗಳೇ ತಯಾರಿಸಲಿವೆ. ಡಿ.29ರಂದು ಭಾರತದ ರಕ್ಷಣಾ ಇಲಾಖೆ ಮತ್ತೆ 79 ಸಾವಿರ ಕೋಟಿ ರು.ಗಳ ವೆಚ್ಚದಲ್ಲಿ ಅಮೆರಿಕ ಮತ್ತಿತರ ದೇಶಗಳಿಂದ ಬಲಿಷ್ಠ ಡ್ರೋನ್‌ಗಳು, ಕ್ಷಿಪಣಿಗಳು, ಬಾಂಬ್‌ಗಳನ್ನು ಖರೀದಿಸಲು ಒಪ್ಪಿಗೆ ನೀಡಿರುವುದು ಗಮನಾರ್ಹ. ಇದರಲ್ಲಿ ಸೇನಾಪಡೆ ಮತ್ತು ನೌಕಾಪಡೆಗೆ ಭಾರತ್ ಫೋರ್ಜ್ ಮತ್ತು ಪಿಎಲ್‌ಆರ್ ಸಿಸ್ಟಂನಿಂದಲೇ 2,770 ಕೋಟಿ ರು.ಗಳಿಗೆ 4.25 ಲಕ್ಷ ಕ್ವಾರ್ಟರ್ ಬ್ಯಾಟಲ್

ಕಾರ್ಬೈನ್ಸ್ ಖರೀದಿಸಲಾಗುತ್ತಿದೆ. ಇಟಲಿಯ ವ್ಯಾಸ್ ಕಂಪನಿಯಿಂದ ಕಲವರಿ ಕ್ಲಾಸ್ ಜಲಾಂತರ್ಗಾಮಿಗೆ ಭಾರೀ ತೂಕದ ಟಾರ್ಪೆಡೊಗಳನ್ನು 1896 ಕೋಟಿ ರು.ಗಳಲ್ಲಿ ಖರೀದಿಸಲಾಗುತ್ತಿದೆ. ಇನ್ನೊಂದೆಡೆ, ಉತ್ತರ ಪ್ರದೇಶದಲ್ಲಿ 'ಬ್ರಹ್ಮೋಸ್' ಘಟಕವೂ ದೊಡ್ಡ ಮಟ್ಟದಲ್ಲಿ ಕ್ಷಿಪಣಿಗಳ ತಯಾರಿಕೆ ನಡೆಸುತ್ತಿದೆ. ಹೀಗೆ ಸೇನಾಪಡೆ, ನೌಕಾಪಡೆ ಮತ್ತು ವಾಯುಪಡೆಯಲ್ಲಿ ಆಧುನೀಕರಣ ನಿರಂತರವಾಗಿ ನಡೆಯುತ್ತಲೇ ಇದೆ. ಇನ್ನೊಂದೆಡೆ, ಪಾಕಿಸ್ತಾನ ವೂ ಟರ್ಕಿ ಮತ್ತು ಚೀನಾದಿಂದ ಡ್ರೋನ್ ಮತ್ತು ವಾಯುದಾಳಿ ತಡೆ ಶಸ್ತ್ರಾಸ್ತ್ರಗಳ ಖರೀದಿಗೆ ಮಾತುಕತೆ ನಡೆಸುತ್ತಿದೆ ಎಂದು ವರದಿಯಾಗಿದೆ.

ಕಾಶ್ಮೀರದಲ್ಲೀಗಲೂ 30-35 ಉಗ್ರರು

ಇತ್ತೀಚೆಗೆ ಜಮ್ಮು-ಕಾಶ್ಮೀರ ಭಾಗದಲ್ಲಿ ಪಾಕಿಸ್ತಾನ ಮೂಲದ ಲಷ್ಕರ್ ಎ ತಯ್ಯಬಾ(ಎಲ್ಇಟಿ) ಉಗ್ರ ಸಂಘಟನೆಯ 30-35 ಉಗ್ರರು ಅಡಗಿಕೊಂಡಿದ್ದಾರೆ ಎಂಬ ಗುಪ್ತಚರ ವರದಿಗಳು ಹಾಗೂ ಇತ್ತೀಚೆಗೆ ಶ್ರೀನಗರದ ಮಾರುಕಟ್ಟೆ ಪ್ರದೇಶದಲ್ಲಿಯೇ ಎಲ್‌ಇಟಿಯ ಇಬ್ಬರು ಉಗ್ರರು ಕಾಶ್ಮೀರದ ನಾಗರಿಕರಂತೆಯೇ ಉದ್ದ ನಿಲುವಂಗಿ ಧರಿಸಿ ಆರಾಮವಾಗಿ ಮಾತನಾಡುತ್ತಾ, ಯಾವುದೇ ಆತಂಕ, ತರಾತುರಿ ಇಲ್ಲದೇ ನಿಧಾನವಾಗಿ ನಡೆದುಕೊಂಡು ಹೋಗಿರುವುದು ಮಾರುಕಟ್ಟೆಯಲ್ಲಿನ ಅಂಗಡಿಯೊಂದರ ಸಿಸಿಟಿವಿಯಲ್ಲಿ ದಾಖಲಾಗಿದೆ. ಇನ್ನೊಂದೆಡೆ, ಉಗ್ರರಿಬ್ಬರು ಆಹಾರಕ್ಕಾಗಿ ಜಮ್ಮು ಭಾಗದ ಗ್ರಾಮವೊಂದರ ಮನೆಯ ಬಾಗಿಲು ತಟ್ಟಿದ್ದರು. ದಿನ ನಿತ್ಯವೆಂಬಂತೆ ಈಗಲೂ ಜಮ್ಮು-ಕಾಶ್ಮೀರದ ಗಡಿ ಭಾಗದಲ್ಲಿ ಭಾರತದೊಳಕ್ಕೆ ನುಸುಳುವ ಪ್ರಯತ್ನವೂ ಪಾಕ್ ಮತ್ತು ಪಾಕ್ ಆಕ್ರಮಿತ ಕಾಶ್ಮೀರದ ಕಡೆಯಿಂದ ನಡೆಯುತ್ತಲೇ ಇದೆ. ಈ ಎಲ್ಲಾ ಅಂಶಗಳೂ 2026ರಲ್ಲಿನ ಸಂಭಾವ್ಯ ಸೇನಾ ಸಂಘರ್ಷಕ್ಕೆ ಮುನ್ನುಡಿ ಬರೆಯುವಂತಹ ಅಂಶಗಳೇ ಆಗಿವೆ.

ಶ್ರೀರಾಮಲಲ್ಲಾ ಪ್ರಾಣಪ್ರತಿಷ್ಠಾ 2ನೇ ವಾರ್ಷಿಕೋತ್ಸವ ಸಂಭ್ರಮ

ಪ್ರಾಣಪ್ರತಿಷ್ಠಾ ದ್ವಾದಶಿ: ರಾಮಲಲ್ಲಾಗೆ ಅಭಿಷೇಕ

ಅಯೋಧ್ಯೆ: ಉತ್ತರ ಪ್ರದೇಶದಲ್ಲಿನ ಅಯೋಧ್ಯೆಯಲ್ಲಿನ ಶ್ರೀ ರಾಮ ಮಂದಿರದಲ್ಲಿ ಬುಧವಾರ ರಾಮಲಲ್ಲಾ ವಿಗ್ರಹದ ಪ್ರತಿಷ್ಠಾಪನಾ ವಾರ್ಷಿಕೋತ್ಸವ ವಿಜೃಂಭಣೆಯಿಂದ ನಡೆಯಿತು. ಶ್ರೀ ರಾಮಲಲ್ಲಾ ಪ್ರಾಣಪ್ರತಿಷ್ಠಾ ದ್ವಾದಶಿ ಹಿನ್ನೆಲೆ ಧಾರ್ಮಿಕ ಸ್ನಾನ, ವಿಶೇಷ ಅಭಿಷೇಕ ನೆರವೇರಿಸಲಾಯಿತು.

ಪ್ರಾಣಪ್ರತಿಷ್ಠಾ ವಾರ್ಷಿಕೋತ್ಸವದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಸೇರಿ ಹಲವು ಗಣ್ಯರು ಭಾಗಿಯಾಗಿದ್ದರು. ಇಬ್ಬರೂ ಗಣ್ಯರು ಗರ್ಭಗುಡಿಯಲ್ಲಿ ನಿಂತು ದೂರದಿಂದಲೇ ಶ್ರೀರಾಮಲಲ್ಲಾನಿಗೆ ಆರತಿ ಬೆಳಗಿದರು. ಬಳಿಕ ರಾಮ ಮಂದಿರ ಸಂಕೀರ್ಣದ ನಿರ್ಗಮನ ದ್ವಾರವಾದ ಅಂಗದ್ ತಿಲಾದಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದರು. ಇದಕ್ಕೂ ಮುನ್ನ ಅನ್ನಪೂರ್ಣ ಮಂದಿರದಲ್ಲಿ ರಾಜನಾಥ್ ಸಿಂಗ್

ಶ್ರೀರಾಮಲಲ್ಲಾ ಪ್ರಾಣಪ್ರತಿಷ್ಠಾ 2ನೇ ವಾರ್ಷಿಕೋತ್ಸವದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ಉ.ಪ್ರ. ಸಿಎಂ ಯೋಗಿ ಆದಿತ್ಯನಾಥ್.

ಧ್ವಜಾರೋಹಣ ನೆರವೇರಿಸಿದರು. 2025ರ ಜ.11ರಂದು ಮೊದಲ ಪ್ರತಿಷ್ಠಾಪನಾ ವಾರ್ಷಿಕೋತ್ಸವ ಆಚರಿಸಲಾಗಿತ್ತು. ಹಿಂದೂ ಕ್ಯಾಲೆಂಡರ್ ಪ್ರಕಾರ 2ನೇ ವಾರ್ಷಿಕೋತ್ಸವ 2025ರ ಡಿ.31ರಂದೇ ಬಂದಿದೆ. ಈ ಹಿನ್ನೆಲೆ ಡಿ.27ರಿಂದಲೇ ಧಾರ್ಮಿಕ ಕಾರ್ಯಕ್ರಮಗಳು ರಾಮಮಂದಿರದಲ್ಲಿ ಆರಂಭವಾಗಿದ್ದು, ಯಜ್ಞಗಳು, ರಾಮಚರಿತಮಾನಸ ಪಠಣ ಮತ್ತು ರಾಮಲೀಲಾ ಪ್ರದರ್ಶನ, ಮೆರವಣಿಗೆ ಮತ್ತು ಭಜನೆ ನಡೆದವು. ಪ್ರಾಣ ಪ್ರತಿಷ್ಠಾ ದ್ವಾದಶಿ ಕಾರ್ಯಕ್ರಮಗಳು ಬುಧವಾರ 4 ಗಂಟೆಗಳ ಕಾಲ ನಡೆ ದವು ಎಂದು ಅರ್ಚಕರು ಸುದ್ದಿಗಾರರಿಗೆ ತಿಳಿಸಿದ್ದಾರೆ.

2024ರ ಜ.22ರಂದು ಪ್ರಧಾನಿ ನರೇಂದ್ರ ಮೋದಿ ಅವರು ಶ್ರೀ ರಾಮಲಲ್ಲಾ ವಿಗ್ರಹದ ಪ್ರಾಣ ಪ್ರತಿಷ್ಠಾಪನೆ ನೆರವೇರಿಸಿದ್ದರು. ರಾಮಮಂದಿರ ನಿರ್ಮಾಣ ಕಾರ್ಯ ಸಂಪನ್ನಗೊಂಡಿದ್ದರಿಂದ ಇದೇ ನ.25ರಂದು ಪ್ರಧಾನಿ ಮೋದಿ ಮತ್ತು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಗರ್ಭಗುಡಿಯ ಶಿಖರದ ಮೇಲೆ ಕೇಸರಿ ಧ್ವಜಾರೋಹನ ನೆರವೇರಿಸಿದ್ದರು.

'ನಿಮೆಸುಲೈಡ್' ಮಾತ್ರೆಗೆ ನಿಷೇಧ

ದೆಹಲಿ: ಜನರು ಹೆಚ್ಚು ಬಳಸುತ್ತಿರುವ ನೋವು ನಿವಾರಕ ಮಾತ್ರೆ ನಿಮೆಸುಲೈಡ್(100 ಎಂಜಿ)ಗೆ ಕೇಂದ್ರದ ಆರೋಗ್ಯ ಸಚಿವಾಲಯ ನಿಷೇಧ ಹೇರಿದೆ. ನಿಮೆಸುಲೈಡ್ ಮಾತ್ರೆ ನುಂಗುವುದರಿಂದ ಎದುರಾಗುವ ಪಾರ್ಶ್ವ ದುಷ್ಪರಿಣಾಮಗಳು ಮತ್ತು ಇತರೆ ಆರೋಗ್ಯ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಆರೋಗ್ಯ ಸಚಿವಾಲಯ ನಿಷೇಧ ಕ್ರಮ ಕೈಗೊಂಡಿದೆ ಎನ್ನಲಾಗಿದೆ. ನಿಮೆ ಸುಲೈಡ್ ಮಾತ್ರೆಗಳ ತಯಾರಿಕೆ, ವಿತರಣೆ ಮತ್ತು ಮಾರಾಟವನ್ನು ನಿಷೇಧಿಸಿ ಡಿ.29ರಂದು ಆದೇಶ ಹೊರಡಿಸಲಾಗಿದೆ. ಈ ಮಾತ್ರೆಯ ಬಳಕೆಯಿಂದ ಜನರಲ್ಲಿ ಗಂಭೀರ ಸ್ವರೂಪದ ಆರೋಗ್ಯ ಸಮಸ್ಯೆಗಳು ಕಂಡು ಬಂದಿವೆ. ಸಾರ್ವಜನಿಕರ ಆರೋಗ್ಯ ರಕ್ಷಣೆ ದೃಷ್ಟಿಯಿಂದ ಈ ನಿರ್ಧಾರ ತೆಗೆದುಕೊಂಡಿದೆ.

ಗಾಳಿ ಆಧರಿಸಿ ಚಲಿಸುವ ಐಎನ್‌ಎಸ್‌ವಿ ಕೌಂಡಿನ್ಯ

- ಗಾಳಿಯ ಚಲನೆಯ ದಿಕ್ಕಿಗೆ ತಕ್ಕಂತೆ ಬೃಹತ್ ಪರದೆಗಳನ್ನು ಅತ್ತಿತ್ತ ತಿರುಗಿಸುತ್ತಾ ನೌಕೆ ಚಲಿಸುವಂತೆ ಮಾಡುವ ಪ್ರಾಚೀನ ವಿಧಾನ ನೌಕಾಯಾನ. ಒಮಾನ್ ದೇಶದ ಮಸ್ಕತ್ ಬಂದರುವರೆಗೂ ನೌಕೆಯ ಪಯಣ.
- ಯಾತ್ರೀಕೃತ ನೌಕೆ ಅಲ್ಲ, ಯಾವುದೇ ಯಂತ್ರಗಳ ಜೋಡಣೆ ಇಲ್ಲ. ಮೊಳೆಗಳನ್ನೂ ಬಳಸಿಲ್ಲ. ಬಟ್ಟೆಯ ಪರದೆ, ತೆಂಗಿನ ನಾರಿನ ಹಗ್ಗದ ಬಳಕೆ, 1800 ವರ್ಷಗಳ ಹಿಂದಿನ ಮಾದರಿ ನೌಕೆ.
- ಗಾಳಿಯ ಚಲನೆಯ ದಿಕ್ಕು ಆಧರಿಸಿಯೇ ಡಿ.29ರಂದು ಗುಜರಾತ್‌ನ ಪೋರಬಂದರ್‌ನಿಂದ ಪಯಣ ಆರಂಭ. ಭಾರತೀಯ ನೌಕಾಪಡೆಯ ವೈಸ್ ಅಡ್ಮಿರಲ್ ಕೃಷ್ಣಸ್ವಾಮಿನಾಥನ್‌ರಿಂದ ಚಾಲನೆ.
- ಪೂರ್ಣ ಮರದಿಂದಲೇ 'ಟಂಕೈ' ಮಾದರಿಯಲ್ಲಿ ತಯಾರಿಸಿರುವ ಪ್ರಾಚೀನ (2ನೇ ಶತಮಾನ) ಮಾದರಿ ನೌಕೆ. ಮೌರ್ಯರು, ಚೋಳರು ಮತ್ತಿತರ ಪ್ರಾಚೀನ ಪರಂಪರೆಯ ನೆನಪಿನ ಕೊಂಡಿಯಂಥ ನೌಕೆ.
- ನೌಕೆಯ ಉದ್ದ 19.6 ಮೀಟರ್, ಅಗಲ 6.5 ಮೀಟರ್, ನೀರಿನಲ್ಲಿ ಮುಳುಗಿದ ಭಾಗ 3.33 ಮೀ. ಒಟ್ಟು

15 ನಾವಿಕರ ಪ್ರಯಾಣಕ್ಕೆ ಅವಕಾಶ.
- ನೌಕೆಯ ನಿರ್ಮಾಣ ತಂಡದ ನೇತೃತ್ವ ಕುಶಲಕರ್ಮಿ ಬಾಬು ಶಂಕರನ್. 2025ರ ಫೆಬ್ರವರಿ ಗೋವಾದ ಹಡಗುಕಟ್ಟೆಯಲ್ಲಿ ನೌಕೆಯ ಅನಾವರಣ. ನೌಕಾಪಟದಲ್ಲಿ ಗಂಡಬೇರುಂಡ, ಸೂರ್ಯನ ಚಿತ್ರಗಳ ಕಸೂತಿ ಕಲೆ.
- ಆಗ್ನೇಯ ಏಷ್ಯಾದಲ್ಲಿ 1ನೇ ಶತಮಾನದಲ್ಲಿ ಫುನಾನ್ ಸಂಸ್ಥಾನಕ್ಕೆ ಸೇರಿದ ಭಾರತದ ಖ್ಯಾತ ನಾವಿಕ ಕೌಂಡಿನ್ಯ ಹೆಸರನ್ನೇ ನೌಕೆಗೆ ಇಡಲಾಗಿದೆ.

ಬಾಂಗ್ಲಾ ಮಾಜಿ ಪ್ರಧಾನಿ ಕುಟುಂಬಕ್ಕೆ ಮೋದಿ ಪತ್ರ

ಖಲೀದಾ ಅಂತ್ಯಕ್ರಿಯೆ, ಸಚಿವ ಜೈಶಂಕರ್ ಭಾಗಿ

ಢಾಕಾ: ಬಾಂಗ್ಲಾದೇಶದ ಮಾಜಿ ಪ್ರಧಾನಿ ಖಲೀದಾ ಜಿಯಾ(80) ಅಂತ್ಯಕ್ರಿಯೆ ಢಾಕಾದಲ್ಲಿ ಬುಧವಾರ ನಡೆದಿದ್ದು, ಲಕ್ಷಾಂತರ ಜನರು ಸೇರಿ ಅಂತಿಮ ನಮನ ಸಲ್ಲಿಸಿದರು. ಪತಿ, ಬಾಂಗ್ಲಾ ಮಾಜಿ ಅಧ್ಯಕ್ಷ ಜಿಯಾವುರ್ ರೆಹಮಾನ್ ಸಮಾಧಿ ಪಕ್ಕದಲ್ಲೇ ಖಲೀದಾರ ಸಮಾಧಿ ಮಾಡಲಾಗಿದೆ. ಮಾಣಿಕ್ ಮಿಯಾ ಅವೆನ್ಯೂದಲ್ಲಿ ಅಂತಿಮ ವಿಧಿವಿಧಾನಗಳು ಜರುಗಿವೆ. ಭಾರತ ಸರಕಾರದ ಪ್ರತಿನಿಧಿಯಾಗಿ ವಿದೇಶಾಂಗ ಸಚಿವ ಎಸ್.ಜೈಶಂಕರ್ ಹಾಜರಿದ್ದರು. ಪ್ರಧಾನಿ ನರೇಂದ್ರ ಮೋದಿ ಅವರು ಬರೆದಿದ್ದ ವೈಯಕ್ತಿಕ ಪತ್ರವನ್ನು ಖಲೀದಾ ಜಿಯಾ ಅವರ ಪುತ್ರ ತಾರಿಕ್ ರೆಹಮಾನ್ ಅವರಿಗೆ ಜೈಶಂಕರ್ ಇದೇ ವೇಳೆ ಹಸ್ತಾಂತರಿಸಿದರು. ಬಾಂಗ್ಲಾದ ಮೊದಲ ಮಹಿಳಾ ಪ್ರಧಾನಿಯಾಗಿದ್ದ ಖಲೀದಾ ಜಿಯಾ ಅವರ ನಿಧನಕ್ಕೆ ಭಾರತ ಸರಕಾರ ಮತ್ತು ಜನರ ಪರವಾಗಿ ತೀವ್ರ ಸಂತಾಪ

ಪ್ರಧಾನಿ ಮೋದಿ ಪತ್ರವನ್ನು ಖಲೀದಾ ಪುತ್ರ ತಾರಿಕ್ ರೆಹಮಾನ್ ಅವರಿಗೆ ಜೈಶಂಕರ್ ಹಸ್ತಾಂತರಿಸಿದರು.

ಸೂಚಿಸಿದೆ ಎಂದು ಸಚಿವ ಜೈಶಂಕರ್ 'ಎಕ್ಸ್' ಖಾತೆತಲ್ಲಿ ಬರೆದಿದ್ದಾರೆ. ಖಲೀದಾ ಅವರ ಪತಿ ಜಿಯಾವುರ್ ರೆಹಮಾನ್ 1981ರಲ್ಲಿ ಹತ್ಯೆಗೀಡಾಗಿದ್ದರು.

ಚಮೋಲಿ ಸುರಂಗ: ರೈಲು ಡಿಕ್ಕಿ, 65 ಮಂದಿಗೆ ಗಾಯ

ಡೆಹರಾಡೂನ್: ಉತ್ತರಾಖಂಡದ ಚಮೋಲಿ ಜಿಲ್ಲೆಯ ಪಿಪಲ್‌ಕೋಟಿ ಪ್ರದೇಶದ ತೆಹ್ರಿ ಜಲ ವಿದ್ಯುತ್ ನಿಗಮದ ಯೋಜನೆಯ ಕಾಮಗಾರಿ ನಡೆಯುತ್ತಿರುವ 4.5 ಕಿಮೀ ಉದ್ದದ ಸುರಂಗ ಮಾರ್ಗದಲ್ಲಿ ಮಂಗಳವಾರ ರಾತ್ರಿ 8.30ರಲ್ಲಿ 2 ಲೋಕೋ ರೈಲುಗಳು ಡಿಕ್ಕಿಯಾಗಿದ್ದು, 65 ಕಾರ್ಮಿಕರು ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಸಮೀಪದ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಕಾರ್ಮಿಕರು ಮತ್ತು ನಿರ್ಮಾಣ ಸಾಮಗ್ರಿಗಳನ್ನು ಸಾಗಿಸಲು ಬಳಸುವ ಲೋಕೊ ರೈಲು ಶಿಫ್ಟ್ ಬದಲಾವಣೆ ವೇಳೆ ಹಳಿಯಲ್ಲಿ ನಿಲುಗಡೆಯಾಗಿದ್ದ ಮತ್ತೊಂದು ಲೋಕೊ ರೈಲಿಗೆ ಡಿಕ್ಕಿ ಹೊಡೆದಿದೆ. ಎರಡೂ ರೈಲುಗಳಲ್ಲಿ ಒಟ್ಟು 108 ಕಾರ್ಮಿಕರು ಪ್ರಯಾಣಿಸುತ್ತಿದ್ದರು.

ಹೊಸ ವರ್ಷಾಚರಣೆಗೆ ಕಳೆಗಟ್ಟಿದ ಜಮ್ಮು-ಕಾಶ್ಮೀರ

ಶ್ರೀನಗರ: ಪಹಲ್ಗಾಮ್‌ನಲ್ಲಿನ ಬೈಸರನ್ ಹುಲ್ಲುಗಾವಲಿನಲ್ಲಿ ಏ.22ರಂದು 25 ಪ್ರವಾಸಿಗರು ಮತ್ತು ಒಬ್ಬ ಸ್ಥಳೀಯನನ್ನು ಪಾಕಿಸ್ತಾನ ಮೂಲದ ಲಷ್ಕರ್ ಎ ತಯ್ಯಬಾ ಉಗ್ರರು ಗುಂಡಿಕ್ಕಿ ಕೊಂದ ಬಳಿಕ

ಆಕರ್ಷಣೆ ಕಳೆದುಕೊಂಡಿದ್ದ ಜಮ್ಮು-ಕಾಶ್ಮೀರದ ಪ್ರವಾಸೋದ್ಯಮ ಈಗ ಮತ್ತೆ ಗರಿಗೆದರಲಾರಂಭಿಸಿದೆ. 2025ರಲ್ಲಿ 4 ಲಕ್ಷ ಅಮರನಾಥ ಯಾತ್ರಿಕರೂ ಸೇರಿದಂತೆ ಈವರೆಗೆ 10.50 ಲಕ್ಷ ಪ್ರವಾಸಿಗರು ಭೇಟಿ ನೀಡಿದ್ದಾರೆ. ವರ್ಷಾಂತ್ಯದ ರಜೆಯಲ್ಲಿ ಮತ್ತು ಹೊಸ ವರ್ಷದ ಸಂಭ್ರಮದಲ್ಲಿ ಪ್ರವಾಸಿಗರ ಸಂಖ್ಯೆ ಈಗ ಮತ್ತಷ್ಟು ಹೆಚ್ಚಿದೆ.

ಜಮ್ಮು-ಕಾಶ್ಮೀರದ ವಿವಿಧೆಡೆ ಮೈನಸ್ ಡಿಗ್ರಿ ಸೆಲ್ಸಿಯಸ್‌ಗೆ ಕುಸಿದಿರುವ ತಾಪಮಾನ, ಸತತ ಹಿಮಪಾತ ಆಗುತ್ತಿರುವುದೇ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಕಾಶ್ಮೀರದತ್ತ ಆಕರ್ಷಿತರಾಗಲು ಕಾರಣ ಎನ್ನಲಾಗುತ್ತಿದೆ. ಹೊಸ ವರ್ಷವನ್ನು ಭಿನ್ನ ರೀತಿಯಲ್ಲಿ ಸಂಭ್ರಮಿಸಿ ಸ್ವಾಗತಿಸಲೆಂದೇ ಹೆಚ್ಚಿನ ಸಂಖ್ಯೆಯ ಪ್ರವಾಸಿಗರು ಜಮ್ಮು-ಕಾಶ್ಮೀರದತ್ತ ಮುಖ ಮಾಡಿದ್ದಾರೆ ಎನ್ನಲಾಗಿದೆ. ಗುಲ್ಮಾರ್ಗ್‌ನಲ್ಲಿ ಪ್ರವಾಸಿಗರ ಸಂಖ್ಯೆ ಹೆಚ್ಚಿದೆ. ರೆಸಾರ್ಟ್‌ಗಳು, ಹೋಟೆಲ್‌ಗಳಲ್ಲಿ ಗಣನೀಯ ಸಂಖ್ಯೆಯಲ್ಲಿ ಪ್ರವಾಸಿಗರು ಕಾಣಬ ರುತ್ತಿದ್ದಾರೆ. ಹಿಮಾವೃತ ಸ್ಥಳಗಳಲ್ಲಿ ಜಾರುಬಂಡಿ, ಸರೋವರಗಳಲ್ಲಿ ದೋಣಿ ಸಂಚಾರದಲ್ಲಿ ಸಂಭ್ರಮಿಸುತ್ತಿದ್ದಾರೆ ಎಂದು ಕಾಶ್ಮೀರದ ಪ್ರವಾಸೋದ್ಯಮ ಇಲಾಖೆ ಹೇಳಿದೆ.

ಫರಿದಾಬಾದ್‌ನಲ್ಲಿ ಪಾತಕ: ಇಬ್ಬರ ಬಂಧನ

ಚಲಿಸುವ ವ್ಯಾನಲ್ಲಿ ಅತ್ಯಾಚಾರ

ಫರಿದಾಬಾದ್: ಚಲಿಸುವ ವ್ಯಾನ್‌ನಲ್ಲಿ 25 ವರ್ಷದ ವಿವಾಹಿತೆ ಮೇಲೆ ಹಲವು ಗಂಟೆಗಳ ಕಾಲ ದುರುಳರು ಸಾಮೂಹಿಕ ಅತ್ಯಾಚಾರ ನಡೆಸಿದ್ದಾರೆ. ಬಳಿಕ ಮಹಿಳೆಯನ್ನು ಚಲಿಸು

ತ್ತಿರುವ ವ್ಯಾನ್ ನಿಂದಲೇ ರಸ್ತೆಗೆ ಎಸೆದಿದ್ದಾರೆ. ಪರಿಣಾಮ ಮಹಿಳೆ ತಲೆಗೆ ಗಂಭೀರ ಸ್ವರೂಪದಲ್ಲಿ ಪೆಟ್ಟು ಬಿದ್ದಿದೆ.

ಸೋಮವಾರ ಸಂಜೆ ಸೆಕ್ಟರ್ 23ರಲ್ಲಿರುವ ಪರಿಚಿತರ ಮನೆಗೆ ಹೋಗಿದ್ದ ಮಹಿಳೆ ಬಳಿಕ ಮನೆಗೆ ವಾಪಸಾಗಲು ರಾತ್ರಿ ಬಸ್‌ಗಾಗಿ ಕಾಯುತ್ತಿದ್ದಾಗ ಅದೇ ಮಾರ್ಗದಲ್ಲಿ ಬಂದ ಇಬ್ಬರು ಯುವಕರು ವ್ಯಾನ್ ನಿಲ್ಲಿಸಿ ಆಕೆಯನ್ನು ಮನೆಗೆ ಬಿಡುವುದಾಗಿ ಭರವಸೆ ನೀಡಿದ್ದಾರೆ. ಬಳಿಕ ವಾಹನವನ್ನು ಗುರ್‌ಗಾಂವ್ ರಸ್ತೆಯತ್ತ ತಿರುಗಿಸಿದ್ದಾರೆ. ಮಹಿಳೆಯನ್ನು ಕಟ್ಟಿಹಾಕಿ ರಾತ್ರಿಯಿಡೀ ವಾಹನದಲ್ಲೇ ಸಂಚರಿಸುತ್ತಾ ಸರಣಿಯಂತೆ ಅತ್ಯಾಚಾರ ನಡೆಸಿದ್ದಾರೆ.

ಬೆಳಗಿನ ಜಾವ 3 ಗಂಟೆಯಲ್ಲಿ ರಾಜಾ ಚೌಕ್ ಬಳಿ ಮಹಿಳೆಯನ್ನು ಕಾರಿನಿಂದ ಹೊರಗೆಸೆದು ಪರಾರಿಯಾಗಿದ್ದಾರೆ. ಮಹಿಳೆ ಕಷ್ಟಪಟ್ಟು ಸಹೋದರಿಗೆ ಕರೆ ಮಾಡಿ ವಿಷಯ ತಿಳಿಸಿದ್ದಾರೆ. ಸೋದರಿ ಧಾವಿಸಿ ಬಂದು ಬಾದ್‌ಶಾಖಾನ್ ಆಸ್ಪತ್ರೆಗೆ ದಾಖಲಿಸಿದ್ದಾರೆ. ಮಹಿಳೆಗೆ ಸದ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ನಡೆದಿದೆ, ಹೇಳಿಕೆ ನೀಡುವಷ್ಟು ಚೇತರಿಸಿಕೊಂಡಿಲ್ಲ ಎಂದು ಪೊಲೀಸರು ಬುಧವಾರ ಬೆಳಗ್ಗೆ ತಿಳಿಸಿದ್ದಾರೆ.

ದೂರು ದಾಖಲಿಸಿಕೊಂಡು ಆರೋಪಿಗಳಿಬ್ಬರನ್ನೂ ಬಂಧಿಸಲಾಗಿದೆ. ಉತ್ತರ ಪ್ರದೇಶ ಮತ್ತು ಮಧ್ಯಪ್ರದೇಶದ ಇಬ್ಬರೂ ಒಟ್ಟಿಗೇ ಫರಿದಾಬಾದ್‌ನಲ್ಲಿ ನೆಲೆಸಿದ್ದಾರೆ. ವ್ಯಾನ್ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಮಹಿಳೆ ಪತಿಯಿಂದ ಪ್ರತ್ಯೇಕಗೊಂಡಿದ್ದಾರೆ. ದಂಪತಿಗೆ 3 ಮಕ್ಕಳಿದ್ದಾರೆ. ಆಕೆ ಸದ್ಯ ಹೆತ್ತವರ ಮನೆಯಲ್ಲಿ ವಾಸಿಸುತ್ತಿದ್ದಾರೆ ಎಂದು ಮಹಿಳೆಯ ಸೋದರಿ ವಿವರಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಹೊಸ ವರ್ಷ: ಹೆಚ್ಚುವರಿ ಆಂಬ್ಯುಲೆನ್ಸ್ ನಿಯೋಜನೆ

ಕೋಲಾರ: ಹೊಸ ವರ್ಷಾಚಾರಣೆಯ ವೇಳೆ ಸಂಭವಿಸಬಹುದಾದ ರಸ್ತೆ ಅಪಘಾತಗಳಿಂದ ಉಂಟಾಗುವ ಜೀವ ಹಾನಿಯನ್ನು ತಡೆಯುವ ದೃಷ್ಟಿಯಿಂದ 108 ಆರೋಗ್ಯ ಕವಚ ಆಂಬ್ಯುಲೆನ್ಸ್

ಜಿಲ್ಲೆಯಲ್ಲಿ ಸುಸಜ್ಜಿತ ಗೊಂಡಿರುತ್ತದೆ. ಆಂಬ್ಯುಲೆನ್ಸ್ ಸೇವೆಯು ಪೊಲೀಸ್ ಇಲಾಖೆಯೊಂದಿಗೆ ನಿಕಟ ಸಂಪರ್ಕ ಹೊಂದಿರುತ್ತದೆ. ಹೆಚ್ಚಿನ ತುರ್ತುಪರಿಸ್ಥಿತಿಯನ್ನು ನಿರೀಕ್ಷಿಸುವ ಪ್ರದೇಶಗಳಲ್ಲಿ ಹೆಚ್ಚುವರಿ ಆಂಬ್ಯುಲೆನ್ಸ್ ಅನ್ನು ನಿಯೋಜಿಸಲಾಗಿದ್ದು ಹೆಚ್ಚುವರಿ ಸೇವೆಗಾಗಿ ಸಿಬ್ಬಂದಿಯ ರಜೆಯನ್ನು ರದ್ದುಗೊಳಿಸಲಾಗಿದೆ. ಆಂಬ್ಯುಲೆನ್ಸ್‌ನಲ್ಲಿ ಇಂಧನ, ಆಮ್ಲಜನಕ, ವೈದ್ಯಕೀಯ ಉಪಕರಣಗಳನ್ನು ಇರಿಸಲಾಗಿ ದ್ದು ಕೋಲಾರ ಜಿಲ್ಲೆಗೆ 19 ಆಂಬ್ಯುಲೆನ್ಸ್ ಗಳನ್ನು ತಜ್ಞ ಸಿಬ್ಬಂದಿಗಳೊಂದಿಗೆ ನಿಯೋಜಿಸಲಾಗಿದೆ ಎಂದು ಜಿಲ್ಲಾ ಆರೋಗ್ಯ ಅಧಿಕಾರಿ ಡಾ. ಜಗದೀಶ್ ತಿಳಿಸಿದ್ದಾರೆ. ತುರ್ತುಪರಿಸ್ಥಿತಿಗಳಲ್ಲಿ 108 ಫ್ರೀ ಸಂಖ್ಯೆ ಡಯಲ್ ಮಾಡಬಹುದು ಎಂದು ಜಿಲ್ಲಾ ವ್ಯವಸ್ಥಾಪಕರಾದ ಆಸಿಫ್ ಮತ್ತು ಪ್ರದೀಶಿಕ ವ್ಯವಸ್ಥಾಪಕರಾದ ಯತೀಶ್ ಅವರು ತಿಳಿಸಿದ್ದಾರೆ.

ಕೇಂದ್ರ ರೇಷ್ಮೆ ಮಂಡಳಿ ವಿಜ್ಞಾನಿ ಮಹೇಶ್ ನಿಧನ

ಚಿಕ್ಕಬಳ್ಳಾಪುರ: ಕೇಂದ್ರ ರೇಷ್ಮೆ ಮಂಡಳಿಯ ವಿಜ್ಞಾನಿಗಳಾಗಿದ್ದ ಡಾ.ಕೆ.ಎನ್.ಮಹೇಶ್ ಅವರು ಬುಧವಾರ ನಿಧನರಾಗಿದ್ದಾರೆ. ನಗರದ ಕೆನರಾ ಹಿಂಭಾಗದಲ್ಲಿನ ಅವರ ಸ್ವಗೃಹದಲ್ಲಿ ಅಂತಿಮ ದರ್ಶನ ಪಡೆದು, ಜಿಲ್ಲಾ ರೇಷ್ಮೆ ಕೃಷಿ ಹಿತ ರಕ್ಷಣಾ ಸಮಿತಿಯ ಅಂತಿಮ ಗೌರವ ಸಲ್ಲಿಸಲಾಯಿತು. ಈ ವೇಳೆ ರೇಷ್ಮೆ ಮಂಡಳಿ ಸದಸ್ಯರಾದ ಮಳ್ಳೂರು ಶಿವಣ್ಣ ಮತ್ತು ಜಿಲ್ಲಾ ಹಿತರಕ್ಷಣಾ ಸಮಿತಿಯ ಅಧ್ಯಕ್ಷರಾದ ಯಲುವಹಳ್ಳಿ ಸೊಣ್ಣೇಗೌಡ ಹಾಜರಿದ್ದರು. ಮಹೇಶ ಅವರು ಶಿಡ್ಲಘಟ್ಟದಲ್ಲಿ ವಿಜ್ಞಾನಿಗಳಾಗಿದ್ದು, ಅವರು 1990 ರಲ್ಲಿ ಡೆಹ್ರಾಡೂನ್ ನಿಂದ ವೃತ್ತಿ ಜೀವನ ಪ್ರಾರಂಭಿಸಿ ದೇಶದ ಬೇರೆ ಬೇರೆ ಭಾಗಗಳಲ್ಲಿ ಸೇವೆ ಮಾಡಿ ಪ್ರಸ್ತುತ ಶಿಡ್ಲಘಟ್ಟದಲ್ಲಿ ಸೇವೆ ಸಲ್ಲಿಸುತ್ತಿದ್ದರು. ತಮ್ಮ 35 ವರ್ಷಗಳ ಸೇವೆ, ರೇಷ್ಮೆ ಬೆಳೆಗಾರು, ನೂಲು ಬಿಚ್ಚಾಣಿಕೆಗಾರರು, ನೇಕಾರರು, ಕೇಂದ್ರ ರೇಷ್ಮೆ ಮಂಡಳಿಯ ವಿಜ್ಞಾನಿಗಳು, ಸಿಬ್ಬಂದಿ ಪ್ರೀತಿ ವಿಶ್ವಾಸ ಪಡೆದು ಅಪಾರ ಮನ್ನಣೆ ಗಳಿಸಿದ್ದರು. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ಮನ್ನಣೆ ಗಳಿಸಿದ್ದರು.ಆರು ತಿಂಗಳಲ್ಲಿ ನಿವೃತ್ತರಾಗಲಿದ್ದ ಅವರು, ಪತ್ನಿ ,ಪುತ್ರ ಮತ್ತು ಅಪಾರ ಬಂಧುಗಳನ್ನು ಅಗಲಿದ್ದಾರೆ.

ಆಗ್ನೇಯ ಪದವೀಧರಕ್ಕೆ ಶಶಿ ಕಾಂಗ್ರೆಸ್ ಅಭ್ಯರ್ಥಿ

ತುಮಕೂರು: ಆಗ್ನೇಯ ಪದವೀಧರ ಕ್ಷೇತ್ರದ ಚುನಾವಣೆಗೆ ಜಿಲ್ಲಾ ಯುವ ಘಟಕದ ಅಧ್ಯಕ್ಷ

ವರ್ಷದ ಶಶಿಹುಲಿಕುಂಟೆ ಮಠ್ ಅವರನ್ನು ಕಾಂಗ್ರೆಸ್ ಪಕ್ಷ ಅಭ್ಯರ್ಥಿಯನ್ನಾಗಿ ಘೋಷಿಸಿದೆ. ಎನ್‌ಎಸ್ಯುಐ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ, ಯುವ ಕಾಂಗ್ರೆಸ್ ನಗರ ಘಟಕದ ಅಧ್ಯಕ್ಷರಾಗಿ ಪಕ್ಷ ಸಂಘಟನೆ ಮಾಡಿದ್ದು, ಪ್ರಸ್ತುತ ಜಿಲ್ಲಾ ಯುವ ಘಟಕದ ಅಧ್ಯಕ್ಷರಾಗಿದ್ದಾರೆ. ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾ ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಹೋರಾಟ, ನಾಯಕತ್ವ ಗುಣವನ್ನು ಪರಿಗಣಿಸಿ ಟಿಕೆಟ್ ನೀಡಲಾಗಿದೆ. ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆ ಆಗ್ನೇಯ ಪದವೀಧರ ಕ್ಷೇತ್ರದ ವ್ಯಾಪ್ತಿಗೆ ಬರಲಿವೆ.

ತುಮಕೂರು ಮಹಾನಗರ ಪಾಲಿಕೆಗೆ 14 ಗ್ರಾಮ ಪಂಗಳ 54 ಗ್ರಾಮಗಳು ಸೇರ್ಪಡೆ

ಮಹಾನಗರ ಪಾಲಿಕೆ ವ್ಯಾಪ್ತಿ ವಿಸ್ತರಣೆ

ತುಮಕೂರು: ತುಮಕೂರು ಮಹಾನಗರ ಪಾಲಿಕೆಗೆ ಸುತ್ತಲಿನ 14 ಗ್ರಾಮ ಪಂಚಾಯಿತಿಗಳ 54 ಗ್ರಾಮಗಳನ್ನು ಸೇರ್ಪಡೆ ಮಾಡಲು ರಾಜ್ಯ ಸಚಿವ ಸಂಪುಟ ಒಪ್ಪಿಗೆ ನೀಡಿದೆ

ತುಮಕೂರು ಮಹಾನಗರ ಪಾಲಿಕೆಯ ವ್ಯಾಪ್ತಿ ಪ್ರಸ್ತುತ ಇರುವ 48 ಚದರ ಕಿಲೋಮೀಟರ್‌ನಿಂದ 174 ಕಿಲೋಮೀಟರ್‌ವರೆಗೂ ವಿಸ್ತರಣೆಯಾಗಲಿದೆ. ತುಮಕೂರು ನಗರದಿಂದ ಗುಬ್ಬಿ ರಸ್ತೆಯಲ್ಲಿ ಮಲ್ಲಸಂದ್ರದವರೆಗೂ ಪಾಲಿಕೆ ವಿಸ್ತರಣೆಯಾಗಲಿದೆ.

ಬೆಳಗುಂಬ, ಅರಕೆರೆ, ಹೀರೇಹಳ್ಳಿ, ಸ್ವಾಂದೇನಹಳ್ಳಿ, ಬುಗುಡನಹಳ್ಳಿ, ದೊಡ್ಡ ನಾರವಂಗಲ, ಹೆತ್ತೇನಹಳ್ಳಿ, ಕೆಸರಮಡು, ಮೈದಾಳ, ಊರುಕೆರೆ, ಹೆಗ್ಗೆರೆ, ಗೂಳೂರು, ಕೆ.ಪಾಲಸಂದ್ರ, ಮಲ್ಲಸಂದ್ರ ಗ್ರಾಮ ಪಂಚಾಯಿತಿಗಳು ಪಾಲಿಕೆಗೆ ಸೇರ್ಪಡೆಗೊಳ್ಳಲಿವೆ.

ಎರಡು ವರ್ಷಗಳಿಂದ ತುಮಕೂರು ನಗರದ ಸುತ್ತಲಿನ 14 ಗ್ರಾಮ ಪಂಚಾಯಿತಿಗಳನ್ನು ಪಾಲಿಕೆಗೆ ಸೇರ್ಪಡೆ ಮಾಡುವ ಪ್ರಕ್ರಿಯೆಯನ್ನು ತುಮಕೂರು ಮಹಾನಗರ ಪಾಲಿಕೆ, ತುಮಕೂರು ಜಿಲ್ಲಾಡಳಿತ ಹಾಗೂ ತುಮಕೂರು ಜಿಲ್ಲಾ ಪಂಚಾಯಿತಿ ನಡೆಸುತ್ತಿದ್ದವು.

ಗ್ರಾಮ ಪಂಚಾಯಿತಿಗಳು ತಮ್ಮ ಗ್ರಾಮಗಳನ್ನು ಮಹಾನಗರ ಪಾಲಿಕೆಗೆ ಸೇರ್ಪಡೆ ಮಾಡುವುದಕ್ಕೆ ವಿರೋಧ ವ್ಯಕ್ತಪಡಿಸಿದ್ದವು. ಈ ಹಿಂದೆ ಪಾಲಿಕೆಗೆ ಸೇರ್ಪಡೆಯಾದ ಗ್ರಾಮಗಳಿಗೆ ಸರಿಯಾಗಿ ರಸ್ತೆ, ಚರಂಡಿ, ವಿದ್ಯುತ್, ಕುಡಿಯುವ ನೀರಿನ ವ್ಯವಸ್ಥೆ ಸೇರಿದಂತೆ ಮೂಲಸೌಕರ್ಯ ಕಲ್ಪಿಸಿಲ್ಲ.

ಇಂತಹ ಸ್ಥಿತಿಯಲ್ಲಿ 54 ಗ್ರಾಮಗಳನ್ನು ಹೊಸದಾಗಿ ತುಮಕೂರು ಪಾಲಿಕೆಗೆ ಸೇರ್ಪಡೆ ಮಾಡಿಕೊಂಡರೇ, ಸರಿಯಾದ ಮೂಲಸೌಕರ್ಯ ಕಲ್ಪಿಸಲು ಪಾಲಿಕೆಯಿಂದ ಸಾಧ್ಯವಾಗಲ್ಲ. ಜತೆಗೆ ಗ್ರಾಮ ಪಂಚಾಯಿತಿಗಳಲ್ಲಿರುವ ಸದಸ್ಯರ ರಾಜಕೀಯ ಪ್ರಾತಿನಿಧ್ಯ ಕೂಡ ಕಡಿಮೆಯಾಗುತ್ತೆ ಎಂದು ವಿರೋಧಿಸಿದ್ದರು.

ಸೇರ್ಪಡೆಗೆ ಸಂಪುಟ ಅಸ್ತು

ರಾಜ್ಯ ಸರಕಾರದ ಸಚಿವ ಸಂಪುಟ 14 ಗ್ರಾಮ ಪಂಚಾಯಿತಿ ಹಾಗೂ 54 ಗ್ರಾಮಗಳನ್ನು ತುಮಕೂರು ಮಹಾನಗರ ಪಾಲಿಕೆಗೆ ಸೇರ್ಪಡೆ ಮಾಡುವುದಕ್ಕೆ ಒಪ್ಪಿಗೆ ನೀಡಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದ್ದಾರೆ.

ಸರಕಾರಿ ಶಾಲೆಗೆ ಮೂಲ ಸೌಕರ್ಯ ಒದಗಿಸಿ

ಸ್ಥಳಕ್ಕೆ ಭೇಟಿ ನೀಡಿದ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಹೇಮಾವತಿ ಪ್ರತಿಭಟನಾಕಾರರ ಜತೆ ಮಾತನಾಡಿದರು.

ಶಿಡ್ಲಘಟ್ಟ: ತಾಲೂಕಿನ ಆನೆಮಡಗು ಗ್ರಾಮದಲ್ಲಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಮೂಲ ಸೌಕರ್ಯ ಕಲ್ಪಿಸುವಂತೆ ಒತ್ತಾಯಿಸಿ ಗ್ರಾಮಸ್ಥರು, ಪೋಷಕರು, ವಿದ್ಯಾರ್ಥಿಗಳು ಬುಧವಾರ ಪ್ರತಿಭಟನೆ ನಡೆಸಿದರು.

ಮಾನವ ಹಕ್ಕುಗಳ ಕಮಿಟಿ ಸಂಸ್ಥಾಪಕ ಅಧ್ಯಕ್ಷ ಸಿಎಂ ಬೈರೇಗೌಡ ನೇತೃತ್ವದಲ್ಲಿ ಗ್ರಾಮಸ್ಥರು ವಿದ್ಯಾರ್ಥಿಗಳು ಪೋಷಕರು ಅಂಬೇಡ್ಕರ್‌ಫೋಟೋ ಇಟ್ಟು ಪ್ರತಿಭಟನೆ ನಡೆಸಿದರು. ವಿದ್ಯಾರ್ಥಿ ಸಂಘಟನೆಯ ಮೂಲಕ ಸಾರ್ವಜನಿಕ ಶಿಕ್ಷಣ ಉಳಿಸಿ-ಹಳ್ಳಿ ಮಟ್ಟದ ಊರಿನ ಸರ್ಕಾರಿ ಶಾಲೆಯ ಪರಿಸ್ಥಿತಿ ಕುರಿತು ಅಧಿಕಾರಿಗಳ ಗಮನ ಸೆಳೆಯುತ್ತಿದ್ದೇವೆ. ಆನೆ ಮುಡುಗು ಶಾಲೆಯು ಮೂಲಭೂತ ಸೌಕರ್ಯಗಳಿಲ್ಲದೇ ಬಳಲುತ್ತಿದೆ. ಮಕ್ಕಳಿಗೆ ಆಡಲು ಮೈದಾನವಿಲ್ಲ, ಶೌಚಾಲಯ ಕಳಪೆಯಾಗಿದೆ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯಿಲ್ಲ, ಶಾಲೆಗೆ ಕಾಂಪೌಂಡ್ ಇಲ್ಲ ಬಡ ವಿದ್ಯಾರ್ಥಿಗಳಿಗೆ ಆಸರೆಯಾಗಬೇಕಾದ ಸರಕಾರಿ ಶಾಲೆಯು ಅನೇಕ ಸಮಸ್ಯೆಗಳಿಂದ ಬಳಲುತ್ತಿದೆ. ಇಂಥ ವ್ಯವಸ್ಥೆಯಿಂದಾಗಿ ಪೋಷಕರು ಮಕ್ಕಳನ್ನು ಶಾಲೆಗೆ ಕಳುಹಿಸಲು ಹಿಂಜರಿಯುತ್ತಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಶಾಲೆಯ ಈ ಬಗ್ಗೆ ಗ್ರಾಮ ಪಂಚಾಯಿತಿ ಆಡಳಿತ ಮಂಡಳಿ ಹಾಗೂ ಪಿಡಿಒ ಗಮನಕ್ಕೆ ತಂದರೂ ಕ್ರಮಕ್ಕೆ ಮುಂದಾಗಿಲ್ಲ ಎಂಬುದು ಶಾಲೆಯ ಎಸ್ ಡಿ ಎಂ ಸಿ ಅಧ್ಯಕ್ಷ ಮಾತಾಗಿದೆ. ಮೂಲಸೌಕರ್ಯಗಳ ಕೊರತೆ ಇದ್ದು ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಪಂಚಾಯಿತಿ ಆಡಳಿತಕ್ಕೆ ಮನವಿ ಸಲ್ಲಿಸಿದ್ದಾರೆ. ಆದರೆ, ಇದುವರೆಗೂ ಪಂಚಾಯಿತಿ ಆಡಳಿತ ಕ್ರಮಕ್ಕೆ ಮುಂದಾಗಿಲ್ಲ ಎಂದು ಆರೋಪಿಸಿದರು. ಸ್ಥಳಕ್ಕೆ ಭೇಟಿ ನೀಡಿದ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಹೇಮಾವತಿ ಆರ್., ಈ ವಿಚಾರವಾಗಿ ಅಧಿಕಾರಿಗಳ ಜೊತೆ ಮಾತನಾಡಿ ಒಂದು ತಿಂಗಳ ಅವಧಿಯಲ್ಲಿ ಸಮಸ್ಯೆ ಬಗೆಹರಿಸುತ್ತೇವೆ ಎಂದು ಭರವಸೆ ನೀಡಿದರು. ಈ ವೇಳೆ ಮುಖ್ಯ ಶಿಕ್ಷಕ ರಾಮಮೂರ್ತಿ, ವೇಣು, ನಾಗರಾಜ್, ಕೃಷ್ಣಮೂರ್ತಿ, ಅಶೋಕ್, ವೆಂಕಟರಾಜು, ಉಮೇಶ್, ಪೋಷಕರು ವಿದ್ಯಾರ್ಥಿಗಳು ಹಾಜರಿದ್ದರು.

ಪೋಷಕರ ಜತೆ ಹೊಸ ವರ್ಷ ಆಚರಿಸಿ: ಸಚಿವ

ಕೋಲಾರ: ಹೊಸ ವರ್ಷದ ಗುಂಗಿನಲ್ಲಿ ಯುವಜನತೆ ಮೋಜಿ ಮಸ್ತಿ ಮಾಡುವ ಮೂಲಕ ಪ್ರಾಣ ಕಳೆದುಕೊಳ್ಳುತ್ತಿರುವುದು ಸರಿಯಲ್ಲ, 2016 ಹೊಸವರ್ಷವನ್ನು ಪೋಷಕರು ಮತ್ತು ಕುಟುಂಬದೊಂದಿಗೆ ಮನೆಯಲ್ಲೇ ಆಚರಣೆ ಮಾಡುವ ಮೂಲಕ ಸುಸಂಸ್ಕೃತ ಮತ್ತು ಆರೋಗ್ಯ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕೆಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು.

ತಾಲೂಕಿನ ವೇಮಗಲ್ನ ಕಾಂಗ್ರೆಸ್ ಕಿಸಾನ್ಸೆಲ್ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಇತ್ತೀಚೆಗೆ ಯುವಕರು ಹೊಸ ವರ್ಷದ ಸಂದರ್ಭದಲ್ಲಿ ತಮ್ಮ ಪ್ರಾಣವನ್ನು ಕಳೆದುಕೊಳ್ಳುತ್ತಿದ್ದು ಇದನ್ನು ತಪ್ಪಿಸುವ ದೆಸೆಯಲ್ಲಿ ಈ ಬಾರಿ ಮನೆಯಲ್ಲೇ ಹೊಸ ವರ್ಷವನ್ನು ಬರಮಾಡಿಕೊಳ್ಳುವ ಮೂಲಕ ಸಂಭ್ರಮ ಹಂಚಿಕೊಳ್ಳಬೇಕೆಂದರು.

ತಂದೆ ತಾಯಿಗಳು ಮಕ್ಕಳ ಮೇಲೆ ಅಪಾರ ನಂಬಿಕೆ ಮತ್ತು ವಿಶ್ವಾಸ ಇಟ್ಟುಕೊಂಡು ಸಾಕಿ ಬೆಳೆಸುತ್ತಾರೆ. ಬಡವರು,ಕೂಲಿಕಾರ್ಮಿಕರು,ರೈತರು ಬೆಳಿಗ್ಗೆಯಿಂದ ಸಂಜೆ ತನಕ ದುಡಿದು ಮಕ್ಕಳು ಗುಣಮಟ್ಟದ ವಿದ್ಯಾಭ್ಯಾಸ ಮಾಡಿ ಉತ್ತಮ ಬದುಕು ಕಟ್ಟಿಕೊಳ್ಳಬೇಕೆಂಬ ಛಲದೊಂದಿಗೆ ವಿದ್ಯಾಭ್ಯಾಸ ಕೊಡಿಸುತ್ತಿದ್ದಾರೆ. ಅವರ ನಂಬಿಕೆಯನ್ನು ಸುಳ್ಳು ಮಾಡದೆ ಪೋಷಕರ ಆಶಯದಂತೆ ದೇಶಕ್ಕೆ ಆಸ್ತಿಯಾಗಿ ನಿಂತುಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾಂಗ್ರೆಸ್ ಕಿಸನ್ಸೆಲ್ ಜಿಲ್ಲಾಧ್ಯಕ್ಷ ಸೀತಿಹೊಸೂರು ಮುರಳಿಗೌಡ ಮಾತನಾಡಿ, ಇತ್ತೀಚೆಗೆ ಅಪಘಾತದಲ್ಲಿ ನಿಧನರಾದ ಶೆಟ್ಟಿಹಳ್ಳಿ ವೆಂಕಟೇಶಗೌಡರ ಕುಟುಂಬಕ್ಕೆ ಸಾಂತ್ವನ ಹೇಳಲು ಆಗಮಿಸಿದ್ದ ಸಚಿವ ರು ಕೋಲಾರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರ ಕಷ್ಟ-ಸುಖಕ್ಕೆ ಸ್ಪಂದನೆ ನೀಡುತ್ತಿದ್ದಾರೆ ಎಂದು ತಿಳಿಸಿದರು.

ಕಾಂಗ್ರೆಸ್ ಎಸ್ಸಿ ವಿಭಾಗದ ಜಿಲ್ಲಾಧ್ಯಕ್ಷ ಜಯದೇವ್, ಪ್ರಧಾನ ಕಾರ್ಯದರ್ಶಿ ಎಚ್.ವೆಂಕಟೇಶಪ್ಪ, ಕಾರ್ಯದರ್ಶಿ ಡಿ.ವಿ.ಶ್ರೀನಿವಾಸ್, ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಕಾರ್ಯದರ್ಶಿ ಸಿ.ಎಚ್. ಮುನಿರಾಜ್, ಬಂತಿಗಾನಹಳ್ಳಿ ಪೂಜೇಶ, ವಲ್ಲಬ್ಬಿಕನಕರಾಜ್, ಕಾರ್ಮಿಕ ಪರಿಷತ್ತು ರಾಜ್ಯ ಉಪಾಧ್ಯಕ್ಷ ರಾಮಾಪುರ ನವೀನ್ಕುಮಾರ್, ದಿನ್ನೆಹೊಸಳ್ಳಿ ಅಂಜನಪ್ಪ, ಮಂಜುನಾಥ, ಬೀದಿಬದಿ ವ್ಯಾಪಾರಿಗಳ ಸಂಘದ ಜಿಲ್ಲಾಧ್ಯಕ್ಷ ಹರೀಶ್, ಕುರುಗಲ್ ಪಾಪಣ್ಣ ಇದ್ದರು.

ಸಚಿವ ಕೆ.ಎಚ್.ಮುನಿಯಪ್ಪ ಸುದ್ದಿಗೋಷ್ಠಿ ನಡೆಸಿ ಮಾತನಾಡಿದರು.

ಅಭಿಮಾನಿ ದೇವರುಗಳ ಋಣ ನನ್ನ ಮೇಲಿದೆ

ಹಿಂದೆ ಕೇಂದ್ರ ಸಚಿವನಾಗಿ, ಇದೀಗ ರಾಜ್ಯದಲ್ಲಿ ಕ್ಯಾಬಿನೆಟ್ ಮಂತ್ರಿಯಾಗಿ ನನಗೆ ಒಳ್ಳೆ ಹೆಸರು ತಂದುಕೊಟ್ಟ ಕೋಲಾರ ಜಿಲ್ಲೆ ಮತ್ತು ಅಭಿಮಾನಿ ದೇವರುಗಳ ಋಣ ನನ್ನ ಮೇಲಿದ್ದು ನಮ್ಮ ಇಡೀ ಕುಟುಂಬ ಇದಕ್ಕಾಗಿ ಯಾವುದೇ ಸೇವೆ,ತ್ಯಾಗಕ್ಕೆ ಬದ್ಧರಾಗಿದ್ದೇವೆ ಎಂದು ಸಚಿವ ಮುನಿಯಪ್ಪ ನುಡಿದರು.

ಕ್ಯಾಲೆಂಡರ್ ಬಿಡುಗಡೆ | ಮಾಜಿ ಶಾಸಕ ಕೃಷ್ಣಾರೆಡ್ಡಿ ಸಚಿವ ಸುಧಾಕರ್‌ಗೆ ಉತ್ತರ

ಸಚಿವರ ಅಭಿವೃದ್ಧಿ ಕಾರ್ಯಗಳಿಗೆ ಅಡ್ಡಿಪಡಿಸಿಲ್ಲ

ಚಿಂತಾಮಣಿ: ನೂತನ ವರ್ಷದ ಕ್ಯಾಲೆಂಡರ್ ಗಳನ್ನು ಮಾಜಿ ಶಾಸಕ ಹಾಗೂ ಜೆಡಿಎಸ್ ಕೋರ್‌ಕಮಿಟಿ ಅಧ್ಯಕ್ಷ ಜೆ.ಕೆ ಕೃಷ್ಣಾರೆಡ್ಡಿ ಲೋಕಾರ್ಪಣೆಗೊಳಿಸಿ ನೂತನ ವರ್ಷದಲ್ಲಿ ಉತ್ತಮ ಮಳೆ, ಬೆಳೆಯಾಗಿ ಜನ ಜಾನುವಾರಗಳು ಸುಖಶಾಂತಿ ನೆಮ್ಮಂದಿಯಿಂದ ಬಾಳಲ್ಲಿ ಎಂದು ಶುಭ ಹಾರೈಸಿ ಜನತೆಗೆ ಹೊಸ ವರ್ಷದ ಶುಭಾಶಯಗಳನ್ನು ಕೋರಿದರು.

ಜೆಕೆ ಭವನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 2026ರ ದಿನದರ್ಶಿಕೆ ಬಿಡುಗಡೆಗೊಳಿಸಿದ ಮಾಜಿ ಶಾಸಕ ಜೆ.ಕೆ ಕೃಷ್ಣಾರೆಡ್ಡಿ ಈ ವರ್ಷವೂ ಸಹ ಉತ್ತಮ ಮಳೆ ಬೆಳೆಯಾಗಿ ಜನ ಜಾನುವಾರುಗಳು ಸುಖ ಶಾಂತಿ ನೆಮ್ಮಂದಿಯಿಂದ ಬಾಳಲಿಯೆಂದು ಜನತೆಗೆ ಶುಭ ಹಾರೈಸಿದರು.

ಇದೇ ವೇಳೆ ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ಅವರ ಆರೋಪಗಳಿಗೆ ಉತ್ತರಿಸಿ, ಸಚಿವರು ಮಾಡುತ್ತಿರುವ ಅಭಿವೃದ್ಧಿ ಕಾರ್ಯಕ್ರಮಗಳಿಗೆ ನಾನಾಗಲಿ ನನ್ನ ಕಾರ್ಯಕರ್ತರಾಗಲಿ ಅಡ್ಡಿಪಡಿಸಿರುವ ಒಂದೇ ಒಂದು ಉದಾಹರಣೆ ತೋರಿಸಲಿ ಎಂದು ಸವಾಲು ಹಾಕಿದರು.

ತಾಲೂಕಿನಲ್ಲಿ ಎಷ್ಟೋ ಜನ ಸ್ವಂತ ಜಾಗ ಖರೀದಿ ಮಾಡಿ ಖಾಸಗಿ ಶಾಲೆಗಳನ್ನು ನಡೆಸುತ್ತಿದ್ದಾರೆ. ಆದರೆ ನೀವು ಖರೀದಿ ಮಾಡಿ ಖಾಸಗಿ ಶಾಲೆ ನಡೆಸುತ್ತಿಲ್ಲ, ತೋಪಲ್ಲಿ ಶಾಲೆ ನಡೆಸುತ್ತಿರುವುದನ್ನು ನಾವು ಪ್ರಶ್ನೆ ಮಾಡುತ್ತಿದ್ದೇವೆ ಎಂದು ಉನ್ನತ ಶಿಕ್ಷಣ ಸಚಿವರ ಸಹೋದರ ಬಾಲಾಜಿ ರೆಡ್ಡಿ ವಿರುದ್ಧ ಸಹ ಗುಡಿದರು.

ಜೆಕೆ ಭವನದ ಮೇಲೆ ಕೇಸ್ ಹಾಕಿದ್ದೀರಾ. ನಾವು ಎಂದಿಗೂ ನಿಮ್ಮ ಮೇಲೆ ಯಾಕೆ ಕೇಸು ಹಾಕಿದ್ದೀರಿ ಎಂದು ಪ್ರಶ್ನೆ ಮಾಡಿಲ್ಲವಲ್ಲ. ನ್ಯಾಯಾಲಯದಲ್ಲಿ ಏನು ತೀರ್ಪು ಬರುತ್ತದೆ ಅದಕ್ಕೆ ಒಪ್ಪಿಕೊಳ್ಳುತ್ತೇವೆ. ಡೀಮ್ಡ್ ಫಾರೆಸ್ಟ್ ಜಾಗದಲ್ಲಿ ಗುಹಾಂತರ ದೇವಾಲಯ ಮಾಡಿದ್ದೀರಾ ಅದನ್ನು ಪ್ರಶ್ನೆ ಮಾಡುತಿದ್ದೇವೆ ಹೊರತು ನೀವು ಮಾಡುತ್ತಿರುವ ಅಭಿವೃದ್ಧಿ ಕಾರ್ಯಗಳಿಗೆ ಅಲ್ಲ ಎಂದು ಸ್ಪಷ್ಟನೆ ನೀಡಿದರು. ಈ ಸಂದರ್ಭದಲ್ಲಿ ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ಸಂತೇಕಲ್ಲಹಳ್ಳಿ ಪ್ರಭಾಕರ್, ತಾಲೂಕು ಅಧ್ಯಕ್ಷ ದಿನ್ನಮಿಂದಹಳ್ಳಿ ಬೈರಾರೆಡ್ಡಿ, ಎಸ್ಸಿ ಘಟಕದ ಜಿಲ್ಲಾಧ್ಯಕ್ಷ ಮಾದಮಂಗಲ ಆಂಜಿ, ಜೆಡಿಎಸ್ ಪಕ್ಷದ ಮುಖಂಡರಾದ ವೆಂಕಟಾಚಲಪತಿ, ಆಲಂಬಗಿರಿ ನವೀನ್, ಗುಡೇ ಶ್ರೀನಿವಾಸರೆಡ್ಡಿ, ಯನಮಲಪಾಡಿ ಚಂದ್ರಾರೆಡ್ಡಿ ದೊಡ್ಡಬೊಮ್ಮನಹಳ್ಳಿ ವೆಂಕಟರೆಡ್ಡಿ, ಬನಹಳ್ಳಿರವಿ, ಸೀಕಲ್ ಶ್ರೀನಿವಾಸಗೌಡ, ಮಾಜಿ ನಗರಸಭಾ ಸದಸ್ಯರಾದ ಮಂಜುನಾಥ್, ಅಲ್ಲಾಬಕಾಷ್, ಅಬ್ದುಲ್ ಸಮದ್, ಜೆಕೆ ಮಧು, ಆಸ್ಟರ್, ಅನೀಲ್, ಟಿಪ್ಪುನಗರ ಆಕಲು ಸುಧಾಕರ್, ಇದ್ದರು.



ಜೆಡಿಎಸ್ ಕೋರ್‌ಕಮಿಟಿ ಅಧ್ಯಕ್ಷ ಜೆ.ಕೆ ಕೃಷ್ಣಾರೆಡ್ಡಿ ನೂತನ ವರ್ಷದ ಕ್ಯಾಲೆಂಡರ್‌ಗಳನ್ನು ಲೋಕಾರ್ಪಣೆಗೊಳಿಸಿದರು.

ಜಿಟಿಟಿಸಿ, ಐಟಿಐ ಮಂಜೂರಾತಿಗೆ ರಮೇಶಬಾಬು ಆಗ್ರಹ

ಚಿಕ್ಕನಾಯಕನಹಳ್ಳಿ: ತಾಲ್ಲೂಕಿನ ಗ್ರಾಮೀಣ ಭಾಗದ ಯುವಕರಿಗೆ ತಾಂತ್ರಿಕ ಶಿಕ್ಷಣ ಮತ್ತು ಉದ್ಯೋಗಾವಕಾಶ ಕಲ್ಪಿಸುವ ನಿಟ್ಟಿನಲ್ಲಿ ಚಿಕ್ಕನಾಯಕಹಳ್ಳಿಯಲ್ಲಿ ಜಿಟಿಟಿಸಿ ತರಬೇತಿ ಕೇಂದ್ರ ಹಾಗು ಹೊಸದಾಗಿ ಸರಕಾರಿ ಐಟಿಐ ಕಾಲೇಜು ಆರಂಭಿಸುವಂತೆ ವಿಧಾನಪರಿಷತ್ ಸದಸ್ಯ ರಮೇಶಬಾಬು ಸರಕಾರವನ್ನು ಬಲವಾಗಿ ಆಗ್ರಹಿಸಿದ್ದಾರೆ.

ಪಟ್ಟಣದಲ್ಲಿ ಪತ್ರಕರ್ತರೊಂದಿಗೆ ಹಮ್ಮಿಕೊಂಡಿದ್ದ ಸಂವಾದದಲ್ಲಿ ಮಾತನಾಡಿದ ಅವರು, ಕ್ಷೇತ್ರದ ಶೈಕ್ಷಣಿಕ ಅಭಿವೃದ್ಧಿಗೆ ತಾವು ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು.

ತಾಲೂಕಿನಲ್ಲಿ ಪ್ರತಿಭಾವಂತ ಯುವ ಜನರಿದ್ದಾರೆ. ಆದರೆ ಅವರಿಗೆ ಸ್ಥಳೀಯವಾಗಿ ಉನ್ನತ ತಾಂತ್ರಿಕ ತರಬೇತಿ ಸಿಗುತ್ತಿಲ್ಲ. ಈ ಕೊರತೆ ನೀಗಿಸಲು ಸರಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ ಸ್ಥಾಪನೆ ಅತ್ಯಗತ್ಯ. ಬಡ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸುಸಜ್ಜಿತ ಸರಕಾರಿ ಐಟಿಐ ಕಾಲೇಜು ಮಂಜೂರು ಮಾಡುವಂತೆ ಈಗಾಗಲೇ ಇಲಾಖೆಗೆ ಪತ್ರ ಬರೆದು ಒತ್ತಡ ಹೇರಲಾಗಿದೆ ಎಂದು ತಿಳಿಸಿದರು.

ರಾಜಕೀಯ ಭವಿಷ್ಯದ ಬಗ್ಗೆ ಹಂಚಿಕೊಂಡ ರಮೇಶಬಾಬು, ಪ್ರಸ್ತುತ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ನಿರ್ದೇಶಕನಾಗಿ ಸೇವೆ ಸಲ್ಲಿಸುತ್ತಿದ್ದೇನೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಬೆಂಗಳೂರಿನಲ್ಲಿ ಸೂಕ್ತ ಕ್ಷೇತ್ರಕ್ಕಾಗಿ ಹುಡುಕಾಟ ನಡೆಸುತ್ತಿದ್ದೇನೆ ಎಂದು ಹೇಳಿದರು.

ನಾನೂ ಪತ್ರಕರ್ತ :

ಸಂವಾದದ ವೇಳೆ ತಮ್ಮ ಹಳೆಯ ನೆನಪುಗಳನ್ನು ನೆನಪಿಸಿಕೊಂಡ ರಮೇಶಬಾಬು, ನಾನೂ ಕೂಡ 90 ರ ದಶಕದಲ್ಲಿ ಪತ್ರಕರ್ತನಾಗಿ ಕೆಲಸ ಮಾಡಿದ್ದೇನೆ. ಪತ್ರಕರ್ತರ ಸಮಸ್ಯೆಗಳು ಮತ್ತು ಸವಾಲುಗಳನ್ನು ಹತ್ತಿರದಿಂದ ಕಂಡಿದ್ದೇನೆ ಎಂದು ತಿಳಿಸಿದರು.

ವೈಕುಂಠ ಏಕಾದಶಿ : ವಿಷ್ಣು ದೇವರ ವಿಶೇಷ ದರ್ಶನ



ಚಿಕ್ಕಬಳ್ಳಾಪುರ: ಹಿಂದೂಗಳ ಪವಿತ್ರ ದಿನವಾದ ವೈಕುಂಠ ಏಕಾದಶಿಯ ಪ್ರಯುಕ್ತ ದೇವಾಲಯಗಳಲ್ಲಿ ವಿಶೇಷ ಪೂಜೆ ನೆರವೇರಿಸಿ, ಹೂವಿನ ಅಲಂಕಾರಗಳಿಂದ ಸಿಂಗರಿಸಲಾಗಿತ್ತು. ಭಕ್ತರು ಬೆಳಗ್ಗೆಯಿಂದಲೇ ದೇವಾಲಯಗಳಿಗೆ ಭೇಟಿ ನೀಡಿ ದೇವರ ದರ್ಶನ ಪಡೆದ ದೃಶ್ಯಗಳು ಸಾಮಾನ್ಯವಾಗಿತ್ತು. ವಿಷ್ಣು ದೇವರಿಗೆ ಪ್ರಿಯವಾದ ಈ ಪವಿತ್ರ ದಿನದಂದು ಮಾಡುವ ಪೂಜೆ ಮತ್ತು ಉಪವಾಸ, ವ್ರತಗಳು ವಿಶೇಷ ಫಲವನ್ನು ನೀಡುತ್ತದೆ ಎಂಬುದು ನಂಬಿಕೆ. ಹೀಗಾಗಿ ದೇವಾಲಯಗಳಲ್ಲಿ ವೈಕುಂಠ ದ್ವಾರ ನಿರ್ಮಿಸಲಾಗುತ್ತದೆ. ಎಂದಿನಂತೆ ಈ ಬಾರಿಯೂ ಈ ದಿನದಲ್ಲಿ ಜಿಲ್ಲೆಯಾದ್ಯಂತ ಶ್ರೀ ವೆಂಕಟರಮಣ ಸ್ವಾಮಿ ದೇವಾಲಯಗಳಲ್ಲಿ ಶ್ರೀ ಸ್ವಾಮಿಯವರಿಗೆ ವಿಶೇಷ ಪೂಜಾದಿಗಳು ನಡೆದವು. ವೈಕುಂಠ ದ್ವಾರ ಪ್ರವೇಶಿಸಿ, ದೇವರ ದರ್ಶನ ಪಡೆಯಲು ಸರದಿ ಸಾಲಿನಲ್ಲಿ ಮುಂದಾದರು.

ನಗರದ ಕಂದವಾರಪೇಟೆಯ ಶ್ರೀ ಲಕ್ಷ್ಮಿ ವೆಂಕಟರಮಣಸ್ವಾಮಿ ದೇವಾಲಯ, ಗಂಗಮ್ಮ ಗುಡಿ ರಸ್ತೆಯ ಪೇಟೆ ಆಂಜನೇಯಸ್ವಾಮಿ ದೇವಾಲಯ, ವಾಪಸಂದ್ರದ ಶ್ರೀರಂಗನಾಥ ದೇವಾಲಯ, ರಂಗಸ್ಥಳದ ಶ್ರೀ ರಂಗನಾಥಸ್ವಾಮಿ ದೇವಾಲಯ, ಶ್ರೀನಿವಾಸ ಸಾಗರದ ಶ್ರೀವೆಂಕಟರಮಣಸ್ವಾಮಿ ದೇವಾಲಯ, ಜಾಲಾರಿ ನರಸಿಂಹ ದೇವರ ಬೆಟ್ಟದಲ್ಲಿರುವ ಶ್ರೀ ಯೋಗ ಮತ್ತು ಭೋಗ ನರಸಿಂಹಸ್ವಾಮಿ ದೇವಾಲಯ, ಅರೂರಿನ ಶ್ರೀಲಕ್ಷ್ಮಿ ನರಸಿಂಹಸ್ವಾಮಿ ದೇವಾಲಯಗಳಲ್ಲಿ ವಿವಿಧ ಧಾರ್ಮಿಕ ಕೈಂಕರ್ಯಗಳನ್ನು ಹಮ್ಮಿಕೊಳ್ಳಲಾಗಿತ್ತು.

ಆಡಳಿತದ ಸೌಧದಲ್ಲಿ ಕಸದ ಬುಟ್ಟಿ ಕೊರತೆ !

ತಿಪಟೂರು: ರೈತರು, ಅಂಗವಿಕಲರು, ವೃದ್ಧರು ಸೇರಿದಂತೆ ಪ್ರತಿ ದಿನ ನೂರಾರು ಜನ ಕಾರ್ಯನಿಮಿತ ತಾಲೂಕು ಆಡಳಿತ ಸೌಧಕ್ಕೆ ಆಗಮಿಸುವುದು ಸರ್ವೆ ಸಾಮಾನ್ಯ.

ಇಲ್ಲಿ ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಸುಸಜ್ಜಿತ ತಾಲೂಕು ಆಡಳಿತ ಸೌಧ ನಿರ್ಮಿಸಲಾಗಿದೆ. ಆದರೆ ಈ ಕಟ್ಟಡದ ಸೌಂದರ್ಯ,ಸ್ವಚ್ಛತೆ ಕಾಪಾಡಲು ಮುಖ್ಯವಾಗಿ ಬೇಕಾಗಿರುವ ಒಂದಿಷ್ಟು ಡಸ್ಟ್ ಬಿನ್ಸ್ ಕೊಂಡು ತಂದು ಕಾರಿಡಾರ್ ಕಾರ್ನರ್ ಗಳಲ್ಲಿ ಇಡಲು ತಾಲೂಕು ಆಡಳಿತದ ಬಳಿ ಕಾಸಿಲ್ಲವೇ ? ಎಂದು ಜನ ಕೇಳುತ್ತಿದ್ದಾರೆ. ಇದೇ ಕಟ್ಟಡದಲ್ಲಿ ಉಪ ವಿಭಾಗ ಅಧಿಕಾರಿ, ತಹಸಿಲ್ದಾರ್,ಸರ್ವೇ ಇಲಾಖೆ, ಆಹಾರ ಇಲಾಖೆ ಸೇರಿ ಇತರ ಇಲಾಖೆ ಕಚೇರಿಗಳಿವೆ. ತಮ್ಮ ಕೆಲಸಗಳಿಗೆ ಆಗಮಿಸುವ ಸಾರ್ವಜನಿಕರಿಗೆ ತಾನು ತಂದಿದ್ದ ಲಘು ಉಪಹಾರ ಹಾಗೂ ಪಾನೀಯಗಳನ್ನು ಉಪಯೋಗಿಸಿದ ನಂತರ ಪ್ಯಾಕೆಟ್ ಕವರ್‌ಗಳು, ನೀರಿನ ಬಾಟಲಿ, ದಿನಬಳಕೆ ವಸ್ತುಗಳ ತ್ಯಾಜ್ಯವನ್ನು ಒಂದೆಡೆ ಹಾಕಲು ಡಸ್ಟ್ ಬಿನ್ ಗಳ (ಕಸದ ಬುಟ್ಟಿ) ಕೊರತೆ ಎದ್ದು ಕಾಣುತ್ತಿದೆ. ಕಸದ

ಬುಟ್ಟಿಗಳು ಇಲ್ಲದ ಕಾರಣ ತ್ಯಾಜ್ಯ ವಸ್ತುಗಳನ್ನು ಕಚೇರಿಯ ಆವರಣದ ಹೂವು ದೋಟದಲ್ಲಿ ಸಾರ್ವಜನಿಕರು ಬಿಸಾಡಿರುವ ದೃಶ್ಯಗಳು ಕಣ್ಣಿಗೆ ಕಾಣುತ್ತವೆ. ಹಾಗೇ ಕಚೇರಿಯ ಕೈ ತೋಟದಲ್ಲಿ ನೆಟ್ಟಿರುವ ಗಿಡಗಳಿಗೆ ಸರಿಯಾದ ಪೋಷಣೆ (ನೀರು ಗೊಬ್ಬರ) ಇಲ್ಲದೆ ಅವು ಕೂಡ ಸೊರಗುತ್ತಿವೆ. ಸಾರ್ವಜನಿಕರಲ್ಲಿ ಸ್ವಚ್ಛತೆ ಬಗ್ಗೆ ಅರಿವು ಮೂಡಿಸುವ ಅಧಿಕಾರಿಗಳು ಕಾರ್ಯನಿರ್ವಹಿಸುವ ಕಟ್ಟಡಗಳಲ್ಲೇ ಇಂತಹ ಸ್ಥಿತಿ ಕಂಡರೆ ಹೇಗೆ ? ಕೂಡಲೇ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಇತ್ತ ಗಮನ ಹರಿಸಿ ಕಸದ ಬುಟ್ಟಿಗಳ ಸಮಸ್ಯೆ ನಿವಾರಿಸಲಿ. ಸಸಿಗಳ ಪೋಷಣೆ ಬಗ್ಗೆಯೂ ಗಮನಹರಿಸಲಿ ಎನ್ನುತ್ತಾರೆ ಸ್ಥಳೀಯ ಸಾರ್ವಜನಿಕರು.

ರಸ್ತೆ ವಿಸ್ತರಣೆ: ಕಟ್ಟಡ ಮಾಲೀಕರಿಗೆ ನೋಟಿಸ್

ಗೌರಿಬಿದನೂರು: ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಗೌರಿಬಿದನೂರು ನಗರದ ಮಧುಗಿರಿ ರಸ್ತೆಯನ್ನು 80 ಅಡಿ ರಸ್ತೆ ಅಭಿವೃದ್ಧಿ ಪಡಿಸಲು ರಸ್ತೆಯ ಕಟ್ಟಡ ಮಾಲೀಕರುಗಳಿಗೆ ನೋಟಿಸ್ ಜಾರಿ ಮಾಡಿದರು.

ಕಳೆದ ಮೂರು ತಿಂಗಳ ಹಿಂದೆ ರಾ.ಹೆ.ಪ್ರಾಧಿಕಾರ ರಾ.ಹೆ-69 ರಸ್ತೆ ಗೌರಿಬಿದನೂರು-ಮಧುಗಿರಿ ರಸ್ತೆ ಅಭಿವೃದ್ಧಿಗೆ ಚಾಲನೆ ನೀಡಿದ್ದರು. ಈ ನಿಟ್ಟಿನಲ್ಲಿ ಕೆಲವು ಕಟ್ಟಡ ಮಾಲೀಕರು ಸ್ವಯಂ ಪ್ರೇರಿತರಾಗಿ ತಮ್ಮ ಕಟ್ಟಡಗಳನ್ನು ತೆರವುಗೊಳಿಸಿಕೊಂಡರು. ಆದರೆ ಕೆಲವು ಕಟ್ಟಡ ಮಾಲೀಕರು ನ್ಯಾಯಾಲಯದ ಮೆಟ್ಟಿಲೇರಿದ್ದರಿಂದ ಎಂ.ಜಿ.ರಸ್ತೆಯಲ್ಲಿ ಕಟ್ಟಡಗಳ ತೆರವು ಕಾರ್ಯಾಚರಣೆ ಸ್ಥಗಿತಗೊಂಡಿತ್ತು.

ಇದೀಗ ರಾ.ಹೆ.ಪ್ರಾಧಿಕಾರದ ಅಧಿಕಾರಿಗಳು ಮಧುಗಿರಿ ರಸ್ತೆ, ಕೃಷ್ಣಾಭವನ್ ರಸ್ತೆ ಕಟ್ಟಡ ಮಾಲೀಕರುಗಳಿಗೆ ನೋಟಿಸ್ ಜಾರಿ ಮಾಡಿ, ಗೌರಿಬಿದನೂರು ನಗರದ ಎಂ.ಜಿ. ರಸ್ತೆಯಲ್ಲಿನ ಖಾತಾ ನಂ/ಅಸ ಸ್ಮೆಂಟ್ ನಂ:364/324 ಸ್ವತ್ತುಗಳ ರಾ.ಹೆ.-69 ರಸ್ತೆಗೆ ಹೊಂದಿಕೊಂಡಿದ್ದು, ನಿರ್ಮಿಸಲಾದ ಕಟ್ಟಡದ ಪರವಾನಿಗೆ ಮತ್ತಿತರ ದಾಖಲಾತಿಗಳು ಸಲ್ಲಿಸುವಂತೆ ಸೂಚಿಸಿದ್ದಾರೆ. ಕಟ್ಟಡ, ನಿವೇಶನ ಕೃಷಿ ಭೂಮಿಯೇ ಅಥವಾ ಕೃಷಿಯೇತರ ಭೂಮಿಯೇ ಎಂಬ ದೃಢೀಕರಣ ಪತ್ರ, ಕೃಷಿಯೇತರ ಭೂಮಿಯಾಗಿದ್ದರೆ ಯಾವ ಉದ್ದೇಶಕ್ಕಾಗಿ ಭೂ ಪರಿವರ್ತನೆಯಾಗಿರುತ್ತೆ ಕಟ್ಟಡ ನಿರ್ಮಾಣಕ್ಕಾಗಿ ಪರವಾನಿಗೆ ಪತ್ರ ನೀಡಿರುವ ಸಕ್ಷಮ ಪ್ರಾಧಿಕಾರದ ವಿವರಗಳು ಮತ್ತು ಪರವಾನಗಿ ದೃಢೀಕರಣ ಪ್ರತಿ, ಕಟ್ಟಡ ನಿರ್ಮಾಣಕ್ಕೆ ಪಿಡಬ್ಲೂಡಿ, ಎನ್.ಎಚ್. ಇಲಾಖೆಗಳಿಂದ ಪಡೆದಿರುವ ನಿರಾಕ್ಷೇಪಣೆ ಪತ್ರ, ಇತರೆ ದಾಖಲೆಗಳನ್ನು ಐದು ದಿನಗಳಲ್ಲಿ ಸಲ್ಲಿಸುವಂತೆ ಸೂಚಿಸಿದ್ದಾರೆ. ಕೃಷ್ಣಾಭವನ್ ರಸ್ತೆಯ ಇಕ್ಕೆಲೆಗಳ ಅಂಗಡಿಗಳ ಮಾಲೀಕರುಗಳಿಗೆ ನೋಟಿಸ್ ಜಾರಿ ವೇಳೆ ಕೆಲ ಕಟ್ಟಡ ಮಾಲೀಕರು ನೋಟಿಸ್ ನೀಡಲು ನಿಮ್ಮ ಬಳಿ ಏನು ದಾಖಲೆಗಳಿವೆ, ಕೊಡಿ ಎಂದು ಪ್ರಶ್ನಿಸಿದರು,ಇದರಿಂದಾಗಿ ಕೆಲಕಾಲ ಅಧಿಕಾರಿಗಳು ಮತ್ತು ಕಟ್ಟಡ ಮಾಲೀಕರ ನಡುವೆ ಬಿರುಸಿನ ಮಾತುಕತೆ ನಡೆಯಿತು. ಕೆಲ ಕಟ್ಟಡ ಮಾಲೀಕರು ಜೆಎಂಎಫ್ಸಿ ಮೊರೆ ಹೋಗಿದ್ದು, ನ್ಯಾಯಾಲಯಕ್ಕೆ ವರದಿ ಹಾಗೂ ದಾಖಲೆಗಳನ್ನು ಸಲ್ಲಿಸುವ ಸಲುವಾಗಿ ಕಟ್ಟಡ ಮಾಲೀಕರಿಗೆ ನೋಟಿಸ್ ಜಾರಿ ಮಾಡಲಾಗಿದೆ ಎಂದು ರಾ.ಹೆ.ಪ್ರಾಧಿಕಾರ ಎಇಇ ರಾಜಾ ರೆಡ್ಡಿ ಹಾಗೂ ಎಇ ಶಿವಣ್ಣ ತಿಳಿಸಿದರು.

IN THE COURT OF THE CIVIL JUDGE AND J.M.F.C. AT KORATAGERE
C.MIS.No.439/2025

Petitioners:-1.Siddamma w/o Revanna aged about 63 years.r/o Avverahalli, Billanakote post, Nelamangalataluk, Bengalore rural dist. **2. Lokamma w/o Cikkeerappa,** aged about 57 years.R/o Chinnahalli, Kolalahobli, koratageretaluk. **3. Hanumakka w/o Late Narasimhamurthy,** aged about 70 years. **4. Kavallamma w/o Lakshmipathi,** aged about 49 years. **5. Umadevi w/o Siddappa,** aged about 45 years. **6.Sanandaganesh s/o Late Narasimhamurthy,** aged about 42 years. **7.Devaraju s/o Late Narasimhamurthy,** aged about 37 years. Petitioner No. 3 and 7are r/o C.V.D.Palya, C.N.Durga hobli, Koratagere taluk.

V/S

Respondents:- The Registrar of birth and death's and The Tahasildar, Nada office, Thovinkere hobli, Koratgere taluk.

PUBLIC NOTIFICATION

The above named petitionersis filed petition for obtain the death certificate of the1st and 2nd Petitoners mother and 3rd petitioners mother in law and 4th to 7th petitioners grand mother **Madhudamma w/o Late Mallaiah,** died on 15-05-2010at C.V.D.Palya villageC.N.Durgahobli, Koratagere taluk. isthere any other legal representatives are here by summoned to appear before this courtin person or by a pleader on:- 17-02-2026at 11-00 A.M. to answer the same, failing which the petition will be disposed offexparte. Given under my hand and the seal of the court on this day of 20-12-2025.

By order of the court
Sd/-, shirastedar
chivil judge (jr.Dn)
& J.M.F.C. court koratage.

G.M. Krisnhnamurthy, Advocate,
KomalGirish.N.S, Advocate
Near Mini VidhanaSoudha,
Koratagere.
Advocate for petitioner.

IN THE COURT OF THE CIVIL JUDGE AND J.M.F.C. AT KORATAGERE
C.MIS.No.440/2025

Petitioners:-1. Siddamma w/o Revanna aged about 63 years. r/o Avverahalli, Billanakote post, Nelamangala taluk, Bengalore rural dist. **2. Lokamma w/o Cikkeerappa,** aged about 57 years. R/o Chinnahalli, Kolala hobli, koratagere taluk. **3. Hanumakka w/o Late Narasimhamurthy,** aged about 70 years. **4. Kavallamma w/o Lakshmipathi,** aged about 49 years. 5. Umadevi w/o Siddappa, aged about 45 years. **6. Sanandaganesh s/o Late Narasimhamurthy,** aged about 42 years. **7. Devaraju s/o Late Narasimhamurthy,** aged about 37 years. Petitioner No. 3 and 7are r/o C.V.D.Palya, C.N.Durga hobli, Koratagere taluk.

V/S

Respondents:- The Registrar of birth and death's and The deputy Tahasildar,Nadaoffice, Thovinkere hobli,Koratgeretaluk.

PUBLIC NOTIFICATION

The above named petitionersis filed petition for obtain the death certificate of the1st and 2nd Petitoners father and 3rd petitioners father in law and 4th to 7th petitioners grand father **Mallaiah s/o Narasappa,** died on 10-12-1990at C.V.D.Palya village C.N.Durga hobli, Koratagere taluk. is there any other legal representatives are here by summoned to appear before this courtin person or by a pleader on:- 17-02-2026at 11-00 A.M. to answer the same, failing which the petition will be disposed offexparte. Given under my hand and the seal of the court on this day of 20-12-2025.

By order of the court
Sd/-, shirastedar
chivil judge (jr.Dn) &
J.M.F.C. court koratagere.

G.M. Krisnhnamurthy, Advocate,
KomalGirish.N.S, Advocate
Near Mini Vidhana Soudha,Koratagere.
Advocate for petitioner.

IN THE COURT OF THE CIVIL JUDGE AND J.M.F.C. AT KORATAGERE
C.MIS.No.442/2025

Petitioners:- 1. Bhemanlbai W/O Late Narayananayaka aged about 70 years. **2. Gopalanaika s/o Late Narayananayaka,** aged about 50 years. **3.Rameshnaika s/o Narayananayaka,** aged about 44 years. **4. Krishnanaika s/o Late MagadiRamanaika,** aged about 65 years. **5. Lakshmibai c/o Hanumanaika,** aged about 62 years. **6.Ramajinaika s/o Late MagadiRamanaika,** aged about 60 years. **7. Sarojibai c/o Late Krishnanika s/o Late Magadi Ramanaika,** aged about 60 years. **8. Bheemanibai c/o Late Harishanaika,** aged about 47 years. All are r/o Karelallahatti village, Kasaba hobli, Koratagere taluk.

V/S

Respondents:- Tahasildar, Registrar of birth and death's Koratgere taluk.

PUBLIC NOTIFICATION

1 to 8th petitionershave filed the above petition to obtain the death certificate and4 to 8th Petitoners father and 2nd and 3rd petitioners grand father by name **Magadi ramanaika s/o Late Peekanaiaka,** died on 01-01-1973 at 1st 2nd petitioner house Karelallahatti village, Kasaba hobli, Koratagere taluk.istherby notify are any other legal heirs and there, they are hereby summoned to appear in the above in person or by a pleader on:-17-02-2026at 11-00 A.M. to answer the same, failing which the petition will be disposed offexparte. Given under my hand and the seal of the court on this day of 20-12-2025.

By order of the court
Sd/-, shirastedar
chivil judge (jr.Dn) &
J.M.F.C. court koratage.

Hrisha H
Advocate for Petitioner
Koratager.

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಮಧುಗಿರಿ.
ಸಿ.ಮಿಸ್. ಸಂಖ್ಯೆ: 956/2025

ಅರ್ಜಿದಾರರು: 1.ಸಿದ್ದಮ್ಮ ಕೋಂ:ಲೇಟ್ ನಾಗಪ್ಪ-70 ವರ್ಷ,
2.ರಂಗಪ್ಪ.ಕೆ.ಎನ್. ಬಿನ್ ಲೇಟ್ ನಾಗಪ್ಪ,-42 ವರ್ಷ.
3.ನಾಗರಾಜು.ಕೆ.ಎನ್. ಬಿನ್ ಲೇಟ್ ನಾಗಪ್ಪ-40 ವರ್ಷ
4.ಲಲಿತಮ್ಮ ಬಿ.ಹೆಚ್. ಕೋಂ.ನಾಗರಾಜು.ಕೆ.ಎನ್.- 35 ವರ್ಷ,
5.ರಂಗಶಾಮಯ್ಯ.ಕೆ.ಎನ್. ಬಿನ್ ಲೇಟ್ ನಾಗಪ್ಪ-38 ವರ್ಷ.
ಎಲ್ಲರ ವಾಸ-ಕೋಡಗದಾಲ ಗ್ರಾಮ, ಪುರವರ ಹೋಬಳಿ, ಮಧುಗಿರಿ ತಾಲ್ಲೂಕು.

ವಿರುದ್ಧ

ಎದುರುದಾರರು: ಡೆಪ್ಯೂಟಿ ತಹಶೀಲ್ದಾರ್, ನಾಡಕಚೇರಿ, ಪುರವರ ಪುರವರ ಹೋಬಳಿ, ಮಧುಗಿರಿ ತಾಲ್ಲೂಕು, ಮಧುಗಿರಿ

ಸಾರ್ವಜನಿಕ ಪ್ರಕಟಣೆ.

ಮೇಲ್ಕಂಡ 1 ರಿಂದ 3 ಹಾಗೂ 5ನೇ ಅರ್ಜಿದಾರರ ತಂದೆಯಾದ ಹಾಗೂ 4ನೇ ಅರ್ಜಿದಾರರ ಮಾವನಾದ ನಾಗಪ್ಪ ಬಿನ್ ಲೇಟ್ ರಂಗಪ್ಪ ರವರು ದಿನಾಂಕ: 23-09-1999 ರಂದು ಮಧುಗಿರಿ ತಾಲ್ಲೂಕು, ಪುರವರ ಹೋಬಳಿ, ಕೋಡಗದಾಲ ಗ್ರಾಮದಲ್ಲಿ ಮರಣ ಹೊಂದಿದ್ದು, ಈ ಮೇಲ್ಕಂಡ ಅರ್ಜಿದಾರರು ಸದರಿ ಮೃತರ ಮರಣ ಸಮರ್ಥನಾ ಪತ್ರವನ್ನು ಪಡೆಯಲು ಈ ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಮೃತರ ಬೇರೆ ಯಾರಾದರೂ ವಾರಸುದಾರರು ಇದ್ದಲ್ಲಿ ದಿನಾಂಕ- 02-01-2026 ರಂದು ಬೆಳಗ್ಗೆ 11-00 ಗಂಟೆಗೆ ಖುದ್ದು ತಾವಾಗಲೀ ಅಥವಾ ತಮ್ಮ ವಕೀಲರ ಮುಖಾಂತರವಾಗಲೀ ಹಾಜರಾಗಿ ತಕರಾರು ಸಲ್ಲಿಸಬಹುದು. ಇಲ್ಲವಾದ್ದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು. 2025 ನೇ ವರ್ಷದ ಡಿಸೆಂಬರ್ ತಿಂಗಳ 02ನೇ ದಿನ ನ್ಯಾಯಾಲಯದ ಅಪ್ಪಣೆಯ ಮೇರೆಗೆ,

ನ್ಯಾಯಾಲಯದ ಮೊಹರಿನೊಂದಿಗೆ,
ಶಿರಸ್ತೆದಾರರು
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಮಧುಗಿರಿ.
ಮಹೇಶ್.ಡಿ.
ಅರ್ಜಿದಾರರ ಪರ ವಕೀಲರು.
ಮಧುಗಿರಿ.

IN THE COURT OF THE CIVIL JUDGE & J.M.F.C. AT KORATAGERE
C.Mis No: 441/ 2025

Petitioners: 1. Naraseeyappa s/o Late Veerachikkaiah, Aged about 70 years.r/o Neelagondanahalli, Kolalahobli, Koratageretaluk, Tumakuru dist.

Respondents: The Deputy Thasildar, TheRegistar of birth & death, Kolala, Koratagere Taluk.

PUBLIC NOTIFICAION

Where as the petitioner have filed the above petition to obtain the death certificate of the petitioners mother by name **Rangamma w/o Late Veerachikkaiah,** died on 09-12-1983, Tumkuru dist, KoratagereTaluk, kolala hobli, Neelagondanahalli. It is hereby notify that whoever has interest or objection to obtain the death certificates of the petitioner mother may appear in person or through your advocate on; 17-02-2026 in the above case. Failing which the matter will be heard writtenmined in your absence.By order of the court

Sd/-,Shirastedar
Civil judge &J.M.F.C.court Koratagere.

T.Krishnamurthy,
Adv.For petitioner.
Koratagere.

2026 ಕಳೆದ ವರ್ಷದ ಪಾಠ, ಗೆಲುವಿನತ್ತ ನೋಟ

ಮೈಸೂರು/ಮಂಡ್ಯ/ಚಾಮರಾಜನಗರ/ಕೊಡಗು

ಸಮಾಚಾರ ಸಣ್ಣದಲ್ಲ

ಮದ್ದೂರು: ವಿವಿಧೆಡೆ ವೈಕುಂಠ ಏಕಾದಶಿ

ಮದ್ದೂರು : ವರ್ಷಂ ಪ್ರತಿ ಆಚರಿಸುವ ವೈಕುಂಠ ಏಕಾದಶಿಗೆ ಮದ್ದೂರು ತಾಲೂಕಿನ ವಿವಿಧ ದೇವಾಲಯಗಳಲ್ಲಿ ದಿನವಿಡೀ ನಡೆದ ಪೂಜಾ ಕೈಂಕರ್ಯಗಳ ವೇಳೆ ಸಾವಿರಾರು ಭಕ್ತರು ಪಾಲ್ಗೊಂಡರು.

ಪಟ್ಟಣದ ಕೋಟೆ ಬೀದಿಯ ಇತಿಹಾಸ ಪ್ರಸಿದ್ಧ ಶ್ರೀ ಉಗ್ರನರಸಿಂಹ ದೇವಾಲಯದಲ್ಲಿ ಪ್ರಾತಃಕಾಲ 5.30 ಕ್ಕೆ ಅಭಿಷೇಕ, ಅಲಂಕಾರ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ ನಡೆದವು. ಭಕ್ತರು ದೇವರ ದರ್ಶನ ಪಡೆದರು. ಐತಿಹಾಸಿಕ ಉಗ್ರ ನರಸಿಂಹ ಮೂರ್ತಿಗೆ ವೈಕುಂಠ ಏಕಾದಶಿ ಪ್ರಯುಕ್ತ ವಿಶೇಷ ''ವಜ್ರಾಂಗಿ ಅಲಂಕಾರ'' ಏರ್ಪಡಿಸುವ ಜತೆಗೆ ದೇವಾಲಯವಿಡೀ ಬಗೆಬಗೆ ಪುಷ್ಪಗಳಿಂದ ವಿಶೇಷ ಅಲಂಕಾರ ಮಾಡಲಾಗಿತ್ತು. ಪ್ರಸಾದ ವಿತರಣೆ: ಬೆಳಿಗ್ಗಿನಿಂದಲೇ ಸರತಿ ಸಾಲಿನಲ್ಲಿ ನಿಂತು ದರ್ಶನ ಪಡೆದ ಭಕ್ತರಿಗೆ ಅರ್ಜುನಪುರಿ ಯುವಕ ಬಳಗದ ಸದಸ್ಯರು ಬಾದಾಮಿ ಹಾಲು ಹಾಗೂ ಪ್ರಸಾದ ವಿತರಿಸಿದರು. ಆತಗೂರು ಹೋಬಳಿಯ ಕದಲೀಪುರದ ಕದಲೀಪುರದ ವೆಂಕಟೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ, ವೈಕುಂಠ ದ್ವಾರ ದರ್ಶನ ನಡೆಯಿತು. ಕದಲೀವೆಂಕಟೇಶ್ವರ ದೇವಾಲಯ ಟ್ರಸ್ಟ್ ಅಧ್ಯಕ್ಷ ಕೆ.ಟಿ.ಶಿವರಾಂ ಹಾಗೂ ದೇವಾಲಯದ ಪ್ರಧಾನ ಅರ್ಚಕರ ನೇತೃತ್ವದಲ್ಲಿ ವಿಶೇಷ ಪೂಜೆ,, ಶಿಂಷಾ ನದಿ ದಡದ ಹೊಳೆ ಆಂಜನೇಯ ಮತ್ತು ವರಪ್ರದ ಶ್ರೀನಿವಾಸ ದೇವಾಲಯದಲ್ಲಿ ವಿಶೇಷ ಪೂಜಾ ಕೈಂಕರ್ಯ ನಡೆದವು. ಅಬಲವಾಡಿ ತೋಪಿನ ತಿಮ್ಮಪ್ಪ ದೇವಾಲಯ, ಬೆಸಗರಹಳ್ಳಿ ವೆಂಕಟರಮಣ ದೇವಾಲಯದಲ್ಲಿ ವಿಶೇಷ ಪೂಜಾದಿಗಳು ನಡೆದು ಭಕ್ತರು ಭಕ್ತಿ ಭಾವ ಮೆರೆದರು.

ನೂತನ ವರ್ಷದ ಕ್ಯಾಲೆಂಡರ್‌ಬಿಡುಗಡೆ

ಕೆ.ಆರ್.ನಗರ : ಪಟ್ಟಣದ ಶ್ರೀ ಆದಿಶಕ್ತಿ ತೋಪಮ್ಮನವರ ದೇವಸ್ಥಾನಕ್ಕೆ ಮೂಲ ಸೌಕರ್ಯಕೆ ಶಾಶ್ವತ ಪರಿಹಾರ ಕಲ್ಪಿಸುವ ಕುರಿತು ಶಾಸಕ ಡಿ. ರವಿಶಂಕರ್‌ಅವರ ಜೊತೆ ಚರ್ಚಿಸಿ ಅನುದಾನ ಒದಗಿಸಲು ಕ್ರಮ ವಹಿಸುವುದಾಗಿ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ದೊಡ್ಡಸ್ವಾಮೇಗೌಡ ಭರವಸೆ ನೀಡಿದರು.ಪಟ್ಟಣದ ಶ್ರೀ ಆಧಿಶಕ್ತಿ ತೋಪಮ್ಮನವರ ದೇವಸ್ಥಾನದ ಸೇವಾ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿದ್ದ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಮಾತನಾಡಿದರು.ದೇವಸ್ಥಾನಕ್ಕೆ ಭಕ್ತರೊಬ್ಬರು ಜಮೀನು ದಾನ ನೀಡಿದ್ದು ಇದುವರೆವಿಗೂ ದೇವಾಲಯದ ಹೆಸರಿಗೆ ಖಾತೆ ಆಗಿಲ್ಲ ಎಂದು ಟ್ರಸ್ಟ್‌ನ ಆಡಳಿತ ಮಂಡಳಿಯವರು ಮನವಿ ಮಾಡಿದ್ದರಿಂದ ದೊಡ್ಡಸ್ವಾಮೇಗೌಡರು ದೇವಸ್ಥಾನದ ಹೆಸರಿಗೆ ಅಧಿಕೃತವಾಗಿ ಖಾತೆ ಮಾಡಿಸಿ ಕೊಡಲಾಗುವುದು ಎಂದರು. 'ಜಾತ್ರೆಗೆ ಬರುವ ಭಕ್ತರಿಗೆ ಅನುಕೂಲ ಕಲ್ಪಿಸುವ ದೃಷ್ಟಿಯಿಂದ ತಂಗುದಾಣ ನಿರ್ಮಿಸಲು ವೈಯಕ್ತಿಕವಾಗಿ ಆರ್ಥಿಕ ವ್ಯವಸ್ಥೆ ಮಾಡುವುದಾಗಿ ಹೇಳಿದರು.

ಕೊಡಗಿನ ಹಾಕಿ ಪಟುಗಳ ಸಾಧನೆ

ಮಡಿಕೇರಿ: ಆಂಧ್ರಪ್ರದೇಶದ ಕಡಪದಲ್ಲಿ ನಡೆದ 3 ನೇ ರಾಷ್ಟ್ರೀಯ ದಕ್ಷಿಣ ವಲಯ ಸಬ್ ಜೂನಿಯರ್ ಮಹಿಳಾ ಹಾಕಿ ಫೈನಲ್ ಪಂದ್ಯಾವಳಿ ಯಲ್ಲಿ ಕರ್ನಾಟಕ ತಂಡವು ಆಂಧ್ರಪ್ರದೇಶ ತಂಡವನ್ನು ಸೋಲಿಸಿ ಪ್ರಶಸ್ತಿ ಮುಡಿಗೆರಿಸಿಕೊಂಡಿದೆ. ನಾಯಕಿಯಾಗಿ ಮಡಿಕೇರಿ ಸಾಯಿ ಹಾಸ್ಟೆಲ್‌ನ ಪ್ರಿನ್ಸಿಯ ಉಪನಾಯಕಿಯಾಗಿ ತ್ರಿಷ ದೇಚಮ್ಮ ತಂಡವನ್ನು ಮುನ್ನಡೆಸಿದರು. ತಂಡದ ವ್ಯವಸ್ಥಾಪಕರಾಗಿ ಕೃತಿಕಾ ಹಾಗು ಕೋಚ್ ಆಗಿ ಸುಖಲ್ಯನ್ ಮಂಡಲ್ ಕಾರ್ಯನಿರ್ವಹಿಸಿದ್ದರು.

ಕೈಗಾರಿಕೆ ಅಭಿವೃದ್ಧಿ: ಸಚಿವರಿಗೆ ಇಚ್ಛೆ ಇಲ್ಲ

ಮಂಡ್ಯ: ಕೇಂದ್ರದ ಕೈಗಾರಿಕಾ ಸಚಿವರಾದ ಎಚ್.ಡಿ.ಕುಮಾರಸ್ವಾಮಿ ಅವರು ತಮಗೆ ಮತ ಕೊಟ್ಟ ಜಿಲ್ಲೆಗೆ ಕೈಗಾರಿಕಾ ಕ್ಷೇತ್ರದಲ್ಲಿ ಕಾರ್ಖಾನೆ ತರಬೇಕೆಂಬ ಹಂಬಲ ಹೊಂದಿದ್ದು, ಇದಕ್ಕೆ ರಾಜ್ಯ ಕಾಂಗ್ರೆಸ್ ಸರ್ಕಾರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅಡ್ಡಿ ಪಡಿಸುತ್ತಿದ್ದಾರೆ ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅಸಮಾಧಾನ ವ್ಯಕ್ತಪಡಿಸಿದರು.ಜಿಲ್ಲೆಗೆ ಕೈಗಾರಿಕಾ ಕಾರ್ಖಾನೆಯನ್ನು ತಂದರೆ ಅದರ ಯಶಸ್ಸು ಕುಮಾರಸ್ವಾಮಿ ಮತ್ತು ಜೆಡಿಎಸ್ ಪಕ್ಷಕ್ಕೆ ಹೋಗುತ್ತದೆ. ಇದರಿಂದ ತಮಗೇನು ಲಾಭವಿಲ್ಲ ಎಂದು ಯೋಜನೆಗೆ ಭೂಮಿ ನೀಡದೇ ಮೀನಾಮೇಷ ಎಣಿಸುತ್ತಿದ್ದಾರೆ ಎಂದು ಆರೋಪಿಸಿದರು. ಜಿಲ್ಲೆಗೆ ರಾಷ್ಟ್ರಪತಿ ಬಂದಾಗ ಜಿಲ್ಲಾ ಉಸ್ತುವಾರಿ ಸಚಿವರಾಗಿ ಮಾತನಾಡಿಸಲು ಸಹ ಮುಂದೆ ಬರುವುದಿಲ್ಲ ಎಂದು ಕಿಡಿಕಾರಿದರು.

{ಸಿ.ಎಸ್. ಪುಟ್ಟರಾಜು } ಮಾಜಿ ಸಚಿವ

ಮಂಡ್ಯ ಜಿಲ್ಲೆಗೆ ಕುಮಾರಸ್ವಾಮಿ ಅವರು ಕೈಗಾರಿಕೆಗಳನ್ನು, ಬೃಹತ್ ಕಾರ್ಖಾನೆಯನ್ನು ತಂದರೆ ಅದರ ಯಶಸ್ಸು ಮತ್ತು ಶ್ರೇಯಸ್ಸು ಕುಮಾರಸ್ವಾಮಿ ಮತ್ತು ಜೆಡಿಎಸ್ ಪಕ್ಷಕ್ಕೆ ಹೋಗುತ್ತದೆ. ಇದರಿಂದ ತಮಗೇನೂ ಲಾಭವಿಲ್ಲ ಎಂದು ಯೋಜನೆಗೆ ಭೂಮಿ ನೀಡದೇ ಮಂತ್ರಿ ಚಲುವರಾಯಸ್ವಾಮಿ ಮೀನ ಮೇಷ ಎಣಿಸುತ್ತಿದ್ದಾರೆ.

ಡಿಸಿ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆ | ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಎಲ್ಲ ಇಲಾಖೆ ಅಧಿಕಾರಿಗಳಿಗೆ ಸೂಚನೆ

ಜ.25ಕ್ಕೆ ಮತದಾರರ ದಿನಾಚರಣೆಗೆ ಸಿದ್ಧತೆ

ಚಾಮರಾಜನಗರ: ಭಾರತ ಚುನಾವಣಾ ಆಯೋಗ ಪ್ರಜಾಪ್ರಭುತ್ವ ವ್ಯವಸ್ಥೆ ಬಲಪಡಿಸುವ ಉದ್ದೇಶದಿಂದ ಅನೇಕ ಕಾರ್ಯಕ್ರಮ ರೂಪಿಸಿದ್ದು, ಚುನಾವಣಾ ಆಯೋಗ ಸ್ಥಾಪನೆಗೊಂಡ ಜನವರಿ 25ರಂದು 16ನೇ ರಾಷ್ಟ್ರೀಯ ಮತದಾರರ ದಿನವನ್ನಾಗಿ ಆಚರಿಸಲಾಗುತ್ತಿದ್ದು, ಜಿಲ್ಲೆಯಲ್ಲೂ ಈ ಕಾರ್ಯಕ್ರಮಕ್ಕೆ ಅಗತ್ಯ ಸಿದ್ದತೆ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಸೂಚನೆ ನೀಡಿದರು. ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ನಗರದ ಡಿಸಿ ಕಚೇರಿ ಸಭಾಂಗಣದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.

ಭಾರತ ಚುನಾವಣಾ ಆಯೋಗ 1950ರ ಜನವರಿ 25 ರಂದು ಸ್ಥಾಪನೆಗೊಂಡಿದೆ. ಜನವರಿ 25ಅನ್ನು ಪ್ರತಿವರ್ಷ ರಾಷ್ಟ್ರೀಯ ಮತದಾರರ ದಿನವನ್ನಾಗಿ ಆಚರಿಸಲಾಗುತ್ತಿದೆ. ಜಿಲ್ಲೆಯಲ್ಲಿ ಮತದಾರರ ದಿನಂದು ಅಧಿಕಾರಿ ಸಿಬ್ಬಂದಿ, ಶಾಲಾ ಕಾಲೇಜುಗಳಲ್ಲಿ ಮತದಾರರ ಪ್ರತಿಜ್ಞಾವಿಧಿ ಸ್ವೀಕಾರ ಮಾಡಬೇಕಿದೆ. ಜಿಲ್ಲಾ, ತಾಲ್ಲೂಕು, ಹೋಬಳಿ ಮಟ್ಟದಲ್ಲಿ ಹಾಗೂ ಮತಗಟ್ಟೆ ಪ್ರದೇಶದಲ್ಲಿ ರಾಷ್ಟ್ರೀಯ ಮತದಾರರ ದಿನವನ್ನು ಆಚರಿಸಲು ಸಕಲ ಸಿದ್ದತೆಗಳನ್ನು ಮಾಡಬೇಕು ಎಂದರು.

ಮತದಾರರ ಸಾಕ್ಷರತಾ ಸಂಘಗಳು, ಚುನಾವಣಾ ಜಾಗೃತಿ ಸಂಘಗಳು, ಕಾಲೇಜು ಮುಖ್ಯಸ್ಥರು, ಮತಗಟ್ಟೆ ಮಟ್ಟದ ಅಧಿಕಾರಿಗಳು, ಅಚ್ಚುಕಟ್ಟಾಗಿ ಕಾರ್ಯಕ್ರಮ ಏರ್ಪಡಿಸಬೇಕು. ಹೊಸದಾಗಿ ನೋಂದಾಯಿಸಿದ ಯುವ ಮತದಾರರು ಹಾಗೂ ವಿಶೇಷ ಚೇತನ ಯುವ ಮತದಾರರನ್ನು ಗುರುತಿಸಿ ಸಮಾರಂಭದಲ್ಲಿ ಎಪಿಕ್ ಕಾರ್ಡ್‌ಗಳನ್ನು ವಿತರಿಸಬೇಕು. ವಿವಿಧ ಹಂತದಲ್ಲಿ ಕಾರ್ಯಕ್ರಮ ಆಯೋಜನೆ ಮಾಡಿದ ದಾಖಲೆಗಳನ್ನು ಕಳುಹಿಸಬೇಕು ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಜಿಲ್ಲಾಮಟ್ಟದ ಕಾರ್ಯಕ್ರಮವನ್ನು ನಗರದ ಜಿಪಂ ಸಭಾಂಗಣದಲ್ಲಿ ಆಯೋಜನೆ ಮಾಡಬೇಕು. ಯುವ ಮತದಾರರನ್ನು ಹೆಚ್ಚು ಸಂಖ್ಯೆಯಲ್ಲಿ ಆಹ್ವಾನಿಸಬೇಕು. ಮತದಾನದ ಅರಿವು ಮೂಡಿಸುವ ಸಲುವಾಗಿ ಆಯೋಜಿಸಲಾಗಿರುವ ಪ್ರಬಂಧ, ಭಾಷಣ, ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಬೇಕು. ಮತದಾನ, ಪ್ರಜಾಪ್ರಭುತ್ವ ಮಹತ್ವದ ಬಗ್ಗೆ ತಿಳಿಸಿಕೊಡುವಲ್ಲಿ ಅಗತ್ಯ ಏರ್ಪಾಡುಗಳನ್ನು ಕೈಗೊಳ್ಳುವಂತೆ ನಿರ್ದೇಶನ ನೀಡಿದರು. ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ಮಾತನಾಡಿ ಈಗಾಗಲೇ ವಿದ್ಯಾರ್ಥಿಗಳಿಗೆ ವಿವಿಧ ಹಂತಗಳಲ್ಲಿ ಮತದಾನದ ಬಗ್ಗೆ ಜಾಗೃತಿ ಮೂಡಿಸುವ ಸ್ಪರ್ಧೆಗಳನ್ನು ಕೈಗೊಳ್ಳಲಾಗಿದೆ. ಎಲ್ಲ ಮತಗಟ್ಟೆಗಳಲ್ಲಿ ಕಾರ್ಯಕ್ರಗಳಿಗೆ ಚುನಾವಣಾ ಆಯೋಗ ನೀಡಿರುವ ನಿರ್ದೇಶನ ಅನುಸಾರ ಎಲ್ಲ ವ್ಯವಸ್ಥೆ ಮಾಡಬೇಕಿದೆ ಎಂದರು.

ಸಭೆಯಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಉಪವಿಭಾಗಾಧಿಕಾರಿ ದಿನೇಶ್ ಕುಮಾರ್ ಮೀನಾ, ತಹಶೀಲ್ದಾರ ಬಸವರಾಜು, ತನ್ಮಯ್, ನಯನ, ಜಂಟಿ ಕೃಷಿ ನಿರ್ದೇಶಕ ಸುಷ್ಮ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಹೆಚ್.ಎಸ್. ಬಿಂದ್ಯಾ, ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಶಿವಪ್ರಸಾದ್, ಪಶುಸಂಗೋಪನೆ ಇಲಾಖೆ ಉಪನಿರ್ದೇಶಕ ಡಾ. ಮಂಜುನಾಥ್, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ವಿಶ್ವನಾಥ್, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಎಂಜಿನಿಯರ್‌ಕಿರಣ್, ಇನ್ನಿತರ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಧರ್ಮಸ್ಥಳ ಸಂಸ್ಥೆಯಿಂದ ಕೆರೆ ಹಸ್ತಾಂತರ

ಮೈಸೂರು: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ ಸಿ ಟ್ರಸ್ಟ್ ಹಾಗೂ ದೊಡ್ಡಮಾರಗೌಡನಹಳ್ಳಿ ಗ್ರಾಮ ಪಂಚಾಯತಿ ಮತ್ತು ಕೆರೆ ಅಭಿವೃದ್ಧಿ ಸಮಿತಿ ಸಂಯುಕ್ತ ಆಶ್ರಯದಲ್ಲಿ ಸಂಗಾತಿ ಕಟ್ಟೆ ಕೆರೆ ಹಸ್ತಾಂತರ, ನಾಮಫಲಕ ಅನಾವರಣ ಕಾರ್ಯಕ್ರಮವನ್ನು ಶಾಸಕ ಜಿ.ಟಿ.ದೇವೇಗೌಡ ಉದ್ಘಾಟಿಸಿದರು.

ಸಂಗಾತಿ ಕಟ್ಟೆ ಕೆರೆ ಹಸ್ತಾಂತರ, ನಾಮಫಲಕ ಅನಾವರಣ ಕಾರ್ಯಕ್ರಮವನ್ನು ಶಾಸಕ ಜಿ.ಟಿ.ದೇವೇಗೌಡ ಉದ್ಘಾಟಿಸಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ದೊಡ್ಡಮಾರ ಗೌಡನಹಳ್ಳಿ ಗ್ರಾಮಪಂ ಚಾಯಿತಿಗೆ ಡಾ.ವೀರೇಂದ್ರ ಹೆಗ್ಗಡೆ ಹಾಗೂ ಅವರ ಧರ್ಮಪತ್ನಿ ಹೇಮಾವತಿ ಅವರು ಈ ನಾಡಿನ ಕೆರೆಗಳ ಅಭಿವೃದ್ಧಿ, ಶಾಲೆಗಳ ಅಭಿವೃದ್ಧಿ, ವಿದ್ಯಾವಂತರಿಗೆ ಸುಜ್ಞಾನ ನಿಧಿ, ಪ್ರಸ್ತುತ 787ನೇ ಕೆರೆಗಳ ಅಭಿವೃದ್ಧಿಪಡಿಸಿ ನಮ್ಮೂರು ನಮ್ಮ ಕೆರೆ ಅಡಿಯಲ್ಲಿ ಅಭಿವೃದ್ಧಿಪಡಿಸಿದ ಸಂಗಾತಿಕಟ್ಟೆಕೆರೆ ಹಸ್ತಾಂತರ ಕಾರ್ಯಕ್ರಮ ಹಮ್ಮಿಕೊಳ್ಳ ಲಾಗಿದೆ ಎಂದು ಹೇಳಿದರು.

ಇಂದಿನ ಕಾಲದಲ್ಲಿ ವೈಜ್ಞಾನಿಕವಾಗಿ ಕೆರೆಗಳ ಅಭಿವೃದ್ಧಿ ಪಡಿಸುವ ಸಂದರ್ಭದಲ್ಲಿ ಒತ್ತುವರಿಯಾಗಿರುವಂತಹ ಕೃಷಿ ಭೂಮಿಗಳನ್ನು ತೆರವುಗೊಳಿಸಿ ಅಭಿವೃದ್ಧಿ ಪಡಿಸುತ್ತಿದ್ದಾರೆ. ಧರ್ಮಸ್ಥಳ ಸಂಸ್ಥೆ ಬಹಳ ಮುಖ್ಯವಾದ ಕೆಲಸ ಮಾಡುತ್ತಿದೆ ಎಂದು ಅಭಿಪ್ರಾಯಿಸಿದರು.

ಟ್ರಸ್ಟ್ ಮೈಸೂರು ಜಿಲ್ಲಾ ನಿರ್ದೇಶಕ ವಿ.ವಿಜಯಕುಮಾರ್ ನಾಗನಾಳ ಮಾತನಾಡಿ, ದೊಡ್ಡಮಾರಗೌಡನಹಳ್ಳಿ ಗ್ರಾಮ ಪಂಚಾಯಿತಿಯ ಸಂಗಾತಿ ಕಟ್ಟೆ ಕೆರೆಯನ್ನು ಪುನಃಶ್ವೇತನಗೊಳಿಸಿದ್ದು ಕೆರೆ ಸಂರಕ್ಷಣೆಯಲ್ಲಿ ಕೆರೆ ಸಮಿತಿ ಅವರ ಪಾತ್ರ ಹಾಗೂ ನಿರ್ವಹಣೆ ಬಗ್ಗೆ ತಿಳಿಸಿದರು.

ಕೆರೆಯಲ್ಲಿ ಹೂಳು ತೆಗೆಯುವುದರಿಂದ ಕೆರೆಯಲ್ಲಿ ನೀರಿನ ಪ್ರಮಾಣ ಹೆಚ್ಚಳದ ಜೊತೆ ಅಂತರ್ಜಲ ಮಟ್ಟ ಹೆಚ್ಚುತ್ತದೆ, ಹೂಳನ್ನು ಕೃಷಿ ಭೂಮಿಗೆ ವಿನಿಯೋಗ ಮಾಡುವುದರಿಂದ ಮಣ್ಣಿನ ಫಲವತ್ತತೆಗೆ ಅನುಕೂಲವಾಗುತ್ತದೆ. ಮುಂದಿನ ಪೀಳಿಗೆಗೆ ನಮ್ಮ ಊರಿನ ಕೆರೆ ಸಂರಕ್ಷಿಸಿ ಮುಂದಿನ ಪೀಳಿಗೆಗೆ ವರ್ಗಾಯಿಸಬೇಕೆಂದು ತಿಳಿಸಿದರು. ತಾಪಂ ಸಿಇಓ ಕೃಷ್ಣ, ಲತಾ ಪ್ರಸನ್ನಾಚಾರಿ, ರುಕ್ಮಾಂಗದ, ದಾಸಯ್ಯ, ಗೀತಾ, ಯೋಜನಾಧಿಕಾರಿ ಪ್ರವೀಣ, ಕೆರೆ ಇಂಜಿನಿಯರ್‌ಪುಷ್ಪರಾಜ್, ಕೆರೆ ಸಮಿತಿ ಅಧ್ಯಕ್ಷರು , ಸದಸ್ಯರು ಉಪಸ್ಥಿತರಿದ್ದರು.

ಸಂಭ್ರಮದ ವೈಕುಂಠ ಏಕಾದಶಿ

ತಿ.ನರಸೀಪುರ : ಪಟ್ಟಣದ ಪುರಾಣ ಪ್ರಸಿದ್ಧ ಶ್ರೀ ಗುಂಜಾನರಸಿಂಹಸ್ವಾಮಿ ದೇವಾಲಯದಲ್ಲಿ ಲೋಕ ಕಲ್ಯಾಣಾರ್ಥವಾಗಿ 10ನೇ ವರ್ಷದ ವೈಕುಂಠ ಏಕಾದಶಿ ಕಾರ್ಯಕ್ರಮ ವಿಜೃಂಭಣೆಯಿಂದ ಜರುಗಿತು. ನಾನಾ ಕಡೆಗಳಿಂದ ಆಗಮಿಸಿದ್ದ ಭಕ್ತರು ವೈಕುಂಠದ್ವಾರದ ಮೂಲಕ ದೇಗುಲ ಪ್ರವೇಶಿಸಿ ನರಸಿಂಹ ಸ್ವಾಮಿಯನ್ನು ದರ್ಶನ ಪಡೆದು ಪುನೀತರಾದರು. .ವೇದಪಾರಾಯಣ, ಕೆ. ಸುಧಾ ತಂಡದಿಂದ ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ, ಸಂದೇಶ ಪ್ರತಿಷ್ಠಾನದಿಂದ ವಸುಂಧರಾ ತಂಡದಿಂದ ಭರತನಾಟ್ಯ, ಡೋಲ್ವಿದ್ವಾನ್ ಚಂದ್ರು ತಂಡದಿಂದ ನಾದಸ್ವರ, ರಾಜೇಂದ್ರಪ್ರಸಾದ್ ತಂಡದವರಿಂದ ದೇವರ ಭಕ್ತಿಗೀತೆಗಳು, ಮಲ್ಲೇಶ್ ತಂಡದವರಿಂದ ದೇವರ ಭಜನೆ, ಯಮುನಾ ಅವರಿಂದ ದೇವರ ಭಕ್ತಿಗೀತೆಗಳನ್ನು ಆಯೋಜಿಸಲಾಗಿತ್ತು.

ಮಹಿಳೆಗೆ ಸಂಬಂಧಗಳ ನಿರ್ವಹಣೆ ಕೌಶಲ ಅಗತ್ಯ

ಕೆ.ಆರ್.ಪೇಟೆ: ಮಹಿಳೆ ಸ್ವಾಭಿಮಾನದಿಂದ ಬದುಕು ಕಟ್ಟಿಕೊಳ್ಳಲು ಪ್ರತಿಯೊಂದು ವಿಷಯವನ್ನು ಅರಿತು ಜಾಗೃತರಾಗಿರಬೇಕು ಎಂದು ಶ್ರೀ ಕ್ಷೇತ್ರ ಧರ್ಮಸ್ಥಳದ ಜಿಲ್ಲಾ ಜನಜಾಗೃತಿ ಜಿಲ್ಲಾಧ್ಯಕ್ಷರು ಹಾಗೂ ಆರ್‌ಟಿಒ ಮಲ್ಲಿಕಾರ್ಜುನ್ ತಿಳಿಸಿದರು.

ಕಿಕ್ಕೇರಿ ಗ್ರಾಮದ ಸಹಕಾರ ಭವನದಲ್ಲಿ ಕಿಕ್ಕೇರಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಮಹಿಳಾ ಜ್ಞಾನ ವಿಕಾಸ ಸಂಯುಕ್ತ ಆಶ್ರಯದಲ್ಲಿ ನಡೆದ ಮಹಿಳಾ ವಿಚಾರಗೋಷ್ಠಿ ಉದ್ಘಾಟಿಸಿ ಮಾತನಾಡಿದರು.

ಮಹಿಳೆ ನಿಶ್ಚಿಂತೆಯಿಂದ ತನ್ನ ಬದುಕು ಕಟ್ಟಿಕೊಳ್ಳಲು ಲೋಕ ಜ್ಞಾನ ಬೇಕು. ಈ ಕಾರಣದಿಂದಾಗಿ ಮಹಿಳಾ ಜ್ಞಾನ ವಿಕಾಸ ಕೇಂದ್ರ ಮಹಿಳೆಯರಿಗೆ ಶಿಕ್ಷಣ, ಆರೋಗ್ಯ, ನೈರ್ಮಲ್ಯ, ಸ್ವಯಂ ಉದ್ಯೋಗ ಕುರಿತಂತೆ ಮಾಹಿತಿ ನೀಡಿ ಜಾಗೃತಿಗೊಳಿಸುತ್ತಿದೆ ಎಂದರು.

ಕುಟುಂಬ ನೆಮ್ಮದಿಯಿಂದ ಇರಲು ಸಂಬಂಧಗಳನ್ನು ಗಟ್ಟಿಗೊಳಿಸುವುದು,ಸೂಕ್ಷ್ಮ ವಿಷಯಗಳನ್ನು ಎಚ್ಚರಿಕೆಯಿಂದ ನಿಭಾಯಿಸಿ ನಿರ್ವಹಣೆ ಮಾಡುವ ಕೌಶಲ ಇರಬೇಕು. ಕುಟುಂಬದ ಆರ್ಥಿಕ ಶಕ್ತಿ ನಿರ್ವಹಣೆಯಲ್ಲಿ ಮಹಿಳೆಯ ಪಾತ್ರ ಹೆಚ್ಚಿದ್ದು, ಈ ವಿಷಯದಲ್ಲಿ ಎಲ್ಲರೊಂದಿಗೆ ಒಗ್ಗೂಡಿ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುವ ಬಗ್ಗೆ ಕೂಟ ಜಾಗೃತಿಗೊಳಿಸಿದೆ ಎಂದರು.

ಕಿಕ್ಕೇರಿ ಪಿ.ಎಸ್.ಐ ರಮೇಶ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಪೋಕ್ಸೊ ಪ್ರಕರಣಗಳು ಹೆಚ್ಚಾಗಿ ದಾಖಲಾಗುತ್ತಿದ್ದು ಮಹಿಳೆಯರು ಈ ಬಗ್ಗೆ ಗಂಭೀರವಾಗಿ ಆಲೋಚಿಸಬೇಕಾಗಿದೆ. ನಮ್ಮ ಹೆಣ್ಣು ಮಕ್ಕಳಿಗೆ 18ಕ್ಕೂ ಮುನ್ನ ವಿವಾಹ ಮಾಡಿದರೆ ಅನೇಕ ಕಾಯಿಲೆಗೆ ತುತ್ತಾಗುತ್ತಾರೆ. ಬಾಲ್ಯ ವಿವಾಹ ತಡೆಯುವ ದಿಕ್ಕಿನಲ್ಲಿ ಜಾಗೃತರಾಗಬೇಕು ಎಂದು ಮನವಿ ಮಾಡಿದರು. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಚನ್ನರಾಯಪಟ್ಟಣ ನಿರ್ದೇಶಕ ಡಾ ಯೋಗೇಶ್★ ಕಟ್ಟಕಡೆಯ ವ್ಯಕ್ತಿಗಳನ್ನು ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ ಗ್ರಾಮಾಭಿವೃದ್ಧಿ ಯೋಜನೆಯು ಪ್ರಮುಖ ಪಾತ್ರವಹಿಸಿದೆ. ಸರ್ವಧರ್ಮದವರು ಯೋಜನೆಯಲ್ಲಿ ತೊಡಗಿಸಿಕೊಂಡಿದ್ದಾರೆ.ಯೋಜನೆಯಿಂದಾಗಿ ಸದೃಢ ಸಮಾಜ ನಿರ್ಮಾಣವಾಗಿದೆ ಸಮಾಜದ ಪರಿವರ್ತನೆಯಾಗಿದೆ. ಹಲವು ಕುಟುಂಬಗಳಿಗೆ ಹೊಸ ಬದುಕು ನೀಡಿದೆ. ಆರ್ಥಿಕವಾಗಿ ದುರ್ಬಲ ವರ್ಗದವರ ಸ್ವಾವಲಂಬನೆಯು ಬದುಕಿಗೆ ಸಹಕಾರಿಯಾಗಿದೆ ಎಂದರು.

ಕಿಕ್ಕೇರಿ ಕೆ.ಪಿ.ಎಸ್ ಶಾಲಾ ಉಪ ಪ್ರಾಂಶುಪಾಲ ಚಲುವನಾರಾಯಣಸ್ವಾಮಿ ಮಾತನಾಡಿ, ಪೋಷಕರು ತಮ್ಮ ಮಕ್ಕಳಿಗೆ ಮೊಬೈಲ್ ಬಗ್ಗೆ ಅರಿವು ಮೂಡಿಸಿ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಬೇಕು ಎಂದರು.ಬಳಿಕ ಶ್ರೀ ಮಲ್ಲಿಕಾರ್ಜುನ್ ಚಾರಿಟೇಬಲ್ ಟ್ರಸ್ಟ್ ನೂತನ ಕ್ಯಾಲೆಂಡರ್‌ಬಿಡುಗಡೆಗೊಳಿಸಿ ಸಂಘದ ಸದಸ್ಯರಿಗೆ ನೀಡಲಾಯಿತು,

ಜಿಲ್ಲಾ ನಿರ್ದೇಶಕ ಮೊಟ್ಟೆ ಮಂಜು, ಕಿಕ್ಕೇರಿ ಗ್ರಾ.ಪಂ ಅಧ್ಯಕ್ಷ ಚಂದ್ರಶೇಖರ,ಜಿಲ್ಲಾ ನಿರ್ದೇಶಕ ಯೋಗೇಶ್,ಉಪ ಪ್ರಾಂಶುಪಾಲ ಚಲುವ ನಾರಾಯಣಸ್ವಾಮಿ ಸಂಪನ್ಮೂಲ ವ್ಯಕ್ತಿ ಎ.ಎಸ್.ಐ ರಮೇಶ್, ಯೋಜನಾಧಿಕಾರಿ ಪ್ರಸಾದ್,ವಕೀಲ ರಘು,ಸಂಸ್ಥೆ ಮೇಲ್ವಿಚಾರಕರಾದ ಯಶೋಧ,ನಂದಿನಿ ಇದ್ದರು.

ಕಿಕ್ಕೇರಿ ಗ್ರಾಮದ ಸಹಕಾರ ಭವನದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಸಂಸ್ಥೆಯಿಂದ ನಡೆದ ಮಹಿಳಾ ವಿಚಾರಗೋಷ್ಠಿಯನ್ನು ಆರ್ ಟಿಒ ಮಲ್ಲಿಕಾರ್ಜುನ್ ಉದ್ಘಾಟಿಸಿದರು.

ವಿದ್ಯೋದಯ ಕಾಲೇಜಿನಲ್ಲಿ ಪೊಲೀಸ್ ಇಲಾಖೆಯಿಂದ ಅಪರಾಧ ತಡೆ ಮಾಸಾಚರಣೆ

ಜೀವನದಲ್ಲಿ ಗುರಿ ಸಾಧಿಸಲು ಹೆಚ್ಚು ಜಾಗ್ರತೆ ವಹಿಸಿ

ತಿ.ನರಸೀಪುರ: ವ್ಯಕ್ತಿಯೊಬ್ಬ ಜೀವನದಲ್ಲಿ ಗುರಿ ಸಾಧಿಸಲು ಹೆಚ್ಚು ಜಾಗ್ರತೆ ವಹಿಸಿ ಸೂಕ್ತ ನಿರ್ಧಾರಗಳನ್ನು ಕೈಗೊಳ್ಳಬೇಕು ಎಂದು ಮೈಸೂರು ಜಿಲ್ಲಾ ಅಪರ ಪೊಲೀಸ್ ಅಧೀಕ್ಷಕರಾದ ಸಿ.ಮಲ್ಲಿಕ್ ಕಿವಿಮಾತು ಹೇಳಿದರು.

ಪಟ್ಟಣದ ವಿದ್ಯೋದಯ ಕಾಲೇಜಿನ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಅಪರಾಧ ತಡೆ ಮಾಸಾಚರಣೆ-2025 ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.

ಯುವ ಸಮೂಹ ಹರೆಯದ ಅವಧಿಯಲ್ಲಿ ದೈಹಿಕ ಆಕರ್ಷಣೆ, ಪ್ರೇಮ,ಪ್ರೀತಿ ಎಂಬ ಎಂಬ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳದೆ ತಮ್ಮ ಗುರಿ ಸಾಧಿಸುವ ಕಡೆ ಹೆಚ್ಚು ಗಮನ ಹರಿಸಿ ಕೇಂದ್ರೀಕರಿಸಬೇಕು. ಅಪರಾಧ ತಡೆಯಲು ಪೊಲೀಸ್ ಇಲಾಖೆಯಿಂದ ಮಾತ್ರ ಸಾಧ್ಯವಿಲ್ಲ, ಅಪಘಾತಗಳು ಸಂಭವಿಸಿದಾಗ ವ್ಯಕ್ತಿ ರಕ್ಷಣೆ ಬಹಳ ಮುಖ್ಯ . ತಕ್ಷಣ ಪ್ರಥಮ ಚಿಕಿತ್ಸೆ ನೀಡಿ ಆಸ್ಪತ್ರೆಗೆ ಕರೆದೊಯ್ಯಬೇಕು. ಹಾಗಾಗಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಪ್ರಥಮ ಚಿಕಿತ್ಸೆ ತರಬೇತಿ ಪಡೆಯಬೇಕು ಎಂದರು.

ಮೈಸೂರು ಜಿಲ್ಲಾ ಅಪರ ಪೊಲೀಸ್ ಅಧೀಕ್ಷಕರಾದ ಸಿ.ಮಲ್ಲಿಕ್ ಅವರು ತಿ.ನರಸೀಪುರದ ವಿದ್ಯೋದಯ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಅಪರಾಧ ತಡೆ ಮಾಸಾಚರಣೆ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.

ಡಿವೈಎಸ್ಪಿ ಜಿ.ಎಸ್. ರಘು ಮಾತನಾಡಿ, ಯುವ ಸಮೂಹ ಮೊಬೈಲ್ ಬಳಕೆ ಮಾರಕ ವ್ಯಸನವಾಗಿ ಪರಿಣಮಿಸುತ್ತಿದೆ. ಮಾನಸಿಕ ಖಿನ್ನತೆ, ದೈಹಿಕ ಅಸ್ವಸ್ಥತೆ ಉಂಟಾಗುತ್ತದೆ. ಹಾಗಾಗಿಇವುಗಳ ಬಳಕೆ ಮಿತಗೊಳಿಸಬೇಕು ಎಂದರು.ಪೊಲೀಸ್ ಇನ್‌ಸ್ಪೆಕ್ಟರ್‌ಧನಂಜಯ ಮಾತನಾಡಿ, ನಮ್ಮ ಠಾಣಾ ವ್ಯಾಪ್ತಿಯ ಎಲ್ಲ ಮನೆ-ಮನೆಗಳಿಗೆ ಅಪಘಾತ ಮತ್ತು ಅಪರಾಧ ತಡೆಗಟ್ಟುವ ಬಗ್ಗೆ ಜಾಗ್ರತೆ ಮೂಡಿಸಲಾಗಿದೆ ಎಂದರು.

ಪೊಲೀಸರು,ರೈತರು,ಸಂಘ ಸಂಸ್ಥೆ ಮುಖಂಡರು ಮತ್ತು ಪತ್ರಕರ್ತರು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಬೈಕ್ ಜಾಥಾ ನಡೆಸಿದರು. ಪ್ರಬಂಧ, ಚಿತ್ರಕಲೆ ಸ್ಪರ್ಧೆ ವಿಜೇತರಿಗೆ ಬಹುಮಾನ, ಅನಾಥ ಶವಗಳ ಮುಕ್ತಿದಾತ ಡಾ.ಮಾದೇಶ್ ಅವರಿಗೆ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಪಿಎಸ್‌ಐ ಜಗದೀಶ್ ಧೂಳ್ ಶೆಟ್ಟಿ,ವಿದ್ಯೋದಯ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ಕೆ. ಪಿ.ಉದಯ್ ಕುಮಾರ್, ಪ್ರಾಂಶುಪಾಲರಾದ ಡಾ.ಬಸವಣ್ಣಸ್ವಾಮಿ, ಎನ್.ಕಲ್ಪನಾ, ಮುಖಂಡರಾದ ಡಾ.ಮನ್ಸೂರ್‌ಆಲಿ, ತಾಲೂಕು ರೈತ ಸಂಘದ ಅಧ್ಯಕ್ಷ ಕರೋಹಟ್ಟಿ ಕುಮಾರಸ್ವಾಮಿ, ಪ್ರಧಾನ ಕಾರ್ಯದರ್ಶಿ ಬೂದಹಳ್ಳಿ ಶಂಕರ್,ಉಪನ್ಯಾಸಕ ಮೂಗೂರು ಕುಮಾರಸ್ವಾಮಿ,ಶರಣ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ತೊಂಟೇಶ್ ಇದ್ದರು.

ನೌಕರರ ಕ್ರೀಡೆಗಳು ಜ.8ರಿಂದ

ಮೈಸೂರು: ರಾಜ್ಯ ಸರಕಾರಿ ನೌಕರರ ಜಿಲ್ಲಾಮಟ್ಟದ ಕ್ರೀಡಾಕೂಟವನ್ನು ಜನವರಿ 8 ಮತ್ತು 9 ರಂದು ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಜಿಲ್ಲಾಧಿಕಾರಿ ಜಿ. ಲಕ್ಷ್ಮಿಕಾಂತ ರೆಡ್ಡಿ ತಿಳಿಸಿದರು.

ಜಿಪಂ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ 2025- 26ನೇ ರಾಜ್ಯ ಸರ್ಕಾರಿ ನೌಕರರ ಜಿಲ್ಲಾಮಟ್ಟದ ಕ್ರೀಡಾಕೂಟ ಸಂಘಟಿಸುವ ಸಂಬಂಧ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಹಾಕಿ, ಕುಸ್ತಿ, ಕಬಡ್ಡಿ, ವಾಲಿಬಾಲ್, ಬ್ಯಾಸ್ಕೆಟ್ ಬಾಲ್, ಖೋಖೋ, ಬಾಲ್ ಬ್ಯಾಡ್ಮಿಟಂನ್, ಅಥ್ಲೆಟಿಕ್ಸ್, ಟೆನಿಕಾಯ್ಟ್, ವೇಲ್ಟ್ ಲಿಫ್ಟಿಂಗ್ ,ದೇಹದಾಡ್ಯ, ಪವರ್‌ಲಿಫ್ಟಿಂಗ್, ಚೆಸ್, ಥ್ರೋ ಬಾಲ್, ಈಜು, ಕೇರಂ, ಯೋಗ, ಟೆನ್ನಿಸ್ ಕ್ರೀಡೆಗಳು, ಮೈಸೂರು ವಿಶ್ವವಿದ್ಯಾಲಯದ ಸ್ಪೋರ್ಟ್ಸ್ ಪೆವಿಲಿಯನ್ ನಲ್ಲಿ ಪುಟ್ಬಾಲ್, ಷಟಲ್ ಬ್ಯಾಡ್ಮಿಂಟನ್, ಮಹರ್ಷಿ ವಾಲ್ಮೀಕಿ ಶಾಲೆಯಲ್ಲಿ ಟೇಬಲ್ ಟೆನ್ನಿಸ್, ಕೆ. ಜಿ ಕೊಪ್ಪಲು ಕೆನ್ನೇಗೌಡ ಕ್ರೀಡಾಂಗಣದಲ್ಲಿ ಕ್ರಿಕೆಟ್ ಸ್ಪರ್ಧೆಗಳು ನಡೆಯಲಿದೆ ಎಂದು ತಿಳಿಸಿದರು.

ಸಭೆಯಲ್ಲಿ ಜಿಪಂ ಸಿಇಒ ಎಸ್.ಯುಕೇಶ್ ಕುಮಾರ್,ಮೈಸೂರು ಮಹಾನಗರ ಪಾಲಿಕೆಯ ಆಯುಕ್ತ ಶೇಖ್ ತನ್ವೀರ್‌ಅಸೀಫ್ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಜಿಪಂ ಸಭಾಂಗಣದಲ್ಲಿ ಸರಕಾರಿ ನೌಕರರ ಜಿಲ್ಲಾಮಟ್ಟದ ಕ್ರೀಡಾಕೂಟದ ಪೂರ್ವಭಾವಿ ಸಭೆಯಲ್ಲಿ ಜಿಲ್ಲಾಧಿಕಾರಿ ಜಿ. ಲಕ್ಷ್ಮಿಕಾಂತ ರೆಡ್ಡಿ ಮಾತನಾಡಿದರು.

ಜಿಪಂ ಸಭಾಂಗಣದಲ್ಲಿ ಕೆ.ಡಿ.ಪಿ ಸಭೆ | 3 ದಾಖಲೆ ಇದ್ದರೆ ಸಾಕು ದರಖಾಸ್ತ್ ಪೋಡಿ | ಸಚಿವ ಚಲುವರಾಯಸ್ವಾಮಿ ಸೂಚನೆ

ಪೌತಿ ಖಾತಾ ಬಾಕಿ ಇರುವ ಅರ್ಜಿಗಳ ತ್ವರಿತ ವಿಲೇವಾರಿ ಮಾಡಿ

ಮಂಡ್ಯ: ಜಿಲ್ಲೆಯಲ್ಲಿ ಈ ವರ್ಷ ಒಟ್ಟು 151 ಮನೆಗಳು ಮುಂಗಾರಿಗೆ ಹಾನಿಗೊಳಗಾಗಿದ್ದು ಅರ್ಹರಿಗೆ 60.36 ಲಕ್ಷ ಪರಿಹಾರ ನೀಡಲಾಗಿದೆ. ಅಧಿಕಾರಿಗಳು ಶೀಘ್ರವಾಗಿ ಮನೆ ನಿರಾಶ್ರಿತರಿಗೆ ಪರಿಹಾರ ಒದಗಿಸಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದರು.

ಜಿಪಂ ಕಾವೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಕೆ.ಡಿ.ಪಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮಂಡ್ಯ ಜಿಲ್ಲೆಯಲ್ಲಿ ಕಾವೇರಿ ನಿರಾವರಿ ನಿಗಮದ ಕೆರೆಗಳು ಶೇ 80 ರಷ್ಟು ತುಂಬಿದೆ. ಮಳೆ ಆಶ್ರಿತ ಕೆರೆಗಳು ಮಾತ್ರ ಕಡಿಮೆ ನೀರಿನ ಪ್ರಮಾಣವನ್ನು ಹೊಂದಿದೆ. ಜಿಲ್ಲೆಯಲ್ಲಿ 407 ಕೆರೆಗಳು ಶೇ 100 ರಷ್ಟು ಭರ್ತಿಯಾಗಿದೆ. ಕೆರೆ ಅಭಿವೃದ್ಧಿ ಕಾಮಗಾರಿಗಳನ್ನು ಪ್ರಾರಂಭಿಸಲು ಇದು ಸೂಕ್ತ ಸಮಯ ಎಂದು ತಿಳಿಸಿದರು.

ಹಿಂದೆ ದರಖಾಸ್ತ್ ಪೋಡಿ ಮಾಡಲು ಕನಿಷ್ಠ 5 ದಾಖಲೆಗಳ ಆಗತ್ಯ ಇತ್ತು. ಆದರೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ 3 ದಾಖಲೆ ಇದ್ದರೆ ಸಾಕು ದರಖಾಸ್ತ್ ಪೋಡಿ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಯಾವುದೇ ದಾಖಲೆ ಇಲ್ಲದೆ ಇದ್ದಲ್ಲಿ ಸದರಿ ಅರ್ಜಿ ದಾರರ ಊರಿಗೆ ಹೋಗಿ ಪರಿಶೀಲನೆ ಮಾಡಿ ಯಾವುದೇ ಅಡಚಣೆ ಇಲ್ಲದೆ ಇದ್ದಲ್ಲಿ ಅವರಿಗೆ ದರಖಾಸ್ತ್ ಪೋಡಿ ಮಾಡಿಕೊಡಲು ಚಿಂತನೆ ನಡೆಸಲಾಗಿದೆ. ಮುಂದಿನ ದಿನಗಳಲ್ಲಿ ಸದರಿ ಯೋಜನೆಯನ್ನು ಜಾರಿಗೆ ತರಲಾಗುವುದು. ಮುಂದಿನ ಆರು ತಿಂಗಳೊಳಗಾಗಿ ಪೌತಿ ಖಾತಾ ಆಂದೋಲನದಲ್ಲಿ ಯಾವುದೇ ಅರ್ಜಿಯನ್ನು ಬಾಕಿ ಉಳಿಸಿಕೊಳ್ಳದೆ ವಿಲೇವಾರಿ ಮಾಡಿ ಎಂದರು.

ಜಿಪಂ ಸಭಾಂಗಣದಲ್ಲಿ ನಡೆದ ಕೆ.ಡಿ.ಪಿ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಮಾತನಾಡಿದರು.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷರಾದ ಮಳವಳ್ಳಿ ಶಾಸಕ ಎಂ.ಪಿ ನರೇಂದ್ರ ಸ್ವಾಮಿ ಅವರು ಮಾತನಾಡಿ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಮೈಸೂರು-ಬೆಂಗಳೂರು ರಸ್ತೆಯಲ್ಲಿ ಸಾವಿನ ಪ್ರಮಾಣ ಸಂಖ್ಯೆ ಕಳೆದ ವರ್ಷಗಳಿಗೆ ಹೋಲಿಸಿದರೆ ಕಡಿಮೆಯಾಗಿದೆ. ಜಂಕ್ಷನ್ ಇರುವ ಕಡೆ ಹಾಗೂ ಹಳ್ಳಿಗಳಿಂದ ಹೈ ವೇ ಮುಟ್ಟುವ ಸ್ಥಳಗಳಲ್ಲಿ ದೀಪದ ವ್ಯವಸ್ಥೆ ಕಲ್ಪಿಸಿ ಎಂದು ಹೇಳಿದರು.

ಜಲಧಾರೆ ಮತ್ತು ಜಲ ಜೀವನ್ ಮಿಷನ್ ಯೋಜನೆಯಡಿ ಪೈಪ್ ಅಳವಡಿಸಲು ಕಾಂಕ್ರೀಟ್ ರಸ್ತೆ ಹಾಗೂ ಡಾಂಬರು ರಸ್ತೆಯನ್ನು ಅಗೆದು ಹಾಗೆ ಬಿಟ್ಟಿದ್ದಾರೆ. ಜನರಿಗೆ ಇದರಿಂದ ಹೆಚ್ಚು ತೊಂದರೆ ಉಂಟಾಗುತ್ತಿದೆ. ಅಧಿಕಾರಿಗಳು ಸದರಿ ರಸ್ತೆಯನ್ನು ಫೆಬ್ರವರಿ ಕೊನೆಯಲ್ಲಿ ಸರಿಪಡಿಸಬೇಕು ಎಂದು ತಿಳಿಸಿದರು.

ಎಸ್‌ಎಸ್‌ಎಲ್ಸಿ ಫಲಿತಾಂಶ ವೃದ್ಧಿಸಲು ಡೀಸಿ ಮತ್ತು ಸಿ.ಇ.ಓ ವಿಶೇಷ ಮುತುವರ್ಜಿ ವಹಿಸಿ ಕ್ರಮ ತೆಗೆದುಕೊಳ್ಳಿ. ಕಳೆದ ಬಾರಿಗಿಂತ ಫಲಿತಾಂಶ ವೃದ್ಧಿಸಬೇಕು. ಅಧಿಕಾರಿಗಳು ಯಾವುದೇ ಒತ್ತಡಕ್ಕೂ ಮಣಿಯದೆ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಹೇಳಿದರು.

ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಧಿಕಾರಿ ಕೆ.ಆರ್.ನಂದಿನಿ ಅವರು ಮಾತನಾಡಿ, ಬೂದು ನೀರು ನಿರ್ವಹಣೆಯಲ್ಲಿ 1012 ಗುರಿ ಇದ್ದು ಇಲ್ಲಿಯವರೆಗೂ 687 ಕಾಮಗಾರಿಗಳನ್ನು. ಎಸ್.ಎಸ್. ಎಲ್.ಸಿ ಫಲಿತಾಂಶವನ್ನು ವೃದ್ಧಿಸಲು ಬೆಳಿಗ್ಗೆ 9 ರಿಂದ ಸಂಜೆ 5 ಗಂಟೆಯ ವರಗೆ ವಿಶೇಷ ತರಗತಿ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ರಾಜ್ಯ ಗ್ಯಾರಂಟಿ ಪ್ರಾಧಿಕಾರದ ಉಪಾಧ್ಯಕ್ಷ ದಿನೇಶ್ ಗೂಳಿಗೌಡ. ಕೆ.ಆರ್ ಪೇಟೆ ಶಾಸಕ ಎಚ್.ಟಿ ಮಂಜು, ವಿಧಾನಪರಿಷತ್ ಶಾಸಕ ಕೆ. ವಿವೇಕಾನಂದ, ಎಂ.ಡಿ.ಸಿ.ಸಿ ಬ್ಯಾಂಕ್ ಅಧ್ಯಕ್ಷ ಸಚಿನ್ ಚೆಲುವರಾಯಸ್ವಾಮಿ. ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಿ.ಪಿ.ಪ್ರಕಾಶ್, ಮೈಷುಗರ್‌ಅಧ್ಯಕ್ಷ ಸಿ.ಡಿ.ಗಂಗಾಧರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದ ಮೂರ್ತಿ,ಕೆ.ಡಿ.ಪಿ ನಾಮ ನಿರ್ದೇಶನ ಸದಸ್ಯರುಗಳಾದ ನಟರಾಜು, ಆಶಾ, ದೇವಪ್ಪ ಉಪಸ್ಥಿತರಿದ್ದರು.

ಡೀಮ್ಡ್ ಫಾರೆಸ್ಟ್ ಸರ್ವೇಯಲ್ಲಿ ಜಿಲ್ಲೆ ಪ್ರಥಮ: ಡಿಸಿ

ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿ, ಜಿಲ್ಲೆಯಲ್ಲಿ 32,958.95 ಹೆಕ್ಟೇರ್‌ಪ್ರದೇಶವನ್ನು ಡೀಮ್ಡ್ ಫಾರೆಸ್ಟ್ ಎಂದು ಸರ್ವೇ ಮಾಡಲಾಗಿದೆ. ಈಗಾಗಲೇ ಶೇ.42ರಷ್ಟು ಸರ್ವೇ ಮುಗಿದಿದ್ದು ಮೂರು ತಿಂಗಳ ಒಳಗಾಗಿ ಮುಗಿಸಲಾಗುವುದು. ರಾಜ್ಯ ಡೀಮ್ಡ್ ಫಾರೆಸ್ಟ್ ಸರ್ವೇಯಲ್ಲಿ ಜಿಲ್ಲೆ ಪ್ರಥಮ ಸ್ಥಾನದಲ್ಲಿದೆ. ಹಾಗೇ ಪೌತಿಖಾತೆ ಆಂದೋಲನದಲ್ಲಿ ಆಫ್ ಲೈನ್ ನಲ್ಲಿ 67.659 ಖಾತೆಗಳನ್ನು ವಿಲೇವಾರಿ ಮಾಡಲಾಗಿದೆ. ಆನ್ಲೈನ್ ನಲ್ಲಿ 59.528 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ಪೌತಿ ಖಾತೆ ಆಂದೋಲನದಲ್ಲಿ ಜಿಲ್ಲೆ ರಾಜ್ಯದಲ್ಲಿ ಪ್ರಥಮ ಸ್ಥಾನದಲ್ಲಿದೆ ಎಂದು ಡಿಸಿ ಹೇಳಿದರು.

ಚಿತ್ತವಿಹಾರ

ಮನ ಪರಿವರ್ತಿಸಿದ ಚಪ್ಪಲಿ

• **ಅರವಿಂದ. ಜಿ. ಜೋಷಿ** ಮೈಸೂರು.

'ಡ್ಯಾಡೀ... ನಿಮ್ಮ ಕೈಯಲ್ಲಿ ಏನಿದೆ..?'

ಅಪ್ಪನ ಕೈಯಲ್ಲಿದ್ದ ಬ್ಯಾಗ್ ಕಂಡು ಅರುಣ್ ಕೇಳಿದ.

'ಇದರಲ್ಲಿ ಚಪ್ಪಲಿಗಳಿವೆ ಮಗೂ..' ಎನ್ನುತ್ತಾ ಕೈಯಲ್ಲಿದ್ದ ಬ್ಯಾಗ್‌ನೊಳಗಿಂದ ಕೆಳಕ್ಕೆ ಚಪ್ಪಲಿಗಳನ್ನು ಸುರಿಯುತ್ತಾ ಹೇಳಿದರು ಆತನ ಅಪ್ಪ.

'ಅಪ್ಪಾ.. ಇಷ್ಟೊಂದು ಚಪ್ಪಲಿಗಳನ್ನು ನನಗೋಸ್ಕರ ತಂದಿದ್ದೀಯಾ?' ಎಂದು ಉದ್ಗಾರ ತೆಗೆದು ಕೇಳಿದ ಅರುಣ್. ಆಗ ಅವನ ಅಪ್ಪ 'ಇಲ್ಲಾ.. ಮಗು, ನಿನ್ನ ಬಳಿ ಈಗಾಗಲೇ ಸಾಕಷ್ಟು ವಿವಿಧ ಬಗೆಯ ಚಪ್ಪಲಿಗಳು ಇವೆಯಲ್ಲ, ಇವುಗಳನ್ನು ಆ ಬಿಲ್ಡಿಂಗ್ ಎದುರು ಆಟ ಆಡುತ್ತಿದ್ದಾರಲ್ಲಾ ಆ ಮಕ್ಕಳಿಗಾಗಿ ತಂದಿದ್ದೇನೆ' ಎಂದು ಉತ್ತರಿಸಿದರು.

'ಅಪ್ಪಾ,. ಆ ಮಕ್ಕಳಿಗೆ ಇಷ್ಟೊಂದು ಚಪ್ಪಲಿನಾ?' ಎಂದು ಪ್ರಶ್ನಿಸಿದ.

'ನಾನು ಯಾವಾಗಲಾದರೂ ಆ ಬಿಲ್ಡಿಂಗ್ ಕಡೆಯಿಂದ ಹೋಗುವಾಗ ಪಾಪ ಆ ಮಕ್ಕಳೆಲ್ಲಾ ಚಪ್ಪಲಿ ಇಲ್ಲದೇ ಆಡುವುದನ್ನು ಕಂಡಿದ್ದೇನೆ , ಅದಕ್ಕೇ ಅವರಿಗೆ ಕೊಡಬೇಕೆಂದು ಖರೀದಿಸಿ ತಂದಿದ್ದೇನೆ' ಎನ್ನುತ್ತಾ,

'ನೋಡು, ನಾಳೆ ಅವರಿಗೆ ಈ ಚಪ್ಪಲಿಗಳನ್ನು ಕೊಡಲು ಹೋಗುವವನಿದ್ದೇನೆ, ನೀನೂ ನನ್ನೊಂದಿಗೆ ಬರಬೇಕು ತಿಳಿಯಿತಾ..?' ಎಂದು ಮಗನ ತಲೆ ಸವರುತ್ತಾ ಹೇಳಿದರು.

ಮಾರನೇ ದಿನ, ಅರುಣ್ ತನ್ನ ಅಪ್ಪನ ಜತೆಗೆ ಆ ಮಕ್ಕಳಿದ್ದ ಜಾಗಕ್ಕೆ ಹೋದ. ಅಲ್ಲಿ ಆ ಮಕ್ಕಳ ತಾಯಿ-ತಂದೆ, ಅಜ್ಜಿ-ತಾತ, ಚಿಕ್ಕಪ್ಪ, ಮಾಮ, ಅಕ್ಕ ಮುಂತಾದವರೆಲ್ಲ ಬಿಡುವಿಲ್ಲದೆ ಬೆವರು ಸುರಿಸುತ್ತ ಕೂಲಿ ಕೆಲಸ ಮಾಡುತ್ತಿದ್ದರು. ಕೆಲವು ಮಕ್ಕಳು ಅದನ್ನು ಹಾಕಿಕೊಂಡು ಖುಷಿಯಿಂದ ಓಡಾಡತೊಡಗಿದರು. ಇನ್ನು ಕೆಲವರಂತೂ ಕಾಲಿಗೆ ಧರಿಸಿದ ಚಪ್ಪಲಿಗಳನ್ನು ಬಿಚ್ಚಿ ಕೈಯಲ್ಲಿ ಹಿಡಿದು ಬೆರಗು ಕಣ್ಣುಗಳಿಂದ ನೋಡಿ ಆನಂದ ಪಡತೊಡಗಿದರು.

ಮನೆಗೆ ಬಂದರೂ ಸಹ ಅರುಣ್ ಯೋಚಿಸುತ್ತಾ ಕುಳಿತ. ಆತನ ತಂದೆ, 'ಏನು ಯೋಚನೆ ಮಾಡ್ತಾ ಇದ್ದೀಯಾ?' ಎಂದು ಕೇಳಿದಾಗ, 'ಅಪ್ಪಾ, ಆ ಮಕ್ಕಳು ಕೇವಲ ಸಾಧಾರಣ ಚಪ್ಪಲಿ ಕಂಡು ಇಷ್ಟೊಂದು ಖುಷಿ ಪಡ್ತಿದ್ದಾರಲ್ಲಾ?' ಎಂದು ಆಶ್ಚರ್ಯದಿಂದ ಕೇಳಿದ. ಆಗ ಅವರು,

'ಖಂಡಿತ ಮಗೂ..' ಎನ್ನುತ್ತಾ 'ಚಪ್ಪಲಿ ಧರಿಸುವುದರಿಂದ ಏನು ಪ್ರಯೋಜನ ಹೇಳು ನೋಡೋಣ' ಎಂದಾಗ ಆತ ಚಪ್ಪಲಿ ಹಾಕಿಕೊಳ್ಳುವುದರಿಂದ ನಮ್ಮ ಪಾದಗಳನ್ನು ರಕ್ಷಣೆ ಮಾಡಿಕೊಳ್ಳಬಹುದು' ಎಂದ. ಮುಂದುವರೆದ ಆತನ ಅಪ್ಪ, 'ಸರಿಯಾಗಿ ಹೇಳಿರುವಿ, ಚಪ್ಪಲಿ ಯಾವ ಬಣ್ಣವಾದರೇನು? ನಮ್ಮ ಅಗತ್ಯಕ್ಕೆ ತಕ್ಕಂತೆ ವಸ್ತುಗಳನ್ನು ಖರೀದಿಸಿ ಉಪಯೋಗಿಸಿದಲ್ಲಿ ಆಗುವ ಆ ಖುಷಿಯೇ ಬೇರೆ' ಎಂದರು. ಸಾವಧಾನದಿಂದ ಆತನಿಗೆ ತಿಳಿಹೇಳಿದರು.ಆಗ ಅರುಣ್‌ನಿಗೆ ತಾನೂ ಸಹಾ ಇನ್ನು ಮುಂದೆ ಯಾವುದೇ ವಸ್ತು ಖರೀದಿಸುವಾಗ ಬಣ್ಣ, ವಿನ್ಯಾಸಕ್ಕೆ ಮಹತ್ವ ಕೊಡಲ್ಲ, ಮುಖ್ಯವಾಗಿ ಅದು ನಮ್ಮ ಉದ್ದೇಶ ಈಡೇರಿಸಿದರೆ ಸಾಕು ಎಂದು ತೀರ್ಮಾನ ಮಾಡಿದ.

ಹೊಸ ವರ್ಷ

ಋತುಮಾನ ದಿನ ಉರುಳಿದ
ಒಂದು ವರುಷದ ಪಯಣ
ಬಿಚ್ಚಿದೆ ನೆನಪುಗಳ ಬುತ್ತಿ
ಸಿಹಿ-ಕಹಿ, ನೋವು-ನಲಿವು
ಎಲ್ಲದರ ಮಿಶ್ರಣ
ಮಾಗಿಸಿದೆ ಬದುಕಿನ ಪಯಣ
ಕಳೆದದ್ದು-ಕೂಡಿದ್ದು ಎಲ್ಲಾ ಸೇರಿ
ಹೊಸ ಹುರುಪಿನಲಿ
ಬಯಸಿದೆ ಬದುಕಿಗೆ ನವಚೈತನ್ಯ
ಕಟ್ಟುವ ಕನಸಿಗೆ
ಬರುವ ಸಂವತ್ಸರ
ತರಲಿ ಫಲವೀಯುವ
ನವ ಮನ್ವಂತರ..!

• **ಡಾ. ತೈಲೂರು ದೇವರಾಜ್**

ಇಂದು ಜನವರಿ-1, ಹೊಸ ವರ್ಷಾಚರಣೆಯ ಜತೆಗೆ ಜಾಗತಿಕ ಕುಟುಂಬ ದಿನವೂ ಹೌದು. ಪ್ರತೀ ವರ್ಷದ ಮೊದಲ ದಿನದಂದು ಎಲ್ಲಾ ಕುಟುಂಬಗಳು ಒಂದೇ ಸಮಾಜವಾಗಿ ಸೇರುವಂತೆ ಮಾಡುವುದು ಈ ದಿನದ ಪ್ರಮುಖ ಉದ್ದೇಶವಾಗಿದೆ. ಪ್ರತಿಯೊಬ್ಬರೂ ತಮ್ಮ ಕುಟುಂಬವನ್ನು ಪ್ರೀತಿಸುವ ಮೂಲಕ ಇಡೀ ವಿಶ್ವವನ್ನೇ ಪ್ರೀತಿಸಬೇಕೆಂಬ ಸದಾಶಯ ಈ ಆಚರಣೆಯ ಹಿಂದಿದೆ.

ಜಾಗತಿಕ ಕುಟುಂಬ ದಿನ: ಕುಟುಂಬಗಳ ಸಾಮಾಜಿಕ ಸಮ್ಮಿಲನ

• **ಡಾ. ಮೈತ್ರಿ ಭಟ್, ವಿಟ್ಲ**

ಪ್ರತೀ ವರ್ಷ ಜನವರಿ-1ನ್ನು 'ಜಾಗತಿಕ ಕುಟುಂಬ ದಿನ'ವಾಗಿ ಆಚರಿಸಲಾಗುತ್ತದೆ. ಕುಟುಂಬ ಕಲ್ಪನೆಯ ಮೂಲಕ ರಾಷ್ಟ್ರಗಳು ಮತ್ತು ಸಂಸ್ಕೃತಿಗಳ ಏಕತೆ, ವೈವಿಧ್ಯತೆಯನ್ನು ಗೌರವಿಸುವುದು, ಇತರೆ ದೇಶಗಳ ಕುರಿತು ನಕಾರಾತ್ಮಕ ಧೋರಣೆ ಹೊಂದುವುದನ್ನು ತಡೆಯುವುದು, ಶತ್ರುರಾಷ್ಟ್ರವನ್ನು ಕೆರಳಿಸಬಾರದು ಎನ್ನುವುದು ಇದರ ಉದ್ದೇಶ. ಆದರೆ ಜಗತ್ತು ವಿಶ್ವ ಕುಟುಂಬ ದಿನ ಆಚರಣೆ ಮಾಡುವ ಮುನ್ನವೇ ನಮ್ಮ ಹೆಮ್ಮೆಯ ಭಾರತವು ವಸುಧೈವ ಕುಟುಂಬಕಂ ಎಂದು ಜಗತ್ತಿಗೆ ತಿಳಿಸಿತ್ತು.

ಜನವರಿ 1ನ್ನು ವಿಶ್ವ ಕುಟುಂಬ ದಿನವಾಗಿ ಆಚರಿಸಬೇಕೆಂದು ಲೇಖಕಿ ಗ್ರೋವರ್ ಬಯಸಿದ್ದರೆ, ಒನ್ ಡೇ ಪೀಸ್ ಪುಸ್ತಕದಲ್ಲಿಯೂ ಈ ದಿನದ ಮಹತ್ವವನ್ನು ಸಾರಿರುವ ಕಾರಣ ಜನವರಿ-1ನ್ನು ವಿಶ್ವದೆಲ್ಲೆಡೆ ಗ್ಲೋಬಲ್ ಫ್ಯಾಮಿಲಿ ಡೇ ಎಂದು ಆಚರಿಸಲಾಗುತ್ತದೆ. ಹಿಂದೆ ಈ ದಿನವನ್ನು ವಿಶ್ವಸಂಸ್ಥೆಯು ಡೇ ಆಫ್ ಪೀಸ್ ಎಂದು ಆಚರಿಸುತ್ತಿತ್ತು.

ಪ್ರತೀ ವರ್ಷದ ಮೊದಲ ದಿನದಂದು ಎಲ್ಲಾ ಕುಟುಂಬಗಳು ಒಂದೇ ಸಮಾಜವಾಗಿ ಸೇರುವಂತೆ ಮಾಡುವುದು ಈ ದಿನದ ಪ್ರಮುಖ ಉದ್ದೇಶವಾಗಿದೆ. ಭಾಷೆ, ಧರ್ಮ, ದೇಶ, ಜನಾಂಗ, ರಾಜಕೀಯ ಸಂಬಂಧವನ್ನು ಬದಿಗಿಟ್ಟು ಒಂದಾಗಿ ಬದುಕುವಂತೆ ಈ ದಿನ ಪ್ರೇರೇಪಿಸುತ್ತದೆ. ಕುಟುಂಬ ಪ್ರೀತಿ ಮತ್ತು ವಿಶ್ವ ಪ್ರೀತಿಯೇ ಈ ಆಚರಣೆಯ ಹಿಂದಿನ ಸಾರವಾಗಿದೆ. ಪ್ರತಿಯೊಬ್ಬರೂ ತಮ್ಮ ಕುಟುಂಬವನ್ನು ಪ್ರೀತಿಸುವ ಮೂಲಕ ಇಡೀ ವಿಶ್ವವನ್ನೇ ಪ್ರೀತಿಸಬೇಕೆಂಬ ಸದಾಶಯ ಈ ಆಚರಣೆಯ ಹಿಂದಿದೆ. ಕುಟುಂಬವೇ ನಮಗೆ ನಮ್ಮ ಅಸ್ತಿತ್ವವನ್ನು ತಿಳಿಸಿ, ನಾಯಕತ್ವ ಗುಣವನ್ನು ಕಲಿಸಿ, ಮಾರ್ಗದರ್ಶನ ನೀಡಿ ಆ ಮೂಲಕ ವಿವಿಧ ರೂಪದಲ್ಲಿ ಬೆಂಬಲ ಮತ್ತು ಪ್ರೋತ್ಸಾಹ ನೀಡುವ ವ್ಯವಸ್ಥೆಯಾಗಿದೆ.

ಜಗತ್ತು ಆಧುನಿಕತೆಗೆ ತನ್ನನ್ನು ತಾನು ತೆರೆದುಕೊಳ್ಳುತ್ತಿರುವ ಈ ಸಂಕ್ರಮಣ ಕಾಲದಲ್ಲಿ ತಂತ್ರಜ್ಞಾನ ಮನುಷ್ಯನ ಜಾಗವನ್ನು ಆಕ್ರಮಿಸಿಕೊಳ್ಳುತ್ತಿದೆ. ಮೌಲ್ಯ, ಸಂಸ್ಕೃತಿ, ನೈತಿಕತೆ, ಸದಾಚಾರಗಳೆಲ್ಲವೂ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿರುವಂತೆ ಭಾಸವಾಗುತ್ತಿರುವ ಈ ಸಂದರ್ಭದಲ್ಲಿ ಕೌಟುಂಬಿಕ ವ್ಯವಸ್ಥೆಗೆ ಹೆಚ್ಚಿನ ಪಾಶಸ್ತ್ಯ ನೀಡಬೇಕಾದ ಅನಿವಾರ್ಯತೆಯಿದೆ. ಮನುಷ್ಯ ಹುಟ್ಟಿದ ಕ್ಷಣದಿಂದಲೇ ಬೆಸೆದುಕೊಳ್ಳುವ ಈ ಬಾಂಧವ್ಯವೇ ಮಗುವಿನ ಏಳ್ಗೆಗೆ ಭದ್ರ ಬುನಾದಿ ಎನ್ನಬಹುದು, ಹೀಗಾಗಿ ಕುಟುಂಬ ವ್ಯವಸ್ಥೆಯ ಬಗ್ಗೆ ಅಷ್ಟೇನೂ ಆಸ್ಥೆ ಹೊಂದಿರದ ವಿದೇಶೀಯರಿಗೂ ಇತ್ತೀಚೆಗೆ ಈ ವ್ಯವಸ್ಥೆಯ ಮಹತ್ವದ ಬಗ್ಗೆ ಅವಲೋಕಿಸುತ್ತಿದ್ದಾರೆ.

ವಸುಧೈವ ಕುಟುಂಬಕಂ ಎಂಬ ಸಂದೇಶವನ್ನು ಇಡೀ ವಿಶ್ವಕ್ಕೇ ಸಾರಿದ ನಾವಿಂದು ಕೌಟುಂಬಿಕ ಮೌಲ್ಯಗಳನ್ನು ಕಳೆದುಕೊಳ್ಳುವತ್ತ ನಡೆದಿದ್ದೇವೆ. ನಾನು, ನನ್ನ ಕುಟುಂಬ, ನನ್ನ ಬಂಧುಗಳು, ನನ್ನ ಊರು, ನನ್ನ ರಾಜ್ಯ, ನನ್ನ ದೇಶ ಇವೆಲ್ಲವುಗಳಿಗೂ ಮೀರಿದೆ ನನ್ನ ವಿಶ್ವ. ಇಂದು ನಮಗೆ ಬೇಕಾಗಿರುವುದು ಮಾನವಪ್ರೀತಿಯ ನೆಲೆಗಟ್ಟಿನ ಸಮಾಜ. ಯಾವುದೇ ಭೇದ-ಭಾವ, ಜಾತಿ ಸಿದ್ಧಾಂತಗಳ ಭಿನ್ನಾಭಿಪ್ರಾಯವಿಲ್ಲದ ಸಮಾಜ. ಹಲವಾರು ಸವಾಲುಗಳ ನಡುವೆಯೂ ನ್ಯಾಯ, ಸ್ವಾತಂತ್ರ್ಯ, ಸಮಾನತೆಗಳೇ ಬಂಧುತ್ವದ ಮೂಲಮಂತ್ರ. ವೈವಿಧ್ಯತೆ ನಮ್ಮ ವಿಶೇಷತೆಯಾದರೂ ಏಕತೆ ನಮ್ಮ ಆಧಾರಸ್ತಂಭವಾಗಿದೆ.

ಕುಟುಂಬ ಎನ್ನುವುದು ಕೇವಲ ಭಾವನಾತ್ಮಕವಾದ ಸಂಬಂಧ ಮಾತ್ರವಲ್ಲ, ಅದು ಮಾನಸಿಕ ಸಂಬಂಧವೂ ಹೌದು. ವ್ಯಕ್ತಿಯ ಪ್ರತಿಯೊಂದು ಸಂದರ್ಭದಲ್ಲೂ ಜತೆಯಾಗಿ ನಿಂತು ಕಷ್ಟ ಬಂದಾಗ ಹೆಗಲು ಕೊಟ್ಟು ಸುಖ ಬಂದಾಗ ನಗುವನ್ನು ಹಂಚಿಕೊಳ್ಳುವ ಏಕೈಕ ತಾಣವೂ ಆಗಿದೆ.

ಬದಲಾವಣೆಗೆ ಹೊಂದಿ ನಡೆಯಬೇಕಿರುವುದು ಸಹಜ, ಆದರೆ ಆಧುನಿಕತೆ ಬೆಳೆದಷ್ಟು ಮನುಷ್ಯ ತನ್ನದೇ ಚಿಪ್ಪಿನಲ್ಲಿ ಹುದುಗುವ ಪ್ರವೃತ್ತಿಯೂ ಹೆಚ್ಚಾಗುತ್ತಿದೆ. ಇದು ದೀರ್ಘಕಾಲದಲ್ಲಿ ಖಿನ್ನತೆಯಂತಹ ಮಾನಸಿಕ ಸಮಸ್ಯೆಗಳಿಗೂ ಎಡೆ ಮಾಡಿಕೊಡುತ್ತದೆ. ಕುಟುಂಬ ವ್ಯವಸ್ಥೆಯು ಸಹಬಾಳ್ವೆ, ಸಾಹಚರ್ಯ, ಸಹಕಾರ, ಸಮರಸ, ಹಂಚಿಕೊಳ್ಳುವ ಗುಣಗಳನ್ನು ಬೆಳೆಸಿ, ಸಂಕುಚಿತ ಭಾವಗಳನ್ನು ಬಿಡಿಸಿ ಆರೋಗ್ಯಪೂರ್ಣ ಅನುಬಂಧ ಬೆಳೆಸಿಕೊಳ್ಳಲು ಸಹಕಾರಿ. ಅದರಲ್ಲೂ ಶಾಂತಿ, ಸೌಹಾರ್ದತೆಗಳು ಬಾಳಿನ ಉಸಿರಾದಾಗ ಮನೆಗೆದ್ದು, ಮಾರು ಗೆಲ್ಲುವ ಈ ಕಾರ್ಯದಿಂದ ಹೊಸ ದಿಗಂತದೆಡೆಗೆ ತೆರೆದುಕೊಳ್ಳಲು ಸಾಧ್ಯ.

ಇಡೀ ಜಗತ್ತಿಗೆ ಭಾರತವು ಸಾರಿದ ವಸುಧೈವ ಕುಟುಂಬಕಂ ಇಡೀ ವಿಶ್ವವೇ ನಮ್ಮ ಕುಟುಂಬ ಎಂದು ಭಾವಿಸುವ ವಿಶಾಲ ಮನೋಭಾವ ಒಂದು ಸುಮಧುರ ಹಾಗೂ ಅಮೂಲ್ಯ ಪರಿಕಲ್ಪನೆ. ವ್ಯಕ್ತಿ ಮತ್ತು ಸಮಾಜವನ್ನು ಒಂದೆಡೆ ಕೇಂದ್ರೀಕರಿಸುವ ಈ ವ್ಯವಸ್ಥೆ ಜಗತ್ತು ಶಾಂತಿ, ಸಂಯಮದ ಹಾದಿಯಲ್ಲಿ ಸಾಗಲು ಅನಿವಾರ್ಯವಾದುದಾಗಿದೆ. ಜಗತ್ತಿನಾದ್ಯಂತ ಇರುವ ಜನರು ತಮ್ಮ ವಿಭಿನ್ನ ದೃಷ್ಟಿಕೋನಗಳ ಹೊರತಾಗಿಯೂ ಒಂದೇ ಎಂದು ತಿಳಿಯುವುದು ವಿಶಿಷ್ಟ ಚಿಂತನೆಯೇ ಸರಿ...!

ಹೊಸ ವರುಷ ತರಲಿ ಹೊಸ ಹರುಷ..

• **ಸಿದ್ದಣ್ಣ ಮೇಳಕುಂದಾ ಕಲಬುರಗಿ**

ಹೊಸ ವರ್ಷದ ಮೊದಲ ದಿನದ ಹೊಸ್ತಿಲಲ್ಲಿ ನಾವಿದ್ದೇವೆ, ಆದರೆ ಪ್ರಯಾಣ ನಿರಂತರ. ಪ್ರತೀ ಬಾರಿ ಹೊಸ ದೋಣಿ ಹತ್ತುವ ಮುನ್ನ ಅದರ ಪ್ರಯಾಣ ಸುಖಕರ, ಸಮೃದ್ಧ, ಪ್ರಖರವಾಗಿ ಇರಲಿ ಎಂಬ ಸದಾಶಯ ಹೊತ್ತು ಅಡಿ ಇಡುವದು ನಿಸರ್ಗ ನಿಯಮ. ಬಿರುಗಾಳಿ ಸುಳಿಗೆ ಸಿಲುಕದಿರಲಿ, ಅಲೆಯ ಬಲೆಗೆ ಬೀಳದಿರಲಿ, ಹಲವು ವಿಘ್ನ ಕಾಡದಿರಲಿ ಎಂಬುದೇ ಎಲ್ಲರ ಆಶಯ. ಪ್ರಯಾಣ ಹೊರಟ ಮೇಲೆ ಅಡೆತಡೆಗಳು ಸಹಜ, ಅವುಗಳಿಗೆ ಹೆದರದೆ ಎದುರಿಸು ಛಲ ಬೆಳೆಸಿಕೊಳ್ಳೋಣ. ನಡೆ ಮುಂದೆ, ನಡೆ ಮುಂದೆ, ನುಗ್ಗಿ ನಡೆ ಮುಂದೆ ಜಗ್ಗದೆಯೆ ಕುಗ್ಗದೆಯೆ ಹಿಗ್ಗಿ ನಡೆ ಮುಂದೆ. ದೇವರ ಬಳಿ ಕಷ್ಟಗಳು ಕೊಡಬೇಡೆಂದು ಕೇಳದೆ ಕಷ್ಟಗಳ ಎದುರಿಸುವ ಶಕ್ತಿ ಕೊಡೆಂದು ಕೇಳೋಣ. ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗೆ ಅಂಜಿದಡೆ ಎಂತು? ಸಮುದ್ರದ ತಟದಲಿ ಮನೆಯ ಮಾಡಿ ನೊರೆತೆರೆಗಳಿಗೆ ಅಂಜಿದರೆ ಹೇಗೆ?

ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದರೆ ಹೇಗೆ ಜೀವಿಸಲು ಸಾಧ್ಯ? ಹೊಸ ಕನಸುಗಳ ಹೊತ್ತು ಹೊರಟ ನಮಗೆ ಭಯ, ನಾಚಿಕೆ ಅಡಚಣೆ ಆಗಕೂಡದು.

ಹೊಸ ಕಾಲದಲಿ ಹಳೆ ನೆನಪು ಮರೆಯಲು ಸಾಧ್ಯವಿಲ್ಲ ಅಲ್ಲವೇ? ಭವಿಷ್ಯದ ಪಯಣ ಭರವಸೆ ಹುಟ್ಟಿಸಿದರೆ, ಭೂತಕಾಲದ ಪಯಣ ಅನುಭವ ಹಾಗೂ ಕಲಿಕೆ ನೀಡುತ್ತದೆ. ಹೊಸ ಕಲಿಕೆಗೆ ಈ ಭೂತಕಾಲದಲ್ಲಿ ಪಡೆದ ಅನುಭವವೇ ಆಧಾರವಾಗಿರುತ್ತದೆ. ನಮ್ಮ ಗುರಿಯೆಡೆಗೆ ಸಾಗುವ ಪಥದ ಸೂಚಿಯಾಗಿ ಮಾರ್ಗದರ್ಶಿಸಲಿ ಎಂಬ ಆಶಯ ನಮ್ಮದಾಗಲಿ. ಕೆಲವರು ಕುಟುಂಬದ ಜವಾಬ್ದಾರಿಯ ಚುಕ್ಕಾಣಿ ಹಿಡಿದವರಾದರೆ, ಇನ್ನೂ ಕೆಲವರು ಕುಟುಂಬದ ಭವಿಷ್ಯವೇ ಆಗಿರುತೀರಿ. ಈ ಹಿನ್ನೆಲೆಯಲ್ಲಿ ಹೊಸ ವರ್ಷದ ಆಚರಣೆ ಸೂಕ್ತ ರೀತಿಯಲ್ಲಿ ನಡೆಯಲಿ, ಸುರಕ್ಷತೆಯು ಗಮನದಲ್ಲಿ ಇರಲಿ.

ಮದ್ಯಪಾನ ಮಾಡಿ ವಾಹನ ಚಲಾಯಿಸಿ ಅಮೂಲ್ಯ ಜೀವಕ್ಕೆ ಸಂಚಕಾರ ತಂದುಕೊಳ್ಳುವ

ದುರ್ಗುಣವನ್ನು ಕೈಬಿಡಬೇಕು. ಕುಟುಂಬದ ಮಹತ್ತರ ಜವಾಬ್ದಾರಿ ಹೆಗಲ ಮೇಲೆ ಇರುವ ಕಾರಣ ಹೆಲ್ಮೆಟ್ ಧರಿಸಿ ವಾಹನ ಚಲಾಯಿಸಿ, ಸಂಚಾರಿ ನಿಯಮ ಪಾಲಿಸಿ, ಸುರಕ್ಷಿತವಾಗಿರಿ. ಇತರರನ್ನು ಸುರಕ್ಷಿತವಾಗಿಡಿ. ಸುಗಮ ಸಂಚಾರ, ಮಹಿಳೆಯರ ಸುರಕ್ಷತೆ, ಜನದಟ್ಟಣೆ ನಿಯಂತ್ರಣ ಗುರಿಯಾಗಿರಿಸಿ ಪೋಲಿಸ್ ಇಲಾಖೆ ಕರ್ತವ್ಯ ನಿರ್ವಹಿಸುತ್ತಿದ್ದು ಸಹಕಾರ ನೀಡೋಣ. ಸ್ವಾತಂತ್ರ್ಯ ಅನುಭವಿಸಿ, ಅದರೊಂದಿಗೆ ಇರುವ ಗೆರೆಯನ್ನು ಗಮನದಲ್ಲಿಡಿ, ದಾಟದಿರಿ. ಸಂತೋಷಕ್ಕೆ ಸಂಚಕಾರ ತಂದುಕೊಳ್ಳದೇ 2026ನೆಯ ವರ್ಷವಿಡೀ ಇರೋಣ!

ಹೊಸ ವರ್ಷದ ಸಂಪನ್ನತೆ: ಸರಳ ಸೂತ್ರಗಳಿವು

• **ಸುರೇಂದ್ರ ಪೈ, ಭಟ್ಕಳ**

ಹೊಸ ವರ್ಷ ಎಂಬುದು ಹೊಸ ಆಶೆಗಳ, ಹೊಸ ಕನಸುಗಳ ಮತ್ತು ಹೊಸ ಪ್ರಯತ್ನಗಳ ಆರಂಭವಾಗುತ್ತದೆ. ಇದು ಪ್ರತೀ ವ್ಯಕ್ತಿಯ ಜೀವನದಲ್ಲಿ ಒಂದು ಹೊಸ ಪುಟವನ್ನು ತೆರೆದು ಹೊಸ ಉತ್ಸಾಹ ಮತ್ತು ಹೊಸ ದಿಕ್ಕನ್ನು ನೀಡುತ್ತದೆ. ಇದೇ ಕಾರಣದಿಂದ ಹೊಸ ವರ್ಷ ಎಂದರೆ ಬರೀ ಕ್ಯಾಲೆಂಡರ್ ತಿರುವಿ ಹಾಕುವ ದಿನವಲ್ಲ, ಇಲ್ಲಿಂದ ನಮ್ಮ ಬದುಕನ್ನೂ ಉತ್ತಮವಾದ ದಿಕ್ಕಿನತ್ತ ಕೊಂಡೊಯ್ಯುವ ಅವಕಾಶ ನಮ್ಮ ಕೈಯಲ್ಲೇ ಇದೆ. ಅದರ ಸದುಪಯೋಗ ಬಲು ಮುಖ್ಯ. ಈ ಹೊಸ ವರ್ಷದ ಸಂಪನ್ನತೆಗಾಗಿ ಒಂದಿಷ್ಟು ಸರಳ ಸೂತ್ರಗಳು ಇಲ್ಲಿವೆ:

ಏನಾದರೂ ಮಾಡು ಮೊದಲು ಮಾನವನಾಗು: ಏನಾದರೂ ಆಗುವ ಮುನ್ನ ಏನಾದರೂ ಮಾಡಬೇಕಲ್ಲವೇ? ಇಂದಿನ ಆಧುನಿಕ ಯುಗದಲ್ಲಿ ದಿನಗಳೆದಂತೆ ಸ್ವಾರ್ಥ ತಾಂಡವವಾಡುತ್ತಿದೆ. ಮಾನವ ದಾನವನಂತೆ ವರ್ತಿಸುವ ಮಟ್ಟಕ್ಕೆ ಇಳಿದಿದ್ದಾನೆ. ಬದುಕು ಎಂಬುದು ನಮಗೆಲ್ಲರಿಗೂ ದೊರೆತ ಬೆಲೆ ಕಟ್ಟಲಾಗದ ಅತ್ಯಮೂಲ್ಯ ಕಾಣಿಕೆ. ತಾಳ್ಮೆ, ಪರೋಪಕಾರ, ಸಹಬಾಳ್ವೆ, ದಯೆ, ಕರುಣೆ, ಹೀಗೆ ಮುಂತಾದ ಮೌಲ್ಯಗಳನ್ನು ಈ ಬದುಕಿನಲ್ಲಿ ರೂಢಿಸಿಕೊಳ್ಳುವುದರ ಮೂಲಕ ಈ ಬದುಕನ್ನು ಸಾರ್ಥಕಗೊಳಿಸಿಕೊಳ್ಳಬೇಕು.

ಪರಿಸರ ಉಳಿಸುವ ಶಪಥ: ಪ್ರಕೃತಿ ನಮ್ಮ ತಾಯಿ. ಇಂದು ಮಾನವನ ನಿರಂತರ ಹಸ್ತಕ್ಷೇಪದಿಂದಾಗಿ ಎಲ್ಲಾ ರೀತಿಯ ಮಾಲಿನ್ಯಗಳು ಹೆಚ್ಚಾಗಿ ಪ್ರಕೃತಿ ವಿನಾಶದ ಅಂಚಿನಲ್ಲಿದೆ. ಇನ್ನಾದರೂ ಪರಿಸರ ಕಾಳಜಿಯನ್ನು ಹೊಂದೋಣ. ಮರಗಳನ್ನು ನೆಡುವುದು, ತ್ಯಾಜ್ಯ ವಿಂಗಡಣೆ, ಪ್ಲಾಸ್ಟಿಕ್ ಕಡಿಮೆ ಬಳಕೆ, ನೀರು ಸಂರಕ್ಷಣೆ ಮತ್ತು ಮಾಲಿನ್ಯ ನಿಯಂತ್ರಣದ ಮೂಲಕ ಭವಿಷ್ಯದ ಪೀಳಿಗೆಗೆ ಆರೋಗ್ಯಕರ ಭೂಮಿಯನ್ನು ಉಳಿಸುವ ಜವಾಬ್ದಾರಿಯ ಸಂಕಲ್ಪ ಮಾಡೋಣ.

ಸಾಂವಿಧಾನಿಕ ಕರ್ತವ್ಯಗಳ ಪಾಲನೆ: ಸದಾ ನಮ್ಮ ನಮ್ಮ ಹಕ್ಕಿಗಾಗಿ ಹೋರಾಡುತ್ತ ನಮ್ಮ ಭವ್ಯ ಭಾರತದ ಅಭಿವೃದ್ಧಿಗಾಗಿ, ಶಾಂತಿ ನೆಮ್ಮದಿಗಾಗಿ ಸೌಹಾರ್ದತೆಗಾಗಿ ಸಾಂವಿಧಾನಿವಾಗಿ ನೀಡಲ್ಪಟ್ಟ ಕರ್ತವ್ಯಗಳನ್ನು, ಮೌಲ್ಯಗಳನ್ನು ಪಾಲಿಸಬೇಕಿದೆ.

ಸಕಾರಾತ್ಮಕ ಚಿಂತನೆಗೂ ದಾರಿ: ನಾವು ಸಕಾರಾತ್ಮಕವಾಗಿ ಮುನ್ನಡೆದಷ್ಟು ನಮ್ಮ ಜೀವನ ಚೆನ್ನಾಗಿರುತ್ತದೆ. ನಮ್ಮ ಆಲೋಚನೆಗಳು ವಿಶೇಷತೆಯಿಂದ ಕೂಡಿರಬೇಕು. ಕಂಡ ಕನಸುಗಳನ್ನು ಸಾಕಾರಗೊಳಿಸಿಕೊಳ್ಳುವಂತೆ ಇರಬೇಕು. ಮಾನಸಿಕ ಆರೋಗ್ಯಕ್ಕೆ ಪೂರಕವಾಗಿದ್ದರೆ ನಮ್ಮ ಇಡೀ ಕುಟುಂಬ ಚೆನ್ನಾಗಿರುತ್ತದೆ. ಹಾಗಾಗಿ ಹೊಸ ವರ್ಷಕ್ಕೆ ಒಳ್ಳೆಯ ಭಾವನೆಗಳನ್ನು ಈಗಿನಿಂದಲೇ ಅಭ್ಯಾಸ ಮಾಡಿಕೊಳ್ಳಿ.

ಕುಟುಂಬದ ಜೊತೆಗಿನ ಸಮಯ: ಅವಿಭಕ್ತ ಕುಟುಂಬಗಳು ಮಾಯವಾಗಿರುವ ಈ ಕಾಲಘಟ್ಟದಲ್ಲಿ ನಮ್ಮ ಕುಟುಂಬದ ಸದಸ್ಯರಿಗಾಗಿ ನಿತ್ಯವೂ ಒಂದಿಷ್ಟು ಸಮಯ ಮೀಸಲಿಡೋಣ. ಒಟ್ಟಿಗೆ ಕುಳಿತು ಊಟ ಮಾಡೋಣ, ಸ್ನೇಹ ಸಂಬಂಧದ ಆತ್ಮೀಯ ಕ್ಷಣಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳೋಣ. ದಿನಾಲೂ ಪ್ರೀತಿಯನ್ನು ಹಂಚಿ, ಪ್ರೀತಿಯನ್ನು ಪಡೆದು ಸಾಗೋಣ.11

ಮಾನಸಿಕ ಆರೋಗ್ಯದ ಆದ್ಯತೆ: ಮಾನಸಿಕ ಆರೋಗ್ಯವನ್ನು ಯಾರು ಉತ್ತಮವಾಗಿ ಕಾಪಾಡಿಕೊಳ್ಳುತ್ತಾರೆ, ಅವರು ಜೀವನದಲ್ಲಿ ಬಹಳಷ್ಟು ನೆಮ್ಮದಿ ಹಾಗೂ ಸಂತೋಷ ದಿಂದ ಜೀವನ ಮಾಡುತ್ತಾರೆ. ಯಾವುದೇ ನಕಾರಾತ್ಮಕ ವ್ಯಕ್ತಿ ನಿಮ್ಮ ಮಾನಸಿಕ ಆರೋಗ್ಯ ವನ್ನು ಹಾಳು ಮಾಡುತ್ತಿದ್ದಾರೆ ಎಂದರೆ ಅಂತಹವರಿಂದ ಸಾಧ್ಯವಾದಷ್ಟು ದೂರವಿರಿ. ಕೆಲವೊಂದು ಅಭ್ಯಾಸಗಳಿಂದ ಕೂಡ ನಿಮ್ಮ ಮಾನಸಿಕ ಆರೋಗ್ಯಕ್ಕೆ ತೊಂದರೆ ಬರಬಹುದು. ಹೊಸ ವರ್ಷದಿಂದ ಇಂತಹ ಅಭ್ಯಾಸಗಳಿಂದ ದೂರವೇ ಉಳಿಯುವ ಹಾಗೆ ಮನಸ್ಸು ಮುಖ್ಯ.

ಆರೋಗ್ಯದತ್ತ ಇರಲಿ ಚಿತ್ತ: ಪ್ರತಿದಿನ ವ್ಯಾಯಾಮ ಮಾಡುವುದು, ಯೋಗ, ಆರೋಗ್ಯಕರ ಆಹಾರ ಸೇವಿಸುವುದು ಮತ್ತು ಕೆಟ್ಟ ಅಭ್ಯಾಸಗಳನ್ನು ತ್ಯಜಿಸುವ ಪ್ರತಿಜ್ಞೆಯೂ ಮುಖ್ಯ.

ಆರ್ಥಿಕ ಸುಧಾರಣೆಗೂ ಇರಲಿ ಆದ್ಯತೆ: ಪ್ರತೀ ತಿಂಗಳು ಸಂಬಳದಲ್ಲಿ ಒಂದು ಭಾಗವನ್ನು ಉಳಿಸುವುದು, ಅನಗತ್ಯ ಖರ್ಚುಗಳಿಗೆ ಕಡಿವಾಣ ಹಾಕುವುದು ಮತ್ತು ಹೂಡಿಕೆ ಮಾಡಲು ಪ್ರಾರಂಭಿಸೋಣ.

ಪದಬಂಧ

• **ಸಿ.ರವಿಶಂಕರ ಶಾಸ್ತ್ರಿ, ದಂಬೆ**



ಎಡದಿಂದ ಬಲಕ್ಕೆ

1. ರಾಮನ ಕೈಯಲ್ಲಿದೆ ಬಿಲ್ಲು (3)
3. ಆನೆಯನ್ನು ಪಳಗಿಸಲು ಬಳಸುವ ಒಂದು ಸಾಧನ (3)
4. ಕಣಿ ಹೇಳುವವಳು (4)
5. ಗಾಳಿ, ಬೆಳಕು ಸರಿಯಾಗಿ ಬರಲು ಬೇಕಾದ ಕಂಡಿ (3)
7. ಮತ್ತೊಂದು ಉಪಯೋಗ ಇಲ್ಲಿ ತಿರುಗಿ ಬಂದಿದೆ (3)
9. ವನದ ನಡುವೆ ಸಿಲುಕಿದ ಮುಖ (3)
11. ಅರದ ನಡುವೆ ವಿಶ್ವ ಸಿಲುಕಿದರೆ ಹೆಬ್ಬಾವು ಕಂಡೀತು (4)
12. ಹಾಳಾಗುವುದನ್ನು ಹೀಗೆ ಹೇಳುವ (4)
14. ಅಸ್ತವ್ಯಸ್ತವಾಗಿ ಬಂದಿರುವ ಜಗಳ (3)
16. ಬುದ್ಧನ ಮತ್ತೊಂದು ಹೆಸರು (3)
18. ಸಾಮಾನ್ಯವಾಗಿ ಸ್ವಾಮೀಜಿಗಳು ಧರಿಸುವ ಮರದ ಪಾದರಕ್ಷೆ (3)
20. ಶಿವನ ಹೆಸರಿನಿಂದ ತೊಡಗಿದ ಒಂದು ತಂತಿವಾದ್ಯ (4)
21. ಇಪ್ಪತ್ತೇಳು ನಕ್ಷತ್ರಗಳಲ್ಲಿ ಒಂದು ಕರಂಡಕದಂತೆ ಇದೆ (3)
22. ಪಾವತಿಗೆ ಮತ್ತೊಂದು ಹೆಸರು (3)

ಮೇಲಿಂದ ಕೆಳಕ್ಕೆ

1. ಶರೀಫರ ಪದ್ಯದಲ್ಲಿ ಕೋಳಿಯು ನುಂಗಲು ಬಂದಿದ್ದು ಇದನ್ನ (3)
2. ಆನಂದದಿಂದ ಅರಳಿ ನಿಂತ ತಾವರೆ (4)
3. ಮತ್ತೊಂದು ಹೆದರಿಕೆ (3)
6. ನೀರಿನಲ್ಲಿ ಹುಟ್ಟಿದುದು (3)
8. ಸಾರಹೀನವಾದುದು ಎಂದರ್ಥ (3)
9. ಒಂದು ಚಿನ್ನದ ನಾಣ್ಯ (3)
10. ಪಂಚಪಾಂಡವರಲ್ಲಿ ಒಬ್ಬಾತ (3)
11. ಹುಡುಕು ಎನ್ನುವ ರಾಜ (3)
13. ಗೆಳೆಯನಿಗೆ ಸಿಕ್ಕಿದ ಜಯ (3)
15. ಕೆಂಪು ಬಣ್ಣದ ಕಣಗಿಲೆ ಹೂವು (4)
17. ಮತ್ತೊಂದು ಮರದಿಂದ ತೊಡಗಿದ ಯುವತಿ (3)
19. ಕಷ್ಟ ಬಂದರೂ ಜೊತೆಗಿರುವ ಮಿತ್ರ (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ
1. ಕೋದಂಡ 3. ಅಂಕುಶ
4. ಕೊರವಂಜಿ 5. ಗವಾಕ್ಷಿ
7. ಕೆಳಬ 9. ವದನ 11. ಅಜಗರ
12. ಕುಲಗೆಡು 14. ಹಕಲ
16. ಸುಗತ 18. ಹಾವುಗೆ
20. ರುದ್ರವೀಣೆ 21. ಭರಣಿ
22. ಸಂದಾಯ

ಮೇಲಿಂದ ಕೆಳಕ್ಕೆ
1. ಕೋಡಗ 2. ಅರವಿಂದ
3. ಅಂಜಿಕೆ 6. ವಾರಿಜ
8. ಬರಡು 9. ವರಹ
10. ನಕುಲ 11. ಅರಸು
13. ಗೆಲುವು 15. ಕರವೀರ
17. ತರುಣಿ
19. ಗೆಳೆಯ

ದೃಢ ಸಂಕಲ್ಪದಿಂದ ನಕ್ಷತ್ರವಾಗಿ ಮಿನುಗಿದ ಧ್ರುವ

ರಾಜ ಉತ್ತಾನಪಾದನಿಗೆ ಸುನೀತಿ ಮತ್ತು ಸುರುಚಿ ಎಂಬ ಇಬ್ಬರು ಹೆಂಡತಿಯರಿದ್ದರು. ರಾಜ ಉತ್ತಾನಪಾದನಿಗೆ ಸುನೀತಿಯಿಂದ ಧ್ರುವ ಮತ್ತು ಸುರುಚಿಯಿಂದ ಉತ್ತಮ ಎಂಬ ಇಬ್ಬರು ಗಂಡು ಮಕ್ಕಳಿದ್ದರು. ಸುನೀತಿ ಹಿರಿಯ ರಾಣಿಯಾಗಿದ್ದರೂ, ಉತ್ತಾನಪಾದನಿಗೆ ಸುರುಚಿಯ ಮೇಲಿನ ಪ್ರೀತಿ ಹೆಚ್ಚಾಗಿತ್ತು. ಒಮ್ಮೆ ಸುನೀತಿಯ ಮಗ ಧ್ರುವ ತನ್ನ ತಂದೆಯ ಮಡಿಲಿನಲ್ಲಿ ಆಟವಾಡುತ್ತಿದ್ದ. ಅದನ್ನುನೋಡಿ ಸುರುಚಿಗೆ ಕೋಪ ಉಕ್ಕೇರಿತು. ಅಸೂಯೆಯಿಂದ ಅವಳು ರಾಜನ ಮಡಿಲಿನಿಂದ ಮಗು ಧ್ರುವನನ್ನು ಎಳೆದು ತನ್ನ ಸ್ವಂತ ಮಗ ಉತ್ತಮನನ್ನು ಅವನ ಮಡಿಲಲ್ಲಿ ಕೂರಿಸಿದಳು. ಅವಳು ಮಗು ಧ್ರುವನಿಗೆ, 'ಮೂರ್ಖ.. ನನ್ನ ಗರ್ಭದಿಂದ ಹುಟ್ಟಿದ ಮಗು ಮಾತ್ರ ರಾಜನ ಮಡಿಲಲ್ಲಿ ಕುಳಿತುಕೊಳ್ಳಲು ಸಾಧ್ಯ, ನೀನು ನನ್ನ ಗರ್ಭದಿಂದ ಹುಟ್ಟಿಲ್ಲ. ಆದ್ದರಿಂದ ನೀನು ತಂದೆಯ ಮಡಿಲಲ್ಲಿ ಅಥವಾ ಸಿಂಹಾಸನದ ಮೇಲೆ ಕುಳಿತುಕೊಳ್ಳುವ ಹಕ್ಕನ್ನು ಹೊಂದಿಲ್ಲ' ಎಂದು ಕಟುವಾಗಿ ನುಡಿದಳು. ಐದು ವರ್ಷದ ಧ್ರುವನು ತನ್ನ ಮಲತಾಯಿಯ ವರ್ತನೆಯಿಂದ ಕೋಪಗೊಂಡನು. ಅವನು ತನ್ನ ತಾಯಿ ಸುನೀತಿಯ ಬಳಿಗೆ ಓಡಿಹೋಗಿ ಎಲ್ಲವನ್ನೂ ಹೇಳಿದಾಗ ಸುನೀತಿ, 'ಮಗನೇ, ನಿನ್ನ ತಂದೆ ನಿನ್ನ ಮಲತಾಯಿ ಸುರುಚಿಯ ಮೇಲಿನ ಅತಿಯಾದ ಪ್ರೀತಿಯಿಂದಾಗಿ ನಮ್ಮಿಂದ ದೂರವಾಗಿದ್ದಾರೆ. ನೀನು ಭಗವಂತನನ್ನು ನಂಬು.. ಅವನು ನಿನಗೆ ಶಾಶ್ವತವಾದ ಸಿಂಹಾಸನವನ್ನು ಸ್ಥಾನವನ್ನು ನೀಡುತ್ತಾನೆ' ಎಂದು ಹೇಳಿದಳು.

ತಾಯಿಯ ಮಾತುಗಳನ್ನು ಕೇಳಿ ಧ್ರುವನು ಅರಮನೆ ತೊರೆದು ಭಗವಂತನನ್ನು ಅರಸುತ್ತಾ ಹೊರಟನು. ಕಾಡಿನಲ್ಲಿ ದೇವರನ್ನು ಕಂಡುಕೊಳ್ಳಲು ಹೊರಟಾಗ ದಾರಿಯಲ್ಲಿ ಅವನು ನಾರದ ಮುನಿಯನ್ನು ಭೇಟಿಯಾದನು. ನಾರದ ಮಹರ್ಷಿಗಳು ಮಗು ಧ್ರುವನಿಗೆ ಬುದ್ಧಿ ಹೇಳಿ ಮರಳಿ ಕಳಿಸಲು ಪ್ರಯತ್ನಿಸಿದರು, ಆದರೆ ಧ್ರುವನು ನಿರಾಕರಿಸಿದನು.

ಒಂದೊಳ್ಳೆ ಮಾತು

ರೂಪಾ ಗುರುರಾಜ್

ಒಂದೊಳ್ಳೆ ಮಾತು
Vishwavani TV
ಯೂಟ್ಯೂಬ್

ಅವನ ದೃಢಸಂಕಲ್ಪವನ್ನು ನೋಡಿ ನಾರದರು ಧ್ರುವನಿಗೆ ಮಂತ್ರೋಪದೇಶ ಮಾಡಿದರು. ಧ್ರುವನ ನಿರ್ಗಮನದಿಂದ ರಾಜ ಉತ್ತಾನಪಾದನು ತೀವ್ರ ದುಃಖಿತನಾಗಿದ್ದನು. ನಾರದರು ರಾಜನನ್ನು ಕಾಣಲು ಬಂದರು. ಅವರೇ ರಾಜನಿಗೆ ಧ್ರುವನ ಬಗ್ಗೆ ಮಾಹಿತಿ ಕೊಟ್ಟು, 'ಭವಿಷ್ಯದಲ್ಲಿ ಅವನ ಖ್ಯಾತಿ ವಿಶ್ವದಾದ್ಯಂತ ಹರಡುತ್ತದೆ' ಎಂದರು. ನಾರದರ ಈ ಮಾತುಗಳಿಂದ ರಾಜ ಉತ್ತಾನಪಾದನಿಗೆ ಸ್ವಲ್ಪ ಸಮಾಧಾನವಾಯಿತು.

ಬಾಲಕ ಧ್ರುವನು ಯಮುನಾ ನದಿಯ ದಡವನ್ನು ತಲುಪಿ, ನಾರದ ಋಷಿಗಳು ನೀಡಿದ ಮಂತ್ರವನ್ನು ಪಠಿಸುತ್ತ ನಾರಾಯಣನನ್ನು ಧ್ಯಾನಿಸಲು ಪ್ರಾರಂಭಿಸಿದನು. ಧ್ಯಾನಸ್ಥನಾಗುವಾಗ ಧ್ರುವನು ಹಲವಾರು ಸವಾಲುಗಳನ್ನು ಎದುರಿಸಿದನು, ಆದರೆ ಅವನು ದೃಢನಿಶ್ಚಯದಿಂದ ತಪಸ್ಸಿಗೆ ಇಳಿದನು. ಅವನ ತಪಸ್ಸಿನ ತೇಜಸ್ಸು ಮೂರು ಲೋಕಗಳಲ್ಲಿ ಹರಡಲು ಪ್ರಾರಂಭಿಸಿತು. 'ಓಂ ನಮೋ ಭಗವತೇ ವಾಸುದೇವಾಯ' ಎಂಬ ಮಂತ್ರೋಚ್ಚಾರ ವೈಕುಂಠದಲ್ಲಿಯೂ ಪ್ರತಿಧ್ವನಿಸಿತು.

ಇವನ ತಪಸ್ಸಿಗೆ ನಾರಾಯಣ ತನ್ನ ಯೋಗ ನಿದ್ರೆಯಿಂದ ಎಚ್ಚರಗೊಂಡನು. ಧ್ರುವನು ಈ ಸ್ಥಿತಿಯಲ್ಲಿ ಧ್ಯಾನ ಮಾಡುತ್ತಿರುವುದನ್ನು ನೋಡಿ, ನಾರಾಯಣನು ಸಂತೋಷಗೊಂಡು ಅವನ ಮುಂದೆ ಪ್ರತ್ಯಕ್ಷನಾದನು. ನಾರಾಯಣನು, 'ರಾಜಕುಮಾರನೇ, ನಿನ್ನ ಎಲ್ಲಾ ಆಸೆಗಳು ಈಡೇರುತ್ತವೆ. ನಿನ್ನ ಭಕ್ತಿಗೆ ಮೆಚ್ಚಿ ಜ್ಯೋತಿಷ್ಯ ಚಕ್ರ ಮತ್ತು ಅದರ ಸುತ್ತ ಸುತ್ತುವ ಎಲ್ಲಾ ಗ್ರಹಗಳು, ನಕ್ಷತ್ರಗಳು ಇದೆಲ್ಲಕ್ಕಿಂತ ಮಿಗಿಲಾಗಿ ಜಗತ್ತನ್ನು ನಾನು ನಿನಗೆ ದಯಪಾಲಿಸುತ್ತಿದ್ದೇನೆ. ಅದು ಮಹಾ ಪ್ರಳಯದ ಅವಧಿಯಲ್ಲಿಯೂ ಎಂದಿಗೂ ನಾಶವಾಗುವುದಿಲ್ಲ. ಸಪ್ತರ್ಷಿಗಳೂ ಸಹ ನಕ್ಷತ್ರಗಳೊಂದಿಗೆ ಅದನ್ನು ಪ್ರದಕ್ಷಿಣೆ ಮಾಡುತ್ತಾರೆ. ಈ ಲೋಕವನ್ನು ನಿನ್ನ ಹೆಸರಿನಿಂದ ಧ್ರುವ ಲೋಕ ಎಂದು ಕರೆಯಲಾಗುತ್ತದೆ. ಈ ಲೋಕದಲ್ಲಿ ನೀನು ಮೂವತ್ತಾರು ಸಾವಿರ ವರ್ಷಗಳ ಕಾಲ ಭೂಮಿಯನ್ನು ಆಳುವೆ. ಎಲ್ಲಾ ಐಷಾರಾಮಿ ಬದುಕನ್ನೂ ಅನುಭವಿಸಿದ ನಂತರ, ನೀನು ನನ್ನ ಲೋಕವನ್ನು ಪಡೆಯುತ್ತೀಯ' ಎಂದು ಆಶೀರ್ವದಿಸಿ ದನು. ನಂತರ ಧ್ರುವನು ಧ್ರುವ ನಕ್ಷತ್ರವಾದನು, ಇಂದಿಗೂ ಆಗಸದಲ್ಲಿ ರಾರಾಜಿಸುತ್ತಿದ್ದಾನೆ.

ನಿಜವಾದ ಸಂಕಲ್ಪ ಶಕ್ತಿ ಮತ್ತು ಭಗವಂತನ ಮೇಲಿಟ್ಟರೆ ಹಾಗೂ ಬದುಕಿನಲ್ಲಿ ಅಚಲವಾದ ನಂಬಿಕೆ ಇದ್ದರೆ ಎಂತಹವರೂ ಕೂಡ ಧ್ರುವನಂತೆ ನಕ್ಷತ್ರವಾಗಿ ಮಿನುಗಬಹುದು. ಇಂತಹ ಸಂಕಲ್ಪ ಶಕ್ತಿ, ದೃಢ ಮನಸ್ಸು, ನಂಬಿಕೆ ನಮ್ಮನ್ನು ವರ್ಷಪೂರ್ತಿ ಮುನ್ನಡೆಸಲಿ. ಎಲ್ಲರಿಗೂ ಹೊಸವರ್ಷ-2026ರ ಹಾರ್ದಿಕ ಶುಭಾಶಯಗಳು..!

ಬೆಲೆಯಿರುವ ಜಾಗದಲ್ಲಿರೋಣ

• **ಶಂಕರಾನಂದ ಹೆಬ್ಬಾಳ**

ಪ್ರಪಂಚದ ಎಲ್ಲ ಪ್ರಾಣಿಗಳಿಗೂ ಒಂದು ಬೆಲೆಯಿದೆ, ಅಂದರೆ ಪ್ರತಿ ವಸ್ತುವಿಗೂ ತನ್ನದೆಯಾದ ಮೌಲ್ಯವಿದೆ ಎಂದರ್ಥ. ಮೌಲ್ಯ ಇಲ್ಲದಿರುವ ಒಂದು ವಸ್ತುವನ್ನು ನಾವು ಊಹಿಸಿಕೊಳ್ಳಲು ಅಸಾಧ್ಯ. ಹಾಗೆಂದ ಮೇಲೆ ಆ ಬೆಲೆಯನ್ನು ಅರಿತು ನಾವು ಅರಿತು ಬಾಳಬೇಕೆ ಹೊರತು, ಆ ಬೆಲೆಯನ್ನು ಅಲ್ಲಗಳೆದು ಬದುಕುವುದು ಸರಿಯಲ್ಲ.

ಒಬ್ಬ ತಂದೆ ತನ್ನ ಮಗನಿಗೆ ಮನುಷ್ಯನ ಮೌಲ್ಯದ ಕುರಿತು ಪಾಠ ಹೇಳುವಾಗ ಒಂದು ಹಳೆಯ ಕಾಲದ ಕೈಗಡಿಯಾರವನ್ನು ಕೊಟ್ಟು ಮಗು, 'ಇದನ್ನು ಹೆಚ್ಚಿನ ಬೆಲೆಗೆ ಮಾರಿಕೊಂಡು ಬಾ' ಎಂದು ಕಳಿಸಿದ. ಸರಿ ಎಂದು ಮಗು ಹೊರಟಿತು. ಮೊದಲು ಒಂದು ಗುಜರಿ ಅಂಗಡಿಯಲ್ಲಿ ತೋರಿಸಿ 'ಇದನ್ನು ಎಷ್ಟಕ್ಕೆ ಕೊಳ್ಳುತ್ತಿರಾ..?' ಎಂದು ಕೇಳಿದ. ಅಂಗಡಿಯವ ಇದು ಬಹಳ ಹಳೆಯದಾಗಿದ್ದು, 'ಐವತ್ತರಿಂದ ನೂರು ರೂಪಾಯಿ ಕೊಡಬಹುದು' ಎಂದ. ಹುಡುಗನು ಮತ್ತೆ ಅಲ್ಲಿಯೂ ಕೊಡಲಾಗದೆ ಒಂದು ವಸ್ತು ಸಂಗ್ರಹಾಲಯಕ್ಕೆ ಭೇಟಿ ಕೊಟ್ಟು ಅಲ್ಲಿ ವಾಚನ್ನು ತೋರಿಸಿ, 'ಇದನ್ನು ಎಷ್ಟು ರೂಪಾಯಿಗೆ ಕೊಂಡುಕೊಳ್ಳುತ್ತೀರಿ..?' ಎಂದಾಗ ಮ್ಯೂಸಿಯಂನವರು, 'ಇದು ತುಂಬಾ ಹಳೆಯ ವಾಚು, ಸುಮಾರು ನೂರೈವತ್ತು ವರ್ಷ ಹಳೆಯದಿದೆ, ಅದಕ್ಕಾಗಿ ಐದರಿಂದ ಆರು ಲಕ್ಷ ರೂಪಾಯಿಗೆ ಕೊಳ್ಳುತ್ತೀವಿ' ಎಂದರು. ಹುಡುಗನಿಗೆ ಆಶ್ಚರ್ಯ ಉಂಟಾಗಿ 'ಸರಿ, ನಮ್ಮ ಅಜ್ಜನಿಗೆ ಕೇಳಿ ಬರುತ್ತೇನೆ' ಎಂದ. ಅಜ್ಜನ ಹತ್ತಿರ ಬಂದು 'ಅಜ್ಜಾ...ಈ ವಾಚಿಗೆ ಒಂದೊಂದು ಅಂಗಂಡಿಯಲ್ಲಿ ಒಂದೊಂದು ಬೆಲೆಯಿದೆ' ಎಂದಾಗ ಅಜ್ಜ, 'ಮಗು ನಮಗೆ ಹೆಚ್ಚು ಬೆಲೆ ಸಿಗುವ ಜಾಗದಲ್ಲಿ ನಾವಿರಬೇಕು, ಅಂದಾಗ ಮಾತ್ರ ನಮ್ಮ ವ್ಯಕ್ತಿತ್ವ ಇಮ್ಮಡಿಗೊಳ್ಳುತ್ತದೆ ಮತ್ತು ಹೆಚ್ಚು ಗೌರವ ದೊರಕುತ್ತದೆ' ಎಂದಾಗ ಮಗುವಿಗೆ ಅಜ್ಜನ ಮಾತು ಅರ್ಥವಾಗಿತ್ತು.

ಒಟ್ಟಿನಲ್ಲಿ ಮನುಷ್ಯನು ಬೆಲೆಯಿರುವ ಜಾಗದಲ್ಲಿ ಬದುಕಬೇಕು.ಒಂದು ಜಾಗದಲ್ಲಿ ಒಬ್ಬನಿಗೆ ಬೆಲೆ ಇದೆಯೆಂದರೆ ಆ ವ್ಯಕ್ತಿಯ ಹೆಸರು ಮತ್ತು ಅವನು ಹಾಕುವ ಮೆಟ್ಟಿಗೂ ಅಲ್ಲಿ ಬೆಲೆಯಿರುತ್ತದೆ. ಅದೆ ವ್ಯಕ್ತಿಗೆ ಅಲ್ಲಿ ಬೆಲೆಯಿಲ್ಲ ಎಂದಾದರೆ ಅವನೇ ಅಲ್ಲಿದ್ದರೂ ಪ್ರಯೋಜನ ಇಲ್ಲದಂತಾಗುತ್ತದೆ.

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಸರ್ಫರಾಜ್ ಖಾನ್ ಸ್ಫೋಟಕ ಬ್ಯಾಟಿಂಗ್

ಜೈಪುರ: ಗೋವಾ ವಿರುದ್ಧದ ವಿಜಯ ಹಜಾರೆ ಟ್ರೋಫಿ ಟೂರ್ನಿಯ ಸಿ ಗುಂಪಿನ ಪಂದ್ಯದಲ್ಲಿ ಮುಂಬೈ ತಂಡದ ಸರ್ಫರಾಜ್ ಖಾನ್ ಸ್ಫೋಟಕ ಬ್ಯಾಟಿಂಗ್ ಪ್ರದರ್ಶನವನ್ನು ತೋರಿದ್ದಾರೆ. ಬುಧವಾರ ಜೈಪುರ ವಿದ್ಯಾಲಯದ ಮೈದಾನದಲ್ಲಿ ನಡೆದಿದ್ದ ಪಂದ್ಯದಲ್ಲಿ ಅವರು 75 ಎಸೆತಗಳನ್ನು ಎದುರಿಸಿ 157 ರನ್‌ಗಳನ್ನು ಬಾರಿಸಿದ್ದಾರೆ. ಅವರ ಇನ್ನಿಂಗ್ಸ್‌ನಲ್ಲಿ 14 ಸಿಕ್ಸರ್‌ಗಳು ಹಾಗೂ 9 ಬೌಂಡರಿಗಳಿದ್ದವು. ಸರ್ಫರಾಜ್ ಖಾನ್ ಸ್ಫೋಟಕ ಶತಕದ ಮೂಲಕ ಶಾರ್ದೂಲ್ ಠಾಕೂರ್ ನಾಯತ್ವದ ಮುಂಬೈ ತಂಡ, ತನ್ನ ಪಾಲಿನ 50 ಓವರ್‌ಗಳಿಗೆ 8 ವಿಕೆಟ್‌ಗಳ ನಷ್ಟಕ್ಕೆ 444 ರನ್‌ಗಳನ್ನು ಕಲೆ ಹಾಕಿತು. ಗೋವಾ ವಿರುದ್ಧದ ಪಂದ್ಯದಲ್ಲಿ ಯಶಸ್ವಿ ಜೈಸ್ವಾಲ್ ವಿಕೆಟ್ ಒಪ್ಪಿಸಿದ ಬಳಿಕ ನಾಲ್ಕನೇ ಕ್ರಮಾಂಕದಲ್ಲಿ ಬ್ಯಾಟ್ ಮಾಡಿದ್ದ ಸರ್ಫರಾಜ್ ಖಾನ್ ಅವರು ತಮ್ಮ ವೃತ್ತಿ ಜೀವನ ಸಾರ್ವಕಾಲಿಕ ಶ್ರೇಷ್ಠ ಇನ್ನಿಂಗ್ಸ್ ಅನ್ನು ಆಡಿದ್ದಾರೆ. ಸರ್ಫರಾಜ್ ಖಾನ್ ಅವರ ಸಹೋದರ ಮುಶೀರ್ ಖಾನ್ ಕೂಡ 66 ಎಸೆತಗಳಲ್ಲಿ 60 ರನ್‌ಗಳನ್ನು ಬಾರಿಸಿದರು. ವಿಕೆಟ್ ಕೀಪರ್ ಹಾರ್ದಿಕ್ ತೋಮರ್ ಕೇವಲ 28 ಎಸೆತಗಳಲ್ಲಿ 53 ರನ್‌ಗಳನ್ನು ಬಾರಿಸಿದ್ದಾರೆ.

ಮ್ಯಾಗ್ನಸ್ ಕಾರ್ಲ್‌ಸನ್ ವಿಶ್ವ ಬ್ಲಿಟ್ಸ್ ಚಾಂಪಿಯನ್

ದೋಹಾ: ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಅವರು ಫಿಡೆ ವಿಶ್ವ ಬ್ಲಿಟ್ಸ್ ಚೆಸ್ ಚಾಂಪಿಯನ್‌ಶಿಪ್‌ನಲ್ಲಿ ದಾಖಲೆಯ 9ನೇ ಬಾರಿ ಪ್ರಶಸ್ತಿ ಗೆದ್ದುಕೊಂಡರು. 34 ವಯಸ್ಸಿನ ಕಾರ್ಲ್‌ಸನ್ ಫೈನಲ್‌ನಲ್ಲಿ 2.5-1.5 ಅಂತರದಲ್ಲಿ ಉಜ್ಬೇಕಿಸ್ಥಾನದ ನಾದಿರ್ಬೇಕ್ ಅಬ್ದುಸತ್ತಾರೋವ್ ಅವರನ್ನು ಸೋಲಿಸಿದರು. ಫೈನಲ್‌ನ ಮೊದಲ ಮೂರು ಆಟಗಳು ಡ್ರಾದಲ್ಲಿ ಅಂತ್ಯವಾದವು. ಅಂತಿಮ ಹಾಗೂ ನಾಲ್ಕನೇ ಆಟದಲ್ಲಿ ಕಾರ್ಲ್‌ಸನ್ ನಿರ್ಣಾಯಕ ಜಯ ಸಾಧಿಸಿ ಪ್ರಾಬಲ್ಯ ಮೆರೆದರು. ಸೆಮಿಫೈನಲ್‌ನಲ್ಲಿ ಕಾರ್ಲ್‌ಸನ್ 3-1ರಿಂದ ಅಮೆರಿಕದ ಫ್ಯಾಬಿಯಾನೋ ಕರುವಾನ ಅವರನ್ನು ಮಣಿಸಿದ್ದರು.

ಮಾಯಾಂಕ್-ಪಡಿಕ್ಕಲ್ ಅಬ್ಬರದ ಶತಕ | ಪುದುಚೇರಿ ಎದುರು ರಾಜ್ಯ ತಂಡಕ್ಕೆ 67 ರನ್ ಜಯ

ಕರ್ನಾಟಕಕ್ಕೆ ಸತತ 4ನೇ ಗೆಲುವು

ಅಹಮದಾಬಾದ್: ವಿಜಯ ಹಜಾರೆ ಟ್ರೋಫಿ ಟೂರ್ನಿಯಲ್ಲಿ ಕರ್ನಾಟಕ ತಂಡ ತನ್ನ ಗೆಲುವಿನ ಅಭಿಯಾನವನ್ನು ಮುಂದುವರಿಸಿದೆ. ಇಲ್ಲಿನ ಎಡಿಎಸ್‌ಎ ರೈಲ್ವೇಸ್ ಗ್ರೌಂಡ್‌ನಲ್ಲಿ ಬುಧವಾರ ನಡೆದಿದ್ದ ಪುದುಚೇರಿ ವಿರುದ್ಧದ ಪಂದ್ಯದಲ್ಲಿ ಮಾಯಾಂಕ್ ಅಗರ್ವಾಲ್ ಅವರ ನಾಯಕತ್ವದ ರಾಜ್ಯ ತಂಡ 67 ರನ್‌ಗಳ ಭರ್ಜರಿ ಗೆಲುವು ಪಡೆಯಿತು. ನಾಯಕ ಮಯಾಂಕ್ ಹಾಗೂ ದೇವದತ್ ಪಡಿಕ್ಕಲ್ ಶತಕ ಬಾರಿಸಿ ಕರ್ನಾಟಕ ತಂಡದ ಗೆಲುವಿನಲ್ಲಿ ಮಹತ್ತರ ಪಾತ್ರವನ್ನು ವಹಿಸಿದರು.

ರಾಜ್ಯ ತಂಡ ನೀಡಿದ್ದ 364 ರನ್‌ಗಳ ಗುರಿಯನ್ನು ಹಿಂಬಾಲಿಸಿದ ಪುದುಚೇರಿ ತಂಡ, ಕಠಿಣ ಹೋರಾಟ ನಡೆಸಿದ ಹೊರತಾಗಿಯೂ 50 ಓವರ್‌ಗಳಿಗೆ 296 ರನ್‌ಗಳಿಗೆ ಆಲ್‌ಔಟ್ ಆಯಿತು. ಆ ಮೂಲಕ 67 ರನ್‌ಗಳಿಂದ ಸೋಲು ಅನುಭವಿಸಿತು. ಪುದುಚೇರಿ ಆರಂಭಿಕ ಬ್ಯಾಟ್ಸ್‌ಮನ್ ನೇಯಾನ್ ಶ್ಯಾಮ್ ಕಂಗಯಾನ್ (68 ರನ್) ಹಾಗೂ ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್ ಜಯಂತ್ ಯಾದವ್ (54) ಅವರು ಅರ್ಧಶತಕಗಳನ್ನು ಗಳಿಸಿದರು. ಇನ್ನುಳಿದ ಬ್ಯಾಟ್ಸ್‌ಮನ್‌ಗಳ ವೈಫಲ್ಯದಿಂದಾಗಿ ಪುದುಚೇರಿ ತಂಡ 300ರ ಸನಿಹ ಬಂದು ಸೋಲು ಒಪ್ಪಿಕೊಂಡಿತು. ಪುದುಚೇರಿ ತಂಡವು ಆಡಿದ ನಾಲ್ಕೂ ಪಂದ್ಯಗಳನ್ನು ಸೋಲು ಅನುಭವಿಸುವ ಮೂಲಕ ಪಾಯಿಂಟ್ಸ್ ಟೇಬಲ್‌ನಲ್ಲಿ ಕೊನೆಯ ಸ್ಥಾನದಲ್ಲಿದೆ.

ಕರ್ನಾಟಕ ತಂಡದ ಪರ ಅತ್ಯುತ್ತಮ ಬೌಲಿಂಗ್ ಪ್ರದರ್ಶನವನ್ನು ತೋರಿದ ಮನ್ವಂತ್ ಕುಮಾರ್ ಮೂರು ವಿಕೆಟ್ ಪಡೆದರೆ, ಕರುಣ್ ನಾಯರ್ ಹಾಗೂ ವಿದ್ವತ್ ಕಾವೇರಪ್ಪ ತಲಾ ಎರಡೆರಡು ವಿಕೆಟ್‌ಗಳನ್ನು ಪಡೆದರು.

ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಆರಿಸಿಕೊಂಡ ಕರ್ನಾಟಕ ತಂಡ, ಮಾಯಾಂಕ್ ಅಗರ್ವಾಲ್ ಹಾಗೂ ದೇವದತ್ ಪಡಿಕ್ಕಲ್ ಶತಕಗಳ ಬಲದಿಂದ ತನ್ನ ಪಾಲಿನ 50 ಓವರ್‌ಗಳಿಗೆ 4 ವಿಕೆಟ್‌ಗಳ ನಷ್ಟಕ್ಕೆ 363 ರನ್‌ಗಳನ್ನು ಕಲೆ ಹಾಕಿತು, ಆ ಮೂಲಕ ಎದುರಾಳಿ ಪಾಂಡಿಚೇರಿ ತಂಡಕ್ಕೆ 364 ರನ್ ಗುರಿಯನ್ನು ನೀಡಿತ್ತು. ಕರ್ನಾಟಕ ತಂಡ ಪರ ಮಾಯಾಂಕ್ 132 ರನ್ ಗಳಿಸಿದರೆ, ದೇವದತ್ ಪಡಿಕ್ಕಲ್ 113 ರನ್ ಕಲೆ ಹಾಕಿದರು, ಕರುಣ್ ನಾಯರ್ ಅಜೇಯ 62 ರನ್ ಗಳಿಸಿದರು.

ಪಡಿಕ್ಕಲ್ ಪ್ರಚಂಡ ಬ್ಯಾಟಿಂಗ್

ದೇವದತ್ ಪಡಿಕ್ಕಲ್ 2025-26ರ ವಿಜಯ ಹಜಾರೆ ಟ್ರೋಫಿಯಲ್ಲಿ ಉತ್ತಮ ಫಾರ್ಮ್‌ನಲ್ಲಿದ್ದಾರೆ. ಹಿಂದಿನ ಪಂದ್ಯಗಳಲ್ಲಿ ಜಾರ್ಖಂಡ್ ಮತ್ತು ಕೇರಳ ವಿರುದ್ಧ ಶತಕ ಗಳಿಸಿ ಪಂದ್ಯದ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಅದರಲ್ಲೂ ಜಾರ್ಖಂಡ್ ವಿರುದ್ಧ 147 ರನ್ ಗಳಿಸಿದ್ದರು. ನಂತರ ಕೇರಳ ವಿರುದ್ಧ 124 ರನ್ ಗಳಿಸಿದ್ದರು. ಪಡಿಕ್ಕಲ್ ಲಿಸ್ಟ್-ಎನಲ್ಲಿ ನಿರಂತರವಾಗಿ ರನ್ ಗಳಿಸಿ ತಮ್ಮ ಸಾಮರ್ಥ್ಯ ಸಾಬೀತುಪಡಿಸುತ್ತಿದ್ದಾರೆ. ಕೇವಲ 36 ಇನ್ನಿಂಗ್ಸ್‌ಗಳಲ್ಲಿ 12 ಶತಕ ಮತ್ತು 12 ಅರ್ಧಶತಕಗಳನ್ನು ಗಳಿಸಿದ್ದಾರೆ. ಅವರ ಬ್ಯಾಟಿಂಗ್ ಸರಾಸರಿ 82.56 ಆಗಿದೆ.

ಟೆಸ್ಟ್ ಶ್ರೇಯಾಂಕದಲ್ಲಿ ಅಗ್ರಸ್ಥಾನೀಯರಿಬ್ಬರ ಸ್ಥಾನ ಪಲ್ಲಟ ಸಾಧ್ಯತೆ

ರ‍್ಯಾಂಕಿಂಗ್: ಬುಮ್ರಾ, ಜೋ ರೂಟ್‌ಗೆ ಆತಂಕ

ದುಬೈ: ಇಂಗ್ಲೆಂಡ್‌ನ ಜೋ ರೂಟ್ ಮತ್ತು ಟೀಮ್ ಇಂಡಿಯಾದ ಜಸ್ಪ್ರೀತ್ ಬುಮ್ರಾ ಅವರು ಕ್ರಮವಾಗಿ ಟೆಸ್ಟ್ ಬ್ಯಾಟಿಂಗ್ ಮತ್ತು ಬೌಲಿಂಗ್ ಶ್ರೇಯಾಂಕದಲ್ಲಿ ತಮ್ಮ ಅಗ್ರಸ್ಥಾನ ಕಳೆದುಕೊಳ್ಳುವ ಆತಂಕದಲ್ಲಿದ್ದಾರೆ. ಬುಧವಾರ ಪ್ರಕಟಗೊಂಡ ನೂತನ ಶ್ರೇಯಾಂಕದಲ್ಲಿ ಉಭಯ ಆಟಗಾರರೂ ರೇಟಿಂಗ್ ಪಾಯಿಂಟ್‌ಗಳನ್ನು ಕಳೆದುಕೊಂಡಿದ್ದಾರೆ.

ನೂತನ ಬ್ಯಾಟಿಂಗ್ ಶ್ರೇಯಾಂಕದಲ್ಲಿ ಹ್ಯಾರಿ ಬ್ರೂಕ್ ಅವರು ಮೂರು ಸ್ಥಾನಗಳ ಜಿಗಿತ ಸಾಧಿಸಿ ಎರಡನೇ ಸ್ಥಾನಕ್ಕೇರಿದ್ದಾರೆ. ಅಗ್ರಸ್ಥಾನದಲ್ಲಿರುವ ಜೋ ರೂಟ್ (867) ಅವರಿಗಿಂತ 21 ಅಂಕದ ಹಿನ್ನಡೆಯಲ್ಲಿದ್ದಾರೆ. ಅತ್ತ ಆಸ್ಟ್ರೇಲಿಯಾ ವೇಗಿ ಮಿಚೆಲ್ ಸ್ಟಾರ್ಕ್ ಒಂದು ಮತ್ತು ಪಾಕಿಸ್ತಾನದ ನೊಮಾನ್ ಅಲಿ ಎರಡು ಸ್ಥಾನಗಳ ಪ್ರಗತಿಯೊಂದಿಗೆ 843 ಅಂಕದೊಂದಿಗೆ ಜಂಟಿ ಎರಡನೇ ಸ್ಥಾನದಲ್ಲಿದ್ದಾರೆ.

ಭಾರತದ ಟೆಸ್ಟ್ ಮತ್ತು ಏಕದಿನ ನಾಯಕ ಶುಭ್‌ಮನ್ ಗಿಲ್ ಟೆಸ್ಟ್ ಬ್ಯಾಟ್ಸ್‌ಮನ್‌ಗಳ ಶ್ರೇಯಾಂಕದಲ್ಲಿ ಮತ್ತೆ ಅಗ್ರ 10ರಲ್ಲಿ ಸ್ಥಾನ ಪಡೆದಿದ್ದಾರೆ. ಇತ್ತೀಚಿನ ಶ್ರೇಯಾಂಕದಲ್ಲಿ ಅಲೆಕ್ಸ್ ಕ್ಯಾರಿ ನಾಲ್ಕು ಸ್ಥಾನ ಕುಸಿತ ಕಂಡ ನಂತರ ಈ ಬದಲಾವಣೆ ಕಂಡಿದೆ. ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಮೆಲ್ಬೋರ್ನ್ ಟೆಸ್ಟ್‌ನ ಎರಡು ಇನ್ನಿಂಗ್ಸ್‌ಗಳಲ್ಲಿ 20 ಮತ್ತು ನಾಲ್ಕು ರನ್ ಗಳಿಸಿದ್ದರು.

ಆ್ಯಷಸ್ ಸರಣಿಯ 4ನೇ ಟೆಸ್ಟ್‌ನಲ್ಲಿ ನಾಲ್ಕು ವಿಕೆಟ್‌ಗಳನ್ನು ಕಬಳಿಸಿದ ಆಸ್ಟ್ರೇಲಿಯಾದ ವೇಗಿ ಮಿಚೆಲ್ ಸ್ಟಾರ್ಕ್ ಒಂದು ಸ್ಥಾನ ಭಡ್ತಿ ಪಡೆದು ಜಂಟಿ ಎರಡನೇ ಸ್ಥಾನಕ್ಕೆ ಏರಿದ್ದಾರೆ. 879 ರೇಟಿಂಗ್ ಹೊಂದಿರುವ ಭಾರತದ ಜಸ್ಪ್ರೀತ್ ಬುಮ್ರಾ ಅವರ ನಂತರದಲ್ಲಿದ್ದಾರೆ. ಬಾಕ್ಸಿಂಗ್ ಡೇ ಟೆಸ್ಟ್‌ನ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದ ಜೋಶ್ ಟಂಗ್, ಮೊದಲ ಇನ್ನಿಂಗ್ಸ್‌ನಲ್ಲಿ ಐದು ಮತ್ತು 2ನೇ ಇನ್ನಿಂಗ್ಸ್‌ನಲ್ಲಿ ಎರಡು ವಿಕೆಟ್‌ಗಳನ್ನು ಪಡೆದ ನಂತರ 30ನೇ ಸ್ಥಾನಕ್ಕೆ ತಲುಪಿದ್ದಾರೆ.

ನ್ಯೂಜಿಲೆಂಡ್ ವಿರುದ್ಧದ ಏಕದಿನ ಸರಣಿಯ ತಂಡದಲ್ಲಿ ಶಮಿಗೆ ಅವಕಾಶ ಹೆಚ್ಚು

ಮೊಹಮ್ಮದ್ ಶಮಿ ಆಯ್ಕೆ ಸಾಧ್ಯತೆ

ಮುಂಬೈ: ಕಳೆದ ಮಾರ್ಚ್‌ನಲ್ಲಿ ನಡೆದ ಐಸಿಸಿ ಚಾಂಪಿಯನ್ಸ್ ಟ್ರೋಫಿ ಫೈನಲ್‌ನಲ್ಲಿ ಆಡಿದ ನಂತರ ಭಾರತ ಪರ ಯಾವುದೇ ಅಂತಾರಾಷ್ಟ್ರೀಯ ಪಂದ್ಯವನ್ನು ಆಡದ ವೇಗದ ಬೌಲರ್ ಮೊಹಮ್ಮದ್ ಶಮಿ ಅವರನ್ನು ನ್ಯೂಜಿಲ್ಯಾಂಡ್ ವಿರುದ್ಧದ ತವರಿನ ಏಕದಿನ ಸರಣಿಗೆ ಆಯ್ಕೆ ಮಾಡುವ ಸಾಧ್ಯತೆ ಅಧಿಕವಾಗಿದೆ.

ನ್ಯೂಜಿಲೆಂಡ್ ವಿರುದ್ಧದ ಏಕದಿನ ಸರಣಿಗೆ ಜಸ್ಪ್ರೀತ್ ಬುಮ್ರಾ ಅವರಿಗೆ ವಿಶ್ರಾಂತಿ ನೀಡಲಾಗುತ್ತಿದ್ದು, ಅವರ ಅನುಪಸ್ಥಿತಿಯಲ್ಲಿ, ತವರಿನಲ್ಲಿ ನಡೆಯಲಿರುವ ಸರಣಿಯಲ್ಲಿ ಭಾರತದ ವೇಗದ ಬೌಲಿಂಗ್ ದಾಳಿಯನ್ನು ಶಮಿ ಮುನ್ನಡೆಸಲಿದ್ದಾರೆ ಎನ್ನಲಾಗುತ್ತಿದೆ. ಐಸಿಸಿಯ ವೈಟ್‌ಬಾಲ್ ಟೂರ್ನಮೆಂಟ್‌ಗಳಲ್ಲಿ ಭಾರತದ ಪರ ಅತೀ ಹೆಚ್ಚು ವಿಕೆಟ್ ಪಡೆದಿರುವ ಶಮಿ, ಜನವರಿ 11ರಂದು ವಡೋದರಾದಲ್ಲಿ ಪ್ರಾರಂಭವಾಗುವ ನ್ಯೂಜಿಲೆಂಡ್ ವಿರುದ್ಧದ ಮೂರು ಏಕದಿನ ಪಂದ್ಯಗಳಿಗೆ ಭಾರತೀಯ ತಂಡದಲ್ಲಿ ಸ್ಥಾನ ಪಡೆಯುವ ಸಾಧ್ಯತೆ ಇದೆ.

2023ರ ಏಕದಿನ ವಿಶ್ವಕಪ್‌ನಲ್ಲಿ ಅತೀ ಹೆಚ್ಚು ವಿಕೆಟ್ ಪಡೆದ ಬೌಲರ್ ಎಂಬ ಹೆಗ್ಗಳಿಕೆಗೆ ಪಾತ್ರರಾದ ಶಮಿ, ಜೂನ್ 2023, ಜೂನ್‌ನಲ್ಲಿ ಓವಲ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧದ 2023ರ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ನಂತರ ಭಾರತ ಪರ ಯಾವುದೇ ಟೆಸ್ಟ್ ಪಂದ್ಯವನ್ನು ಆಡಿಲ್ಲ ಮತ್ತು ಅವರು ಕೊನೆಯ ಪಂದ್ಯವನ್ನು ಫೆಬ್ರವರಿ 2, 2025, ಫೆಬ್ರವರಿಯಲ್ಲಿ ಇಂಗ್ಲೆಂಡ್ ವಿರುದ್ಧ ಆಡಿದ್ದರು.

ವಿಜಯ್ ಹಜಾರೆ ಟ್ರೋಫಿಯ ಮೂರು ಪಂದ್ಯಗಳಲ್ಲಿ ಅವರು ಆರು ವಿಕೆಟ್‌ಗಳನ್ನು ಪಡೆದಿದ್ದಾರೆ. ಮತ್ತು 2025ರ ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟೂರ್ನಿಯಲ್ಲಿ ಬಂಗಾಳ ಪರ ಏಳು ಎಲೈಟ್ ಗ್ರೂಪ್‌0ಸಿ ಪಂದ್ಯಗಳಲ್ಲಿ 16 ವಿಕೆಟ್ ಗಳಿಸಿದ್ದರು.

2024 ವಿಶ್ವಕಪ್‌ನಲ್ಲಿ ಸೆಮಿ ಫೈನಲ್ ಪ್ರವೇಶಿಸಿದ್ದ ಅಫಘಾನಿಸ್ತಾನ | ತಂಡಕ್ಕೆ ರಶೀದ್ ಖಾನ್ ನಾಯಕ

ವಿಶ್ವಕಪ್‌ಗೆ ಅಫ್ಘಾನಿಸ್ತಾನ ತಂಡ ಪ್ರಕಟ

ಕಾಬುಲ್: ಭಾರತ ಮತ್ತು ಲಂಕಾದಲ್ಲಿ ನಡೆಯಲಿರುವ ಐಸಿಸಿ ಪುರುಷರ ಟಿ20 ವಿಶ್ವಕಪ್‌ಗೆ ಅಫ್ಘಾನಿಸ್ತಾನವು 15 ಸದಸ್ಯರ ತಂಡವನ್ನು ಬುಧವಾರ ಪ್ರಕಟಿಸಿದೆ. ಸ್ಪಿನ್ ಆಲ್‌ರೌಂಡರ್ ರಶೀದ್ ಖಾನ್ ತಂಡವನ್ನು ಮುನ್ನಡೆಸಲಿದ್ದು, ಗುಲ್ಬದಿನ್ ನೈಬ್ ಮತ್ತು ನವೀನ್ ಉಲ್ ಹಕ್ ಆಫ್ಘಾನ್ ತಂಡಕ್ಕೆ ಮರಳಿದ್ದಾರೆ.

2024ರ ಟಿ20 ವಿಶ್ವಕಪ್‌ನಲ್ಲಿ ಅಫ್ಘಾನಿಸ್ತಾನವು ಅತ್ಯುತ್ತಮ ತಂಡವಾಗಿತ್ತಲ್ಲದೆ, ಸೆಮಿಫೈನಲ್ ತಲುಪಿತ್ತು. ವಿಶ್ವಕಪ್‌ಗೂ ಮುನ್ನ ಆಫ್ಘಾನ್ ತಂಡವು ಜನವರಿ 19ರಿಂದ 22ರ ವರೆಗೆ ಯುಎಇಯಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಮೂರು ಪಂದ್ಯಗಳ ಟಿ 20 ಸರಣಿಯಲ್ಲಿ ಭಾಗವಹಿಸಲಿದೆ. ಅಫ್ಘಾನಿಸ್ತಾನ ತಂಡವು ನ್ಯೂಜಿಲೆಂಡ್, ದಕ್ಷಿಣ ಆಫ್ರಿಕಾ, ಯುನೈಟೆಡ್ ಅರಬ್ ಎಮಿರೇಟ್ಸ್ ಮತ್ತು ಕೆನಡಾ ಜೊತೆಗೆ ಡಿ ಗುಂಪಿನಲ್ಲಿ ಸ್ಥಾನ ಪಡೆದಿದೆ.

ಅಫ್ಘಾನಿಸ್ತಾನ ತಂಡ: ರಶೀದ್ ಖಾನ್ (ನಾಯಕ), ನೂರ್ ಅಹ್ಮದ್, ಅಬ್ದುಲ್ಲಾ ಅಹ್ಮದೈ ಸೇದಿಕುಲ್ಲಾ ಅಟಲ್, ಫಜಲ್ಹಕ್ ಫಾರೂಕಿ, ರಹಮಾನುಲ್ಲಾ ಗುರ್ಬಾಜ್, ನವೀನ್ ಉಲ್ ಹಕ್, ಮೊಹಮ್ಮದ್ ಇಶಾಕ್, ಶಾಹಿದುಲ್ಲಾ ಕಮಾಲ್, ಮೊಹಮ್ಮದ್ ನಬಿ, ಗುಲ್ಬದಿನ್ ನೈಬ್, ಅಜ್ಮತುಲ್ಲಾ ಒಮರ್ಜಾಯ್, ಮುಜೀಬ್ ಉರ್ ರೆಹಮಾನ್, ದರ್ವಿಶ್ ರಸೂಲಿ, ಇಬ್ರಾಹಿಂ ಜದ್ರಾನ್.

ಬೆಂಗಳೂರಿನಲ್ಲಿ ಜನ ನಾಯಕ ಟಿಕೆಟ್‌ಗೆ ಬೇಡಿಕೆ

ದಳಪತಿ ವಿಜಯ್ ತಮ್ಮ ಕೊನೆಯ ಸಿನಿಮಾಕ್ಕೆ ಜನ ನಾಯಗನ್ ಎಂದು ಹೆಸರಿಟ್ಟಿದ್ದಾರೆ. ವಿಜಯ್ ರಾಜಕೀಯಕ್ಕೆ ಪ್ರವೇಶಿಸಿದ್ದು, ಸಿನಿಮಾ ಅನ್ನು ತಮ್ಮ ರಾಜಕೀಯ ಅಜೆಂಡಕ್ಕೆ ಪ್ರಚಾರ ಕೊಡಲು ಟೂಲ್ ಆಗಿ ಬಳಸುತ್ತಿದ್ದಾರೆ, ಸಿನಿಮಾ ಜನವರಿ 9ರಂದು ಬಿಡುಗಡೆ ಆಗಲಿದೆ. ಸಿನಿಮಾದ ಅಡ್ವಾನ್ಸ್ ಬುಕಿಂಗ್ ಈಗಾಗಲೇ ಆರಂಭವಾಗಿದೆ. ಜನವರಿ 9ರಂದು ಬೆಳಿಗ್ಗೆ 6:30ಕ್ಕೆ ವಿಶೇಷ ಶೋ ಪ್ರದರ್ಶನವಾಗುತ್ತಿದ್ದು, ಬೆಂಗಳೂರಿನಲ್ಲೂ ಮುಂಗಡ ಬುಕಿಂಗ್ ಓಪನ್ ಆಗಿದ್ದು, ಬೆಂಗಳೂರಿನಲ್ಲಿ ಪ್ರತಿ ಟಿಕೆಟ್ ದರ 1000 ರೂಪಾಯಿಗಳಿಗೂ ಹೆಚ್ಚಿದೆ. ಪ್ರಸ್ತುತ ಸಿಂಗಲ್ ಸ್ಕ್ರೀನ್ ಚಿತ್ರಮಂದಿರಗಳಲ್ಲಿ ಮಾತ್ರವೇ ಮುಂಗಡ ಬುಕಿಂಗ್ ಓಪನ್ ಆಗಿದ್ದು, ಸಿಂಗಲ್ ಸ್ಕ್ರೀನ್‌ಗಳಲ್ಲಿಯೇ ಟಿಕೆಟ್ ದರ 800ರಿಂದ ಪ್ರಾರಂಭವಾಗುತ್ತಿದ್ದು, ಕೆಲವೆಡೆ 1200 ರು.ಗಳು ಸಹ ನಿಗದಿಪಡಿಸಲಾಗಿದೆ.

ಮಧ್ಯಮ ವರ್ಗದ ಚಿತ್ರಮಂದಿರಗಳು ಎನಿಸಿಕೊಂಡಿದ್ದ ವೀರೇಶ್, ನವರಂಗ್ ನಂತಹ ಚಿತ್ರಮಂದಿರಗಳಲ್ಲಿಯೂ ಸಹ ಜನ ನಾಯಗನ್ ಸಿನಿಮಾದ ಟಿಕೆಟ್‌ನ ಆರಂಭಿಕ ದರವೇ 800 ರು., ಬಾಲ್ಕನಿ ಟಿಕೆಟ್ ದರ 1000 ರು. ಮಲ್ಟಿಪ್ಲೆಕ್ಸ್‌ಗಳಲ್ಲಿ ಮುಂಗಡ ಬುಕಿಂಗ್ ಇನ್ನೂ ಆರಂಭ ಆಗಿಲ್ಲ, ಸಿಂಗಲ್ ಸ್ಕ್ರೀನ್‌ಗಳಲ್ಲಿಯೇ 1000 ರು.ಇರುವ ಟಿಕೆಟ್ ದರ ಮಲ್ಟಿಪ್ಲೆಕ್ಸ್‌ಗಳಲ್ಲಿ ದುಪ್ಪಟ್ಟಾಗುವ ಸಾಧ್ಯತೆ ಇದೆ. ಒಟ್ಟಾರೆ ವಿಜಯ್ ಬೆಂಗಳೂರಿನ ಸಿನಿಮಾ ಪ್ರೇಮಿಗಳ ಮನಸ್ಸಿಗೆ ಕನ್ನ ಹಾಕಲು ಬರುವಂತಿದೆ.

ಚೆನ್ನೈ, ಹೈದರಾಬಾದ್‌ನಲ್ಲಿ ಇನ್ನೂ ಮುಂಗಡ ಬುಕಿಂಗ್ ಆರಂಭವೇ ಆಗಿಲ್ಲ. ಚೆನ್ನೈನಲ್ಲಿ ತೀರ ಹೆಚ್ಚೆಂದರೆ 300 ರು. ವಿಶೇಷ ಶೋಗೆ ಹಾಗೂ 100 ರು. ಸಾಮಾನ್ಯ ಶೋಗೆ ಬೆಲೆ ಇರಲಿದೆ. ವಿಜಯ್ ಅವರ ಈ ಹಿಂದಿನ ಸಿನಿಮಾಗಳಿಗೆ ಚೆನ್ನೈನಲ್ಲಿ ಇಷ್ಟೆ ಟಿಕೆಟ್ ಬೆಲೆ ಇತ್ತು. ಹೈದರಾಬಾದ್‌ನಲ್ಲಿಯೂ ಸಹ ಇದೇ ಪರಿಸ್ಥಿತಿ ಇರಲಿದೆ. ಆದರೆ ಬೆಂಗಳೂರಿನಲ್ಲಿ ಮಾತ್ರ ನಾಲ್ಕು ಪಟ್ಟು ಹೆಚ್ಚು ಬೆಲೆಗೆ ಟಿಕೆಟ್ ಮಾರಾಟ ಮಾಡಲಾಗುತ್ತಿದೆ.

ಟಾಕ್ಸಿಕ್‌ನಲ್ಲಿ ಗಂಗಾ ಆಗಿ ನಯನತಾರಾ

ರಾಕಿಂಗ್‌ಸ್ಟಾರ್ ಯಶ್ ಅಭಿನಯದ ಬಹುನಿರೀಕ್ಷಿತ ಚಿತ್ರ 'ಟಾಕ್ಸಿಕ್: ಎ ಫೇರಿಟೇಲ್ ಫಾರ್ ಗ್ರೋನ್ ಅಪ್ಸ್' ಸಿನಿಮಾ ಮಾರ್ಚ್ 19ರಂದು ತೆರೆಗೆ ಬರಲು ಸಜ್ಜಾಗುತ್ತಿದ್ದು, ಚಿತ್ರದ ಮೇಲಿನ ಕುತೂಹಲ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಈ ಚಿತ್ರದ ಒಂದೊಂದೇ ಪಾತ್ರಗಳನ್ನು ಪರಿಚಯಿಸುತ್ತಿರುವ ಚಿತ್ರತಂಡ, ಇದೀಗ ನಟಿ ನಯನತಾರಾ ಅವರ 'ಗಂಗಾ' ಪಾತ್ರದ ಪೋಸ್ಟರ್ ಅನ್ನು ರಿಲೀಸ್ ಮಾಡಿದೆ. ಗಂಗಾ ಪಾತ್ರವು 'ಟಾಕ್ಸಿಕ್' ಸಿನಿಮಾದಲ್ಲಿನ ಪ್ರಬಲ ಪಾತ್ರ ಎಂದು ಹೇಳಲಾಗಿದೆ.

ಸ್ಟಾರ್ ನಟಿಯರಲ್ಲಿ ಒಬ್ಬರಾಗಿ ಗುರುತಿಸಿಕೊಂಡಿರುವ ನಯನತಾರಾ ಅವರು 'ಟಾಕ್ಸಿಕ್' ಮೂಲಕ ಕನ್ನಡಕ್ಕೆ ಮರಳಿದ್ದಾರೆ, ಈ ಹಿಂದೆ ಉಪೇಂದ್ರ ಅವರ 'ಸೂಪರ್' ಸಿನಿಮಾದಲ್ಲಿ ನಯನತಾರಾ ನಟಿಸಿದ್ದರು. ಗಂಗಾ ಪಾತ್ರದಲ್ಲಿ ನಯನತಾರಾ ಅವರ ರೂಪವು ಕಣ್ಮನ ಸೆಳೆಯುವಂತಿದೆ, ಜತೆಗೆ ಅವರ ಭಯರಹಿತ ವ್ಯಕ್ತಿತ್ವ ಈ ಫಸ್ಟ್‌ಲುಕ್‌ನಲ್ಲಿ ಎದ್ದು ಕಾಣುತ್ತಿದೆ. ಕೈಯಲ್ಲಿ ಗನ್ ಹಿಡಿದು ಅವರು ನೀಡಿರುವ ಪೋಸ್ಟ್ ಆಕರ್ಷಕವಾಗಿದೆ.

'ನಯನತಾರಾ ಕಳೆದ ಎರಡು ದಶಕಗಳಿಂದ ಅದ್ಭುತ ವೃತ್ತಿಜೀವನ ಹೊಂದಿರುವ ಪ್ರಖ್ಯಾತ ತಾರೆ. ಆದರೆ ಪ್ರೇಕ್ಷಕರು ನೋಡಲು ಕಾಯುತ್ತಿದ್ದ ಅವರೊಳಗಿನ ಒಂದು ವಿಶೇಷ ಪ್ರತಿಭೆಯನ್ನು 'ಟಾಕ್ಸಿಕ್'ನಲ್ಲಿ ಕಾಣಲಿದ್ದಾರೆ. ನಯನತಾರಾ ಅವರನ್ನು ಹಿಂದೆಂದೂ ತೋರಿಸದ ರೀತಿಯಲ್ಲಿ ತೆರೆಯ ಮೇಲೆ ತರಬೇಕೆಂಬುದು ನನ್ನ ಆಸೆಯಾಗಿತ್ತು. ಚಿತ್ರೀಕರಣ ಸಾಗುತ್ತಿದ್ದಂತೆ, ಅವರ ಸ್ವಂತ ವ್ಯಕ್ತಿತ್ವವು ಪಾತ್ರದ ಆತ್ಮಕ್ಕೆ ಎಷ್ಟು ಹತ್ತಿರವಾಗಿದೆ ಎಂಬುದು ನನಗೆ ಅರಿವಾಯಿತು' ಎಂದು ನಿರ್ದೇಶಕಿ ಗೀತು ಹೇಳಿದ್ದಾರೆ.

'ನಯನತಾರಾ ಅವರದ್ದು ಕೇವಲ ಅಭಿನಯವಾಗಿರಲಿಲ್ಲ, ಬದಲಾಗಿ ಪಾತ್ರದೊಂದಿಗಿನ ಸಮನ್ವಯವಾಗಿತ್ತು. ಅವರ ಪ್ರಾಮಾಣಿಕತೆ, ಸಂಯಮ ಮತ್ತು ಭಾವನಾತ್ಮಕ ಸ್ಪಷ್ಟತೆ ಆ ಪಾತ್ರಕ್ಕೆ ಜೀವ ತುಂಬಿವೆ, ಈ ಮೂಲಕ ನನಗೆ ಕೇವಲ ಒಬ್ಬ ಅದ್ಭುತ 'ಗಂಗಾ' ಮಾತ್ರ ಸಿಗಲಿಲ್ಲ, ಅನಿರೀಕ್ಷಿತವಾಗಿ ಒಬ್ಬ ಆತ್ಮೀಯ ಗೆಳತಿಯೂ ಸಿಕ್ಕಳು' ಎಂದು ಗೀತು ಮೋಹನ್‌ದಾಸ್ ಹೊಗಳಿದ್ದಾರೆ.

ಈಗಾಗಲೇ ಕಿಯಾರಾ ಅಡ್ವಾಣಿ ಮತ್ತು ಹುಮಾ ಖುರೇಷಿ ಅವರ ಪಾತ್ರಗಳ ಪರಿಚಯವನ್ನು ಮಾಡಲಾಗಿದೆ. ಇದೀಗ ನಯನತಾರಾ ಅವರ ಫಸ್ಟ್ ಲುಕ್ ರಿಲೀಸ್ ಮಾಡಲಾಗಿದೆ. ಮುಂದಿನ ಸರದಿ ಯಾರದ್ದು ಎಂಬ ಪ್ರಶ್ನೆ ಅಭಿಮಾನಿಗಳದ್ದಾಗಿದೆ.

ಜನವರಿ 8ರಂದು ಯಶ್ ಅವರ ಹುಟ್ಟುಹಬ್ಬ ಇರುವುದರಿಂದ, ಅಂದು ಏನಾದರೂ 'ಟಾಕ್ಸಿಕ್' ಚಿತ್ರದ ವಿಶೇಷ ವಿಷಯ ರಿಲೀಸ್ ಆಗಲಿದೆ ಎಂಬ ನಿರೀಕ್ಷೆಯಲ್ಲಿದ್ದಾರೆ ರಾಕಿ ಭಾಯ್ ಫ್ಯಾನ್ಸ್.

ಕೆವಿಎನ್ ಪ್ರೊಡಕ್ಷನ್ಸ್ ಮತ್ತು ಮಾನ್‌ಸ್ಟರ್ ಮೈಂಡ್ ಕ್ರಿಯೇಷನ್ಸ್ ಬ್ಯಾನರ್ ಅಡಿಯಲ್ಲಿ ವೆಂಕಟ್ ಕೆ. ನಾರಾಯಣ ಹಾಗೂ ಯಶ್ ನಿರ್ಮಿಸಿರುವ 'ಟಾಕ್ಸಿಕ್' ಚಿತ್ರವು ಈದ್, ಯುಗಾದಿ ಪ್ರಯುಕ್ತ ಮಾರ್ಚ್ 19ರಂದು ಅದ್ದೂರಿಯಾಗಿ ವಿಶ್ವಾದ್ಯಂತ ತೆರೆಕಾಣಲಿದೆ.

ಫಾದರ್ ಥೀಮ್ ವಿಡಿಯೊ ಸಾಂಗ್

ನಿರ್ದೇಶಕ ಆರ್ ಚಂದ್ರು ಅವರ ಆರ್.ಸಿ ಸ್ಟುಡಿಯೋಸ್ ನಿರ್ಮಾಣ ಮಾಡಿರುವ 'ಫಾದರ್' ಚಿತ್ರದ ಎಲ್ಲಾ ಕೆಲಸಗಳು ಮುಗಿದಿದ್ದು, ಈ ಸಿನಿಮಾ ಬಿಡುಗಡೆಗೆ ಸಿದ್ಧವಾಗಿದೆ. ಸದ್ಯ 'ಫಾದರ್' ಸಿನಿಮಾದ ಥೀಮ್ ವಿಡಿಯೋ ಸಾಂಗ್‌ವೊಂದನ್ನು ರಿಲೀಸ್ ಮಾಡಲಾಗಿದೆ. ಅದನ್ನು ಬಿಡುಗಡೆ ಮಾಡಿದ್ದು ಆರ್ ಚಂದ್ರು ಅವರ ತಂದೆ ಎಂಬುದು ವಿಶೇಷ.

'ಫಾದರ್' ಎಂದಾಗ ಪ್ರತಿಯೊಬ್ಬರಿಗೂ ನೆನಪಾಗೋದೇ ಅಪ್ಪ, ಬಾಲ್ಯದ ನೆನಪು, ನಮ್ಮ ಬದುಕು ರೂಪಿಸುವ ಜೀವ ಅಪ್ಪ, ಆ ಕಥಾಹಂದರ ಇಟ್ಟುಕೊಂಡು ಆರ್. ಚಂದ್ರು ಸಿನಿಮಾ ಮಾಡಿದ್ದಾರೆ. ಅಪ್ಪ-ಮಗನ ಬಾಂಧವ್ಯ ತಿಳಿಸಲು 'ಫಾದರ್' ಸಿನಿಮಾ ನಿರ್ಮಾಣ ಮಾಡಿದ್ದಾರೆ.

ಈ ಸಿನಿಮಾ ಭಾವುಕ ಪಯಣಕ್ಕೆ ಕರೆದೊಯ್ಯುವ, ಕಣ್ಣಂಚಲ್ಲಿ ನೀರು ತರಿಸುವ, ಹೃದಯದ ಬಡಿತ ಹೆಚ್ಚಿಸುವ, ಅಪ್ಪನ ಬೆಲೆ ತಿಳಿಸುವ, ಚಿತ್ರ ಆಗಲಿದೆ ಎನ್ನುವ ಸೂಚನೆಯೇ ಈ ಥೀಮ್ ವಿಡಿಯೋ. ತಂದೆಯ ಪಾತ್ರದಲ್ಲಿ ಪ್ರಕಾಶ್ ರಾಜ್, ಮಗನ ಪಾತ್ರದಲ್ಲಿ ಡಾರ್ಲಿಂಗ್ ಕೃಷ್ಣ ನಟಿಸಿರುವುದರಿಂದ ಈ ಸಿನಿಮಾ ಸಾಕಷ್ಟು ನಿರೀಕ್ಷೆ ಹುಟ್ಟಿಸಿದೆ ಎಂದು ಚಿತ್ರತಂಡ ಹೇಳಿಕೊಂಡಿದೆ.

ಕೃಷ್ಣಗೆ ಅಮೃತಾ ನಾಯಕಿ: ಲವ್ ಮಾಕ್ಟೆಲ್ ಬಳಿಕ ಡಾರ್ಲಿಂಗ್ ಕೃಷ್ಣ ಹಾಗೂ ಅಮೃತಾ ಅಯ್ಯಂಗಾರ್ ಮತ್ತೊಮ್ಮೆ 'ಫಾದರ್' ಸಿನಿಮಾಕ್ಕಾಗಿ ಜತೆಯಾಗಿದ್ದಾರೆ. 'ಟಗರು ಪಲ್ಯ' ಖ್ಯಾತಿಯ ನಟ ನಾಗಭೂಷಣ್ ಕೂಡ ಇದರಲ್ಲಿ ಮುಖ್ಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. 'ಕೌಸಲ್ಯ ಸುಪ್ರಜಾ ರಾಮ' ಸಿನಿಮಾದಲ್ಲಿ ಡಾರ್ಲಿಂಗ್ ಕೃಷ್ಣ ಮತ್ತು ನಾಗಭೂಷಣ್ ಒಟ್ಟಿಗೇ ನಟಿಸಿದ್ದು, ಈ ಸಿನಿಮಾವನ್ನು ವಿವಿಧ ಭಾಷೆಗಳಲ್ಲಿ ರಿಲೀಸ್ ಮಾಡಲು ಚಿತ್ರತಂಡ ಸಿದ್ಧತೆ ಆರಂಭಿಸಿದೆ.

'ಫಾದರ್' ಸಿನಿಮಾವನ್ನು ಮೈಸೂರು, ಧರ್ಮಸ್ಥಳ, ಮಂಗಳೂರು, ಬೆಂಗಳೂರು ಹಾಗೂ ವಾರಣಾಸಿಯಲ್ಲಿ ಚಿತ್ರೀಕರಣ ಮಾಡಲಾಗಿದೆ. ಈ ಚಿತ್ರಕ್ಕೆ ರಾಜಮೋಹನ್ ನಿರ್ದೇಶನ ಮಾಡಿದ್ದು, ಸುಜ್ಞಾನ್ ಛಾಯಾಗ್ರಹಣ ಮಾಡಿದ್ದಾರೆ. ನಕುಲ್ ಅಭಯಂಕರ್ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ. ಈ ತಿಂಗಳಾಂತ್ಯದಲ್ಲಿ 'ಫಾದರ್' ಸಿನಿಮಾ ತೆರೆಗೆ ಬರುವ ನಿರೀಕ್ಷೆ ಇದೆ.

ಗೋವಾದಲ್ಲಿ ರಿಷಬ್ ಹೊಸ ವರ್ಷಾಚರಣೆ

ರಿಷಬ್ ಶೆಟ್ಟಿ ಅವರು ಕಾಂತಾರ-ಚಾಪ್ಟರ್ 1 ಸಿನಿಮಾ ರಿಲೀಸ್ ಆದ ಬಳಿಕ ಅವರು ಒಂದು ಬ್ರೇಕ್‌ನಲ್ಲಿ ಇದ್ದಾರೆ. ಅವರು ಪತ್ನಿ ಪ್ರಗತಿ ಶೆಟ್ಟಿ ಹಾಗೂ ಮಕ್ಕಳ ಜೊತೆ ಖಾಸಗಿ ಯಾಚ್‌ನಲ್ಲಿ ಗೋವಾ ಸಮುದ್ರ ವಿಹಾರ ಮಾಡಿದ್ದಾರೆ. ಈ ವೇಳೆ ಖುಷಿ ಖುಷಿಯಿಂದ ಫ್ಯಾಮಿಲಿ ಫೋಟೋ ಕ್ಲಿಕ್ಕಿಸಿಕೊಂಡಿದ್ದಾರೆ.

ರಿಷಬ್ ಕುಟುಂಬಕ್ಕೆ ತುಂಬಾನೇ ಪ್ರಾಮುಖ್ಯತೆ ನೀಡುತ್ತಾರೆ. ಸಮಯ ಸಿಕ್ಕಾಗ ಅವರು ಕುಟುಂಬದ ಜೊತೆ ಸಮಯ ಕಳೆಯಲು ಇಷ್ಟಪಡುತ್ತಾರೆ. ಈಗ ಕಾಂತಾರ-ಚಾಪ್ಟರ್ 1 ಯಶಸ್ಸಿನ ಬಳಿಕ ಹಾಯಾಗಿ ಸುತ್ತಾಡಿಕೊಂಡಿದ್ದಾರೆ.

ಹೊಸ ವರ್ಷದ ಸಂದರ್ಭದಲ್ಲಿ ಎಲ್ಲರೂ ಗೋವಾಗೆ ತೆರಳಲು ಇಷ್ಟಪಡುತ್ತಾರೆ. ಅಲ್ಲಿ ಅದ್ದೂರಿಯಾಗಿ ಹೊಸ ವರ್ಷ ಆಚರಿಸುತ್ತಾರೆ. ಸೆಲೆಬ್ರಿಟಿಗಳು ಕೂಡ ಇದಕ್ಕೆ ಹೊರತಾಗಿಲ್ಲ. ರಿಷಬ್ ಅವರು ವರ್ಷಾಂತ್ಯದ ಸಂದರ್ಭದಲ್ಲಿ ಗೋವಾದಲ್ಲೇ ಇದ್ದು, ಅಲ್ಲಿ ಖುಷಿಯಾಗಿರುವ ಫೋಟೋವನ್ನು ಹಂಚಿಕೊಂಡಿದ್ದಾರೆ.

ಪ್ರಗತಿ ಶೆಟ್ಟಿ ಅವರು ತಮ್ಮ ಪತಿ ರಿಷಬ್ ಅವರನ್ನು ಬೆಂಬಲಿಸುತ್ತಾ ಬರುತ್ತಿದ್ದು, ಕಾಸ್ಟ್ಯೂಮ್ ಡಿಸೈನರ್ ಆಗಿದ್ದಾರೆ. ಕಾಂತಾರ-ಚಾಪ್ಟರ್ 1 ಚಿತ್ರಕ್ಕೆ ಅವರೇ ವಸ್ತ್ರವಿನ್ಯಾಸ ಮಾಡಿದ್ದು, ಸಾಕಷ್ಟು ಮೆಚ್ಚುಗೆ ಸಿಕ್ಕಿದೆ.

ಪೈರಸಿ ವಿರುದ್ಧ ಜಗ್ಗೇಶ್ ಗರಂ

ಇತ್ತೀಚೆಗೆ ಪೈರಸಿ ಮಾಡುವವರ ಕಾಟ ಹೆಚ್ಚಾಗಿದೆ. ಮಾರ್ಕ್ ಸಿನಿಮಾ ವೇಳೆ ಕಿಚ್ಚ ಸುದೀಪ್ ಕೂಡ ಈ ಬಗ್ಗೆ ಧ್ವನಿ ಎತ್ತಿದ್ದರು. ಇದೀಗ ನವರಸ ನಾಯಕ ಜಗ್ಗೇಶ್ ಒಂದು ಹೆಜ್ಜೆ ಮುಂದಿಟ್ಟಿದ್ದಾರೆ. ಅವರು ಇನ್‌ಸ್ಟಾಗ್ರಾಮ್ ಲೈವ್ ಬಂದು ಈ ಮಾಹಿತಿ ನೀಡಿದ್ದು, ಸಿನಿಮಾ ಪೈರಸಿ ಮಾಡುವ ಕಿಡಿಗೇಡಿ ಒಬ್ಬನನ್ನು ಪೊಲೀಸರಿಗೆ ಒಪ್ಪಿಸಿದ್ದಾರೆ ಎಂದಿದ್ದಾರೆ. ಪೈರಸಿಯಿಂದ ಚಿತ್ರರಂಗಕ್ಕೆ ಹೇಗೆ ನಷ್ಟವಾಗುತ್ತಿದೆ ಎಂದು ಮಾತಿನಲ್ಲಿ ವಿವರಿಸಿದ್ದಾರೆ, ಅಲ್ಲದೆ ಈ ಪೈರಸಿ ಜಾಲ ಭೇದಿಸಿದ್ದು ಹೇಗೆ ಎಂದು ಮಾಹಿತಿ ನೀಡಿದ್ದಾರೆ.

ಇನ್‌ಸ್ಟಾ ಲೈವ್ ಹೇಳಿಕೆ: 'ನಿರ್ಮಾಪಕರು ಸಾಲ ಮಾಡಿ ಸಿನಿಮಾ ಮಾಡಿರುತ್ತಾರೆ, ನೂರಾರು ಜನರ ಶ್ರಮ ಚಿತ್ರದಲ್ಲಿರುತ್ತದೆ. ಆದರೆ ಸಿನಿಮಾ ಬಿಡುಗಡೆಯಾದ ಕೆಲವೇ ನಿಮಿಷಗಳಲ್ಲಿ ಪೈರಸಿ ಮಾಡುತ್ತಾರೆ. ಪೈರಸಿ ಅನ್ನೋದು ಕೊಲೆ ಅಥವಾ ಬ್ಯಾಂಕ್ ದರೋಡೆಗೆ ಸಮ' ಎಂದು ಜಗ್ಗೇಶ್ ಹೇಳಿದ್ದಾರೆ.

'ಸಿನಿಮಾಗಳನ್ನು ಕದಿಯುವವರಿಗೆ 3 ವರ್ಷ ಜೈಲು ಆಗುತ್ತದೆ, ಅದನ್ನು ಬೇರೆಯವರಿಗೂ ಫಾರ್ವರ್ಡ್ ಮಾಡಿದರೆ ಅವರೂ ಒಳಗೆ ಹೋಗುತ್ತಾರೆ, ಹಾಗಾಗಿಯೇ ಸಿನಿಮಾಗಳನ್ನು ಕದಿಯಬೇಡಿ. ಹಾಗೆ ಬಂದಿರುವ ಚಿತ್ರದ ಲಿಂಕ್ ಅನ್ನು ಫಾರ್ವರ್ಡ್ ಮಾಡ್ಬೇಡಿ' ಎಂದು ಜಗ್ಗೇಶ್ ಕೇಳಿಕೊಂಡಿದ್ದಾರೆ.

ಮೈಸೂರಿಗೆ ವರ್ಷವಿಡೀ ಕಾಡಿದ ವನ್ಯಜೀವಿ ಉಪದ್ರವ!

ಅರಣ್ಯ ಇಲಾಖೆಯ ನಿದ್ದೆಗೆಡಿಸಿದ ಮಾನವ -ಪ್ರಾಣಿಗಳ ಸಂಘರ್ಷ | ಆನೆ, ಹುಲಿ, ಚಿರತೆ ಹಾವಳಿ

ಕೆ.ಜೆ.ಲೋಕೇಶ್ ಬಾಬು, ಮೈಸೂರು

ಕ್ಯಾಲೆಂಡರ್ ಅನ್ವಯ 2025 ಕಳೆದು 2026ಕ್ಕೆ ಅಡಿಯಿಟ್ಟಾಯಿತು. 2025ರ ಆರಂಭದ ದಿನದಿಂದ ಮೊದಲ್ಗೊಂಡು ಕೊನೆಯ ದಿನದ ಅಂತಿಮ ಕ್ಷಣದವರೆಗಿನ 365 ದಿನಗಳಲ್ಲಿ ಈ ಜಗತ್ತು ನಾನಾ ಬಗೆಯ ಘಟನೆಗಳಿಗೆ ಸಾಕ್ಷಿಯಾಗಿದೆ. ಹುಟ್ಟು-ಸಾವು, ನೋವು-ನಲಿವು, ದುಃಖ-ದುಮ್ಮಾನ ಸೇರಿದಂತೆ ಎಲ್ಲ ಬಗೆಯ ಮಜಲುಗಳಿಗೆ ಸಾಕ್ಷಿಯಾದವರು ಕೋಟ್ಯಂತರ ಮಂದಿ. ಇಂತಹ ಸಂದರ್ಭದಲ್ಲಿ ಕಳೆದು ಹೋದ 365 ದಿನಗಳ ವರ್ಷವಿಡೀ ಮೈಸೂರು ಜಿಲ್ಲೆಯಲ್ಲಿ ನಡೆದ ಕಣ್ಣೆದುರಿಗಿನ ವಿದ್ಯಮಾನಗಳು ಹತ್ತು ಹಲವು..!

ಹಿನ್ನೋಟದತ್ತ ಕಿರುನೋಟ: ಅಂತಹ ಪ್ರಮುಖ ವಿದ್ಯಮಾನಗಳತ್ತ ಒಮ್ಮೆ ಹಿಂತಿರುಗಿ ಕಣ್ಣಾಡಿಸಿದರೆ ಪ್ರಮುಖವಾಗಿ ಕಂಡುಬರುವುದು ಮಾನವ ಹಾಗೂ ಪ್ರಾಣಿಗಳ ನಡುವಿನ ಸಂಘರ್ಷ. ಒಂದು ಕಡೆ ಪಶ್ಚಿಮ ಘಟ್ಟದ ಮಗ್ಗಲು, ಮತ್ತೊಂದು ಕಡೆ ನಾಗರಹೊಳೆ ರಾಷ್ಟ್ರೀಯ ಉದ್ಯಾನವನ, ಮಗದೊಂದು ಕಡೆ ಬಂಡೀಪುರ ರಾಷ್ಟ್ರೀಯ ಉದ್ಯಾನವನ, ಇನ್ನೊಂದು ಕಡೆ ಬಿಳಿಗಿರಿ ವನ್ಯಜೀವಿ ಧಾಮ ಸುತ್ತುವರೆದಿರುವ ಮೈಸೂರು ಜಿಲ್ಲೆಯಲ್ಲಿ ಕಾಡುಪ್ರಾಣಿಗಳ ಉಪದ್ರವ ಇಂದು, ನಿನ್ನೆಯದಲ್ಲ ಎನ್ನಬಹುದಾದರೂ, 2025ರಲ್ಲಿ ತುಸು ಹೆಚ್ಚೇ ಎನ್ನಬಹುದು. ಮಾತ್ರವಲ್ಲ, ಅದರಿಂದ ಆದ ಹಾನಿಯೂ ಅಧಿಕ ಎಂಬುದನ್ನು ದಾಖಲೆಗಳೇ ದೃಢೀಕರಿಸುತ್ತವೆ.

ಆನೆ, ಹುಲಿ, ಚಿರತೆ ಹಾವಳಿ: ನಿರೀಕ್ಷೆ ಮೀರಿ ಹೆಚ್ಚಿದ ಆನೆ, ಹುಲಿ ಹಾಗೂ ಚಿರತೆಗಳ ಸಂತತಿಯಿಂದ ಕಾಡಂಚಿನ ಗ್ರಾಮಗಳಲ್ಲಿ ನೆಮ್ಮದಿ ದೂರಾಗಿದೆ. ಆಳುವ ಮಂದಿಗೆ ಗ್ರಾಮದ ಜನರ ಗೋಳು ನರಿ ಕೂಗು ಗಿರಿ ಮುಟ್ಟಿತೇ ಎಂಬಂತಾಗಿದೆ. ಆದರೂ, ಸ್ವಾಭಿಮಾನಕ್ಕೆ ಕಟ್ಟುಬಿದ್ದು ಇದ್ದಲ್ಲಿಯೇ ಬದುಕು ಕಟ್ಟಿಕೊಳ್ಳುವ ಗ್ರಾಮೀಣ ಜನರ ಬದುಕಿನ ಮೇಲೆ ಕಾಡುಪ್ರಾಣಿಗಳ ಸವಾರಿ ನಡೆದೇ ಇದೆ.

ನಗರಕ್ಕೂ ನುಗ್ಗಿದ ವನ್ಯಜೀವಿ: ಕಾಡಂಚಿನ ಗ್ರಾಮಗಳಲ್ಲಿ ವರ್ಷವಿಡೀ ಕಾಣಿಸಿಕೊಂಡು ಉಪದ್ರವ ನೀಡುವ ಕ್ರೂರ ಪ್ರಾಣಿಗಳು ಇದೀ ಮೈಸೂರು ನಗರದ ಗಡಿಯೊಳಗೆ, ನಗರದ ಹೃದಯ ಭಾಗಕ್ಕೆ ಕೆಲವೇ ಕಿಮೀ ಅಂತರದಲ್ಲಿ ಕಾಣಿಸಿಕೊಳ್ಳುತ್ತಿರುವುದು ಪ್ರಾಣಿ ಹಾಗೂ ಮಾನವನ ನಡುವಣ ಸಂಘರ್ಷಕ್ಕೆ ಹೊಸದೊಂದು ಭಾಷ್ಯ ಬರೆದಿದೆ. ನಾಗರಹೊಳೆ ಮತ್ತು ಬಂಡೀಪುರ ಸಮೀಪದ ಕಾಡಂಚಿನ ಗ್ರಾಮಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಹುಲಿಗಳು ಇದೀಗ ಮೈಸೂರು ನಗರಕ್ಕೆ ಹೊಂದಿಕೊಂಡಿರುವ ಅಲೋಕ ಅರಮನೆ, ಆರ್‌ಎಂಪಿ, ಬೆಮೆಲ್ ಆವರಣದಲ್ಲಿ ಕಾಣಿಸಿಕೊಳ್ಳುವ ಮೂಲಕ 2025ನೇ ಹೊಸದೊಂದು ದಾಖಲೆ ಬರೆಯಿತು.

ಹುಲಿಗೆ ಮೂವರು ಬಲಿ: ಜಿಲ್ಲೆಯಲ್ಲಿ ಕೇವಲ ಒಂದೆರಡು ತಿಂಗಳ ಅಂತರದಲ್ಲೇ ಮೇಲಿಂದ ಮೇಲೆ ನಡೆದ ಹುಲಿ ದಾಳಿಯಿಂದ ಮೂವರು ಮೃತಪಟ್ಟು, ಒಬ್ಬರು ತೀವ್ರವಾಗಿ ಗಾಯಗೊಂಡರು. ಈ ವೇಳೆ ಜನರ ತಾಳ್ಮೆಯ ಕಟ್ಟೆಯೊಡೆಯಿತು. ಪರಿಣಾಮ, ಹುಲಿ ಸೆರೆ ಕಾರ್ಯಾಚರಣೆಗಿಳಿದ ಅರಣ್ಯ ಇಲಾಖೆಗೆ ಕೇವಲ ಮೂರು ತಿಂಗಳ ಅಂತರದಲ್ಲಿ ಸೆರೆಸಿಕ್ಕಿದ್ದು 30ಕ್ಕೂ ಹೆಚ್ಚು ಹುಲಿಗಳು.

ಮೋಜು ಮಸ್ತಿ ಗದ್ದಲ: ಗ್ರಾಮಗಳ ಅಂಚಿನಲ್ಲಿ ಹುಲಿಗಳು ಭಾರೀ ಪ್ರಮಾಣದಲ್ಲಿ ಕಾಣಿಸಿಕೊಳ್ಳುತ್ತಿರುವುದಕ್ಕೆ ಕಾರಣದ ಹುಡುಕಾಟ ನಡೆಸಿದ ವೇಳೆ ಹೊರಬಂದ ಫಲಿತಾಂಶವೇ ಕಾಡಿನೊಳಗಿನ ಮೋಜು ಮಸ್ತಿ ಎಂಬ ಅಂಶ. ಪರಿಣಾಮ, ಹಗಲು ಮುಗಿದು ರಾತ್ರಿ ಕಳೆಯುವುದರೊಳಗಾಗಿ ಸಫಾರಿ ನಿಷೇಧ ಆಜ್ಞೆ ಹೊರಬಿತ್ತು. ಕಾಡನ್ನೇ ನಂಬಿ ಕಾಸು ಮಾಡಲು ಹೊರಟಿದ್ದ ಮಂದಿಗೆ ಸರಕಾರದ ಈ ನಿರ್ಧಾರ ಮಗ್ಗಲ ಮುಳ್ಳಾಯಿತು. ಸಫಾರಿ ಪುನಾರಂಭಿಸಬೇಕು ಎಂದು ದೊಡ್ಡ ಪ್ರಮಾಣದಲ್ಲಿ ಕೂಗು ಎದ್ದಿತು. ಅದಕ್ಕೆ ಪರ್ಯಾಯವಾಗಿ ಸಫಾರಿ ಮಾಡಕೂಡದು ಎಂಬ ಬಲವಾದ ಪ್ರತಿಪಾದನೆ ನಡೆದಿದೆ. ಮಾನವ-ಪ್ರಾಣಿ ಸಂಘರ್ಷದ ಕಥೆ ಒಂದೆಡೆಯಾದರೆ, ಸಫಾರಿ ಪರ-ವಿರೋಧದ ಕೂಗು ಕೂಡ ಜಿಲ್ಲೆಯಲ್ಲಿ ಸರಿಸಮನಾಗಿಯೇ ಮಾರ್ಧನಿಸುತ್ತಿದೆ.

ನಗು ಮರೆಸಿದ ನುಗು: ಮಾನವ ಹಾಗೂ ಕಾಡು ಪ್ರಾಣಿಗಳ ನಡುವೆ ತೀವ್ರ ಸ್ವರೂಪದ ಸಂಘರ್ಷಕ್ಕೆ ಕಾರಣವಾಗಿದ್ದು ಎಚ್.ಡಿ.ಕೋಟೆ ಮತ್ತು ಸರಗೂರು ತಾಲೂಕುಗಳ ನುಗು ವನ್ಯಜೀವಿಧಾಮ. ಹುಲಿ ದಾಳಿಗೆ ಬಡಗಲಪುರ ಗ್ರಾಮದಲ್ಲಿ ಮಹದೇವ್ ತೀವ್ರ ಗಾಯಗೊಂಡು ಕಣ್ಣು ಕಳೆದುಕೊಂಡರೆ, ಬೆಣ್ಣೆಗೆರೆ ಗ್ರಾಮದ ರಾಜಶೇಖರ್, ಕೂಡಿಗಿ ಗ್ರಾಮದ ದೊಡ್ಡನಿಂಗಯ್ಯ, ಹಳೆ ಹೆಗ್ಗುಡಿಲು ಗ್ರಾಮದ ದಂಡನಾಯಕ ಪ್ರಾಣ ಕಳೆದುಕೊಂಡರು.

ನಗರ ಸಮೀಪ ದರ್ಶನ: ನ.30ರಂದು ಕೂರ್ಗಳ್ಳಿ ಸಮೀಪದ ಬೆಮೆಲ್ ಕಾರ್ಖಾನೆ ಆವರಣದಲ್ಲಿ ಹುಲಿ ಕಾಣಿಸಿಕೊಂಡಿದ್ದು, ಜನರಲ್ಲಿ ಆತಂಕ ಹೆಚ್ಚುವಂತೆ ಮಾಡಿತು. ಸಮೀಪದ ಇಲವಾಲದ ಅಲೋಕ ಅರಮನೆಯ ಅರಣ್ಯ ಭಾಗದಲ್ಲಿ 3 ಮರಿಗಳೊಂದಿಗೆ ಹೆಣ್ಣು ಹುಲಿ ಪತ್ತೆಯಾಗಿತ್ತು. ಅದರಲ್ಲಿ ಒಂದು ಹುಲಿ ಮರಿಯನ್ನು ಸೆರೆ ಹಿಡಿಯಲಾಯಿತು.



ಹುಲಿ ದಾಳಿಗೆ ಬಲಿಯಾದ ಅನ್ನದಾತರು

ಸರಗೂರು ತಾಲೂಕಿನ ಬಡಗಲಪುರದಲ್ಲಿ ರೈತ ಮಹದೇವ್ ಮೇಲೆ ಹುಲಿ ದಾಳಿಯಿಂದ ತೀವ್ರ ಗಾಯ. ನುಗು ವನ್ಯಜೀವಿ ವಲಯ ಅರಣ್ಯದಂಚಿನ ಬೆಣ್ಣೆಗೆರೆ ಗ್ರಾಮದ ರೈತ ರಾಜಶೇಖರ್ ಹುಲಿ ದಾಳಿಯಿಂದ ಸಾವು. ಮೊಳೆಯೂರು ಅರಣ್ಯದಂಚಿನ ಕುರ್ಣೇಗಾಲದ ಜಮೀನಿನಲ್ಲಿ ಹಸು ಮೇಯಿಸುತ್ತಿದ್ದ ಕೂಡಿಗಿಯ ರೈತ ದೊಡ್ಡನಿಂಗಯ್ಯ ಹುಲಿ ದಾಳಿಯಿಂದ ಸಾವು. ಹಳೆಹೆಗ್ಗುಡಿಲು ಗ್ರಾಮದಲ್ಲಿ ರೈತ ದಂಡನಾಯಕ ಸಾವು.

ವನ್ಯಜೀವಿಗಳ ಹೆಜ್ಜೆ ಜಾಡು ಹಿಡಿದು ಹೊರಟಾಗ...

ಮೈಸೂರಿನ ಇನ್ಫೋಸಿಸ್ ಕ್ಯಾಂಪಸ್‌ನಲ್ಲಿ ಚಿರತೆ ಕಾಣಿಸಿಕೊಂಡಿದ್ದರಿಂದ 15 ದಿನ ನಡೆದ ಸೆರೆ ಕಾರ್ಯಾಚರಣೆ ಮಾಡಿ ನಂತರ ಸ್ಥಗಿತ ಮಾಡಲಾಯಿತು. ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ವೀರನಹೊಸಹಳ್ಳಿ ವಲಯದ ಮುದಗನೂರು ಕೆರೆಯಂಚಿನ ರೈಲ್ವೆ ಬ್ಯಾರಿಕೇಡ್ ಪಿಲ್ಲರ್ ನಡುವೆ ಸಿಲುಕಿದ್ದ 30 ವರ್ಷ ವಯಸ್ಸಿನ ಸಲಗ ರಕ್ಷಣೆ ಮಾಡಲಾಯಿತು. ಎಚ್.ಡಿ.ಕೋಟೆ ಮೇಟಿಕುಪ್ಪೆ ವನ್ಯಜೀವಿ ವಲಯದಲ್ಲಿ 46 ವರ್ಷದ ಗಂಡು ಕಾಡಾನೆ ಅನಾರೋಗ್ಯದಿಂದ ಸಾವು. ಸರಗೂರು ತಾಲೂಕಿನ ಬಿಡುಗಲು ಗ್ರಾಮದಲ್ಲಿ ಗೋಬರ್ ಗ್ಯಾಸ್ ಬಾವಿಗೆ ಬಿದ್ದಿದ್ದ 6 ತಿಂಗಳ ಹುಲಿ ಮರಿಯನ್ನು ಅರಣ್ಯ ಇಲಾಖೆ ಸಿಬ್ಬಂದಿ ರಕ್ಷಿಸಿದರು.

ಆನೆ, ಹುಲಿ, ಹದ್ದುಗಳ ಮರಣ ಮೃದಂಗ !

ಹುಣಸೂರು ತಾಲೂಕಿನ ನಾಗಾಪುರ ಗಿರಿಜನ ಪುನರ್ವಸತಿ ಕೇಂದ್ರದ 5ನೇ ಬ್ಲಾಕ್ ನಿವಾಸಿ ಹರೀಶ್ ಕುರಿ ಮೇಯಿಸುತ್ತಿದ್ದಾಗ ಹುಲಿ ದಾಳಿಗೆ ಮೃತಪಟ್ಟರು. ಎಚ್.ಡಿ.ಕೋಟೆ ತಾಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಗುಂಡ್ರೆ, ವನ್ಯಜೀವಿ ವಲಯದ ಕಬಿನಿ ಹಿನ್ನೀರಿನ ಅರಣ್ಯ ಪ್ರದೇಶದಲ್ಲಿ ಅಳಿವಿನಂಚಿನಲ್ಲಿರುವ 5 ರಣಹದ್ದುಗಳು ಮೃತಪಟ್ಟವು. ಮೈಸೂರಿನ ಚಾಮರಾಜೇಂದ್ರ ಮೃಗಾಲಯದಲ್ಲಿದ್ದ ಹೆಣ್ಣಾನೆ 'ಪದ್ಮಾವತಿ' (71) ಸಾವು. 'ಆರ್‌ಎಂಪಿ' ಆವರಣದಲ್ಲಿ ಹುಲಿ ಪ್ರತ್ಯಕ್ಷ. ಮೃಗಾಲಯದಲ್ಲಿದ್ದ ಜಾಗ್ವಾರ್ 'ವಿಕ್ರಂ' ಸಾವು. ಮೈಸೂರು ತಾಲೂಕಿನ ದೊಡ್ಡಮಾರಗೌಡನಹಳ್ಳಿಯಲ್ಲಿ 8-10 ವರ್ಷದ ಗಂಡು ಚಿರತೆ ಸೆರೆ. ತಿ.ನರಸೀಪುರ ತಾಲೂಕಿನ ಶ್ರೀರಂಗರಾಜಪುರ ಗ್ರಾಮದಲ್ಲಿ ಸುಮಾರು 4 ವರ್ಷದ ಹೆಣ್ಣು ಚಿರತೆ ಸೆರೆ. ತಿ.ನರಸೀಪುರ ತಾಲೂಕಿನ ಬೂದಹಳ್ಳಿಯಲ್ಲಿ ಬೋನಿಗೆ ಬಿದ್ದ 6 ವರ್ಷದ ಗಂಡು ಚಿರತೆ ಸೆರೆ. ಮೈಸೂರು ರೇಸ್ ಕ್ಲಬ್ ನಲ್ಲಿದ್ದ ಕುದುರೆಯೊಂದು 'ಗ್ಲಾಂಡರ್ಸ್' ರೋಗದ ಸೋಂಕಿನಿಂದ ಮೃತಪಟ್ಟಿತು. ತದನಂತರದಲ್ಲೇ ಚಾಮರಾಜೇಂದ್ರ ಮೃಗಾಲಯದ ಹೆಣ್ಣುಹುಲಿ 'ತಾಯಮ್ಮ' ಅನಾರೋಗ್ಯದಿಂದ ಸಾವಿಗೀಡಾಯಿತು.

ಜಾತಿಗಣತಿಗೆ ಅಂತಿಮ ಸ್ಪರ್ಶ

← ಮೊದಲಪುಟದಿಂದ

ಈ ಹಿಂದೆ ಕಾಂಗ್ರೆಸ್ ಸರಕಾರದ ಮೊದಲ ಅವಧಿಯಲ್ಲಿ ಸಿದ್ಧಪಡಿಸಿದ್ದ ಜಾತಿ ಗಣತಿ ಯನ್ನು ಸಿದ್ದರಾಮಯ್ಯ 2024ರಲ್ಲಿ ಅಧಿ ಕಾರಕ್ಕೆ ಬಂದ ಬಳಿಕ ಮಂಡಿಸಲು ಸಿದ್ಧಪಡಿಸಿ ಕೊಂಡರೂ ಹಲವು ಅಕ್ಷೇಪಗಳು ವ್ಯಕ್ತವಾಗಿ, ಹೈಕಮಾಂಡ್‌ವರೆಗೆ ದೂರುಗಳು ಹೋದ ಹಿನ್ನಲೆಯಲ್ಲಿ ಮರು ಸಮೀಕ್ಷೆಗೆ ಸೂಚನೆ ನೀಡಲಾಗಿತ್ತು. ಮಧುಸೂಧನ್ ಅವರ ನೇತೃತ್ವದಲ್ಲಿ ಆಗಿರುವ ಎರಡನೇ ಜಾತಿ ಗಣತಿ ಕಾರ್ಯ ಮುಗಿದ ಬಳಿಕ ಆರು ತಿಂಗಳಲ್ಲಿ ವರದಿಯನ್ನು ಸಲ್ಲಿಸಬೇಕು ಎನ್ನುವ ಸೂಚನೆ ನೀಡಲಾಗಿತ್ತು.

ಹಿಂದುಳಿದ ವರ್ಗಗಳ ಆಯೋಗ ಈಗಾಗಲೇ ವರದಿಯನ್ನು ಕ್ರೋಢೀಕರಿಸುವ ಕಾರ್ಯದಲ್ಲಿದ್ದು, ಸಿದ್ದರಾಮಯ್ಯ ಅವರು ಬಜೆಟ್ ಮಂಡಿಸುವ ಮೊದಲೇ ಈ ವರದಿಯ ಹೂರಣ ನೀಡುವಂತೆ ಸೂಚನೆ ನೀಡಲಾಗಿದೆ. ಆದ್ದರಿಂದ ಸಿದ್ದರಾಮಯ್ಯ ಅವರು ಬಜೆಟ್ ಮಂಡಿಸುವ ಮೊದಲೇ ಒಂದು ವರದಿಯನ್ನು ನೀಡುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. 2ನೇ ಬಾರಿ ಸಿದ್ಧಪಡಿಸಿರುವ ಈ ವರದಿಯ ಬಗ್ಗೆಯೂ ಈಗಾಗಲೇ ಹಲವು ನಾಯಕರು ಅಕ್ಷೇಪವ್ಯಕ್ತಪಡಿಸಿದ್ದಾರೆ. ಆದ್ದ ರಿಂದ ಈ ಬಾರಿ ಮುಖ್ಯಮಂತ್ರಿ ಸಿದ್ದರಾ ಮಯ್ಯ ಅವರು ಜಾತಿ ಗಣತಿಯ ವಿಷಯದಲ್ಲಿ ಎಚ್ಚರಿಕೆಯ ಹೆಜ್ಜೆ ಇಡಲು ತೀರ್ಮಾನಿಸಿದ್ದಾರೆ.

ಜೈಲಿನಲ್ಲಿ ಕೈದಿಗಳ ರಾಜ ವೈಭೋಗ

← ಮೊದಲಪುಟದಿಂದ

ಅಧೀಕ್ಷಕರು ಈ ಅಕ್ರಮಗಳ ಬಗ್ಗೆ ಮೌನ ವಹಿಸಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ.

ತನಿಖೆಗೆ ಸಾರ್ವಜನಿಕರ ಒತ್ತಾಯ: ಜೈಲಿನೊಳಗೆ ಕಾನೂನುಬಾಹಿರ ಚಟುವಟಿಕೆಗಳು ರಾಜಾರೋಷವಾಗಿ ನಡೆಯುತ್ತಿದ್ದರೂ ಮೇಲಧಿಕಾರಿಗಳು ಕ್ರಮ ಕೈಗೊಳ್ಳುತ್ತಿಲ್ಲ ಎಂಬ ಆರೋಪ ಕೇಳಿ ಬಂದಿದೆ. ಈ ಕೂಡಲೇ ಉನ್ನತ ಮಟ್ಟದ ತನಿಖೆ ನಡೆಸಿ, ಭ್ರಷ್ಟ ಅಧಿಕಾರಿಗಳನ್ನು ಅಮಾನತುಗೊಳಿಸಬೇಕು ಹಾಗೂ ಜೈಲಿನ ಭದ್ರತಾ ವೈಫಲ್ಯವನ್ನು ಸರಿಪಡಿಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ. ಸಬ್ ಅರ್ಬನ್ ಎಸಿಪಿ ಬಸವೇಶ್ವರ್ ಹೀರಾ ಹಾಗೂ ಸಿಸಿಬಿ ಎಸಿಪಿ ಜೇಮ್ಸ್ ಮಿನೇಜಸ್ ನೇತೃತ್ವದಲ್ಲಿ ಪರಿಶೀಲನೆ ನಡೆಸಿದರು. ಕಿಂಗ್ ಪಿನ್ ಆರ್.ಡಿ.ಪಾಟೀಲ್ ಸೇರಿ ಕೈದಿಗಳ ಜೈಲು ಬ್ಯಾರಕ್ ಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.

ಇದೀಗ, ಕಲಬುರಗಿ ಜೈಲಿನ ಈ ಸರಣಿ ವಿಡಿಯೊ ಬಾಂಬ್‌ಗಳು ಈಗ ರಾಜ್ಯ ಮಟ್ಟದಲ್ಲಿ ಸಂಚಲನ ಸೃಷ್ಟಿಸಿದ್ದು, ಕಾರಾಗೃಹ ಇಲಾಖೆಯ ಉನ್ನತ ಅಧಿಕಾರಿಗಳು ಯಾವ ರೀತಿ ಕ್ರಮ ಕೈಗೊಳ್ಳುತ್ತಾರೆ ಎಂಬುದನ್ನು ಕಾದು ನೋಡಬೇಕಿದೆ.

ವಿಶ್ವವಾಣಿ ಕ್ಲಬ್ ಹೌಸ್
01.01.2026
ಬೆಳಗ್ಗೆ: 06.55 ರಿಂದ 08.05 ರವರೆಗೆ
ಗುರುವಾರದ ಅತಿಥಿ

ಶ್ರೀ ರಾಜೀವ್ ಆನಂದ
ವಿಷಯ
ಹೊಸ ವರ್ಷದ ಹಾಡುಗಳು
vishwavani.news

ಧರ್ಮಸ್ಥಳದ ಪರ ವಕಾಲತ್ತು ಸಲ್ಲಿಕೆ

ಬುರುಡೆ ಷಡ್ಯಂತ್ರ ಪ್ರಕರಣ: ನ್ಯಾಯವಾದಿ ಸಿ.ವಿ ನಾಗೇಶ್, ಮಹೇಶ್ ಕಜೆ ವಾದ

ಮಂಗಳೂರು: ಬುರುಡೆ ಷಡ್ಯಂತ್ರ ಪ್ರಕರಣಕ್ಕೆ ಸಂಬಂಧಿಸಿದಂತೆ ಶ್ರೀಕ್ಷೇತ್ರ ಧರ್ಮಸ್ಥಳದ ಪರವಾಗಿ ಬೆಳ್ತಂಗಡಿ ನ್ಯಾಯಾಲಯಕ್ಕೆ ವಕಾಲತ್ತು ಸಲ್ಲಿಕೆಯಾಗಿದೆ.

ಬೆಂಗಳೂರಿನ ಹಿರಿಯ ನ್ಯಾಯವಾದಿಗಳಾದ ಸಿ.ವಿ ನಾಗೇಶ್, ಪುತ್ತೂರಿನ ಮಹೇಶ್ ಕಜೆ ಬೆಳ್ತಂಗಡಿ ಕೋರ್ಟ್‌ಗೆ ಆಗಮಿಸಿ ವಕಾಲತ್ತು ಸಲ್ಲಿಕೆ ಮಾಡಿದ್ದಾರೆ. ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣವನ್ನು ವಿಶೇಷ ತನಿಖಾ ತಂಡ ತನಿಖೆ ನಡೆಸುತ್ತಿದ್ದು ಈಗಾಗಲೇ ಬೆಳ್ತಂಗಡಿ ಕೋರ್ಟ್ ವರದಿ ಸಲ್ಲಿಸಿದೆ. ಈ ವರದಿ ಸಂಬಂಧಿಸಿ ಜ.3ರಂದು ಬೆಳ್ತಂಗಡಿ ಕೋರ್ಟ್ ಆದೇಶ ಮಾಡಲಿದೆ.

ಎಸ್‌ಐಟಿ ವರದಿಯಲ್ಲಿ ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ನಡೆಸಿರುವುದು ಬಹಿರಂಗೊಂಡಿದ್ದರೂ ಷಡ್ಯಂತ್ರ ನಡೆಸಿದವರ ವಿರುದ್ಧ ಎಸ್‌ಐಟಿ ಕ್ರಮಕೈಗೊಳ್ಳದ ಹಿನ್ನೆಲೆಯಲ್ಲಿ ಧರ್ಮಸ್ಥಳದ ಕ್ಷೇತ್ರದ ಪರ ವಕೀಲರು ವಕಾಲತ್ತು ಸಲ್ಲಿಸಿದ್ದಾರೆ.

ಅನಾಮಿಕ ದೂರುದಾರ ಚಿನ್ನಯ್ಯನ, ಧರ್ಮಸ್ಥಳದಲ್ಲಿ ಅಕ್ರಮವಾಗಿ ಶವ ಹೂತಿರುವುದಾಗಿ ಸುಳ್ಳು ಹೇಳಿ ವಿಡಿಯೊ ಮಾಡಿ ಅಪಪ್ರಚಾರ ಮಾಡಿದ್ದನು. ಚಿನ್ನಯ್ಯನ ಜತೆ ಮಹೇಶ್ ತಿಮರೋಡಿ, ಗಿರೀಶ್ ಮಟ್ಟಣ್ಣನವರ್, ಜಯಂತ್ ಸೇರಿದಂತೆ ಆರು ಮಂದಿ ಧರ್ಮಸ್ಥಳ ಕ್ಷೇತ್ರಕ್ಕೆ ಮಸಿ ಬಳಿಯಲು ಷಡ್ಯಂತ್ರ ರೂಪಿಸಿದ್ದರು.

ಧರ್ಮಸ್ಥಳದ ವಿರುದ್ಧ ಷಡ್ಯಂತ್ರ: ಎಸ್‌ಐಟಿ ನಡೆಸಿದ ತನಿಖೆ ಇದು ಅಪಪ್ರಚಾರದ ಭಾಗವೆಂದೂ ಹಾಗೂ ಚಿನ್ನಯ್ಯನಿಗೆ ಹಣದ ಆಮಿಷ ತೋರಿಸಿ ಈ ಕೆಲಸ ಮಾಡಿಸಲಾಗಿತ್ತು ಎಂದು ತಿಳಿದುಬಂದಿದೆ. ಎಸ್‌ಐಟಿ ತನ್ನ ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ಪ್ರಾಥಮಿಕ ವರದಿ ಸಲ್ಲಿಸಿದೆ. ಧರ್ಮಸ್ಥಳದ ಘನತೆಗೆ ಧಕ್ಕೆ ತರಲು ನಡೆದ ವ್ಯವಸ್ಥಿತ ಪಿತೂರಿಯನ್ನು ತನಿಖಾ ತಂಡವು ಬಯಲಿಗೆಳೆದಿದೆ. ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ್ ಮಟ್ಟಣ್ಣವರ್, ಸುಜಾತಾ ಭಟ್, ಜಯಂತ್ ಮತ್ತು ವಿಠ್ಠಲಗೌಡ ಸೇರಿದಂತೆ ಆರು ಜನರ ತಂಡವು ಧರ್ಮಸ್ಥಳಕ್ಕೆ ಮಸಿ ಬಳಿಯಲು ಅನಾಮಿಕ ದೂರುದಾರ ಚಿನ್ನಯ ಮೂಲಕ ಸುಳ್ಳು ಆರೋಪಗಳನ್ನು ಮಾಡಿತ್ತು. ಇದೀಗ ಪವಿತ್ರ ಕ್ಷೇತ್ರವೊಂದರ ವಿರುದ್ಧ ದುರುದ್ದೇಶಪೂರಿತ ಅಜೆಂಡಾವನ್ನು ಈ ತಂಡ ಹೊಂದಿತ್ತು ಎಂದು ನ್ಯಾಯವಾದಿ ಸಿ.ವಿ.ನಾಗೇಶ್, ಪುತ್ತೂರಿನ ಮಹೇಶ್ ಕಜೆ ಬೆಳ್ತಂಗಡಿ ಕೋರ್ಟ್ ಮುಂದೆ ವಕಾಲತ್ತು ಮಂಡಿಸಿದ್ದಾರೆ.



ನಾರಾಯಣ ಗುರು ಸಾಮಾಜಿಕ ದಾರ್ಶನಿಕ: ಸಿಎಂ ವ್ಯಾಖ್ಯಾನ

← ಮೊದಲಪುಟದಿಂದ

ಜಾತಿ ಎನ್ನುವುದು ಕೇವಲ ಆಚರಣೆಗಳಿಂದಲ್ಲ, ಜ್ಞಾನದ ವ್ಯವಸ್ಥಿತ ನಿರಾಕರಣೆಯಿಂದ ಜೀವಂತವಾಗಿರುವುದನ್ನು ಅವರು ಅರ್ಥಮಾಡಿಕೊಂಡಿದ್ದರು. ಅವರ ಪ್ರಕಾರ, ಅಜ್ಞಾನವು ಆಕಸ್ಮಿಕವಲ್ಲ, ಅದು ಸಮಾಜದ ಶ್ರೇಣೀಕೃತ ವ್ಯವಸ್ಥೆಯ ಉಳಿವಿಗಾಗಿ ಮಾಡಿದ ರಾಜಕೀಯ ಉದ್ದೇಶದ ಸೃಷ್ಟಿಯಾಗಿತ್ತು ಎಂದರು.

ಶಿವಗಿರಿ ಮಠವು ಕೇವಲ ಒಂದು ಯಾತ್ರಾ ಕೇಂದ್ರವಾಗಿರದೇ, ಭಾರತದ ಆತ್ಮಸಾಕ್ಷಿಯ ನೈತಿಕ ವಿಶ್ವವಿದ್ಯಾಲಯವಾಗಿದೆ. ಇದು ಬೌದ್ಧಿಕ ಮತ್ತು ವಿಶ್ವದ ಮಾನವಕುಲದ ಚಳವಳಿಯಾಗಿದೆ. ಇದು ಭೌಗೋಳಿಕವಲ್ಲ, ನೈತಿಕತೆಯ ಪ್ರವಾಸ ಎಂದು ಮೆಚ್ಚುಗೆ ಸೂಚಿಸಿದರು.

ಆಧುನಿಕ ರಾಷ್ಟ್ರ ನಿರ್ಮಾಣದಲ್ಲಿ ಶಿವಗಿರಿ ತೀರ್ಥಯಾತ್ರೆಯ ಪಾತ್ರ ಎನ್ನುವುದು ಕೇವಲ ಸಾಂಕೇತಿಕವಲ್ಲ. ಇದು ಇಂದಿನ ತುರ್ತು ಅಗತ್ಯ ಮತ್ತು ನಮ್ಮ ಕಾಲದ ಬಿಕ್ಕಟ್ಟುಗಳಿಗೆ ನೇರ ಉತ್ತರ. ಇದರ ಹಿಂದಿರುವ ಶಕ್ತಿ ಶ್ರೀನಾರಾಯಣ ಗುರುಗಳು ಕೇವಲ ಒಬ್ಬ ಸಂತನಲ್ಲ, ಬದಲಾಗಿ ಭಾರತದ ಶ್ರೇಷ್ಠ ಸಾಮಾಜಿಕ ದಾರ್ಶನಿಕರಲ್ಲಿ ಒಬ್ಬರು. ಕೇರಳವು ಜಾತಿ ತಾರತಮ್ಯ, ಮೌಢ್ಯಾಚರಣೆ ಮತ್ತು ಅಸಮಾನತೆಯಿಂದ ಉಸಿರುಗಟ್ಟುತ್ತಿದ್ದಾಗ, ಮಾನವಕುಲಕ್ಕೆ ಒಂದೇ ಜಾತಿ, ಒಂದೇ ಧರ್ಮ, ಒಬ್ಬನೇ ದೇವರು ಎಂಬ ಸತ್ಯವನ್ನು ಘೋಷಿಸಿದರು. ಇದು ಕೇವಲ ಕಾವ್ಯಾತ್ಮಕ ಹೇಳಿಕೆಯಲ್ಲ. ಇದು ಜಾತಿ ತಾರತಮ್ಯ, ಸೋಂಕಿನ ಮನುಸ್ಮೃತಿ ಆಧಾರಿತ ಶ್ರೇಣೀಕೃತ ವ್ಯವಸ್ಥೆ, ಧಾರ್ಮಿಕ ಏಕಸ್ವಾಮ್ಯತೆ ಮತ್ತು ಸಾಮಾಜಿಕ ಬಹಿಷ್ಕಾರಕ್ಕೆ ನೀಡಿದ ನೇರ ಸವಾಲಾಗಿತ್ತು ಎಂದರು.

ಮರ್ಯಾದಾ ಹತ್ಯೆ ಹೇಯ ಕೃತ್ಯ

ಹುಬ್ಬಳ್ಳಿ ತಾಲೂಕಿನ ಇನಾಂವೀರಪುರ ಗ್ರಾಮಕ್ಕೆ ಗೃಹ ಸಚಿವ ಜಿ.ಪರಮೇಶ್ವರ ಭೇಟಿ ನೀಡಿ, ವಿವೇಕಾನಂದ ದೊಡ್ಡಮನಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಹುಬ್ಬಳ್ಳಿ: ತಾಲೂಕಿನ ಇನಾಂ ವೀರಾಪುರ ಗ್ರಾಮದಲ್ಲಿ ಮಾನ್ಯಾ ಎಂಬುವ ಯುವತಿಯನ್ನು ಸ್ವಂತ ತಂದೆಯೇ ಕೊಲೆಗೈದಿದ್ದಾನೆ. ಕೊಲೆ ಪ್ರಕರಣದ ಕುರಿತು ಕುಟುಂಬಸ್ಥರಿಂದ ವಿವರವಾದ ಮಾಹಿತಿ ಪಡೆದುಕೊಂಡಿದ್ದೇನೆ. ಇಂತಹ ಘಟನೆಗಳು ಎಲ್ಲಿಯೂ ಆಗಬಾರದು. ಆಧುನಿಕ ಜಗತ್ತಿನಲ್ಲಿ ನಾವಿದ್ದೇವೆ. ಕುಟುಂಬಸ್ಥರು ತಮ್ಮ ನೋವನ್ನು ತೋಡಿಕೊಂಡಿದ್ದಾರೆ. ಅಲ್ಲದೇ ಕೆಲವು ಬೇಡಿಕೆಗಳನ್ನು ಕುಟುಂಬಸ್ಥರು ತಿಳಿಸಿದ್ದಾರೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ ಹೇಳಿದರು.

ತಾಲೂಕಿನ ಇನಾಂ ವೀರಾಪುರ ಗ್ರಾಮಕ್ಕೆ ಬುಧವಾರ ಭೇಟಿ ನೀಡಿ, ವಿವೇಕಾನಂದ ದೊಡ್ಡಮನಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿ, ಧೈರ್ಯ ತುಂಬಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು, ವಿವೇಕಾನಂದ ದೊಡ್ಡಮನಿಗೆ ಸರಕಾರಿ ಉದ್ಯೋಗ ನೀಡಬೇಕು ಎಂದು ಕುಟುಂಬದವರು ಮನವಿ ಮಾಡಿದ್ದಾರೆ ಎಂದು ತಿಳಿಸಿದರು.

ವಿಶೇಷ ಪ್ರಕರಣವೆಂದು ಪರಿಗಣಿಸುವ ಕುರಿತು ಚರ್ಚಿಸಲಾಗುವುದು. ಈ ಪ್ರಕರಣಕ್ಕೆ ವಿಶೇಷ ವಕೀಲರನ್ನು ನೇಮಕ ಮಾಡಲಾಗುವುದು. ವಿಶೇಷ ಪ್ರಕರಣ ಎಂದು ತೆಗೆದುಕೊಳ್ಳುವ ಬಗ್ಗೆ ಮುಖ್ಯಮಂತ್ರಿಗಳ ಜತೆ ಚರ್ಚಿಸಿ, ತೀರ್ಮಾನ ಕೈಗೊಳ್ಳಲಾಗುತ್ತದೆ. ರಾಜ್ಯದಲ್ಲಿ ಕಾನೂನುಗಳು ಸಾಕಷ್ಟಿವೆ. ಕೆಲವು ಪ್ರಕರಣಗಳಲ್ಲಿ ಕಾನೂನು ವೈಫಲ್ಯ ಕಂಡು ಬಂದರೆ, ರಾಜ್ಯದ ಮಟ್ಟಿಗೆ ವಿಶೇಷ ವಿಧೇಯಕಗಳನ್ನು ಜಾರಿಗೆ ತರಬಹುದು. ಅಲ್ಲದೇ ಹೊಸ ಕಾನೂನುಗಳನ್ನು ಜಾರಿಗೊಳಿಸಬಹುದು ಎಂದರು.

ಆಸ್ಪತ್ರೆಗೆ ಸಚಿವರ ಭೇಟಿ: ಬಳಿಕ ಹುಬ್ಬಳ್ಳಿಯ ವಿವೇಕಾನಂದ ಆಸ್ಪತ್ರೆಗೆ ಗೃಹ ಸಚಿವ ಡಾ.ಜಿ.ಪರಮೇಶ್ವರ ಭೇಟಿ ನೀಡಿ, ಚಿಕಿತ್ಸೆ ಪಡೆಯುತ್ತಿರುವ ವಿವೇಕಾನಂದ ದೊಡ್ಡಮನಿ ತಾಯಿ ರೇಣವ್ವ ದೊಡ್ಡಮನಿ ಅವರ ಆರೋಗ್ಯ ಹಾಗೂ ಚಿಕಿತ್ಸೆ ಕುರಿತು ವೈದ್ಯರಿಂದ ಮಾಹಿತಿ ಪಡೆದುಕೊಂಡರು.

ಸರಕಾರಿ ಕೆಲಸ ಕೊಡಿಸುವ ಬಗ್ಗೆ ಚರ್ಚೆ

ಸರಕಾರದ ಮಟ್ಟದಲ್ಲಿ ಈ ಪ್ರಕರಣವನ್ನು ಬಹಳ ಗಂಭೀರವಾಗಿ ಪರಿಗಣನೆಗೆ ತೆಗೆದುಕೊಳ್ಳಲಾಗುವುದು. ಸಿಎಂ ಜತೆ ಚರ್ಚೆ ಮಾಡಲಾಗುವುದು. ಕುಟುಂಬದ ಸದಸ್ಯರಿಗೆ ಸರಕಾರಿ ಕೆಲಸ, ಪರಿಹಾರ ಒದಗಿಸುವ ಬಗ್ಗೆ ಸರಕಾರದ ಮಟ್ಟದಲ್ಲಿ ಚರ್ಚಿಸಲಾಗುತ್ತದೆ. ನ್ಯಾಯ ಒದಗಿಸುವ ಕೆಲಸವನ್ನು ಸರಕಾರ ಮಾಡಲಿದೆ. ಜಿಲ್ಲಾಡಳಿತ, ಪೊಲೀಸ್ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳು ಕ್ರಮ ತೆಗೆದುಕೊಂಡಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ್ ಹೇಳಿದರು.

ಭದ್ರಾ ಮೇಲ್ದಂಡೆ ಯೋಜನೆಗೆ ರಾಜ್ಯ ಸರಕಾರ ಅಸಹಕಾರ: ಕೇಂದ್ರ ಸಚಿವ ಸೋಮಣ್ಣ

ದೆಹಲಿ: ಭದ್ರಾ ಮೇಲ್ದಂಡೆ ಯೋಜನೆಗೆ ₹5,300 ಕೋಟಿ ಬಿಡುಗಡೆಗೆ ಮುನ್ನ ಕರ್ನಾಟಕ ಸರಕಾರ ಕೆಲವೊಂದು ಸ್ಪಷ್ಟೀಕರಣಗಳನ್ನು ನೀಡಬೇಕು. ಆದರೆ, ರಾಜ್ಯ ಸರಕಾರವು ಆ ಸ್ಪಷ್ಟೀಕರಣಗಳನ್ನು ನೀಡದೆ ಅಸಹಕಾರ ತೋರುತ್ತಿದೆ ಎಂದು ಕೇಂದ್ರ ಜಲಶಕ್ತಿ ರಾಜ್ಯ ಸಚಿವ ವಿ. ಸೋಮಣ್ಣ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯ ಸರಕಾರಕ್ಕೆ ಈ ಸಂಬಂಧ ಹಲವು ಪತ್ರಗಳನ್ನು ಬರೆಯಲಾಗಿದೆ. ಸರಕಾರವು ಕೇಂದ್ರ ಜಲ ಆಯೋಗಕ್ಕೆ ಸ್ಪಷ್ಟೀಕರಣಗಳನ್ನು ನೀಡಬೇಕಿದೆ. ಯೋಜನೆಗೆ ಈವರೆಗೆ ಆಗಿರುವ ವೆಚ್ಚ, ಕಾಮಗಾರಿ ವಿವರಗಳು, ಪರಿಷ್ಕೃತ ಅಂದಾಜು ವೆಚ್ಚಗಳನ್ನು ಒದಗಿಸುವಂತೆ ನಿರ್ದೇಶನ ನೀಡಲಾಗಿದೆ. ರಾಜ್ಯ ಸರಕಾರ ಉತ್ತರ ನೀಡಿದ ಬಳಿಕ ಆಯೋಗ ಪರಿಶೀಲನೆ ನಡೆಸಲಿದೆ. ಅನುದಾನ ಬಿಡುಗಡೆಗೆ ಕೇಂದ್ರ ಸಚಿವ ಸಂಪುಟದ ಅನುಮೋದನೆ ಪಡೆಯಬೇಕಿದೆ. ಅನುದಾನ ಬಿಡುಗಡೆಗೆ ಕೇಂದ್ರ ಮಟ್ಟದಲ್ಲಿ ನಾನು ಪ್ರಯತ್ನ ಮಾಡುತ್ತಿದ್ದೇನೆ. ಶೀಘ್ರ ಅನುದಾನ ಬಿಡುಗಡೆ ಆಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜಲ ಜೀವನ್ ಮಿಷನ್ ಯೋಜನೆಯಡಿ ಕರ್ನಾಟಕಕ್ಕೆ ಕೇಂದ್ರದಿಂದ ಪೂರ್ಣ ಪ್ರಮಾಣದಲ್ಲಿ ಅನುದಾನ ಬಿಡುಗಡೆ ಆಗದಿರಲು ರಾಜ್ಯ ಸರಕಾರದ ನಿರ್ಲಕ್ಷ್ಯ ಕಾರಣ. ರಾಜ್ಯದಲ್ಲಿ ನಡೆಸಿರುವ ಕಾಮಗಾರಿಗಳ ಬಳಕೆ ಪ್ರಮಾಣಪತ್ರ ಸಲ್ಲಿಸಿಲ್ಲ. ಈ ಕಾರಣಕ್ಕೆ ಅನುದಾನ ತಡೆ ಹಿಡಿಯಲಾಗಿದೆ. ಕೇಂದ್ರದ ಹಣ ದುರುಪಯೋಗ ಆಗಬಾರದು ಎಂಬ ಕಾರಣಕ್ಕೆ ಈ ತೀರ್ಮಾನಕ್ಕೆ ಬರಲಾಗಿದೆ. ರಾಜ್ಯದಲ್ಲಿ ಆಗಿರುವ ಕಾಮಗಾರಿಗಳ ಪರಿಶೀಲನೆ ನಡೆಸುತ್ತಿದ್ದೇವೆ. ಅಧಿಕಾರಿಗಳ ಮಾಹಿತಿಗಳನ್ನು ಪಡೆದಿದ್ದೇವೆ. ಪರಿಶೀಲನೆ ನಡೆಸಿ ಅನುದಾನ ಬಿಡುಗಡೆ ಮಾಡುತ್ತೇವೆ ಎಂದು ಸ್ಪಷ್ಟಪಡಿಸಿದರು.

ಬಹು ಕಾಲದಿಂದ ನನೆಗುದಿಗೆ ಬಿದ್ದಿರುವ ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗ ಯೋಜನೆಗೆ ಅತೀ ಶೀಘ್ರದಲ್ಲಿ ಅನುಮೋದನೆ ಪಡೆದು ಕಾರ್ಯಗತಗೊಳಿಸುತ್ತೇವೆ ಎಂದೂ ಹೇಳಿದರು.

> **ಕೇರಳದ ಹಸ್ತಕ್ಷೇಪಕ್ಕೆ ಮಣಿದು ಕಾಂಗ್ರೆಸ್ ಸರಕಾರವು ಕೋಗಿಲುವಿನಲ್ಲಿ ಅನರ್ಹರಿಗೆ ಮನೆ ನೀಡಲು ತೀರ್ಮಾನ ಕೈಗೊಂಡಿದೆ. ಈ ವಿಷಯದಲ್ಲಿ ಪಾಕಿಸ್ತಾನ ಹಸ್ತಕ್ಷೇಪ ಮಾಡುತ್ತಿದೆ ಎಂದರೆ ಒತ್ತುವರಿದಾರರು ಎಷ್ಟು ಪ್ರಭಾವಶಾಲಿಗಳು ಎಂದು ಗೊತ್ತಾಗುತ್ತದೆ. ಸಿದ್ದರಾಮಯ್ಯ ಸರಕಾರ ಹೀನಾಯ ಸ್ಥಿತಿಗೆ ತಲುಪಿರುವುದಕ್ಕೆ ಈ ಪ್ರಕರಣ ಸಾಕ್ಷಿ.**
> - ವಿ.ಸೋಮಣ್ಣ ಕೇಂದ್ರ ಸಚಿವ

ವರ್ಗಾವಣೆ ಆರಂಭ

ಬೆಂಗಳೂರು: ಕೆಎಸ್‌ಆರ್‌ಟಿಸಿಯು ಅಂತರ ನಿಗಮ ವರ್ಗಾವಣೆ ನಿರೀಕ್ಷೆಯಲ್ಲಿದ್ದವರಿಗೆ ಇಂದಿನಿಂದ ಅಂತರ ನಿಗಮ ವರ್ಗಾವಣೆ ಪ್ರಕ್ರಿಯೆ ಆರಂಭಿಸಲಿದೆ. ಕೆಎಸ್‌ಆರ್‌ಟಿಸಿ ಪ್ರಕಟಣೆ ಹೊರಡಿಸಿದ್ದು, ಕರ್ನಾಟಕ ಸರಕಾರದ ಆದೇಶದಂತೆ ಜ.18ರನ್ವಯ ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಕೆಕೆಆರ್‌ಟಿಸಿ, ಎನ್‌ಡಬ್ಲ್ಯುಕೆಆರ್‌ಟಿಸಿ ನಿಗಮಗಳ ದರ್ಜೆ-3 ಮೇಲ್ವಿಚಾರಕೇತರ ಮತ್ತು ದರ್ಜೆ-4 ರ ನೌಕರರಿಗೆ ಅಂತರ ನಿಗಮ ವರ್ಗಾವಣೆಗೆ ಅವಕಾಶ ಕಲ್ಪಿಸಲಾಗಿದೆ ಎಂದಿದೆ.

...ಸಾಲು, ಸಾಲು ಚುನಾವಣೆ

← ಮೊದಲಪುಟದಿಂದ

ಮೇನಲ್ಲಿ ಕೇರಳದಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯ ಸಮಯದಲ್ಲಿಯೇ ಕರ್ನಾಟಕದಲ್ಲಿ ಎರಡು ಕ್ಷೇತ್ರಗಳಿಗೆ ಉಪಚು ನಾವಣೆ ನಡೆಯಲಿದೆ. ಈ ಸಮಯದಲ್ಲಿಯೇ ಹಾಲಿ ಶಾಸಕರಾದ ಶಾಮನೂರು ಶಿವಶಂಕರಪ್ಪ ಹಾಗೂ ಎಚ್.ವೈ.ಮೇಟಿ ಅವರ ನಿಧನದಿಂದ ತೆರವಾಗಿರುವ ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆ ನಡೆಯಲಿದೆ. ಈ ಎರಡೂ ಕ್ಷೇತ್ರಗಳಲ್ಲಿ ಅನುಕಂಪದ ಅಲೆಯಿದ್ದರೂ, ಬಿಜೆಪಿಗರು ಎರಡರಲ್ಲಿ ಒಂದನ್ನಾದರೂ ಗೆಲ್ಲಬೇಕು ಎನ್ನುವ ಲೆಕ್ಕಾಚಾರದಲ್ಲಿದ್ದಾರೆ.

ಇನ್ನು ಈಗಾಗಲೇ ಸ್ಥಳೀಯ ಸಂಸ್ಥೆ ಚುನಾವಣೆಗೆ ಸಜ್ಜಾಗುವಂತೆ ನಾಯಕರು ಪದೇಪದೆ ಸೂಚನೆ ನೀಡುತ್ತಿರುವುದರಿಂದ ಉಪ ಚುನಾವಣೆಯ ಆಸುಪಾಸಿನಲ್ಲಿಯೇ ರಾಜ್ಯಾದ್ಯಂತ ವಿವಿಧ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಯುವ ಸಾಧ್ಯತೆಯಿದೆ. ಈ ಚುನಾವಣೆಗಳ ಮೇಲೆ ಸರಕಾರ ನೇರವಾಗಿ ಪರಿಣಾಮ ಬೀರದಿದ್ದರೂ, ಸಿದ್ದರಾಮಯ್ಯ ನೇತೃತ್ವದ ಸರಕಾರಕ್ಕೆ ಜನ ಎಷ್ಟು 'ಅಂಕ' ನೀಡಬಹುದು ಎನ್ನುವ ಮಧ್ಯಂತರ ವರದಿಯನ್ನು ನೀಡುವುದು ಖಚಿತ. ಆದ್ದರಿಂದ ಈ ಸ್ಥಳೀಯ ಸಂಸ್ಥೆ ಚುನಾವಣೆಗಳು ಪ್ರಮುಖ ಪಾತ್ರವಹಿಸಲಿದೆ.

ಈಗಾಗಲೇ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಮೈತ್ರಿಯಿಲ್ಲ ಎಂದ ಜೆಡಿಎಸ್ ವರಿಷ್ಠ ದೇವೇಗೌಡರು ಹೇಳಿರುವುದರಿಂದ, ಬಿಜೆಪಿ ವರಿಷ್ಠರು ಜೆಡಿಎಸ್ ನಾಯಕರೊಂದಿಗೆ ಚರ್ಚಿಸಿ ಜಂಟಿ ಸಮರಾಭ್ಯಾಸಕ್ಕೆ ಮುಂದಾಗುವರೋ ಅಥವಾ ಏಕಾಂಗಿಯಾಗಿ ಹೋರಾಡುವರೋ ಎನ್ನುವ ಗೊಂದಲ ಹಲವರಲ್ಲಿದೆ. ಇದರೊಂದಿಗೆ ಎಷ್ಟು ಸ್ಥಳೀಯ ಸಂಸ್ಥೆ ಚುನಾವಣೆಗಳನ್ನು ಪಕ್ಷಗಳು ಹಿಡಿಯಲಿದೆ ಎನ್ನುವುದರ ಮೇಲೆ 2028ರ ವಿಧಾನಸಭಾ ಚುನಾವಣೆಯ ಲೆಕ್ಕಾಚಾರ ಗಳು, ತಂತ್ರಗಾರಿಕೆಗಳು ನಿಂತಿರುತ್ತದೆ ಎನ್ನುವುದು ರಾಜಕೀಯ ವಿಶ್ಲೇಷಕರ ಲೆಕ್ಕಾಚಾರವಾಗಿದೆ.

ನವೆಂಬರ್‌ಗೆ ಪರಿಷತ್ ಚುನಾವಣೆ: ಈ ಎರಡು ಚುನಾವಣೆ ಮುಗಿಯುವ ಹೊತ್ತಿಗೆ ನವೆಂಬರ್‌ನಲ್ಲಿ ವಿಧಾನಪರಿಷತ್‌ನ ಎರಡು ಶಿಕ್ಷಕರ ಹಾಗೂ ಎರಡು ಪದವೀಧರ ಕ್ಷೇತ್ರಗಳಿಗೆ ಚುನಾವಣೆ ನಡೆಯಲಿದೆ. ಈಗಾಗಲೇ ಕಾಂಗ್ರೆಸ್ ಹೈಕಮಾಂಡ್, ಬೆಂಗಳೂರು ಶಿಕ್ಷಕರ ಕ್ಷೇತ್ರಕ್ಕೆ ಪುಟ್ಟಣ್ಣ, ಪಶ್ಚಿಮ ಪದವೀಧರ ಕೇತ್ರಕ್ಕೆ ಮೋಹನ್ ಲಿಂಬಿಕಾಯಿ, ಆಗ್ನೇಯ ಪದವೀಧರ ಕೇತ್ರಕ್ಕೆ ಶಶಿ ಹುಲಿಕುಂಟೆಮಠ, ಈಶಾನ್ಯ ಶಿಕ್ಷಕರ ಕೇತ್ರಕ್ಕೆ ಶರಣಪ್ಪ ಮಟ್ಟೂರ್ ಅವರನ್ನು ಅಂತಿಮಗೊಳಿಸಲಾಗಿದೆ. ಬಿಜೆಪಿ ಅಭ್ಯರ್ಥಿ ಘೋಷಣೆ ಬಾಕಿಯಿದೆ. ಈ ಚುನಾವಣೆಯ ಮೇಲೆ ವಿಧಾನಪರಿಷತ್ ಸಂಖ್ಯಾಬಲವೂ ಆಚೀಚೆಯಾಗುವ ಸಾಧ್ಯತೆಯಿರುವುದರಿಂದ ಈ ಚುನಾವಣೆಯೂ ಮಹತ್ವ ಪಡೆದುಕೊಳ್ಳುವುದು ನಿಶ್ಚಿತ.

01 ಜನವರಿ 2026

- 15: ಮಕರ ಸಂಕ್ರಾಂತಿ
- 26: ಗಣರಾಜ್ಯೋತ್ಸವ

S	M	T	W	T	F	S
				1	2	3
4	5	6	7	8	9	10
11	12	13	14	15	16	17
18	19	20	21	22	23	24
25	26	27	28	29	30	31

02 ಫೆಬ್ರವರಿ 2026

- 15: ಮಹಾಶಿವರಾತ್ರಿ

S	M	T	W	T	F	S
1	2	3	4	5	6	7
8	9	10	11	12	13	14
15	16	17	18	19	20	21
22	23	24	25	26	27	28

03 ಮಾರ್ಚ್ 2026

- 19: ಯುಗಾದಿ
- 21: ಖುತುಬ್-ಎ-ರಂಜಾನ್
- 31: ಮಹಾವೀರ ಜಯಂತಿ

S	M	T	W	T	F	S
1	2	3	4	5	6	7
8	9	10	11	12	13	14
15	16	17	18	19	20	21
22	23	24	25	26	27	28
29	30	31				

04 ಏಪ್ರಿಲ್ 2026

- 03: ಗುಡ್‌ಫ್ರೈಡೆ
- 14: ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ
- 20: ಬಸವ ಜಯಂತಿ, ಅಕ್ಷಯ ಜಯಂತಿ

S	M	T	W	T	F	S
			1	2	3	4
5	6	7	8	9	10	11
12	13	14	15	16	17	18
19	20	21	22	23	24	25
26	27	28	29	30		

05 ಮೇ 2026

- 1: ಕಾರ್ಮಿಕರ ದಿನಾಚರಣೆ
- 28: ಬಕ್ರೀದ್

S	M	T	W	T	F	S
					1	2
3	4	5	6	7	8	9
10	11	12	13	14	15	16
17	18	19	20	21	22	23
24	25	26	27	28	29	30
31						

06 ಜೂನ್ 2026

- 26: ಮೊಹರಂ ಕಡೆ ದಿನ

S	M	T	W	T	F	S
	1	2	3	4	5	6
7	8	9	10	11	12	13
14	15	16	17	18	19	20
21	22	23	24	25	26	27
28	29	30				

07 ಜುಲೈ 2026

S	M	T	W	T	F	S
			1	2	3	4
5	6	7	8	9	10	11
12	13	14	15	16	17	18
19	20	21	22	23	24	25
26	27	28	29	30	31	

08 ಆಗಸ್ಟ್ 2026

- 15: ಸ್ವಾತಂತ್ರ್ಯ ದಿನಾಚರಣೆ
- 26: ಈದ್ ಮಿಲಾದ್

S	M	T	W	T	F	S
						1
2	3	4	5	6	7	8
9	10	11	12	13	14	15
16	17	18	19	20	21	22
23	24	25	26	27	28	29
30	31					

09 ಸೆಪ್ಟೆಂಬರ್ 2026

- 14: ಗಣೇಶ ಚತುರ್ಥಿ

S	M	T	W	T	F	S
		1	2	3	4	5
6	7	8	9	10	11	12
13	14	15	16	17	18	19
20	21	22	23	24	25	26
27	28	29	30			

10 ಅಕ್ಟೋಬರ್ 2026

- 2: ಗಾಂಧಿ ಜಯಂತಿ
- 10: ಮಹಾಲಯ ಅಮವಾಸ್ಯೆ
- 21: ವಿಜಯದಶಮಿ
- 25: ಮಹರ್ಷಿ ವಾಲ್ಮೀಕಿ ಜಯಂತಿ

S	M	T	W	T	F	S
				1	2	3
4	5	6	7	8	9	10
11	12	13	14	15	16	17
18	19	20	21	22	23	24
25	26	27	28	29	30	31

11 ನವೆಂಬರ್ 2026

- 1: ಕನ್ನಡ ರಾಜ್ಯೋತ್ಸವ
- 8: ನರಕ ಚತುರ್ದಶಿ
- 10: ಬಲಿ ಪಾಡ್ಯಮಿ, ದೀಪಾವಳಿ
- 27: ಕನಕದಾಸ ಜಯಂತಿ

S	M	T	W	T	F	S
1	2	3	4	5	6	7
8	9	10	11	12	13	14
15	16	17	18	19	20	21
22	23	24	25	26	27	28
29	30					

12 ಡಿಸೆಂಬರ್ 2026

- 25: ಕ್ರಿಸ್‌ಮಸ್

S	M	T	W	T	F	S
		1	2	3	4	5
6	7	8	9	10	11	12
13	14	15	16	17	18	19
20	21	22	23	24	25	26
27	28	29	30	31		